Karnataka Lochana

Vol. 1 June 1988 No. 1

ಕರ್ನಾಟಕ ಲೋಚನ

ಸಂಪುಟ ೧ ಜೂನ್ ೧೯೮೮ ಸಂಚಿಕೆ ೧

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

B.M.Sri. Memorial Foundation
Bangalore-19

Annual Subn.: Rs. 10-00
Subn. for life: 100-00

ವಾರ್ಷಿಕ ಚಂದಾ : ರೂ. ೧೦-೦೦
ಆಜೀವ : ೧೦೦-೦೦

‘ ಕರ್ನಾಟಕ ಲೋಚನ ’

ಲೇಖನಗಳು–ಟಿಪ್ಪಣಿಗಳು

ಸಂಶೋಧನಾತ್ಮಕ ಪಾಂಡಿತ್ಯಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗು
ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು – ಇವು
ಮೇಲಣ ವಿಮರ್ಶೆಗಳು, ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ ಇವುಗಳಿ
ಸಂಬಂಧಿಸಿದ ಟೀಕೆ ಟಿಪ್ಪಣಿಗಳು – ಇವುಗಳಿಗೆ ‘ಲೋಚನ’ ಮೀಸಲಾಗಿದೆ.

ಯಾವದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳ
ಆಯಾ ಲೇಖಕರೇ ಜವಾಬುದಾರರು ; ಅವು ಅವಶ್ಯವಾಗಿ ಪ್ರತಿಷ್ಠಾನದ ಪರವಾಗಿ ವ್ಯಕ್ತಪಡಿಸಿ
ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

ಲೇಖನಗಳಿಗೆ ಆಹ್ವಾನ

ಮೇಲ್ಕಂಡ ವಾಕ್ಯವೃಂದದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾದ ಲೇಖನಗಳನ
ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳೂ ಕಳಿಸಿಕೊಡಬೇಕೆಂದು ವಿನಂ
‘ಲೋಚನ’ದ ಗಾತ್ರ ಪರಿಮಿತವಾದದ್ದರಿಂದ ಲೇಖನಗಳು ಅಚ್ಚಿನ 6–8 ಪುಟಗಳ ಪರಿಮಿ
ಯಲ್ಲಿ ಇದ್ದರೆ ಅನುಕೂಲ. ಟಿಪ್ಪಣಿಗಳು 1–2 ಪುಟಗಳ ಪರಿಮಿತಿಯಲ್ಲಿರಬಹುದು. ಲೇಖ
ಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿಟಿಪ್ಪಣಿಗಳನ
ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ-ಲೇಖನಾಧಾರ ವಿವರಗಳನ
(Bibliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂ
ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿಕೊಂಡಿರಬೇಕಾಗಿ ಕೋರಿಕೆ.

ವಿನಿಮಯ ಪತ್ರಿಕೆಗಳು

೧. ಸೋವಿಯತ್ ದೇಶ (ಮದರಾಸು), ೨. ಲಹರಿ (ಮದರಾಸು), ೩. ಅಂಕ
(ಬೆಂಗಳೂರು), ೪. ಗ್ರಂಥಲೋಕ (ಮೈಸೂರು), ೫. ಅನ್ವೇಷಣೆ (ಬೆಂಗಳೂರು), ೬. ಜೆನ್ನು
(ಶಿವಮೊಗ್ಗ), ೭. ತರಳಬಾಳು (ಸಿರಿಗೆರೆ), ೮. ಸಾಧನೆ (ಬೆಂಗಳೂರು), ೯-೧೧. ಪ್ರಬುದ
ಕರ್ನಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ನಾಟಕ (ಮೈಸೂರು), ೧೨. ಸುಗುಣಮಾಲ
(ಉಡುಪಿ), ೧೩. ಗ್ರಾಮ ಕ್ಷೇಮ (ಆನೆಕಲ್).

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಲೇಖಕರು ಕಳಿಸಬೇಕು.

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ ; ಆದ
ಕಳಿಸಿದರೆ, ‘ಸ್ವೀಕಾರ’ ಭಾಗದಲ್ಲಿ ಗಮನಿಸಲಾಗುವುದು. ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ
ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

ವಿನಂತಿ

ಮಾನ್ಯ ಸದಸ್ಯರಿಗೆ,

ತಮ್ಮ ಚಂದಾ ಅವಧಿ 1987ನೇ ಡಿಸೆಂಬರ್ 31ಕ್ಕೇ ಮುಕ್ತಾಯವಾಗಿದೆ. ಈವರೆಗೆ ತಾವು 1988ನೇ ವರ್ಷಕ್ಕೆ ಚಂದಾ ನವೀಕರಿಸದಿದ್ದಲ್ಲಿ ದಯವಿಟ್ಟು ಕೂಡಲೆ ಚಂದಾ ಹಣವನ್ನು ಚೆಕ್/ಎಂ.ಓ/ಡ್ರಾಫ್ಟ್ ಮೂಲಕ ಪಾವತಿ ಮಾಡಬೇಕಾಗಿ ವಿನಂತಿ.

ತಾವು ಸದಸ್ಯತ್ವವನ್ನು ನವೀಕರಿಸುತ್ತೀರಿ ಎಂಬ ಭರವಸೆಯಿಂದ ಈ ಸಂಚಿಕೆಯನ್ನು ಕಳುಹಿಸುತ್ತಿದ್ದೇವೆ. ಸದಸ್ಯರು ಕಾಲಕಾಲಕ್ಕೆ ಸದಸ್ಯತ್ವವನ್ನು ನವೀಕರಿಸದಿದ್ದಲ್ಲಿ ಪತ್ರಿಕೆಯ ಮುದ್ರಣಕಾರ್ಯಕ್ಕೆ ತುಂಬಾ ತೊಂದರೆಯಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರು ದಯವಿಟ್ಟು ಸದಸ್ಯತ್ವವನ್ನು ತಪ್ಪದೆ ನವೀಕರಿಸಬೇಕಾಗಿ ವಿನಂತಿ.

ಗೌ॥ ಕಾರ್ಯದರ್ಶಿಗಳು

ವಿ.ಸೂ.: ಪ್ರತಿಷ್ಠಾನದ ಮತ್ತು ಲೋಚನ ಪತ್ರಿಕೆಯ ಬಾಕಿ ಇಲ್ಲದ ಆಜೀವ ಸದಸ್ಯರಿಗೆ ಇದು ಅನ್ವಯವಾಗುವುದಿಲ್ಲ.

ಪ್ರತಿಷ್ಠಾನದ ಸದಸ್ಯತ್ವ :	ವಾರ್ಷಿಕ	25-00	ಆಜೀವ	250-00
ಲೋಚನ ಚಂದಾ :	,,	10-00	,,	100-00

ಪ್ರತಿಷ್ಠಾನದ ಸದಸ್ಯರಿಗೆ ಲೋಚನ ಉಚಿತ.

ತಿಮ್ಮಪ್ಪದಾಸರ
ಶ್ರೀ ಕೃಷ್ಣಬಾಲಲೀಲೆ
(ಎರಡು ಸಂಪುಟಗಳಲ್ಲಿ)

ಸಂಪಾದಕ : ಪ್ರೊ॥ ಎಂ. ವಿ. ಸೀತಾರಾಮಯ್ಯ

ಶ್ರೀಮದ್ಭಾಗವತದ ದಶಮಸ್ಕಂಧವನ್ನು ಅನುಸರಿಸಿ ಸ್ವತಂತ್ರ ಕೃತಿ ಎನ್ನುವ ಮಟ್ಟಿಗೆ ರಾಗ ತಾಳ ಸಹಿತವಾದ ಕೀರ್ತನೆಗಳ ರೂಪದಲ್ಲಿ ಬರೆದಿರುವ ಬೃಹತ್ಕೃತಿ. (ಸಂಪಾದಕರ ಕವಿಕೃತಿವಿಷಯಕ ಪೀಠಿಕೆ, ಯಥೋಚಿತ ಟಿಪ್ಪಣಿಗಳೂ ಇವೆ.)

ಇದು ಎರಡು ಸಂಪುಟಗಳಲ್ಲಿ ಪ್ರಕಟವಾಗುವುದು. ಡೆಮಿ 1/8 ಆಕಾರದಲ್ಲಿ ಮುದ್ರಣವಾಗುವ ಪ್ರತಿ ಸಂಪುಟವೂ ಸುಮಾರು 800 ಪುಟಗಳಷ್ಟಿರುತ್ತದೆ.

ಪ್ರತಿ ಸಂಪುಟದ ಬೆಲೆ : ರೂ. 75-00.

ಪ್ರತಿಷ್ಠಾನದ ಸದಸ್ಯರಿಗೆ ಶೇ. 50 ರಿಯಾಯಿತಿ ಉಂಟು.

ಮೊದಲ ಸಂಪುಟ ಈಗ ಬಿಡುಗಡೆಯಾಗಿ, ಪ್ರತಿಗಳು ಮಾರಾಟಕ್ಕಿವೆ.

ಎರಡನೆಯ ಸಂಪುಟ ಡಿಸೆಂಬರ್ 31ರ ವೇಳೆಗೆ ಸಿದ್ಧವಾಗುವುದು.

ಇದೇ 1988ರ ಡಿಸೆಂಬರ್ 31 ರೊಳಗೆ ಮುಂಗಡವಾಗಿ ಹಣ ಕಳಿಸಿಕೊಡುವ ಪ್ರತಿಷ್ಠಾನದ ಸದಸ್ಯರಿಗೆ, ಎರಡು ಸಂಪುಟಗಳನ್ನೂ ಒಟ್ಟಿಗೆ ಕೊಂಡುಕೊಂಡರೆ, ಎರಡೂ ಸಂಪುಟಗಳನ್ನು 60 ರೂ.ಗಳಿಗೆ ಕೊಡಲಾಗುವುದು ; ಇತರರಿಗೆ 80 ರೂ. ಗಳಿಗೆ ಕೊಡಲಾಗುವುದು.

ಅಂಚೆ ವೆಚ್ಚ ಪ್ರತ್ಯೇಕ.

[‘ ಶ್ರೀ ಕೃಷ್ಣಬಾಲಲೀಲೆ ’ಯನ್ನು (ಮೊದಲ ಸಂಪುಟ) 1986ರಲ್ಲಿ ಗ್ರಂಥ ಸಂಪಾದನ ಪ್ರಕಾರದಲ್ಲಿ ಪ್ರಕಟವಾದ ಪುಸ್ತಕಗಳಲ್ಲಿ ಉತ್ತಮವಾದುದೆಂದು ಪರಿಗಣಿಸಿ 3000 ರೂ.ಗಳ ಬಹುಮಾನವನ್ನು ರಾಜ್ಯ ಸಾಹಿತ್ಯ ಅಕಾಡೆಮಿ ನೀಡಿದೆ.]

Karnataka Lochana

[Half-Yearly Journal, Published by B.M.Sri. Memorial Foundation, 54, 3rd Cross, Gavipuram Extn, Bangalore-19]

Editor: Prof. (Vidwan) T. Keshava Bhat

Vol. 1 *June 1988* *No. 1*

CONTENTS

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ೫೪, ೩ನೇ ಅಡ್ಡಬೀದಿ, ಗವಿಪುರಂ ವಿಸ್ತರಣ, ಬೆಂ-೧೯

ಸಂಪಾದಕ : **ಪ್ರೊ॥ ವಿದ್ವಾನ್ ಟಿ. ಕೇಶವ ಭಟ್ಟ**

ಸಂಪುಟ ೧ ಜೂನ್ ೧೯೮೮ ಸಂಚಿಕೆ ೧

ಪರಿವಿಡಿ

ಕನ್ನಡ ಛಂದಸ್ಸು—ಕೆಲವು ವಿಚಾರಗಳು

—ಅ. ರಾ. ಮಿತ್ರ

1300 ವರ್ಷಗಳ ಕನ್ನಡ ಛಂದಸ್ಸಿನ ಕೆಲವು ಮುಖ್ಯ ನಡೆಗಳನ್ನು ಪರಿಶೀಲಿಸುವುದು ಈ ಉಪನ್ಯಾಸದ ಉದ್ದೇಶ. ಈ ಶತಮಾನದಲ್ಲಿ ವಿವಿಧ ವಿದ್ವಾಂಸರು ನಮ್ಮ ಛಂದೋರೂಪಗಳ ವೈವಿಧ್ಯವನ್ನೂ ಇತಿಹಾಸವನ್ನೂ ವಿಪುಲವಾದ ಲಕ್ಷ್ಯಗಳ ಮೂಲಕ ವಿಸ್ತಾರವಾಗಿ ಚರ್ಚಿಸಿ ನನ್ನ ಹಾದಿಯನ್ನು ಸುಗಮಗೊಳಿಸಿದ್ದಾರೆ. ಆದುದರಿಂದ ಅವನ್ನೆಲ್ಲ ಮತ್ತೆ ಸಂಗ್ರಹಿಸುವ ಗೋಜಿಗೆ ಹೋಗದೆ ಕೆಲವು ಮೂಲಭೂತ ಚರ್ಚೆಗಳನ್ನು ಮಾತ್ರ ಎತ್ತಿಕೊಳ್ಳುತ್ತೇನೆ.

ಕನ್ನಡಕ್ಕೇ ವಿಶಿಷ್ಟವಾದ ಕೆಲವು ಲಕ್ಷಣಗಳನ್ನು ರೂಢಿಸಿಕೊಂಡ ನಮ್ಮ ಛಂದಸ್ಸು ದ್ರಾವಿಡ ಛಂದಸ್ಸಿನ ಒಳ ಪ್ರವಾಹವನ್ನು ಉದ್ದಕ್ಕೂ ಉಳಿಸಿಕೊಂಡೇ ಬಂದಿದೆ. ಮೇಲುನೋಟಕ್ಕೆ ಇದು ಕಾಣುವಂಥದಲ್ಲ. ಕನ್ನಡದಲ್ಲಿ ಉಪಲಬ್ಧವಿರುವ ಮಾರ್ಗಸಾಹಿತ್ಯದ ಪ್ರಾಚೀನ ಕೃತಿಗಳು ಛಂದಸ್ಸಿನ ದೃಷ್ಟಿಯಿಂದ ಸಂಪೂರ್ಣವಾಗಿ ಸಂಸ್ಕೃತ ಛಂದೋರೂಪಗಳಿಗೆ ಕನ್ನಡ ಭಾಷೆಯನ್ನು ಒಗ್ಗಿಸುವ ಪಂಡಿತ ಪ್ರಯತ್ನಗಳನ್ನು ಭಾರಿಯ ಪ್ರಮಾಣದಲ್ಲಿ ನಡೆಸಿವೆ. ಅವರ ಭಾಷಾ ಸಿದ್ಧಿಯನ್ನೂ ವಿಚಾರ ಶ್ರೀಮಂತಿಕೆಯನ್ನೂ ಪ್ರತಿಭೆಯನ್ನೂ ನಾನು ಅಲ್ಲಗಳೆಯುತ್ತಿಲ್ಲ. ಆದರೆ ಅಚ್ಚಗನ್ನಡದ ಛಂದೋಬಂಧಗಳು ನಮ್ಮ ಕವಿಗಳ ಸಂಪೂರ್ಣ ಲಕ್ಷ್ಯಕ್ಕೆ ಬಾರದೆ ಅಂಚಿನಲ್ಲಿ ಮಾತ್ರ ನಿಂತುದರಿಂದ ಎಂಥ ಅನ್ಯಾಯವಾಯಿತೆಂಬುದನ್ನು ಪಟ್ಟಿ ಮಾಡುವುದು ಕಷ್ಟವಲ್ಲ. ಛಂದಸ್ಸಿಗೂ ಭಾಷಾ ರಚನೆಗೂ ಅಳಿಸಲಾಗದ ಸಂಬಂಧವಿದೆ. ಒಂದು ಭಾಷೆ ತನ್ನತನವನ್ನು ಸಂಪೂರ್ಣವಾಗಿ ಮೆರೆಸುವುದು ತನ್ನ ಜಾಯಮಾನಕ್ಕೆ ಸೂಕ್ತವಾದ ಛಂದೋರೂಪ ದೊರೆತಾಗ ಮಾತ್ರ. ಅಚ್ಚಗನ್ನಡದ ಭಾವ ಪ್ರವಹಣಕ್ಕೆ ಸಂಸ್ಕೃತದ ವೃತ್ತ ಛಂದಸ್ಸು ಸೂಕ್ತ ಮಾಧ್ಯಮವೇ ಅಲ್ಲ. 'ಕವಿರಾಜಮಾರ್ಗ' ಈ ದಿಶೆಯಲ್ಲಿ ಒಂದು ಸಂಕೇತಪೂರ್ಣವಾದ ಹೆಸರು ಎಂದು ನನಗನ್ನಿಸುತ್ತದೆ. ಅದು ಕವಿಗಳು 'ರಾಜಮಾರ್ಗ'ವನ್ನೇ ಹಿಡಿದರೇ ಹೊರತು 'ಪ್ರಜಾಮಾರ್ಗ'ವನ್ನು ಹಿಡಿಯಲಿಲ್ಲ ಎಂಬುದನ್ನು ಖಚಿತಪಡಿಸುತ್ತದೆ. ಚಿಂತನೆಗೆ ಭಾಷೆಯನ್ನು ತೊಡಗಿಸುವಲ್ಲಿ ಸಂಸ್ಕೃತ ಶಬ್ದಗಳಿಗೇ ಮಾರುಹೋದ ನಮ್ಮ ಕವಿಗಳು ಅಂದಿನಿಂದ ಇಂದಿನವರೆಗೆ ಕನ್ನಡದ ಕಡೆಗೆ ತಿರುಗಿಯೇ ಇಲ್ಲ, ಈ ಕಾರಣದಿಂದ ನಮ್ಮ ಶಾಸ್ತ್ರದ ಪರಿಭಾಷೆ ಸಂಪೂರ್ಣವಾಗಿ ಸಂಸ್ಕೃತಮಯವಾಯಿತು. ಸೃಜನಶೀಲರಾದ ಕವಿಗಳು ಅಚ್ಚಗನ್ನಡದ ಹುರುಳನ್ನು ಬಲ್ಲವರಾಗಿದ್ದರೂ, ಜಾನಪದದ ಮೇಲ್ಮೆಯನ್ನು ಅರಿತವರಾಗಿದ್ದರೂ ರಾಜಮಾರ್ಗದ ಒಲವಿನಿಂದಾಗಿ ಗ್ರಾಮ್ಯಮಾರ್ಗಗಳನ್ನು ನಿರ್ಲಕ್ಷಿಸಿದರು. ಗುರುಲಘು ಸ್ಥಿರವಾದ ವೃತ್ತಗಳ ರಚನೆ, ಕಂದ ರಗಳೆಗಳಲ್ಲಿ ಬರುವ ಮಾತ್ರಾ 'ಜಾತಿ' ರಚನೆ, ಎಷ್ಟು ಮುಖ್ಯವಾಯಿತೋ ನಮ್ಮ ಜಾನಪದ ಮಟ್ಟುಗಳ

ರಚನೆಯೂ ಅಷ್ಟೇ ಮುಖ್ಯವೆಂದು ಅವರಿಗೆ ಅನ್ನಿಸಲೇ ಇಲ್ಲ. 'ವೃತ್ತ'ಗಳು ಪೆಡಸಾದ ಅಕ್ಷರಬಂಧಗಳು. ಅದರಲ್ಲೂ ಸ್ರಗ್ಧರೆ ಶಾರ್ದೂಲ ಇಂದ್ರವಜ್ರ ಉಪೇಂದ್ರವಜ್ರ ಮಂದಾಕ್ರಾಂತ ಶಿಖರಿಣಿ ಶಂಭುನಟನ ಮೊದಲಾದ ವೃತ್ತಗಳಂತೂ ಸಂಸ್ಕೃತ ಶಬ್ದಗಳನ್ನು ಬಳಸದೆ ನಿರ್ವಹಿಸಲು ಸಾಧ್ಯವೇ ಆಗದಂತಹ ಬಂಧಗಳು. ಈ ವೃತ್ತಗಳಲ್ಲಿ ಬಳಕೆಯಾದ ಕನ್ನಡವು ಸಂಸ್ಕೃತವನ್ನು ಬಲವಾಗಿ ಆಶ್ರಯಿಸಿರುವ ರಚನೆಯಾಗಿದೆ. 'ಮಾರ್ಗ' 'ದೇಸಿ' ಎಂಬ ಮಾತುಗಳಲ್ಲಿ ಕನ್ನಡ-ಸಂಸ್ಕೃತ ಮಾರ್ಗಗಳು ವಿಭಿನ್ನವೆಂಬ ಅರಿವು ನಮ್ಮ ಕವಿಗಳಿಗಿತ್ತೆಂದು ವಾದಿಸಬಹುದಾದರೂ ದೇಸಿಯ ಜೊತೆಗೆ 'ಮಾರ್ಗ'ವೂ ಸಹ್ಯವಾಗಿತ್ತೆಂಬ ಉದಾರ ಧೋರಣೆ ಇಲ್ಲಿ ಪ್ರತಿಪಾದಿತವಾಗಿದೆ. 'ದೇಸಿ'ಯ ಪ್ರೇಮಿಯಾದ ನಯಸೇನನಂಥವರು ಕೂಡ ಕನ್ನಡ-ಸಂಸ್ಕೃತಗಳ ಕಲಬೆರಕೆ ಸರಿಯಲ್ಲ ಎಂದು ವಾದಿಸುವ ಸಂದರ್ಭದಲ್ಲಿ ತಮ್ಮ 'ಪ್ರತಿಜ್ಞಾ ಘೋಷಣೆ'ಯನ್ನೂ ಮರೆತು ಬೆರೆಸಲ್ಕೆ ತಕ್ಕುದೇ 'ಘೃತಮುಮಂ ತೈಲಮುಮಂ' ಎಂದು ಸಂಸ್ಕೃತ ಶಬ್ದಗಳ ಉದ್ಧೃತಿಯಲ್ಲೇ ಸುಖ ಕಾಣುತ್ತಾರೆ. ವೃತ್ತಗಳನ್ನು ಆರಿಸಿಕೊಂಡ ಕೂಡಲೇ ಸಂಸ್ಕೃತದ ಶಬ್ದಗಳ ಲಾಸ್ಯ ಹೆಚ್ಚಾಯಿತು, ಸಮಾಸಗಳ ದೀರ್ಘಬಂಧಕ್ಕೆ ಕನ್ನಡವನ್ನು ಪಳಗಿಸುವ ಪ್ರವೃತ್ತಿಯೂ ಹೆಚ್ಚಾಯಿತು. ಈ ದುರಂತವು ಛಂದೋಮಾರ್ಗವಾಗಿ ಬಂದ ದುರಂತವೆಂಬುದನ್ನು ಅರ್ಥಮಾಡಿಕೊಳ್ಳಲಾಗದ ಆಂಡಯ್ಯ ಅಚ್ಚಗನ್ನಡ ಮಟ್ಟುಗಳಲ್ಲಿ ಸುಲಭವಾಗಿ ಸಾಧಿಸಬಹುದಾಗಿದ್ದ ಕನ್ನಡತನದ ಪ್ರದರ್ಶನದ ಅವಕಾಶವನ್ನು ಕಳೆದುಕೊಂಡ. ನಮ್ಮ ಶಬ್ದಗಳ ಸಹಜನರ್ತನಕ್ಕೆ ತಕ್ಕ ವೇದಿಕೆಯಾಗಲಾರದ ಅಕ್ಷರವೃತ್ತಗಳಲ್ಲಿ ಆಂಡಯ್ಯ ಕಾವ್ಯ ರಚನೆ ಮಾಡಿರುವುದರಿಂದ ಅವನ ಕನ್ನಡವೂ ನಮಗೆ ಕೃತಕವಾಗಿ ಹಠಗಾರಿಕೆಯದಾಗಿ ಕಾಣುತ್ತದೆ. ಹೀಗಾಗಿ ಆಂಡಯ್ಯ ಅಚ್ಚಗನ್ನಡದಲ್ಲಿ ಕಾವ್ಯರಚನೆ ಮಾಡಬಹುದೆಂದು ತೋರಿಸಿಕೊಡುವುದರಲ್ಲಿ ಮೊದಲನೆಯವನಾದರೂ ಮಾರ್ಗಛಂದಸ್ಸನ್ನೇ ಅನುಸರಿಸಿರುವುದರಿಂದ ಮಾರ್ಗಕವಿಗಳ ಸಾಲಿಗೇ ಸೇರುತ್ತಾನೆ – ಪ್ರತಿಭಾ ಪ್ರದರ್ಶನದಲ್ಲಿ ಸಾಮಾನ್ಯನಾಗಿ ಉಳಿದುಬಿಡುತ್ತಾನೆ. ನಮ್ಮ ಮಾರ್ಗಕವಿಗಳು ಕನ್ನಡವನ್ನು ಚೆನ್ನಾಗಿ ಬಲ್ಲವರಾಗಿದ್ದುದರಿಂದ ಮತ್ತು ಪಂಪ ರನ್ನರಂಥ ಪ್ರತಿಭಾಶಾಲಿಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದುದರಿಂದ ಯಾವ ಛಂದಸ್ಸನ್ನೇ ಆಯ್ಕೆ ಮಾಡಿಕೊಂಡರೂ ಅದರಲ್ಲಿ ಸಾರಸ್ವತ ಸತ್ತ್ವ ಬೀಳಾಗದಂತೆ ನೋಡಿಕೊಂಡರು ಎಂಬುದೇ ಒಂದು ಸಮಾಧಾನದ ವಿಷಯ. ಆದರೆ ಅಕ್ಷರ ಛಂದಸ್ಸಿನಲ್ಲಿ ಬರೆಯಲು ಹೊರಟ ಅವರೆಲ್ಲ ಸಂಸ್ಕೃತದಲ್ಲೂ ಸಾಕಷ್ಟು ಶಬ್ದಸಿದ್ಧಿ ಉಳ್ಳವರಾಗಿದ್ದುದರಿಂದ ಸಂಸ್ಕೃತದ ರಚನಾ ಪದ್ಧತಿಯನ್ನೇ ಕನ್ನಡಕ್ಕೆ ಕಸಿ ಮಾಡುವ ಪ್ರಯತ್ನದಲ್ಲಿ ತೊಡಗಿದರು. ಇದರಿಂದಾಗಿ ಜನರಿಗಾಗಿ ಬರೆಯುತ್ತಿದ್ದ ಶಾಸನ ಕವಿಗಳು ಕೂಡ ಅನಿವಾರ್ಯವಾಗಿ ಮಾರ್ಗದ ಪೆಡಸನ್ನು ಆಶ್ರಯಿಸಬೇಕಾಯಿತು. ಒಂದು ಉದಾಹರಣೆ ಗಮನಿಸೋಣ. ಇದೊಂದು ಶಾಸನ ಪದ್ಯ. ಕನ್ನಡ ಶಬ್ದಗಳೂ ಇಲ್ಲಿ ಧಾರಾಳವಾಗಿವೆ. ಆದರೆ

'ಮತ್ತೇಭ ವಿಕ್ರೀಡಿತ' ಛಂದಸ್ಸಿನಲ್ಲಿ ಬರೆದಿರುವುದರಿಂದ ಆ ಛಂದಸ್ಸು ನಿಯಮಿಸುವ ಕೆಲವೊಂದು ಸೂತ್ರಗಳನ್ನು ಇದು ಪಾಲಿಸಬೇಕಾಗಿದೆ.

> ಕೆರೆಯುಂ ಕಟ್ಟಿಸು ಬಾವಿಯುಂ ಸವೆಸು ದೇವಾಗಾರಮಂ ಮಾಡಿಸ
> ಜ್ಜೆ ರೆಯೊಳ್ ಸಿಲ್ಕಿದನಾಥರಂ ಬಿಡಿಸು ವಿಪ್ರಗ್ರಿಂಬುಗೆಯ್ ನಂಬಿದ
> ರ್ಗೆರೆವಟ್ಟಾಗಿರು........

ಕನ್ನಡದಲ್ಲೇ ಸಲೀಲವಾಗಿ ಸಾಗುವ ಶೈಲಿ ತಟಕ್ಕನೆ 13, 14, 15ನೇ ಅಕ್ಷರಗಳಿಗೆ ಬಂದಾಗ ಅಲ್ಲಿ ಮೂರು ಗುರುಗಳನ್ನು ತರಲೇಬೇಕಾದ ಅನಿವಾರ್ಯಕ್ಕೆ ಸಿಕ್ಕಿ ಕನ್ನಡ ದಲ್ಲಿ ನಿಭಾಯಿಸಲಾಗದೆ ಸಂಸ್ಕೃತ ಶಬ್ದಗಳಿಗೆ ಶರಣುಹೋಗುತ್ತದೆ. 'ದೇವಾಗಾ' 'ವಿಪ್ರಗ್ರಿಂ'.......ಇಂಥ ಶಬ್ದಗಳನ್ನು ಗಮನಿಸಬಹುದು. ಒಂದು ವೇಳೆ ಇದೇ ಕವಿ ಯನ್ನು ಕರೆದು ಈ ಭಾವವನ್ನು 'ಸಾಂಗತ್ಯ'ದಲ್ಲಿ ಬರೆಯಲು ಕೋರಿದ್ದರೆ ಅವನು ಹೀಗೆ ಬರೆಯುತ್ತಿದ್ದನೋ ಏನೋ :

> ಎದೆಹಾಲು ಕುಡಿಸುವ ದಿನದಿಂದ ಮಗನಿಗೆ
> ಇಂತೆಂದು ಹೇಳ್ದಳು ಅವ್ವ
> ಉದ್ಧರಿಸೈ ಕೆರೆ ಕಟ್ಟಿ ದೇಗುಲಗಳ
> ಬಾಡಿಸು ಬಡವರ ನೋವ

ಇದೇ ಬಗೆಯಲ್ಲಿ 'ಬೆಳಗಾಗಿ ನಾನೆದ್ದು ಯಾರ‍್ಯಾರ ನೆನೆಯಲಿ'...ಎಂದು ಆರಂಭ ವಾಗುವ ದೇಸಿ ಮಟ್ಟಿನ ಒಂದು ಜನಪ್ರಿಯ ಹಾಡನ್ನು ಮಾರ್ಗಛಂದೋಕಾರನು ಹೇಗೆ ಬರೆಯಬೇಕಾಗುತ್ತದೆಂಬುದನ್ನೂ ನೋಡೋಣ :

> ನೇಸರ್ಮೂಡುವ ಸಮಯಕೆ
> ಬೇಸರಗೊಳ್ಳದ ತೆರದಲಿ ನಾನೆದ್ದಾರನು
> ಸಂಸ್ಮರಿಸಲಿ ತಿಲಜೀರಕ
> ಸಸ್ಯವ ಬೆಳೆಯುವ ವಸುಂಧರೆಯನಾಂ ನೆನೆವೆಂ

ರಚನೆಯ ಹಂತದಲ್ಲಿ ನಾವು ಆಯ್ದುಕೊಳ್ಳುವ ಛಂದೋರೂಪವೇ ನಮ್ಮ ಶಾಬ್ದಿಕ ಚಲನವನ್ನು ನಿಯಂತ್ರಿಸುತ್ತದೆ ಎಂದು ಹೇಳುವುದಕ್ಕಾಗಿ ಮೇಲಿನ ಎರಡು ಉದಾಹರಣೆಗಳನ್ನು ಕೊಡಬೇಕಾಯಿತು. ಆದಿಕವಿ ಪಂಪನು ಬರೆದಿರುವ ವೃತ್ತ, ಕಂದ, ರಗಳೆ, ಪಿರಿಯಕ್ಕರ ಮೊದಲಾದ ಛಂದೋರೂಪಗಳಲ್ಲಿ ಬಳಕೆಗೊಂಡಿರುವ ಭಾಷೆಯನ್ನು ಗಮನಿಸಿದರೆ ಈ ತಾರತಮ್ಯ ಚೆನ್ನಾಗಿ ಗೋಚರಿಸುತ್ತದೆ. ಸ್ರಗ್ಧರೆ ಮಹಾ ಸ್ರಗ್ಧರೆಗಳನ್ನು ಪರಿಶೀಲಿಸಿದಾಗ ಸಂಸ್ಕೃತ ಪ್ರಾಚುರ್ಯ ಉತ್ಪಲ ಚಂಪಕ ಗಳಲ್ಲಿ, ಕಂದಗಳಲ್ಲಿ ಸುವರ್ಣ ಮಧ್ಯಮ, ರಗಳೆ, ಪಿರಿಯಕ್ಕರ, ತ್ರಿಪದಿಗಳಲ್ಲಿ ಕನ್ನಡದ ಮೇಲ್ಮೆ ಇವು ಎದ್ದು ಕಾಣುತ್ತವೆ.

ಮಾರ್ಗಸಾಹಿತ್ಯದ ಚಂಪೂ ಪದ್ಧತಿಯಲ್ಲಿ ಸಂಸ್ಕೃತ ಪದ್ಧತಿಯ ಪ್ರಭಾವ ದಟ್ಟ ವಾಗಿರುವುದನ್ನು ಕಾಣಬಹುದು. ಇಷ್ಟಾದರೂ ಈ ಆದಿಕವಿಗಳಲ್ಲಿ ಆಳದಲ್ಲಿ

ಕನ್ನಡ ಛಂದೋ ಪ್ರಭಾವಗಳು ಕೆಲಸ ಮಾಡಿವೆ ಎಂದು ಮೊದಲಿಗೇ ಹೇಳಿದ್ದೇನೆ. ಇಷ್ಟು ಗಾಢವಾದ ಸಂಸ್ಕೃತದ ಧಾರೆಯಲ್ಲೂ ಕನ್ನಡದ ಒಳಸುಳಿಗಳು ಅಗೋಚರ ವಾಗಿ ಕವಿಯ ಪ್ರಜ್ಞೆಯ ಮಟ್ಟದಲ್ಲೇ ಕೆಲಸ ಮಾಡಿವೆ. ಈ ಒಳಸುಳಿಯನ್ನು ಸಂಗ್ರಹವಾಗಿ ಹೀಗೆ ಗುರುತಿಸಬಹುದು.

1. ಚಂಪೂ ಸಾಹಿತ್ಯದಲ್ಲಿ ಸ್ರಗ್ಧರಾ, ಮಂದಾಕ್ರಾಂತ, ಶಾರ್ದೂಲ ಮೊದಲಾದ ವೃತ್ತಗಳ ಬಳಕೆಯನ್ನು ಕಡಿತಗೊಳಿಸಿರುವುದು ;

2. ಅಕ್ಷರಗಣಗಳಿಗಿಂತ ಮಾತ್ರಾಗಣಗಳೇ ಕನ್ನಡಕ್ಕೆ ಹೆಚ್ಚಾಗಿ ಹೊಂದಿಕೊಳ್ಳು ತ್ತವೆ ಎಂಬುದನ್ನು ಗುರುತಿಸಿಕೊಂಡದ್ದು. ಕಂದವನ್ನು ಕನ್ನಡಕ್ಕೆ ಕಸಿ ಮಾಡಿ ಕೊಂಡು ಶೇ. 75ರಷ್ಟು ಕವಿತೆಗಳನ್ನು ಕಂದದಲ್ಲೇ ರಚಿಸಲು ಆಯ್ಕೆ ಮಾಡಿ ಕೊಂಡದ್ದು.

3. ವೃತ್ತಗಳಲ್ಲೂ ಸಂಸ್ಕೃತದಲ್ಲಿ ಅಷ್ಟಾಗಿ ಪ್ರಸಿದ್ಧವಲ್ಲದ ಉತ್ಪಲ ಚಂಪಕ ಗಳನ್ನೇ ಹೆಚ್ಚಾಗಿ ಬಳಸಿಕೊಂಡದ್ದು.

4. ಉತ್ಪಲ ಶಾರ್ದೂಲ ಸ್ರಗ್ಧರಾ ಈ ಮೂರನ್ನೇ ಹೆಚ್ಚಾಗಿ ಅವಲಂಬಿಸಿ ಅವುಗಳ ಆದಿಗುರುಗಳ ಬದಲಿಗೆ ಎರಡು ಲಘುಗಳನ್ನು ತಂದು ಚಂಪಕ, ಮತ್ತೇಭ, ಮಹಾಸ್ರಗ್ಧರಾ ಎಂಬ ಮೂರು ಹೊಸ ಛಂದೋರೂಪಗಳನ್ನು ಕಸಿ ಮಾಡಿ ಕೊಂಡದ್ದು. 'ಖ್ಯಾತ ಕರ್ಣಾಟಕಂ' ಎಂದು ಇವನ್ನು ಕರೆದದ್ದು.

5. ವೃತ್ತಗಳಲ್ಲಿ ಅಕ್ಷರಯತಿ ಸಂಸ್ಕೃತದಲ್ಲಿ ಕಡ್ಡಾಯವಾಗಿದ್ದರೂ ಕನ್ನಡದಲ್ಲಿ ಆ ನಿಯಮವನ್ನೂ ಪಾದಾಂತದ ಭಾವ ನಿಲುಗಡೆಯ ನಿಯಮವನ್ನೂ ವಿಕಲ್ಪವಾಗಿ ಪರಿಗಣಿಸಿ ಅವುಗಳ ಬದಲಿಗೆ ಕನ್ನಡದ ಮೂಲ ಛಂದೋಮಾಸಕ್ಕೆ ಅಗತ್ಯವಾದ ಆದಿ ಪ್ರಾಸವನ್ನು ಬಳಕೆಗೆ ತಂದದ್ದು.

6. ಮಾತ್ರಾಗಣದ ಪ್ರಭಾವದಿಂದ ಅಂಶಮಾತ್ರಾಗಣಗಳಲ್ಲಿ ಅಂತಃಸ್ಪಂದನ ವಾದದ್ದು.

ಇಲ್ಲಿ ಮೇಲೆ ಹೇಳಿರುವ 6 ವಿಷಯಗಳಲ್ಲಿ ಯಾವುದರಲ್ಲೂ ಹೊಸದೇನೂ ಇಲ್ಲ. ಎಲ್ಲವೂ ಐತಿಹಾಸಿಕವಾಗಿ ಸ್ಥಾಪಿಸಲ್ಪಟ್ಟ ಅಂಶಗಳೇ ಆಗಿದ್ದು ಅನೇಕ ವಿದ್ವಾಂಸರು ಈ ಕಡೆಗೆ ನಮ್ಮ ಲಕ್ಷ್ಯವನ್ನು ಸೆಳೆದಿದ್ದಾರೆ. ಆದರೆ ಇದು ಕನ್ನಡ ಸೃಜನಶೀಲ ಕವಿಗಳಲ್ಲಿ ಪ್ರಸುಪ್ತವಾಗಿದ್ದ ಕನ್ನಡ ಛಂದಃಪ್ರಜ್ಞೆಯ ಪರಿಣಾಮ ವಾಗಿ ಮೂಡಿದವುಗಳೇ ಆಗಿವೆ ಎಂಬ ಅಂಶವನ್ನು ನಾನು ಇಲ್ಲಿ ವಿವರಿಸಬಯಸು ತ್ತೇನೆ.

ಅಕ್ಷರ ವೃತ್ತಗಳು ಲೆಕ್ಕಕ್ಕೆ ಕೋಟ್ಯಂತರ ಸಂಖ್ಯೆಯಲ್ಲಿದ್ದರೂ ಸಂಸ್ಕೃತದಲ್ಲಿ ಕೂಡ ನೂರಕ್ಕಿಂತ ಹೆಚ್ಚು ವೃತ್ತಗಳು ಚಲಾವಣೆಯಲ್ಲಿಲ್ಲ. ಆದಿಯಲ್ಲಿ ಒಂದು

ಗುರು ಇರುವ ಉತ್ಪಲ, ಮೂರು ಗುರುಗಳು ಬರುವ ಶಾರ್ದೂಲ, ನಾಲ್ಕು ಗುರುಗಳು ಬರುವ ಸ್ರಗ್ಧರಾವೃತ್ತ ಈ ಮೂರು ವೃತ್ತಗಳೇ ಕನ್ನಡದಲ್ಲಿ ಎರಡೆರಡಾಗಿ ಕವಲೊಡೆದು 'ಖ್ಯಾತಕರ್ಣಾಟಕ' ಎಂಬ ಹೆಸರನ್ನು ಪಡೆದು ಪ್ರಸಿದ್ಧವಾಗಿವೆ. ಇವನ್ನು ಬಿಟ್ಟರೆ ಸಂಸ್ಕೃತದಲ್ಲಿ ಪ್ರಸಿದ್ಧವಾದ ಇಂದ್ರವಜ್ರ, ತ್ರಿಷ್ಟುಪ್ ಮಂದಾಕ್ರಾಂತ ಛಂದಸ್ಸುಗಳು ಕನ್ನಡದಲ್ಲಿ ಜನಪ್ರಿಯವಾಗಲೇ ಇಲ್ಲ. ಇವುಗಳಿರಲಿ ಸಂಸ್ಕೃತದಲ್ಲಿ ಸರ್ವವ್ಯಾಪಿಯಾದ ಹದಿನಾರು ಅಕ್ಷರದ 'ಶ್ಲೋಕ' ಕೂಡ ಕನ್ನಡದಲ್ಲಿ ಮನ್ನಣೆ ಪಡೆಯಲಿಲ್ಲ. ಶ್ಲೋಕದಲ್ಲಿ ಐದನೆಯ ಅಕ್ಷರ ಲಘುವಾಗಿರಬೇಕೆಂದೂ 6, 7ನೆಯ ಅಕ್ಷರಗಳು ಗುರುವಾಗಿರಬೇಕೆಂದೂ 13 ರಿಂದ 16 ರ ವರೆಗಿನ ನಾಲ್ಕು ಅಕ್ಷರಗಳು ದ್ವಿಲಗವಾಗಿರಬೇಕೆಂದೂ ಒಂದು ಸಾಧಾರಣ ನಿಯಮವಿದೆ. ಉಳಿದಂತೆ ಲಘು ಗುರು ಯಾವುದೇ ಬರಬಹುದೆಂಬ ಸಡಿಲ ನಿಯಮವುಳ್ಳ ಛಂದಸ್ಸು ಇದು. ಆದರೂ ಶ್ಲೋಕದ ನಡೆ ಕನ್ನಡಕ್ಕೆ ಯಾಕೋ ಹೊಂದಿಕೊಳ್ಳಲೇ ಇಲ್ಲ. ಉಳಿದಂತೆ ನಾನು ಮೇಲೆ ಹೆಸರಿಸಿದ ಛಂದಸ್ಸುಗಳೆಲ್ಲ ಗುರು ಪ್ರಾಬಲ್ಯದಿಂದ ಮೆರೆಯುವಂಥವು. ಕನ್ನಡ ಕವಿಗಳು ಅವುಗಳನ್ನು ಒಗ್ಗಿಸಿಕೊಳ್ಳುವ ಕೆಲಸ ಮಾಡಲಿಲ್ಲ ಎನ್ನುವುದಕ್ಕಿಂತ ಕನ್ನಡದ ಜಾಯಮಾನಕ್ಕೆ ಹೊಂದುವುದಿಲ್ಲ ಎಂಬ ವಾಸ್ತವ ಸಂಗತಿಯನ್ನರಿತು ಸುಮ್ಮನಾದರು ಎಂದು ಹೇಳುವುದು ಸೂಕ್ತ. ಉತ್ಪಲ, ಚಂಪಕಮಾಲೆಗಳು ಕನ್ನಡದಲ್ಲಿ ಯಾಕೆ ಜನಪ್ರಿಯವಾದುವು ಎಂಬ ಬಗೆಗೆ ಈ ಉಪನ್ಯಾಸದ ಕೊನೆಯ ಭಾಗದಲ್ಲೂ ಒಂದೆರಡು ಮಾತು ಹೇಳಲಿದ್ದೇನೆ. ಈ ಎರಡೂ ಛಂದಸ್ಸುಗಳಲ್ಲಿ ಎರಡು ಗುರುಗಳು ಎಲ್ಲಿಯೂ ಒಟ್ಟಿಗೆ ಬರುವುದಿಲ್ಲ ಎಂಬುದನ್ನು ಇಲ್ಲಿ ಲಘುಗಳ ಪ್ರಾಬಲ್ಯವೇ ಹೆಚ್ಚು ಎಂಬುದನ್ನೂ ಕನ್ನಡದ ಶ್ರುತಿಗೆ ಇದು ಹತ್ತಿರವಾದದ್ದು ಎಂಬುದನ್ನೂ ನಾವು ಮರೆಯಬಾರದು. ಸ್ರಗ್ಧರಾ, ಶಾರ್ದೂಲಗಳಲ್ಲಿಯೂ ಗುರು ಸಂಚಾರ ಕನ್ನಡದ ನಿರ್ವಹಣೆಯ ದೃಷ್ಟಿಯಿಂದ ತೊಡಕಿನದಾದರೂ ಕವಿಗಳು ಒಂದನ್ನು ಮಿತಿಯಲ್ಲೂ ಇನ್ನೊಂದನ್ನು ಸಾಕಷ್ಟು ಸಂಖ್ಯೆಯಲ್ಲೂ ಬಳಸಿದ್ದಾರೆ. ಆದರೂ ಚಂಪಕದಷ್ಟು ಜನಪ್ರಿಯತೆ ಇವಕ್ಕಿಲ್ಲ.

ಈಗ ಖ್ಯಾತ ಕರ್ಣಾಟಕಗಳಿಗೆ ಬರೋಣ. ಇವುಗಳ ಗುರು-ಲಘು ಸಂಚಾರ ಕ್ರಮವಾಗಿ ಹೀಗಿವೆ.

ಉತ್ಪಲ	—	⏑⏑—⏑—⏑⏑⏑—⏑⏑—⏑⏑—⏑—⏑—
ಚಂಪಕ	⏑⏑	⏑⏑—⏑—⏑⏑⏑—⏑⏑—⏑⏑—⏑—⏑—
ಶಾರ್ದೂಲ	—	— —⏑⏑—⏑—⏑⏑⏑— — —⏑— —⏑—
ಮತ್ತೇಭ	⏑⏑	— —⏑⏑—⏑—⏑⏑⏑— — —⏑— —⏑—
ಸ್ರಗ್ಧರಾ	—	— — —⏑— —⏑⏑⏑⏑⏑⏑— —⏑— —⏑— —
ಮಹಾಸ್ರಗ್ಧರಾ	⏑⏑	— — —⏑— —⏑⏑⏑⏑⏑⏑— —⏑— —⏑— —

ಉತ್ಪಲದ ಆದಿಗುರುವಿನ ಸ್ಥಾನದಲ್ಲಿ ಬರುವ ಒಂದು ಗುರುವನ್ನು ಕಿತ್ತು ಅದರ ಬದಲಿಗೆ ಎರಡು ಲಘುಗಳನ್ನು ಇರಿಸಿದರೆ ಆಯಿತು – ಚಂಪಕ. ಮುಂದಿನ ನಡಗೆ ಸಮಸ್ತವೂ ಉತ್ಪಲದಂತೆಯೇ ಇರುತ್ತದೆ. ಹಾಗೆಯೇ ಶಾರ್ದೂಲದ ನಡೆ ಆದಿಗುರು ವನ್ನು ಹೊರತುಪಡಿಸಿದರೆ ಮತ್ತೇಭದಲ್ಲೂ ಕಂಡುಬರುತ್ತದೆ. ಸ್ರಗ್ಧರದ ನಡೆ ಅದೇ ನಿಯಮದಂತೆ ಮಹಾಸ್ರಗ್ಧರದಲ್ಲೂ ಕಂಡುಬರುತ್ತದೆ. ಇದನ್ನು ಎಲ್ಲ ವಿದ್ವಾಂಸರೂ ಗುರುತಿಸಿದ್ದಾರೆ. ಆದರೆ ಯಾಕೆ ಹೀಗೆ ಮಾಡಿಕೊಂಡರು ? ಒಂದು ಗುರುವನ್ನು ಕಿತ್ತು ಎರಡು ಲಘು ಹಾಕುವ ನಿಯಮದ ಹಿಂದಿನ ರಹಸ್ಯವೇನು ಎಂಬ ಬಗೆಗೆ ನಾನು ಸಾಕಷ್ಟು ಚಿಂತನೆ ಮಾಡಿದ್ದೇನೆ. ಇದನ್ನು ಯಥಾಮತಿಯಾಗಿ ಇಲ್ಲಿ ಹೇಳಲಿದ್ದೇನೆ. ವಿದ್ವಾಂಸರು ಗಮನಿಸಬೇಕಾಗಿ ಪ್ರಾರ್ಥನೆ.

ಆದಿಗುರುವಿಗೆ ಬದಲಾಗಿ ಎರಡು ಲಘು ಇಡುವುದರಿಂದ ಕವಿತೆಗೆ ಆರಂಭದಲ್ಲೇ ಒಂದು ಬಗೆಯ ಕನ್ನಡ ವಾತಾವರಣ ಬರುತ್ತದೆ ಎಂಬುದು ಸ್ವಲ್ಪಮಟ್ಟಿಗೆ ನಿಜ. ಹೀಗೆ ಮಾಡಿದ್ದರಿಂದ ಚಂಪಕಕ್ಕೆ ಆದಿಯಲ್ಲೇ ನಾಲ್ಕು ಲಘುಗಳು ಸಿಕ್ಕಿದಂತಾಗಿ (ಉತ್ಪಲ—ᴗᴗ ಚಂಪಕ ᴗᴗᴗᴗ) ಅದು ಉಳಿದ ವೃತ್ತಗಳಿಗಿಂತ ಕನ್ನಡ ಭಾಷೆಗೆ ಹೆಚ್ಚು ಸಮೀಪವರ್ತಿಯಾಗಿ ಜನಪ್ರಿಯವಾಯಿತು ಎಂಬುದರಲ್ಲೂ ಸ್ವಲ್ಪ ಸತ್ಯಾಂಶ ಇದೆ. ಆದರೆ ವಾಸ್ತವವಾಗಿ ಇವಾವುವೂ ಕಾರಣಗಳಲ್ಲ—ಫಲಗಳು ಅಷ್ಟೆ. ನನ್ನ ದೃಷ್ಟಿಯಲ್ಲಿ ಇವಕ್ಕೆ ಮೂಲಕಾರಣ ಒಂದಿದೆ. ಅದು ನಮ್ಮ ಅಚ್ಚಗನ್ನಡ ಛಂದಸ್ಸಿನ ನಡತೆಗೆ ಸಂಬಂಧಿಸಿದ್ದು. ಅದನ್ನು ಸ್ವಲ್ಪ ಪರಿಶೀಲಿಸೋಣ.

ಕನ್ನಡದ ಅಂಶ ಛಂದಸ್ಸಿನಲ್ಲಿ ಅಂಶಗಳ ಸಂಖ್ಯೆಯ ಮೇಲೆ ಗಣ ನಿರ್ಧಾರವಾಗು ತ್ತದೆ. ಪ್ರತಿಯೊಂದು ಅಕ್ಷರವೂ ಒಂದೊಂದು ಅಂಶ. ಅಂಥ ಎರಡು ಅಂಶಗಳಿದ್ದರೆ ಬ್ರಹ್ಮಗಣ, ಮೂರು ಅಂಶಗಳಿದ್ದರೆ ವಿಷ್ಣುಗಣ, ನಾಲ್ಕು ಅಂಶಗಳಿದ್ದರೆ ರುದ್ರಗಣ ಎನ್ನುತ್ತೇವೆ. ಪ್ರತಿ ಅಕ್ಷರಕ್ಕೂ ಒಂದೊಂದು ಅಂಶದ ಸ್ಥಾನವಿರುವ ಈ ಛಂದಸ್ಸಿ ನಲ್ಲಿ ಗಣದ ಮೊದಲ ಅಕ್ಷರ ಗುರುವಾಗಿರಬೇಕು. ಅಥವಾ ಆ ಗುರುವಿನ ಸ್ಥಾನದಲ್ಲಿ ಎರಡು ಲಘುಗಳು ಬಂದರೂ ಅದು ಒಂದೇ ಅಂಶವಾಗಿ ಪರಿಗಣಿತವಾಗುತ್ತದೆ. ಇದು ಅಂಶಗಣದ ನಿಯಮ. ಈ ನಿಯಮ ಎಷ್ಟು ಬಿಗಿಯಾಗಿದೆ ಎಂದರೆ ಜನಪದ ಗೀತಗಳಲ್ಲಿ ಎಲ್ಲಿ ಹುಡುಕಿದರೂ ಜಗಣದಿಂದ ಆರಂಭವಾಗುವ ಪದ್ಯ ಸಿಕ್ಕುವುದಿಲ್ಲ. ಆದಿಯಲ್ಲಿ ಒಂದು ಗುರು ಇಲ್ಲವೇ ಕಡ್ಡಾಯವಾಗಿ ಎರಡು ಲಘು ಬಂದೇ ಬರುತ್ತವೆ. ಲಘುವೊಂದರಿಂದ ಆರಂಭವಾಗುವ ಗಣವೇ ನಮ್ಮ ದೇಸಿಯಲ್ಲಿಲ್ಲ. ಈ ಮೂಲಭೂತ ಕಲ್ಪನೆ ನಮ್ಮ ಮಾರ್ಗಕವಿಗಳ ಪ್ರಜ್ಞೆಯ ತಳದಲ್ಲಿ ಕೆಲಸ ಮಾಡುತ್ತಿತ್ತು. ಆದುದ ರಿಂದ ಅವರು ಹೆಚ್ಚು ಪ್ರಯಾಸಪಡದೆ ಉತ್ಪಲ ಶಾರ್ದೂಲ ಸ್ರಗ್ಧರೆಗಳ ಆದಿಗುರು ವಿನ ಸ್ಥಾನದಲ್ಲಿ ಎರಡು ಲಘುಗಳನ್ನು ಸುಲಭವಾಗಿ ಹಚ್ಚಿಬಿಟ್ಟರು. ಆದುದರಿಂದ ಹೊಸದಾಗಿ ಮೂರು ವೃತ್ತಗಳನ್ನು ನಮ್ಮವರು ನಿರ್ಮಿಸಿಕೊಂಡದ್ದು ಅವರಲ್ಲಿ ಅಂತರ್ಗಾಮಿಯಾಗಿ ಕನ್ನಡ ಛಂದಃಪ್ರಜ್ಞೆ ಕೆಲಸ ಮಾಡುತ್ತಲೇ ಇತ್ತೆಂಬುದನ್ನು

ಖಚಿತಪಡಿಸುತ್ತದೆ. ಇದನ್ನೇ ನಾನು ಪ್ರಕಟವಾಗಲಿರುವ ನನ್ನದೊಂದು ಛಂದೋ ಕಾವ್ಯಗ್ರಂಥವಾದ 'ಛಂದೋಮಿತ್ರ'ದಲ್ಲಿ ಪದ್ಯರೂಪದಲ್ಲಿ ಹೀಗೆ ಕಾಣಿಸಿದ್ದೇನೆ.

ಗಣಗಳು ಮೂರಿವೆ ದೇಸಿಯ ಛಂದದಿ
ವಿಷ್ಣುವು ಬ್ರಹ್ಮನು ರುದ್ರ
ಗಣಗಳು ಪಲ್ಲಟಗೊಳ್ಳವು ಆಗೀಗ
ಮಾಣರಿ ಜಗಣ 'ನಿಷಿದ್ಧ'.

ಅಂಶಗಣಗಳೆಂಬ ನವನಾಮ ಇದಕುಂಟು
ಅಂಶವು ಎರಡಿರೆ ಬ್ರಹ್ಮ
ಅಂಶವು ಮೂರಿರೆ ವಿಷ್ಣುವು ತಾನಾಯ್ತು
ಅಂಶವು ನಾಕಿರೆ ರುದ್ರ.

ಆದಿಯೊಳಿದ್ದರೆ ಗುರುವೊಂದು ಒಂದಂಶ
ಇದ್ದರು ಲಘುವೆರಡೊಂದೆ.
ಮುಂದಕೆ ಗುರುಲಘು ಯಾವುದೆ ಇದ್ದರು
ಒಂದೊಂದು ಅಂಶವು ಎಂದೆ.

ಲಘುವೊಂದರಿಂದಲಿ ಆರಂಭಗೊಳ್ಳುವ
ಬಗೆಯುದು ಅಂಶದೊಳಿಲ್ಲ
ಜಗಣದ ನಾಂದಿಯು ಅಂಶಕೆ ಒಗ್ಗಿಲ್ಲ
ವಿನಾಯಿತಿ ಎಂಬುದೆ ಇಲ್ಲ.

ಆದಿಯ ಗುರುವಿಗೆ ಬದಲಾಗಿ ಲಘುವೆರ
ಡಾದುದು ಕನ್ನಡದೊಳಗೆ
ಖ್ಯಾತ ಕರ್ನಾಟಕ ಮೂರಿದ್ದುದಾರಾಯ್ತು
ಇದು ನೋಡಿ ದೇಸಿಯ ಕೊಡುಗೆ.

ಉತ್ಪಲ ಶಾರ್ದೂಲ ಸ್ರಗ್ಧರೆ ಈ ಮೂರು
ವೃತ್ತಗಳಾದಿಯ ಗುರುವ
ಕಿತ್ತೆರಡು ಲಘುಗಳನಿರಿಸಲು ಚಂಪಕ
ಮತ್ತೇಭ ಮಹಸ್ರಗ್ಧರಾಯ್ತು.

ಹೀಗೆ ಸಂಸ್ಕೃತ ಛಂದಸ್ಸಿಗೇ ಮೂರು ಅಕ್ಷರ ಛಂದಸ್ಸುಗಳನ್ನು ಕನ್ನಡವು ಕೊಡಿಗೆ ಯಾಗಿ ನೀಡಿದೆ. ದಕ್ಷಿಣ ಭಾರತದ ಸಂಸ್ಕೃತ ವಿದ್ವಾಂಸರುಗಳು ಈ ಮೂರು ಛಂದೋರೂಪಗಳನ್ನೂ ಬಳಸಿ ಕಾವ್ಯರಚನೆ ಮಾಡಿರುವುದೇ ಇದಕ್ಕೆ ಸಾಕ್ಷಿ.

ಈಗ ಅಕ್ಷರ ವೃತ್ತಗಳಲ್ಲಿ ಚಂಪಕ ಉತ್ಪಲ ಮಾಲೆಗಳನ್ನು ಗಮನಿಸೋಣ. ನಮ್ಮ ಚಂಪೂ ಕವಿಗಳು ಮಾತ್ರಾ ಛಂದಸ್ಸಿನ ಕಂದಕ್ಕೇ ಹೆಚ್ಚಿನ ಪ್ರಾಶಸ್ತ್ಯ ನೀಡಿ ಉಳಿದಂತೆ ಸಂಸ್ಕೃತದ ಅಕ್ಷರ ವೃತ್ತಗಳನ್ನು ಬಳಸಿರುವುದು ಸರಿಯಷ್ಟೆ. ಈ ವೃತ್ತ ಗಳಲ್ಲೂ ಅವರು ಉತ್ಪಲ ಚಂಪಕಗಳನ್ನೇ ಶೇಕಡ 75ರಷ್ಟು ಬಳಸಿದ್ದಾರೆ. ಅನಂತರದ ಸ್ಥಾನ ಮತ್ತೇಭಕ್ಕೆ ಸಲ್ಲುತ್ತದೆ. ಶಾರ್ದೂಲ ಮಹಾಸ್ರಗ್ಧರಾ ಹಾಗೂ

ಸ್ರಗ್ಧರಾ ವೃತ್ತಗಳು ಕ್ರಮವಾಗಿ ಮುಂದಿನ ಸ್ಥಾನಗಳನ್ನು ಪಡೆಯುತ್ತವೆ. ಮಲ್ಲಿಕಾಮಾಲೆ, ತರಳ, ಶಂಘುನಟನ, ಹರಿಣೀ, ಪಿಜರಪ್ಲುತ, ಮಾಲಿನೀ, ಲಯಗ್ರಾಹಿ, ತೋಟಕ ಮೊದಲಾದ ವೃತ್ತಗಳನ್ನೂ ತುಂಬ ವಿರಳವಾಗಿ ಬಳಸಿದ್ದಾರೆ. ಆಚಣ್ಣ, ಚಂದ್ರರಾಜ, ಷಡಕ್ಷರಿ, ಇಮ್ಮಡಿ ಗುರುಸಿದ್ಧ ಇವರುಗಳು ಛಂದೋಜ್ಞ ರಾಗಿದ್ದುದರಿಂದ ತಮ್ಮ ಕೃತಿಗಳಲ್ಲಿ ಇನ್ನೂ ಅಪೂರ್ವವಾದ ಕೆಲವು ಅಕ್ಷರ ಛಂದಸ್ಸು ಗಳನ್ನು ಬಳಸಿದ್ದಾರೆಂಬುದು ನಿಜವಾದರೂ ಅವೆಲ್ಲ ಪ್ರಯೋಗಾಕಾಂಕ್ಷೆಯಿಂದ ಬರೆದ ವೃತ್ತಗಳಾಗಿದ್ದು ಮುಂದಿನ ಕವಿಗಳಿಗೆ ಪ್ರೇರಣೆ ನೀಡುವಷ್ಟು ಬಲಿಷ್ಠವಾಗಲಿಲ್ಲ. ಆ ಕವಿಗಳಲ್ಲಿ ಕೂಡ ಚಂಪಕ ಉತ್ಪಲಗಳು ತುಂಬ ಹೆಚ್ಚಿನ ಸಂಖ್ಯೆಯಲ್ಲೇ ಕಾಣಿಸಿ ಕೊಂಡಿವೆ. ಇದಕ್ಕೆ ಕಾರಣವಿದೆ. ಉತ್ಪಲ ಚಂಪಕಗಳನ್ನು ಸಂಸ್ಕೃತ ಕವಿಗಳು ತಮ್ಮ ಭಾವಪ್ರವಹಣಕ್ಕೆ ಮಾಧ್ಯಮವಾಗಿ ಮಾಡಿಕೊಂಡಿರುವ ಸಂದರ್ಭಗಳೇ ಕಡಿಮೆ – ಇಲ್ಲವೇ ಇಲ್ಲ ಎಂದರೂ ಸಲ್ಲುತ್ತದೆ. ಸಂಸ್ಕೃತ ಛಂದೋ ಚರಿತ್ರೆಯಲ್ಲಿ ಇವಕ್ಕೆ ಯಾವ ಸ್ಥಾನವೂ ಇಲ್ಲ. ಕನ್ನಡ-ತೆಲುಗುಗಳಲ್ಲಿ ಮಾತ್ರ ಇವು ತುಂಬ ಜನಪ್ರಿಯವಾಗಿ ಕನ್ನಡ ವೃತ್ತ ಛಂದಸ್ಸಿನ ಬಹುಪಾಲನ್ನು ತುಂಬಿಕೊಂಡಿವೆ. ಇದಕ್ಕೆ ಕಾರಣ ನನಗನ್ನಿಸುವ ಮಟ್ಟಿಗೆ ಇವು ವೃತ್ತದ ನೆರಳಲ್ಲಿದ್ದರೂ ಮಾತ್ರಾಗಣದ ನಡೆಗೆ ಹೊಂದಿಕೊಳ್ಳುವಷ್ಟು ಸಮೀಪದಲ್ಲಿರುವುದೇ ಆಗಿದೆ. ಎರಡನೆಯ ಕಾರಣ ಈ ಛಂದಸ್ಸುಗಳ ಪ್ರತಿ ಸಾಲೂ ಮಾತ್ರಾ ದೃಷ್ಟಿಯಿಂದ ಏಳು ಗಣಗಳಿಂದ ಘಟಿತ ವಾಗಿರುವುದೇ ಆಗಿದೆ. ಈ ಸಪ್ತಗಣದ ಚರ್ಚೆಯನ್ನು ನಾನು ಮುಂದೆ ಎತ್ತಿಕೊಳ್ಳು ತ್ತೇನೆ. ಈಗ ಉತ್ಪಲ ಚಂಪಕಗಳನ್ನು ಲಕ್ಷ್ಯಸಮೇತವಾಗಿ ಸಮಾಲೋಚಿಸೋಣ.

> ಶ್ರೀಯುನರಾತಿಸಾಧನಪಯೋನಿಧಿಯೊಳ್ಪಡೆದುಂ ಧರಿತ್ರಿಯುಂ
> ಜೀಯೆನೆ ಜೇಡಿ ಕೊಳ್ಳದೆ ವಿರೋಧಿ ನರೇಂದ್ರರನೊತ್ತಿ ಕೊಂಡುಮಾ
> ಶ್ರೀಯು........

ಇವರ ಗಣವಿಭಾಗ "ಭರನಭಭರ ಲಗ" ಎಂದಾಗುತ್ತದೆ. ಇದನ್ನು ಮಾತ್ರಾಗಣದ ದೃಷ್ಟಿಯಿಂದ ಪರಿಶೀಲಿಸಿದರೆ ಇದರಲ್ಲಿ ಸ್ಪಷ್ಟವಾಗಿ ಗಣಗಳ ಒಳಹೊಂದಾಣಿಕೆಯುಳ್ಳ ಚತುರ್ಮಾತ್ರಾಗಣದ ಓಟ ನಿಚ್ಚಳವಾಗಿ ಕಾಣುತ್ತದೆ. ಎರಡನೆಯ ಮತ್ತು ಮೂರನೆಯ ಗಣಗಳಲ್ಲಿ ಕ್ರಮವಾಗಿ 5+3 ಎಂಬ ಮಾತ್ರಾಗಣನೆಯಿದ್ದು ಅದೇ ರೀತಿ ಆರನೇ ಏಳನೇ ಗಣಗಳಲ್ಲಿ 3+5 ಈ ಬಗೆಯ ಮಾತ್ರೆಯ ನಡಿಗೆ ಗೋಚರವಾಗುತ್ತದೆ. ಇದನ್ನು ಮಾತ್ರಾಗಣದ ದೃಷ್ಟಿಯಿಂದಲೂ ಏಳು ಗಣವಾಗಿ ವಿಭಜಿಸಿ ನಾಲ್ಕು ಮಾತ್ರೆಯ ಮಂದಾನಿಲದ ಓಟವನ್ನು ಗುರುತಿಸಿ ಹೀಗೆ ನಿರೂಪಿಸ ಬಹುದು.

$$\begin{array}{cccccc} & 4\ 4 & & & 4\ 4 \\ & \frown & & & \frown \\ 4, & 5,3 & \quad 4, & 4, & 3,5 \end{array}$$

ಚಂಪಕಮಾಲೆಯು ಚಲನವೂ ಇದೇ ಪರಿಯದು. ಉದಾಹರಣೆ :—

> ನಿಜದೊಳೆ ಭೂಪರೆಂಬರವಿವೇಕಿಗಳಪ್ಪರದಕ್ಕೆ ನೀಂ ಫಣಿ
> ಧ್ವಜ ಕಡುಕೆಯ್ದು ಕರ್ಣನನೆ ನಚ್ಚುವೆಯಪ್ಪೊಡೆ ಯುದ್ಧದೊಳ್........

ಇಲ್ಲಿರುವುದೂ ಏಳು ಗಣವೆ. ಮಂದಾನಿಲದ ನಡಿಗೆ. ಇದರ ವಿಭಜನೆ ಹೀಗಿದೆ :

4 4   4.4

4   5.3   4 4   3.5

ಹೀಗೆ ಸಪ್ತಗಣಗಳಾಗಿ ಒಡೆದುಕೊಳ್ಳುವ, ಮಾತ್ರಾಗಣಕ್ಕೆ ಸಮೀಪವಾದ ಹಾಗೂ ಲಘುಗಳ ಚೆಲುವಿನಿಂದ ಮೆರೆಯುವ ಉತ್ಪಲ ಚಂಪಕಗಳು ಅಕ್ಷರ ವೃತ್ತಗಳಲ್ಲಿ ಸಿಂಹಪಾಲನ್ನು ಪಡೆದದ್ದು ಆಶ್ಚರ್ಯವೇನಲ್ಲ.

ಇನ್ನು ಅಕ್ಷರ ವೃತ್ತಗಳನ್ನು ಕನ್ನಡ ಕವಿಗಳು ತಂದುಕೊಂಡರೂ ಕನ್ನಡ ದೇಸಿಯಲ್ಲಿ ಪ್ರಚುರವಾಗಿರುವ ಎರಡು ಮಹತ್ತ್ವದ ಅಂಶಗಳನ್ನು ಅವಕ್ಕೆ ಸೇರಿಸಿ ತಮ್ಮದಾಗಿಸಿಕೊಂಡರು. ಈ ಎರಡು ಅಂಶಗಳೆಂದರೆ ಅಕ್ಷರಯತಿಯನ್ನು ಕೈಬಿಟ್ಟು ನಮ್ಮದೇ ಆದ ಖಂಡಪ್ರಾಸವನ್ನು ಸೇರಿಸಿಕೊಂಡದ್ದು. ಎರಡನೆಯದು 'ಪಾದಾಂತಯತಿ'ಯ ನಿಯಮವನ್ನು ಸಡಿಲಗೊಳಿಸಿ ಖಂಡ ಪ್ರಾಸದ ನೆರವಿನಿಂದ ಪ್ರವಾಹಗತಿಯನ್ನು ತಂದದ್ದು. ಅಕ್ಷರಯತಿ ಸಂಸ್ಕೃತದಲ್ಲಿ ಕಡ್ಡಾಯವಾಗಿದ್ದು ವೃತ್ತ ಪಾದಗಳ ಸಂಚಾರಕ್ರಮವನ್ನು ಖಚಿತ ಕ್ರಮದಲ್ಲಿ ತೋರಿಸಿಕೊಡುತ್ತದೆ. ಆದುದರಿಂದ ಪಾದಾಂತಯತಿಯೂ ಆ ಭಾಷೆಗೆ ಸಹಜವಾದ ನಿಲುಗಡೆಯಾಗಿದೆ. ಆದರೆ ಕನ್ನಡದಲ್ಲಿ ಅಕ್ಷರಯತಿಯನ್ನು ಪಾಲಿಸಬೇಕೆಂಬ ನಿಯಮ ಕಡ್ಡಾಯವಲ್ಲ. ಖಂಡ ಪ್ರಾಸ ಎಂದರೆ ಪ್ರಾಸಾಕ್ಷರ. ಪದ್ಯದ ಪ್ರತಿ ಪಾದದ ಎರಡನೆಯ ಅಕ್ಷರ ಆ ವರ್ಗದ ಅಕ್ಷರವೇ ಆಗಿರುವಿಕೆ. ಇದನ್ನು ಜಯಕೀರ್ತಿ 'ಪ್ರಾಣಾಕ್ಷರ' ಎಂದು ಸೂಕ್ತವಾಗಿ ಕರೆದಿದ್ದಾನೆ. ದೇಸಿ ಗುಣವುಳ್ಳ ಈ ಪ್ರಾಣಾಕ್ಷರ ನಿಯಮವನ್ನು ಪಾಲಿಸಿದ ನಮ್ಮ ಕವಿಗಳು ಅಕ್ಷರಯತಿಯನ್ನು ಸಹಜವಾಗಿ ನಿರ್ಲಕ್ಷಿಸಿ ಪಾದದ ಓಟ ಎರಡನೆಯ ಸಾಲಿಗೂ ಹರಿಯುವಂತೆ ಮಾಡಿಕೊಂಡರು. ಪಾದಾಂತಕ್ಕೆ ನಿಲ್ಲದ ಈ ತೊರೆಯೋಟದಿಂದ ಪಾದ ಪಾದಗಳಿಗೆ ಸಾವಯವ ಸಂಬಂಧ ಏರ್ಪಟ್ಟು ವಾಚನಕ್ಕೆ ಗಮಕಗತಿಯನ್ನು ತಂದುಕೊಡಲೂ ಸಾಧ್ಯವಾಗುತ್ತದೆ.

ಈಗ ನಾನು ಮಾತ್ರಾ ವೃತ್ತಗಳಿಗೆ ಬರುತ್ತೇನೆ. ಕಂದ ಒಂದು ಮಾತ್ರಾ ವೃತ್ತ. ಚತುರ್ಮಾತ್ರಾ ಘಟಿತವಾದದ್ದು. ಒಂದು ಮೂರನೆಯ ಪಾದಗಳಲ್ಲಿ ನಾಲ್ಕು ಮಾತ್ರೆಯ ಮೂರು ಗಣಗಳೂ ಎರಡು ನಾಲ್ಕನೇ ಪಾದಗಳಲ್ಲಿ ನಾಲ್ಕು ಮಾತ್ರೆಯ ಐದು ಗಣಗಳೂ ಇದರಲ್ಲಿ ಬರುತ್ತವೆ. ಸಂಸ್ಕೃತ ಪ್ರಾಕೃತಗಳ

ಮಾತ್ರಾ ಛಂದಗಳಾದ ಗೀತಿಕೆ, ಆರ್ಯೆ, ಖಂದಕ ಇವುಗಳ ಪ್ರಭಾವದಿಂದ ಕನ್ನಡಕ್ಕೆ ಕಸಿ ಮಾಡಿಕೊಂಡ ಹೊಸ ಛಂದಸ್ಸು ಇದು. ಆದುದರಿಂದಲೇ ನಾನು ಕಂದದ ಸ್ವರೂಪವನ್ನು ವಿವರಿಸುವ ಒಂದು ಕಂದ ಪದ್ಯದಲ್ಲಿ

ದತ್ತಕ ಪುತ್ರನೆ ಕಂದನೆ
ಹೊತ್ತಿಹ ಕನ್ನಡ ಯಶೋದೆ ನಂದನೆ ಚಂಪೂ
ವೃತ್ತದ ವೃಂದಾವನದೊಳು
ಸುತ್ತಲು ಕುಣಿವನೆ.......

ಎಂದು ವರ್ಣಿಸಿದ್ದೇನೆ. ಇದರ ಜನಪ್ರಿಯತೆ ಎಷ್ಟೆಂಬುದನ್ನು ಕನ್ನಡ ಕಾವ್ಯವನ್ನು ಬಲ್ಲ ಸಹೃದಯರಿಗೆ ವಿವರಿಸಿ ಹೇಳಬೇಕಾಗಿಲ್ಲ. ಇದರ ಇತಿಹಾಸ ಬಹುಶಃ ನಮ್ಮ ಚತ್ತಾಣ ಬೆದಂಡೆ ಎಂಬ ಅನುಪಲಬ್ಧ ಛಂದೋಜಾತಿಗಳ ಕಾಲದಷ್ಟು ಹಳೆಯದು. ಈ ಸುಂದರ ಕಂದಗಳ ಪ್ರಾಚುರ್ಯದಿಂದಾಗಿ ನಮ್ಮ ಚಂಪೂ ಮಾರ್ಗದ ಇತರ ವೃತ್ತಗಳೂ ನಮಗೆ ಸಹ್ಯವಾದುವು. ಅಂದರೆ ಕನ್ನಡದ್ದಲ್ಲದಿದ್ದರೂ ಕನ್ನಡದ ಜಾಯಮಾನಕ್ಕೆ ಹೊಂದಬಲ್ಲ ಒಂದು ಸೆಳೆತ ಇದರಲ್ಲಿದೆ.

ಈ ಕಂದದ ಜತೆಗೇ ಸಂಸ್ಕೃತ-ಪ್ರಾಕೃತಗಳಿಂದ ಬಂದ ರಗಳೆ ಕೂಡ ನಮಗೆ ಪ್ರಿಯವಾದ ಛಂದೋ ಬಂಧವಾಯಿತು. ಮೂರು ನಾಲ್ಕು ಐದು ಮಾತ್ರೆಗಳ ಓಟದಲ್ಲಿ ಸಾಗುವ ಉತ್ಸಾಹ, ಮಂದಾನಿಲ, ಲಲಿತ ರಗಳೆಗಳು ತಮ್ಮ ಪರಿಷ್ಕೃತ ರೂಪದಲ್ಲಿ ಇಂದಿಗೂ ಆಧುನಿಕ ಕನ್ನಡದಲ್ಲಿ ಉತ್ತಮ ರಚನಾಮಾಧ್ಯಮವಾಗಿ ಉಳಿದುಕೊಂಡು ಬಂದಿವೆ. ಅಷ್ಟೇ ಅಲ್ಲ. ನಮ್ಮ ದೇಸೀ ಛಂದಸ್ಸುಗಳನ್ನೂ ತಮ್ಮ ಕಡೆ ಸೆಳೆಯುವಷ್ಟು ಅಂತಃಸ್ಪಂದನ ಉಳ್ಳವುಗಳಾಗಿವೆ. ಅಕ್ಷರ ವೃತ್ತಗಳ ಹತ್ತಿರ ಸುಳಿಯಲೂ ಹೆದರಿದ ನಮ್ಮ ದೇಸೀ ಛಂದೋ ರೂಪಗಳು ಮಾತ್ರಾವೃತ್ತಗಳಲ್ಲಿ ತಮಗೆ ಹೊಂದುವ ಗುಣಗಳನ್ನು ಕಂಡುಕೊಂಡು ಹೇಗೆ ಒಂದರೊಡನೊಂದು ಬೆರೆತುಹೋದವು ಎಂಬುದನ್ನು ಪರಿಶೀಲಿಸುವುದು ಛಂದಸ್ಸಿನ ಇತಿಹಾಸದ ದೃಷ್ಟಿಯಿಂದ ಒಂದು ಮಹತ್ತ್ವಪೂರ್ಣ ದಾಖಲೆಯಾಗುತ್ತದೆ. ಇದನ್ನೇ ನಾನು 'ಛಂದೋಮಿತ್ರ'ದ ಕೆಲವು ಸಾಂಗತ್ಯಗಳಲ್ಲಿ ವಿವರಿಸಿದ್ದೇನೆ.

ಸಾಕ್ಷರ ವೃತ್ತದ ಹುತ್ತವು ದುಷ್ಕರ
ಛಕ್ಕಿಸಬಹುದೆಂದು ಹೆದರಿ
ರಕ್ಷಣೆ ಪಡೆಯಿತು ಹಳ್ಳಿಯ ಹಾಡಿನ
ಪಕ್ಷದೊ'ಳಂಶ'ವು ಚೆದರಿ.

ಮಾತ್ರಾ ಬಂಧದ ಮೋಡಿಯು ಏನೆಂಬೆ
ಕಂದ ಪ್ರಾಚುರ್ಯವೆ ಸಾಕ್ಷಿ
ಹತ್ತಿರ ಬಂದಳು ನೋಡುತ ಮೆಲ್ಲನೆ
ಅಂಶದ ದೇಸಿ ಮೀನಾಕ್ಷಿ.

ರಗಳೆಯು ಕಂದವು ಮಾತ್ರೆಯು ಚಂದವ
ಬಗೆಬಗೆಯಲ್ಲಿ ವಿಸ್ತರಿಸೆ
ಸೊಗಸಿಗೆ ನಲಿದಳು ಮನದಲ್ಲಿ ಮೆಚ್ಚುತ
ಒಗತನಕೆಳಸಿದಳಬಲೆ.

ಅಕ್ಷರವೃತ್ತಕ್ಕು ಅಂಶಕ್ಕು ಇರುವುದು
ಶ್ರೀಕೃಷ್ಣ ಕಂಸ ಸಂಬಂಧ
ಮಾತ್ರೆಯ ವೃತ್ತದ ಅಂಶದ ಒಗತನ
ಶ್ರೀಕೃಷ್ಣ ಗೊಲ್ಲತಿಯಂದ.

ಅಂಶವು ಮಾತ್ರೆಯು ಮಂಠಕೆ ಸೇರಿದ್ದು
ಮುರಲಿಕೃಷ್ಣರು ಕೂಡಿದಾಕೆ
ಸೊಗಸಾದ ಹಾಡಿನ ಹೊನಲದು ಹರಿಯಿತು
ಕನ್ನಡ ಕಾವ್ಯದೊಳಂತೆ.

ಷಟ್ಪದವೊಂದಿತ್ತು ಆರಾಯ್ತು ಷಟ್ಪದಿ
ಅದು ನೋಡಿ ಮಾತ್ರೆಯ ಮೋಡಿ
ತನ್ನತನವನು ಕೂಡ ಉಳಿಸಿಕೊಂಡಿತು ಅಂಶ
'ಸಾಂಗತ್ಯ' 'ಸೀಸ'ದ ಜೋಡಿ.

ಸರ್ವಜ್ಞ ವಚನದ ಛಂದದ ಮರ್ಮವು
ಅಂಶದ-ಮಾತ್ರೆಯ ಬೆಸುಗೆ
ಅಂಶ ಛಂದಗಳೆಲ್ಲ ಮಾತ್ರೆಗೆ ತಿರುಗಿದ್ದು
ನಡುಗನ್ನಡದೊಂದು ಕೊಡುಗೆ.

ಚಂಪೂ ಮಾದರಿಯ 'ರಾಜಮಾರ್ಗ' ಛಂದೋರೂಪಗಳನ್ನು 'ಪ್ರಜಾ-ಮಾರ್ಗ'ಗಳಿಗೆ ತಿರುಗಿಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ. ಭಾಷೆ ವಸ್ತು ಛಂದಸ್ಸು ಈ ಮೂರು ಮುಖಗಳನ್ನೂ ಸಾಮಾನ್ಯ ಜನವರ್ಗದ ಕಡೆಗೆ ತಿರುಗಿಸಿದ 'ವಚನ' ಸಾಹಿತ್ಯದಿಂದ ಪ್ರಭಾವಿತರಾದ ಮುಂದಿನ ಕವಿಗಳು ಹೊಸ ಹೊಸ ಛಂದೋಶೋಧಗಳಿಗೆ ತೊಡಗಿದರು. ಹರಿಹರ ಕವಿ ರಗಳೆಗಳನ್ನು ಬಳಸಿ ಈ ಬಗೆಯ ನವಶೋಧಕ್ಕೆ ಚಾಲನೆ ನೀಡಿದ. ಮುಂದಿನ ಕವಿಗಳ ಗಮನ ಮಾತ್ರಾ ವೃತ್ತಗಳ ಕಡೆಗೂ ಅವುಗಳ ಪ್ರಭೆಯಲ್ಲಿ ಅಂಶವೃತ್ತಗಳನ್ನು ಬೆಳೆಸುವ ಕಡೆಗೂ ತಿರುಗಿತು. ಆಗ ಅವರಿಗೆ ಸಿಕ್ಕಿದ್ದು ಅಂಶ ಮಾನದ 'ಷಟ್ಪದ' ಎಂಬ ರೂಪ. ಇದು ಆರು ಸಾಲಿನ ಒಂದು ಪದ್ಯರೂಪ. ಏಳು ಗಣಗಳು ಮೂರು ಮೂರು ಸಾಲಿಗೆ ಹಂಚಿಕೊಂಡು ಒಟ್ಟು ಹದಿನಾಲ್ಕು ಗಣಗಳ ಬಂಧ. ಇದರ ಲಕ್ಷಣವನ್ನು ನಾನು ಹೀಗೆ ಷಟ್ಪದಿಸುತ್ತೇನೆ:

ವಿಷ್ಣುಗಣಂಗಳು
ಎಣಿಸಲು ಆರಿರೆ
ಕೊನೆಯಲ್ಲಿ ರುದ್ರವು ಬಂದಿರಲು
ಕನ್ನಡದೊಳಗಿನ
ಇನಿದಾದ ಛಂದವು
ಕಾಣಿರಿ ಷಟ್ಪದದರ್ಥವದು.

ಅಂದರೆ 1, 2, 4, 5ನೇ ಸಾಲುಗಳಲ್ಲಿ ಎರಡೆರಡು ವಿಷ್ಣುಗಣಗಳು; ಮೂರು ಆರನೇ ಸಾಲುಗಳಲ್ಲಿ ಎರಡೆರಡು ವಿಷ್ಣು ಒಂದೊಂದು ರುದ್ರ. ಇದು ಈ ಛಂದದ ನಡಿಗೆ. ಹೀಗೆ ಇದ್ದ ಷಟ್ಪದ ಒಂದೇ. ಮಾತ್ರಾಗಣದ ಬೆಳಕಿನಲ್ಲಿ ಒಬ್ಬ ಕವಿ ಇದನ್ನು ಸಹಜವಾಗಿ ಕಂಡವಂತೆ ನಾಲ್ಕು ಮಾತ್ರೆಯ ಗಣವಾಗಿ ಪರಿವರ್ತಿಸಿದ. ವಿಷ್ಣುಗಣದಲ್ಲಿ ಕನಿಷ್ಠ ಎಂದರೆ ನಾಲ್ಕು ಮಾತ್ರೆಯೂ ಗರಿಷ್ಠ ಎಂದರೆ ಆರು ಮಾತ್ರೆಯೂ ಬರುವುದು ಸರಿಯಷ್ಟೆ. ನಾಲ್ಕು ಮಾತ್ರೆಗೆ ತಿರುಗಿಸಿದಾಗ ಅದು

4 4
4 4
4 4 4 + ಗುರು

ಹೀಗೆ ಒಡೆದುಕೊಂಡಿತು. ಷಟ್ಪದದ ಕೊನೆಯಲ್ಲಿ ನಿಲ್ಲುವ ರುದ್ರ ಇಲ್ಲಿ ಬದಲಾಗಿದೆ. ಕನ್ನಡ ಛಂದಸ್ಸಿನಲ್ಲಿ ವಾಸ್ತವವಾಗಿ ವಿಷ್ಣುಗಣವೇ ಪ್ರಧಾನ ಗಣ. ಆದರಲ್ಲಿ ಒಂದಂಶವನ್ನು ಮೊಟಕಿಸಿದರೆ ಬ್ರಹ್ಮವೂ ಒಂದನ್ನು ವಿಸ್ತರಿಸಿದರೆ ರುದ್ರವೂ ಬರುತ್ತವೆ. ಅಲ್ಲದೆ ಶುದ್ಧ ರುದ್ರಗಣಗಳಲ್ಲೇ ನಿರ್ವಹಣೆಗೊಂಡಿರುವ ಯಾವ ಪದ್ಯವೂ ಇಲ್ಲ. ಆದುದರಿಂದ ಮಾತ್ರಾದೃಷ್ಟಿಯಿಂದ ನೋಡಿದರೆ ಮೂರನೆಯ ಸಾಲು 4+4+4+ಗುರು ಎಂದಾಗಿರುವುದು ಸಹಜವಾಗಿದೆ. ಇದನ್ನೇ ಆತ 'ಶರಷಟ್ಪದಿ' ಎಂಬ ಹೊಸ ಹೆಸರಿನಿಂದ ಕರೆದ. ಕನ್ನಡ ಕವಿಗಣ ಇಂಥ ಬದಲಾವಣೆಗೆ ಕಾಯುತ್ತಿತ್ತೋ ಎಂಬ ಹಾಗೆ ಮಿಂಚಿನ ವೇಗದಲ್ಲಿ ಶರಷಟ್ಪದಿಯನ್ನು ವಿಸ್ತರಿಸಿಕೊಂಡರು. ಅವರ ಲೆಕ್ಕದಲ್ಲಿ ಷಟ್ಪದಿ ಎಂದರೆ ಒಂದು ಎರಡು, ನಾಲ್ಕು ಐದನೇ ಸಾಲಿನಲ್ಲಿ ಬರುವ ಗಣಗಳ ಒಂದೂವರೆಯಷ್ಟನ್ನು ಮೂರನೇ ಸಾಲಿನಲ್ಲಿ ತಂದು ಜತೆಗೆ ಒಂದು ಗುರುವನ್ನು ಸೇರಿಸಬೇಕಾದ ಒಂದು ಛಂದಸ್ಸು ಎಂಬ ಕಲ್ಪನೆ ಬೆಳೆಯಿತು. ವಿಷ್ಣುಗಣಕ್ಕೆ ಐದು ಮಾತ್ರೆಯ ನಡಿಗೆಯೂ ಉಂಟಷ್ಟೆ. ಆದುದರಿಂದ ಇನ್ನೊಬ್ಬ ಪ್ರತಿಭಾಶಾಲಿ ಒಂದು ಷಟ್ಪದಿ ರಚಿಸಿ ಅದರಲ್ಲಿ

5 5
5 5
5 5 5 + ಗುರು...

ಈ ನಡಿಗೆಯನ್ನು ಜಾರಿಗೆ ತಂದ. ಬಹುಶಃ ಅಲ್ಲಮನಲ್ಲಿ ಇದರ ಸ್ಥಿತ್ಯಂತರದ ರೂಪ ಕಂಡುಬರುತ್ತದೆ. ಅದನ್ನು ಹೀಗೆ ಬಿಡಿಸಿ ಬರೆಯಬಹುದು :

ಎತ್ತಣ ಮಾಮರ
ಎತ್ತಣ ಕೋಗಿಲ
ಎತ್ತಣಿಂದೆತ್ತ ಸಂಬಂಧವಯ್ಯಾ,
ಬೆಟ್ಟದ ನೆಲ್ಲಿಕಾಯಿ
(ಸ)ಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯಾ.

ಇದು ಅಂಶದ ದೃಷ್ಟಿಯಿಂದ ವಿ ವಿ
ವಿ ವಿ
ವಿ ವಿ ರು...... ×

ಮಾತ್ರೆಯ ದೃಷ್ಟಿಯಿಂದ ಕೆಲವಕ್ಷರಗಳನ್ನು ತೇಲಿಸಿ ಕೆಲವನ್ನು ವಿಸ್ತರಿಸಿದಾಗ

5 5
5 5
5 5 5 + ಗುರು.

ಎಂದಾಗುತ್ತದೆ. ಹೀಗೆ ಪಂಚಮಾತ್ರೆಯ ಓಟದ ಗಣವನ್ನು 'ಕುಸುಮ ಷಟ್ಪದಿ' ಎಂಬ ಹೆಸರಿನಿಂದ ಕರೆಯಲಾಯಿತು. ಇವೆರಡನ್ನೂ ಒಟ್ಟು ಮಾತ್ರೆಯ ದೃಷ್ಟಿಯಿಂದ

8	10
8	10
12 + ಗುರು	15 + ಗುರು

ಹೀಗೆ ವಿಭಜಿಸಬಹುದು. ಮುಂದೆ ಯಾರಿಗೋ 12 ಮಾತ್ರೆಗಳ ಸಾಲಿನ ಕಲ್ಪನೆ ಬಂದು ಆತ ಅದನ್ನು

3: 3: 3: 3
3: 3: 3: 3
3: 3: 3: 3 + ಗುರು...

ಎಂದು ಬೆಳೆಸಿ ಅದಕ್ಕೆ 'ಭೋಗ ಷಟ್ಪದಿ' ಎಂದು ಹೆಸರಿಟ್ಟ. ಮುಂದೆ 14ರ ಭಾಮಿನಿ, 16ರ ಪರಿವರ್ಧಿನಿ (ಇದು ಶರವರ್ಧಿನಿ ಎಂದಿರಬಹುದೆ?), 20ರ ವಾರ್ಧಕ ಇವೆಲ್ಲಾ ಇದೇ ವೃದ್ಧಿಮಾಪನದ ಚಟುವಟಿಕೆಯಿಂದಾಗಿ ಬಂದ ಸುಂದರ ಛಂದೋಬಂಧಗಳು ಎಂದು ಬಿಡಿಸಿ ಹೇಳಬೇಕಾಗಿಲ್ಲ. ಅಂದರೆ ಅಕ್ಷರ ವೃತ್ತಗಳಲ್ಲಿ ತನ್ನ

ವೈವಿಧ್ಯದ ಹೆಡೆಯನ್ನು ಆಡಿಸಲು ಅವಕಾಶವಿಲ್ಲದ ಕನ್ನಡ ಛಂದಸ್ಸು ಮಾತ್ರಾಗಣದ ಸಹಯೋಗದ ಪರಿಣಾಮವಾಗಿ ಎಷ್ಟೆಲ್ಲ ದಿಕ್ಕುಗಳಿಗೆ ತಲೆ ಚಾಚಲು ಸಾಧ್ಯವಾಯಿತು ಎಂಬುದು ಸ್ಪಷ್ಟವಾಗುತ್ತದೆ. ವಿದೇಶೀ ಸಂಸ್ಥೆಯು ಸಹಯೋಗ ಹೊಂದಿದ ಸ್ಥಾನಿಕ ಸಂಸ್ಥೆಯೊಂದು ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುವ ರೀತಿಯಲ್ಲಿ ಕನ್ನಡದ ದೇಸಿ ಛಂದಸ್ಸು ಮಾತ್ರೆಯ ಸಹಕಾರದಿಂದ ಹೀಗೆ ವರ್ಧಿಸಿತು. ಈ ಸಂವರ್ಧನೆ ಕೇವಲ ಏಕಪಕ್ಷೀಯವಾಗಿ ಆದುದಲ್ಲ. ಶುದ್ಧ ದೇಸಿ ಮಟ್ಟುಗಳಾದ ದ್ವಿಪದಿ ಚೌಪದಿ ತ್ರಿಪದಿಗಳು ಮಾತ್ರಾಗಣಕ್ಕೆ ತಿರುಗಿ ಹಾಡುಗಳಲ್ಲಿ ದಾಸರ ಪದಗಳಲ್ಲಿ ವಿಜೃಂಭಿಸಿದುದು ಒಂದು ಮುಖವಾದರೆ ಸಾಂಗತ್ಯ ಸೀಸ ಅಕ್ಕರಗಳು ಶುದ್ಧ ದೇಸಿಯ ಮಟ್ಟುಗಳ ವಿಸ್ತೃತ ಅಥವಾ ಸಂಕೋಚಿತ ರೂಪಗಳಾಗಿವೆ. ಚಂಪೂ ಕಾವ್ಯದ ಕಾಲ ದಲ್ಲಿ ಪಿರಿಯಕ್ಕರವಿದ್ದು ಮುಂದೆ ಅದು ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ, ಕಿರಿಯಕ್ಕರಗಳಾಗಿ ಕವಲೊಡೆದರೆ ತ್ರಿಪದಿಯಿಂದ ಪ್ರಭಾವಿತವಾದ 'ಸಾಂಗತ್ಯ' ಎಂಬ ಹಾಡುಗಬ್ಬ ಹೊಸದಾಗಿ ಹುಟ್ಟಿಕೊಂಡಿತು. ಮಾತ್ರಾ ವೃತ್ತಗಳಿಗೂ ಒಂದು ಹೊಸ ಆಯಾಮ ಈ 'ಕೊಳ್‌ಕೊಡೆ'ಯಿಂದ ಲಭಿಸಿದೆ ಎಂದು ಹೇಳಬಹುದು. ಈ ಬಗೆಯ ಉಭಯ ಸಂಪರ್ಕದ ಉತ್ತಮ ಫಲ ಎಂದರೆ 'ಭಾಮಿನೀ ಷಟ್ಪದಿ'. ಮಾತ್ರಾಗಣ ಗಳು ಸಾಮಾನ್ಯವಾಗಿ ಉತ್ಸಾಹ ಮಂದಾನಿಲ ಲಲಿತಗಳ ಶುದ್ಧಗತಿಯಲ್ಲಿ ಸಾಗುವ ಛಂದೋಬಂಧಗಳು. ಅಂಶಗಣಗಳ ನಡೆಯಲ್ಲಿ ವಿಷ್ಣು ಬ್ರಹ್ಮ ರುದ್ರ ಎಲ್ಲವೂ ಮಿಶ್ರಣಗೊಳ್ಳುತ್ತವೆ, ಒಂದರ ಅನಂತರ ಒಂದನ್ನು ಧಾರಾಳವಾಗಿ ತರಲು ನಮ್ಮಲ್ಲಿ ಅವಕಾಶವಿದೆ. ಈ ಮಿಶ್ರಣದಿಂದ ಪದ್ಯದ ಸಂಚಾರಗತಿಗೆ ಹೊಸ ಶೋಭೆ ಬರುತ್ತದೆ. ಈ ಸಲಹೆಯನ್ನು ಅಂಶದಿಂದ ಎತ್ತಿಕೊಂಡ ಮಾತ್ರಾಬಂಧವು ಭಾಮಿನೀ ಷಟ್ಪದಿ ಯಲ್ಲಿ ಮೊದಲ ಬಾರಿಗೆ 3, 4, 3, 4 ಮಾತ್ರೆಗಳ ಮಿಶ್ರನಡೆಯನ್ನು ನಿಯತವಾಗಿ ತಂದು ಛಂದಸ್ಸಿನ ಸಾಧ್ಯತೆಗಳ ದಿಗಂತವನ್ನು ವಿಸ್ತರಿಸಿತು. ಕುಮಾರವ್ಯಾಸ, ಚಾಮರಸರ ಕಾವ್ಯಸಾಧನೆಯ ಯಶಸ್ಸಿನ ಹಿನ್ನೆಲೆಯಲ್ಲಿ ಈ 'ಮಿಶ್ರನಡೆ'ಯ ಭಾಮಿನೀ ಛಂದಸ್ಸಿನ ಪಾತ್ರವೂ ದೊಡ್ಡದು ಎಂಬುದನ್ನು ಮರೆಯುವಂತಿಲ್ಲ. ಎಂಟು ಹತ್ತು ಹನ್ನೆರಡು ಹೀಗೆ ಮಾತ್ರಾ ಷಟ್ಪದಿ ಬೆಳೆದು ಬಂದಾಗ ಆಕಸ್ಮಿಕವಾಗಿ ನಮ್ಮ ಕವಿಗಳು 14 ಮಾತ್ರೆಯ ಸಾಲುನಡೆಯನ್ನು ಒಪ್ಪಿಕೊಂಡು ವಿಧಿಯಿಲ್ಲದೆ ಕೇವಲ ಲೆಕ್ಕಾಚಾರದ ದೃಷ್ಟಿಯಿಂದ ಅದನ್ನು 3, 4ರ ಉಪಗಣಗಳಾಗಿ ಒಡೆದು ಕೊಂಡಿರಬಹುದು. ಆದರೆ ಅವರು ಎಡವಿದ್ದು ಎಂಥ ಅಪೂರ್ವ ನಿಧಿಯ ಮೇಲೆ ಎಂಬುದು ಛಂದಸ್ಸಿನ ಅಂಜನ ಹಚ್ಚಿಕೊಂಡವರಿಗೆ ಮಾತ್ರ ಗೋಚರವಾಗುತ್ತದೆ.

ದೇಸಿ ಕನ್ನಡ ಛಂದಸ್ಸಿನ ನಡಿಗೆಯಲ್ಲಿ ಏಳು ಗಣಗಳ ಘಟ್ಟ ಪರಿಶೀಲನಾರ್ಹ ವಾಗಿದೆ. ಕನ್ನಡದಲ್ಲಿ 'ಏಳೆ' ಎಂಬ ಛಂದೋರೂಪ ಇದ್ದಿತೆಂದೂ ಇದರ ವಿಸ್ತೃತ ರೂಪವೇ ತ್ರಿಪದಿಯೆಂದೂ ಕೆಲವರು ಹೇಳುತ್ತಾರೆ. ಏಳೆಯಲ್ಲಿ ಏಳು ಗಣವು ಎರಡು ಸಾಲುಗಳಲ್ಲಿ ಹರಡಿಕೊಳ್ಳುತ್ತದೆ. ಕನ್ನಡದ ದೇಸಿ ಮಟ್ಟುಗಳೆಲ್ಲ

ಮೂಲತಃ ಏಳು ಗಣಗಳ ಮಟ್ಟುಗಳೇ ಆಗಿದ್ದು ವೈವಿಧ್ಯಕ್ಕಾಗಿ ವಿಸ್ತಾರಗೊಳ್ಳುತ್ತ ಹೋಗಿವೆಯೆಂದು ಹೇಳಬಹುದು. ಈ ಏಳು ಗಣಗಳಲ್ಲಿ ಸಾಮಾನ್ಯವಾಗಿ ವಿಷ್ಣುಗಣಗಳೇ ಪ್ರಧಾನವಾಗಿದ್ದು ಬ್ರಹ್ಮ ರುದ್ರಗಳು ಕೆಲವು ಖಚಿತ ಸ್ಥಾನಗಳಲ್ಲಿ ಕೆಲವೆಡೆ ವಿಕಲ್ಪವಾಗಿ ಬರುತ್ತವೆ. ಇವುಗಳ ಸ್ಥಾನವನ್ನು ಗುರುತಿಸುವುದರ ಮೂಲಕ ಆ ಛಂದೋಜಾತಿಯನ್ನೂ ಗುರುತಿಸುವುದು ಸಾಧ್ಯವಾಗುತ್ತದೆ. ಉದಾಹರಣೆಗೆ 'ಪಿರಿಯಕ್ಕರ' ಎಂಬುದು ಏಳು ಗಣಗಳ ನಾಲ್ಕು ಸಮಪಾದಗಳುಳ್ಳ ಒಂದು ರಚನೆ. ಇದರಲ್ಲಿ ಸಾಮಾನ್ಯವಾಗಿ ಮೊದಲ ಗಣ ಬ್ರಹ್ಮ, ಕೊನೆಯದು ರುದ್ರ. ಏಳೆಯಲ್ಲಿ ಆರನೆಯದು ಬ್ರಹ್ಮ. ಇವೆರಡೂ ಶುದ್ಧವಾಗಿ ಏಳು ಗಣಗಳ ರಚನೆಯಾದರೆ ಷಟ್ಪದ ಮೂರು ಮೂರು ಸಾಲುಗಳಲ್ಲಿ ಏಳು ಗಣಗಳನ್ನು ಹರಡಿಸಿರುವ ಒಂದು ಛಂದೋರೂಪವಾಗಿದೆ. ಇದನ್ನು ಒಂದೇ ಸಾಲಿನಲ್ಲಿ ಬರೆದರೆ, ಕೊನೆಯಲ್ಲಿ ರುದ್ರಗಣವುಳ್ಳ ಸಪ್ತಗಣ ಧಾಟಿಯೇ ಇಲ್ಲಿ ಕಂಡುಬರುತ್ತದೆ. ಸಾಂಗತ್ಯವೂ ಹಾಗೆಯೇ. ಸಾಂಗತ್ಯವು ಏಳೇಳು ಗಣಗಳ ಎರಡು ಘಟಕವುಳ್ಳ ನಾಲ್ಕು ಅರ್ಧಸಮ ಪಾದದ ಒಂದು ರಚನೆ. ಪ್ರತಿ ಅರ್ಧದಲ್ಲೂ ಏಳನೆಯ ಗಣ ಬ್ರಹ್ಮವಾಗಿರುತ್ತದೆ. ತ್ರಿಪದಿಯಲ್ಲಿ ಎರಡು ಸಾಲಿನಲ್ಲಿ ಬರುವ ಮೊದಲ ಏಳು ಗಣದ ಧಾಟಿ 'ಏಳೆ'ಯದೇ. ವಾಸ್ತವವಾಗಿ ಹಾಡುವವರು ವಾಚನದ ಗತಿಯನ್ನು ಏಳನೇ ಗಣಕ್ಕೇ ನಿಲ್ಲಿಸುತ್ತಾರೆ. ನಿಲ್ಲಿಸಿ ಮತ್ತೆ ಹಿಂದಕ್ಕೆ ಬಂದು ಪುನರಾವರ್ತಿಸಿ ಅನಂತರ ಹನ್ನೊಂದನೆಯ ಗಣದ ವರೆಗೆ ವಾಚಿಸುತ್ತಾರೆ. ಅಂದರೆ ತ್ರಿಪದಿಯಲ್ಲೂ ಮೂಲತಃ ಏಳು ಗಣವೇ ಇದೆ ಎಂದಂತಾಯಿತು. ಹೀಗೆ ಏಳೆ ತ್ರಿಪದಿ ಷಟ್ಪದ ಸಾಂಗತ್ಯ ಪಿರಿಯಕ್ಕರ ಇವಿಷ್ಟೂ ಏಳು ಗಣದ ಮೂಲಮಾನದ ಚಹರೆ ಹೊಂದಿರುವ ಗಣಗಳೇ ಆಗಿವೆ. ಆರು ವಿಷ್ಣು ಎರಡು ಬ್ರಹ್ಮ ಎಂದು ಲಕ್ಷಣಿಸಲ್ಪಡುವ ಸೀಸಪದ್ಯದಲ್ಲೂ ಆ ಕೊನೆಯ ಎರಡು ಬ್ರಹ್ಮಗಳನ್ನು ಶಿವರಾಮ ಐತಾಳರು ಹೇಳುವಂತೆ ರುದ್ರಚ್ಛೇದ ಎಂಬ ಪ್ರಭೇದದ ರುದ್ರಗಣವನ್ನಾಗಿ ಮಾಡಿಕೊಂಡರೆ ಏಳುಗಣಗಳ ಮಾನವೇ ಬರುತ್ತದೆ. ಇದರಿಂದ ಏಳುಗಣಗಳ ನಡೆಯೇ ಕನ್ನಡದ ಮೂಲ ಛಂದೋಗತಿ ಇರಬಹುದು ಎಂದು ನನಗೆ ಅನ್ನಿಸುತ್ತದೆ. ಈ ಕಾರಣದಿಂದಲೇ ಏಳುಗಣಗಳ ಮಟ್ಟುಗಳೆಲ್ಲ ನಮಗೆ ತುಂಬ ಪ್ರಿಯವಾಗಿವೆ. ಏಳುಗಣಗಳ ಷಟ್ಪದ ಶರಷಟ್ಪದಿಯಾದಾಗಲೂ ಕುಸುಮಷಟ್ಪದಿಯಾದಾಗಲೂ ಈ ಸಪ್ತಗಣ ಮಾಪನ ಪದ್ಧತಿಗೆ ಒಗ್ಗಿಕೊಂಡೇ ಬೆಳೆಯಿತು. ಭಾಮಿನಿಯೂ ವಾಸ್ತವವಾಗಿ ಒಳಗೆ ಮೂರುನಾಲ್ಕಾಗಿ ಒಡೆದುಕೊಳ್ಳುವ ಏಳುಗಣದ ಮಾಪನ ಹೊಂದಿದೆ. ಭೋಗ, ಪರಿವರ್ಧಿನಿ, ವಾರ್ಧಕ ಈ ಛಂದಸ್ಸುಗಳೂ ಇಮ್ಮಡಿ ಸಪ್ತಕಗಳೆಂದು ಹೇಳಬಹುದು. ಈ ಸಪ್ತಗಣ ಮಾನ, ಕನ್ನಡ ಛಂದಸ್ಸಿಗೆ ತುಂಬ ಆಪ್ತವಾದ ಕಾರಣ ಅದು ನಮ್ಮ ಕವಿಗಳ ಮನಸ್ಸಿನಲ್ಲಿ ಸುಪ್ತವಾಗಿ ಕೆಲಸಮಾಡುತ್ತಿದ್ದುದರಿಂದ ಅಕ್ಷರ ವೃತ್ತದಂಥ ಭಿನ್ನಗಣಮಾಪನ ವ್ಯವಸ್ಥೆಯಲ್ಲೂ ನಮ್ಮವರು ಉತ್ಪಲಮಾಲೆ ಚಂಪಕಮಾಲೆಗಳಲ್ಲಿ ಮಾತ್ರಾಗಣದ ನಡಿಗೆಗೆ ಒಗ್ಗುವ ನಾಲ್ಕು

ಮಾತ್ರೆಗಳ ಏಳುಗಣಗಳ ಅಂತಶ್ಚಲನವನ್ನು ಗುರುತಿಸಿಕೊಂಡರು. ಸಮ್ಮ ಅಕ್ಷರ ವೃತ್ತಗಳಲ್ಲಿ ಚಂಪಕ ಉತ್ಪಲಗಳೇ ಸಿಂಹಪಾಲನ್ನು ಪಡೆದಿವೆಯೆಂದು ಹಿಂದೆ ಹೇಳಿದ್ದೆ ನಷ್ಟೆ. ಚಂಪಕ ಉತ್ಪಲಗಳ ಜನಪ್ರಿಯತೆಗೆ ನಾನು ಹಿಂದೆ ಹೇಳಿದ ಹಲವಾರು ಕಾರಣಗಳ ಜತೆಗೆ ಕನ್ನಡ ಛಂದೋ ವಿನ್ಯಾಸದ ಮೂಲಶಕ್ತಿಯಾದ ಈ ಸಪ್ತಗಣ ಮಾನದ ಒಳಸೂತ್ರವೂ ಸೇರಿದೆ ಎಂದು ನಾನು ಭಾವಿಸಿದ್ದೇನೆ.

ಈಗ ಇದೇ ಏಳುಗಣದ ಘಟಕದ ಹಿನ್ನೆಲೆಯಲ್ಲಿ ಆಧುನಿಕ ಕಾವ್ಯಕ್ಕೆ ಬರೋಣ. ನವೋದಯದ ಆರಂಭಕಾಲದ ಮತ್ತು ಅನಂತರದ ಕವಿಗಳೆಲ್ಲ ಕನ್ನಡ ಕಾವ್ಯದ ಪರಂಪರೆಯ ಆಳವಾದ ಪರಿಚಯವಿದ್ದವರು. ನಡುಗನ್ನಡದ ಷಟ್ಪದಿಗಳ ಗಮಕ ಗತ್ತುಗಳಿಂದ ಪ್ರಭಾವಿತರಾಗಿದ್ದವರು. ತ್ರಿಪದಿ ಸಾಂಗತ್ಯಗಳ ಒಳಮರ್ಮ ವನ್ನು ಬಲ್ಲವರು. ಆದುದರಿಂದ ಸಪ್ತಗಣಗಳ ಗುಂಗಿಗೆ ಸದ್ದಿಲ್ಲದೆ ಸಿಕ್ಕಿಕೊಂಡಿದ್ದಾರೆ, ಸೃಜನಶೀಲತೆಯ ಘಟ್ಟದಲ್ಲೇ ಮನಸ್ಸಿನ ಒಳಪಾತಳಿಯಲ್ಲೇ ಅದರ ಗಾಢವಾದ ಪ್ರಭಾವಕ್ಕೆ ಸಿಕ್ಕಿದ್ದಾರೆ. ಹೊಸ ರೀತಿಯಲ್ಲಿ ಬರೆಯಬೇಕೆಂದು ಹವಣಿಸಿ ಇಂಗ್ಲಿಷ್ ಕವಿತೆಗಳ ಪ್ರಭಾವದಿಂದ ನಾಲ್ಕು ಸಾಲಿನ ಕವಿತೆಗಳನ್ನು ಬರೆದವರೂ ಮೂಲಭೂತ ವಾಗಿ ಸಪ್ತಗಣಗಳ ಷಟ್ಪದಿಯ ವಿವಿಧ ರೂಪಭೇದಗಳನ್ನೇ ಕಾಣಿಸಿದ್ದಾರೆ. ಇನ್ನೂ ಮುಂದುವರಿದು ಅರ್ಧಭಾಮಿನಿ ಭೋಗಾರ್ಧ ಷಟ್ಪದಿ ಎಂದು ಕರೆಯಬಹುದಾದ ಹೊಸಬಗೆಯ ಷಟ್ಪದಿಯ ನಡಿಗೆಗಳನ್ನು ತಂದಿರುವುದನ್ನು ಕರ್ಕಿಯವರಿಂದ ಹಿಡಿದು ಅನೇಕ ಛಂದಜ್ಞರು ಈಗಾಗಲೇ ಗುರುತಿಸಿದ್ದಾರೆ. ಬಿ.ಎಂ.ಶ್ರೀ.ಯವರಿಂದ ಹಿಡಿದು ಅಡಿಗ ಕೆ. ಎಸ್. ನರಸಿಂಹಸ್ವಾಮಿಯವರ ವರೆಗೆ ಎಲ್ಲ ಕವಿಗಳ ನಾಲ್ಕು ಅಥವಾ ಎರಡು ಸಾಲಿನ (ಒಮ್ಮೊಮ್ಮೆ ಒಂದೇ ಸಾಲಿನ) ಅನೇಕ ಚರಣಗಳಲ್ಲಿ ಈ ಅಂಶವನ್ನು ಹುಡುಕಿ ತೆಗೆಯಬಹುದಾಗಿದೆ. ಬೇರೆ ಬೇರೆ ಗಣಗಳ ಸಂಯೋಜನೆ ನಡೆದಿಲ್ಲವೆಂದಲ್ಲ. ಆದರೆ ಸಪ್ತಗಣ ಸಂಯೋಜನೆಯೂ ಮಹತ್ವದ ಪಾತ್ರ ವಹಿಸಿದೆ ಎಂದು ತೋರಿಸು ವುದಷ್ಟೇ ನನ್ನ ಉದ್ದೇಶ. ಷಟ್ಪದಿಗಳಲ್ಲಿ ಸಪ್ತಮಗಣದ ರುದ್ರುವನ್ನು ವಿಷ್ಣು ಮತ್ತು ಕೊರೆ ಎಂದು ಮಾಡಿಕೊಂಡ ಮಾತ್ರಾಗಣಗಳಿವೆಯಷ್ಟೆ. ಈ ಕೊರೆಯ ಗುರುವನ್ನು ಊನಗಣವಾಗಿ ವಿಸ್ತರಿಸಿಕೊಂಡ ಉದಾಹರಣೆಗಳೂ ಇದರ ಕಕ್ಷೆಯಲ್ಲೇ ಬರುತ್ತ ವೆಂಬುದನ್ನು ಮರೆಯಬಾರದು. ಆಧುನಿಕ ಕಾವ್ಯದ ಕೆಲವು ರಚನೆಗಳ ನಡೆಯನ್ನು ಷಟ್ಪದಿ ಅಥವಾ ನವಷಟ್ಪದಿಯ ಆಕಾರದಲ್ಲಿ ಇಲ್ಲಿ ಬರೆಯಲಾಗಿದೆ. ಅಂಶಗಣ ಮಾತ್ರಾಗಣಗಳೆರಡರ ಕಕ್ಷೆಗೂ ಇವು ಒಳಪಡುತ್ತವೆ. ಆದಿ ಪ್ರಾಸದ ನಿಯಮ ವೊಂದನ್ನು ತೆಗೆದುಹಾಕಿದರೆ ಇವೆಲ್ಲ ವಾಸ್ತವವಾಗಿ ಷಟ್ಪದಿಯ ಹಳೆಯ–ಹೊಸ ರೂಪಭೇದಗಳೇ ಆಗಿವೆ.

ಮೊದಲು ತಾಯ ಹಾಲ ಕುಡಿದು
ಲಲ್ಲೆಯಿಂದ ತೊದಲಿ ನುಡಿದು
ಕೆಳೆಯರೊಡನೆ ಬೆಳೆದು ಬಂದ ಮಾತದಾವುದು?

—ಬಿ.ಎಂ.ಶ್ರೀ. (ಕಾಣಿಕೆ)
ಭೋಗ ಷಟ್ಪದಿ.

ಆರು ನೀನೆಲೆ
ಹರುಷ ಮೂರುತಿ
ಹಕ್ಕಿಯೆಂಬರೆ ನಿನ್ನನು.

—ಬಿ.ಎಂ.ಶ್ರೀ. (ಬಾನಾಡಿ)
ಅರ್ಧಭಾಮಿನಿ.

ನನ್ನ ಪ್ರೇಮದ ಹುಡುಗಿ
ತಾವರೆಯ ಹೊಸ ಕೆಂಪು
ತಾವರೆಯ ಹೊಸ ಅರಳ ಪೊಳೆವ ಕೆಂಪು

—ಬಿ.ಎಂ.ಶ್ರೀ. (ನನ್ನ ಪ್ರೇಮದ ಹುಡುಗಿ)
ಕುಸುಮ ಷಟ್ಪದಿ.

ಮೇಲುನೋಟಕೆ
ಮರೆಯಲಾರಳು
ಹಲವು ಹೆಣ್ಗಳ ಪರಿಯೊಳು.

—ಬಿ.ಎಂ.ಶ್ರೀ.
(ಮೇಲುನೋಟಕೆ ಮರೆಯಲಾರಳು)
ಅರ್ಧಭಾಮಿನಿ.

ಭಾವಗಳು ರಾಗಗಳು
ಬಗೆಬಗೆಯ ಭೋಗಗಳು
ಆವಾವುವಲೆಯುವುವು ಮನುಜನೆದೆಯ.

—ಬಿ.ಎಂ.ಶ್ರೀ. (ಕನಕಾಂಗಿ)
ಕುಸುಮ ಷಟ್ಪದಿ.

ಏಳು ಮಗಳುದಿರು
ಚೋಳ ರಾಯನಿಗೆ
ಒಬ್ಬ ತಾಯಸಿರಿ ಮಕ್ಕಳು.

—ಬಿ.ಎಂ.ಶ್ರೀ. (ಚೋಳಕನ್ನೆಯರು)
(ಶರ ಕುಸುಮ) ಉಭಯಾರ್ಥ ಷಟ್ಪದಿ.

ಶರಷಟ್ಪದಿ

ತೆರೆತೆರೆಯಾಗಿಹ
ನೊರೆ ನೊರೆ ಕಡಲಿನ
ನೋಡುವ ಕಣ್ಣೋಡುವ ವರೆಗೆ
ಬನಸಿರಿ ತುಂಬಿದ
ಕಣಿವೆಯು ಹಂಬಿರೆ
ಧೂಳೀಸಮಹಿಮ ಬಾನ್ಕರೆಗೆ.

—ಕುವೆಂಪು (ಬಾ ಫಾಲ್ಗುಣ ರವಿ ದರ್ಶನಕೆ)
ಶರಷಟ್ಪದಿ. (ಮೂಲದಲ್ಲಿ ಎರಡು ಸಾಲಿದೆ).

ಬನದಲಿ ಬಯಲಲಿ
ಮೇಯುವ ತುರುಗಳು
ಜವದಲಿ ಕೊಟ್ಟಿಗೆಗೋಡಿದುವು
ಬಾಲವನೆತ್ತಿದ
ಕರುಗಳು 'ಅಂಬಾ'
ಎನ್ನುತ ತಾಯ್ಗಳ ಕೂಡಿದುವು.

—ಕುವೆಂಪು (ಮುಂಗಾರು)
ಶರಷಟ್ಪದಿ.

ತಿಳಿಬಾನೆಡೆಯಲಿ
ಚೆಲುವಿನ ತಿಂಗಳು
ಕಣ್ಣಿಗೆ ತಣ್ಣನೆ ಮೂಡಿದನು.

—ಕುವೆಂಪು (ವಿಮರ್ಶಕ)
ಶರಷಟ್ಪದಿ.

ರವಿಗಿಲ್ಲದ ಭಯ,
ಶಶಿಗಿಲ್ಲದ ಭಯ,
ತಾರಾನಿವಹಕೆ ಇರದ ಭಯ,
ನಿನಗೇತಕೆ ಬಿಡು,
ಅಣು! ಶ್ರದ್ಧೆಯನಿಡು,
ನಿನ್ನನೆ ನೈವೇದ್ಯವ ನೀಡು!

—ಕುವೆಂಪು (ತೇನ ವಿನಾ)

ಶರ

ರಾಕ್ಷಸ ಕಂಸನ
ಮಥುರೆಯ ಮೇಲೆ
ಘನಘೋರಾಂಧತೆ ಕವಿದಿತ್ತು;
ಮಿಂಚಿನ ಸಿಡಿಲಿನ
ಮೋಡದ ಲೀಲೆಽ
ತಿರೆಯ ಮೇರೆಯನು ತಿವಿದಿತ್ತು;

—ಕುವೆಂಪು (ಶ್ರೀಕೃಷ್ಣಜನ್ಮಾಷ್ಟಮಿ)
ಶರಷಟ್ಪದಿ.

ಎಲ್ಲವಳೆಲ್ಲವ
ಳೆಲ್ಲವಳುಽನಿಲ
ದಾಡುವ ಕಂಗಳ ಸೊಲ್ಲವಳು.

—ಪು.ತಿ.ನ. (ಗೋಕುಲ ನಿರ್ಗಮನ)

ಮೂಡಣ ಕಣಿವೆಯ
ಹಿಮದವಕುಂಠನ
ರವಿಕರಸ್ಪರ್ಶಕೆ ಜಾರುತಿವೆ

—ಪು.ತಿ.ನ. (ಯದುಗಿರಿಯ ಮೌನವಿಕಾಸ)

ಕುಸುಮ

ನೀನೆಂದು ಕನಕರಥ-
ವನು ತಂದು ಬಾ ಎಂದು
ಕರೆದಂದು ನಾನು ದೂಳಾಡುತಿದ್ದೆ.
ಹೊಂಬಿಸಿಲು ಹೊಮ್ಮಿತ್ತು
ಖಗಗಾನ ಚಿಮ್ಮಿತ್ತು
ಕಣ್ತೆರೆದುಕೊಂಡಿತ್ತು ಜಗದ ನಿದ್ದೆ.

—ಕುವೆಂಪು (ತಾವರೆಯ ಕೇರು)
ಕುಸುಮಷಟ್ಪದಿ

ಬಾಗಿಲೊಳು ಕೈಮುಗಿದು
ಒಳಗೆ ಬಾ ಯಾತ್ರಿಕನೆ
ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು.

—ಕುವೆಂಪು
(ಸೋಮನಾಥಪುರದ ದೇವಾಲಯ)

ಸರ್ವರಿಗೆ ಸಮಬಾಳು
ಸರ್ವರಿಗೆ ಸಮಪಾಲು
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ.

—ಕುವೆಂಪು (ಹೊಸ ಬಾಳಿನ ಗೀತೆ)

ಸಿಲುಕದಿರಿ ಮತವೆಂಬ
ಮೋಹದಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕಹಿತಕೆ.

—ಕುವೆಂಪು

(ಓ ಬನ್ನಿ ಸೋದರರೆ, ಬೇಗ ಬನ್ನಿ)

ಇರುವಲ್ಪ ಶಕ್ತಿಯನು
ಇರುವಲ್ಪ ದ್ರವ್ಯವನು
ಪರಭಾಷೆ ಮೋಹಕ್ಕೆ ಚೆಲ್ಲಬೇಡಿ

—ಕುವೆಂಪು (ಸಾಯುತಿದೆ ನಿಮ್ಮ ನುಡಿ)

ಮುಚ್ಚುಮರೆಯಿಲ್ಲದೆಯೆ
ನಿನ್ನ ಮುಂದೆಲ್ಲವನು
ಬಿಚ್ಚಿಡುವೆ, ಓ ಗುರುವೆ, ಅಂತರಾತ್ಮಾ;
ನಾಕವಿದೆ, ನರಕವಿದೆ ;
ಪಾಪವಿದೆ, ಪುಣ್ಯವಿದೆ ;
ಸ್ವೀಕರಿಸು, ಓ ಗುರುವೆ, ಅಂತರಾತ್ಮಾ!

—ಕುವೆಂಪು (ಮುಚ್ಚುಮರೆಯಿಲ್ಲದೆಯೆ)

ಕುಸುಮಷಟ್ಪದಿ.

ಜಗದೀಶ್ವರನೆ ವಿಶ್ವ-
ಸಂಸಾರಿಯಾಗಿರಲು
ಸಂಸಾರ ಪಾಶವೆಂದೆನಬೇಡವಯ್ಯೆ
ಹುಟ್ಟುಹಾಕಲು ನಿನಗೆ
ಬಾರದಿರೆ, ಕೂಡದಿರೆ,
ಬರಿದೆ ನೀಂ ದೋಣಿಯನು ಶಪಿಸಬೇಡೈ.

—ಕುವೆಂಪು (ಒಬ್ಬ ತಾಯಿಗೆ)

ನಿನ್ನ ಮೈಯನೆ ನೆನೆದು
ನಿನ್ನ ಹೆಸರನೆ ಕರೆದು
ನೂರು ಸಾವಿರ ಸಾರಿ ಬರೆದು ಬರೆದು
ವಿರಹಯಾತನೆಯಿಂದ
ಹರಿವ ಕಂಬನಿಯಿಂದ
ಮತ್ತೆಮತ್ತಳಿಸಲೇನೆನ್ನ ಚಿನ್ನಾ!

—ಕುವೆಂಪು (ಎಂತು ಸೊಂಕಲಿ, ನಾಳೆಯೊಂದು
ದಿನವನು, ಚಿನ್ನಾ)

ನಿಲ್ಲು ನಿಲ್ಲೆಲೆ ನವಿಲೆ
ನಿನ್ನ ಕಣ್ಣುಗಳೇಸು
ಕಣ್ಣ ಬಣ್ಣಗಳೇಸು ಎಣಿಸಲಾರೆ

—ಮಧುರಚೆನ್ನ (ನನ್ನ ನಲ್ಲ)

ಕುಸುಮ

ಎಲೆ ಹಳದಿ ತಿರುಗಿದೀ
ಹಲಸು ನಿಂತಿದೆ ಹೇವ
ಹದಬಿಸಿಲು ಸಾರಾಯಿ ನೆತ್ತಿಗೇರಿ
ಗೊನೆ ಬಾಗಿ ಬಾಳೆ ಜೀ
ವನ್ಮುಕ್ತ ಹಳಸುತಿದೆ
ಹಿಳ್ಳು ಹಿಂಡುಗಳಲ್ಲಿ ಪ್ರಾಣಪೂರಿ

—ಗೋಪಾಲಕೃಷ್ಣ ಅಡಿಗ. (ಕೂಪಮಂಡೂಕ)

ನಮ್ಮ ಮನೆಯಂಗಳದಿ
ಬೆಳೆದೊಂದು ಹೂವನ್ನು
ನಿಮ್ಮ ಮುಡಿಲೊಳಗಿರಿಸೆ ತಂದಿರುವೆವು....

—ವಿ.ಸೀ.

ಹುಲು ಬಯಕೆ ಬಾಯೆಸಲು
ಓ ಎಂದು ಬಾರದಿರು
ವಾತಾಪಿಯಂದದೊಳು ಬಾಳನೊಡೆದು....

—ಪು.ತಿ.ನ (ಅಹಲ್ಯೆ)

ರಾಮನವಮಿಯ ದಿವಸ
ರಾಮನಾಮಾಮೃತವೆ
ಪಾನಕ ಪನಿವಾರ ಕೋಸಂಬರಿ.

—ಅಡಿಗ (ರಾಮನವಮಿಯ ದಿವಸ)

ಗಡಿಯಾರದಾಗಡಿಯು
ಮುಂದೆ ಬೆದರಿದೆ ಕುದುರೆ
ಕಣ್ಣಪಟ್ಟಿಯು ಕಂಡು ಕನ್ನಡಿಯಲಿ

—ಕೆ.ಎಸ್.ನ. (ಗಡಿಯಾರದಂಗಡಿ)

ಏನು ಸಂಭ್ರಮವಽದು
ಹರೆಯಽದ ಹಬ್ಬಽವು
ಕನಸುಽಮನಸು ಕೂಡಿ ಬೆಳಿಬೆಳಿದವೇ
ಹಗಲೆಲ್ಲೊ ಹಾರಿದವು
ಇರುಳೆಲ್ಲೊ ಜಾರಿದವು
ಋತು ನಿದ್ದೆಮಾಡಿದವು ಬುಗುರಿಯೊಲೀ

—ಬೇಂದ್ರೆ (ಸಖೀಗೀತ)

ನನ್ನೆದೆಯೂ ನಿನ್ನೆದೆಯೂ
ನಡುವೆ ಕ್ಷಾರೋದಧಿಯೂ
ಕಾಡಿನಲಿ ಅತ್ತಂತೆ ಎಲ್ಲ ಹಾಡು
ತಂತಮ್ಮ ಕಂಬನಿಯೊ
ಳೆಲ್ಲರೂ ಮುಳುಗಿದರೆ
ಕೆಳೆಯ ಬೇಡುವ ಎದೆಗೆ ಯಾರು ಜೋಡು ?

—ಬೇಂದ್ರೆ (ಕವಿರಸಿಕನಿಗೆ)

ಇಂಥ ಅಂಗಡಿಯಲ್ಲಿ
ಈ ಮಾತಿಗಿಷ್ಟೆ ಬೆಲೆ
ಎನ್ನುವುದು ಮೊದಲು ಗೊತ್ತಾಗಲಿಲ್ಲ
ಒಂದೊಂದು ಮಾತಿಗೊಂ
ದೊಂದು ಇತಿಹಾಸವಿದೆ
ನಾನು ಬೇರಿನ ತನಕ ಹೋಗಲಿಲ್ಲ.

—ಕೆ. ಎಸ್. ನರಸಿಂಹಸ್ವಾಮಿ

ಮನದ ಮುಗುಳಾದ ನುಡಿ
ಹುರುಳಿನಲಿ ನರಳುತಿದೆ
ಹಾಡು ನೆಲೆಗಾಣದಲೆ ನವೆಯುತಿಹುದು.

—ಬೇಂದ್ರೆ (ರೋದನ)

ಭೋಗಷಟ್ಪದಿ

ಅನಂತದಿಂ ದಿಗಂತದಿಂ
ಅನಂತತಾ ದಿಗಂತದಿಂ
ನೋಡೆ ನೋಡೆ ಮೂಡಿತೊಂದು ಮೋಡಗೋಪುರ.

—ಕುವೆಂಪು (ಗಗನಗಃರು)

ಕೂಸಿಗಿಂದು ಏನು ಬೇಡ
ತಿಂಡಿ ಬೇಡ ಮುದ್ದು ಬೇಡ
ಏನೊ ಅರಕೆ, ಏನೊ ಬೇನೆ, ಅತ್ತು ಸೊರಗಿತು.

—ಪು.ತಿ.ನ. (ಹಾಳನ ಹಬ್ಬ)

ಭೋಗಾರ್ಧ

ಅಡಿಯು ಗೆಜ್ಜೆ
ನಡುಗೆ ಹೆಜ್ಜೆ
ಯಿಡುತ ಸುಗ್ಗಿ ಬರುತಿದೆ
ಸುಗ್ಗಿ ಬರೆ
ಹಿಗ್ಗಿ ತೆರೆ
ಸಗ್ಗ ಸೊಗವ ತರುತಿದೆ.

—ಕುವೆಂಪು (ಸುಗ್ಗಿ ಬರುತಿದೆ)
ಭೋಗಾರ್ಧ ಷಟ್ಪದಿ.

ಅಕೋ ಶ್ಯಾಮ
ಅವಳೆ ರಾಧೆ
ನಲಿಯುತಿಹರು ನೋಡಿರೇ
ನಾವೇ ಶ್ಯಾಮ
ಅವಳೆ ರಾಧೆ
ಬೇರೆ ಬಗೆಯು ಏನಿದೆರೇ

—ಪುತಿನ. (ಗೋಕುಲ ನಿರ್ಗಮನ)

ನನ್ನ ಹರಣ
ನಿನಗೆ ಶರಣ
ಸಕಲ ಕಾರ್ಯ ಕಾರಣಾ

—ಬೇಂದ್ರೆ.

ಟುವ್ವಿ ಟುವ್ವಿ
ಟುವ್ವಿ ಟುವ್ವಿ
ಎಂದು ಹಕ್ಕಿ ಕೂಗಿತು.

—ಕುವೆಂಪು.

ಮುಗುದೆಯೊಡಲ
ಪ್ರೇಮದಂತೆ
ಹುದುಗಿದೆನ್ನ ಗೀತವು
ಬಗೆಯುಗೊಡ-
ನೊಡೆಯುತೆಂದು
ಬರುವುದೆಂದು ಬೆದರುವೆ.

—ಪುತಿನ (ನನ್ನ ಹಾಡು)

ದೋಣಿ ಸಾಗಲಿ
ಮುಂದೆ ಹೋಗಲಿ
ದೂರ ತೀರವ ಸೇರಲಿ
ಬೀಸು ಗಾಳಿಗೆ
ಬೀಳುತೇಳುವ
ತೆರೆಯ ಮೇಗಡೆ ಹಾರಲಿ!

—ಕುವೆಂಪು (ದೋಣಿ ಹಾಡು)
ಅರ್ಧಭಾಮಿನಿ.

ಹೋಗುವೆನು ನಾ
ಹೋಗುವೆನು ನಾ
ನನ್ನ ಒಲುಮೆಯ ಗೂಡಿಗೆ

—ಕುವೆಂಪು (ಹೋಗುವೆನು ನಾ)

ಯಾವ ಮೋಹನ
ಮುರಲಿ ಕರೆಯಿತು
ದೂರ ತೀರಕೆ ನಿನ್ನನು
ಯಾವ ಬೃಂದಾ
ವನವು ಸೆಳೆಯಿತು
ನಿನ್ನ ಮಣ್ಣಿನ ಕಣ್ಣನು?

ಸಂಜೆಗಾಳಿಗೆ
ಜಳಕ ಮಾಡಿಸೆ
ಹನಿತು ಮಳೆ ಹೊಳೆಯೋಡಿತು

—ಪುತಿನ (ಸಂಜೆ ಗಾಳಿಗೆ)

ಬಹನು ಬರುತಿಹ-
ನವ್ವ ಬಂದನು
ಬಂದರೇ ಗತಿ ಕಾಣೆನೇ

—ಪುತಿನ (ಪ್ರತೀಕ್ಷೆ)

ಏಳು ಗಣಗಳ ನಡೆ ಕವಿಗಳ ಅಂತರಾಳದಲ್ಲಿ ಹೇಗೆ ಕೆಲಸ ಮಾಡಿದೆ ಎಂಬುದನ್ನು ಮನಗಾಣಲು ಇಷ್ಟು ಉದಾಹರಣೆಗಳನ್ನು ಕೊಡಬೇಕಾಯಿತು. ಆಧುನಿಕ ಕವಿಗಳು ಇವನ್ನು ಮೊಟಕಿಸಿ ಆರು ಗಣಗಳನಂತರ ಗುರುವಿನಿಂದ ಕೊನೆಗಾಣಿಸಿರುವುದನ್ನಾಗಲಿ ಒಂದು ಪೂರ್ಣಗಣ ಅಥವಾ ಊನಗಣವನ್ನು ತಂದು ಎಂಟು ಗಣಕ್ಕೆ ಹೆಚ್ಚಿಸಿರುವುದನ್ನಾಗಲಿ, ಗಣಗಳ ಮಾತ್ರಾ ನಡಿಗೆಯಲ್ಲಿ ಒಳಪೊಂದಾಣಿಕೆ ಮಾಡಿಕೊಂಡಿರುವುದನ್ನಾಗಲೀ ಹೇರಳವಾದ ಲಕ್ಷ್ಯಗಳಿಂದ ನಿರೂಪಿಸಬಹುದಾಗಿದೆ.

ಹೀಗೆ ಕನ್ನಡ ಛಂದಸ್ಸಿನ ಐತಿಹಾಸಿಕ ಸಮೀಕ್ಷೆಯನ್ನು ಶುದ್ಧ ದೇಸಿ ಛಂದಸ್ಸತ್ತ್ವದ ಒಳನೋಟದ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿದ್ದೇನೆ. ಕನ್ನಡದಲ್ಲಿ ಛಂದಸ್ಸಿನ ಬಗೆಗೆ ಮೊದಲ ಬಾರಿಗೆ ಆಳವಾದ ಚಿಂತನೆ ನಡೆಸಿದ ಬಿ. ಎಂ. ಶ್ರೀಕಂಠಯ್ಯನವರ ಸಾರ್ಥಕ ಸಂಸ್ಮರಣೆ ಮಾಡುತ್ತಿರುವ ಬಿ.ಎಂ.ಶ್ರೀ ಪ್ರತಿಷ್ಠಾನದ ದತ್ತಿ ಉಪನ್ಯಾಸದ ರೂಪದಲ್ಲಿ ಛಂದೋ ವಿಚಾರಗಳನ್ನು ಮಂಡಿಸಲು ಅವಕಾಶ ದೊರೆತದ್ದು ನನ್ನ ಪಾಲಿನ ಪುಣ್ಯವೆಂದು ಭಾವಿಸುತ್ತೇನೆ. ಬಿ.ಎಂ.ಶ್ರೀ.ಯವರ ಶಿಷ್ಯರೂ ಸ್ವತಃ ಛಂದಸ್ಸಾಗರದಲ್ಲಿ ಈಜಾಡಿದವರೂ ಮಿತ್ರವತ್ಸಲರೂ ಆದ ಶ್ರೀ ಎಂ. ವಿ. ಸೀತಾರಾಮಯ್ಯನವರು ಇಂಥದೊಂದು ಲೇಖನವನ್ನು ಬರೆಯಲು ಪ್ರೇರಕರಾಗಿರುವುದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು.

(25-12-1987 ರಂದು ಬೆಂಗಳೂರು ಗಾಂಧಿ ಸಾಹಿತ್ಯ ಸಂಘದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಬಿ.ಎಂ.ಶ್ರೀ. ಸ್ಮಾರಕ ದತ್ತಿ ಉಪನ್ಯಾಸ.)

ಸಂಗೀತದ ಮೇಲೆ ಸಾಮವೇದದ ಪ್ರಭಾವ

—ಡಾ|| ಪಿ. ಎಸ್. ಸಂಪತ್ಕುಮಾರಾಚಾರ್ಯ

ಸಾಮಜಾಲ ಜಲಾಕೀರ್ಣಂ ಛಂದಃಕಲ್ಲೋಲ ಸಂಕುಲಂ ।
ತಂತ್ರಗ್ರಾಹಾನ್ವಿತಂ ವಂದೇ ಸಾಮವೇದ ಮಹಾರ್ಣವಂ ॥

(ಸಾಮಗಳೆಂಬ ನೀರಿನಿಂದ ಕೂಡಿದ, ಛಂದಸ್ಸೆಂಬ ಅಲೆಗಳ ಸಮೂಹವುಳ್ಳ, ಶಾಸ್ತ್ರಗಳೆಂಬ ಮೊಸಳೆಗಳಿರುವ, ಸಾಮವೇದವೆಂಬ ಮಹಾಸಾಗರವನ್ನು ವಂದಿಸುತ್ತೇನೆ.)

ಸಂಗೀತ: ಸಂಗೀತ ಎಂಬುದು ಎಲ್ಲರಿಗೂ ಆಹ್ಲಾದಕರವಾದ ಧ್ವನಿವಿಶೇಷ ಹಾಗೂ ವಿದ್ಯೆ. ಸಮ್ಯಕ್‌ಗೀತಂ ಸಂಗೀತಂ–ಎಂಬುದು ಸಾಮಾನ್ಯ ಅರ್ಥ. ಸಂಗೀತದಲ್ಲಿ ಸ ರಿ ಗ ಮ ಪ ದ ನಿ ಎಂಬ ಸಪ್ತಸ್ವರಗಳಿವೆ. ಈ ಏಳು ಅಕ್ಷರಗಳನ್ನು ಸೇರಿಸಿ ಒಂದು ಪದವಾಗಿ ಮಾಡಿದರೆ 'ಸರಿಗಮಪದನಿ' ಎಂದಾಗುತ್ತದೆ. ಇದು ಸರಿ, ಗಮ, ಪದನಿ, ಎಂಬ ಮೂರು ಪದಗಳುಳ್ಳ ಸಮಾಸ ಪದ. ಸರಿ ಎಂದರೆ ಸಂಸ್ಕೃತದಲ್ಲಿ ದೋಣಿ ಎಂದರ್ಥ. ಗಮ ಎಂದರೆ ಹೊಂದಿಸುವುದು. ಪದ ಎಂದರೆ ಸ್ಥಾನ. ನಿ ಎಂದರೆ ಕೊಡುವುದು (ನಯತೀತಿ ನಿಃ). ಅಂದರೆ ಒಟ್ಟಿನಲ್ಲಿ ಸಂಸಾರ ಸಮುದ್ರವನ್ನು ದಾಟುವುದಕ್ಕೆ ದೋಣಿಯಾದ ಪರಮಾತ್ಮನನ್ನು ಹೊಂದಿಸುವ ಮಾರ್ಗ ಎಂದರ್ಥವಾಗುತ್ತದೆ. 'ಬ್ರಹ್ಮೋಡುಪೇನ ಪ್ರತರೇತ ವಿದ್ವಾನ್' (ಶ್ವೇ. ಉ) ಎಂದು ಪರಮಾತ್ಮನೇ ದೋಣಿಯಾಗಿ ಹೇಳಲ್ಪಟ್ಟಿರುವುದು. ಸಂಗೀತ ಶಾಸ್ತ್ರಜ್ಞರ ಅಭಿಪ್ರಾಯದಂತೆ ಪ್ರಪಂಚದ ದೇಶಗಳ ಸಂಗೀತವೆಲ್ಲಕ್ಕೂ ಸ್ಫೋಟ ಅಥವಾ ಶಬ್ದಬ್ರಹ್ಮವು ಮೂಲ. ಪತಂಜಲಿಯು ಮಹಾಭಾಷ್ಯದಲ್ಲಿ ಹೇಳಿರುವಂತೆ ವಾಕ್ ಮತ್ತು ಸಂಗೀತಕ್ಕೆ ಮೂಲವಾಗಿರುವ ಶಬ್ದವು ಅನಾಹತ ಮತ್ತು ಆಹತನಾದವೆಂಬ ಎರಡು ಬಗೆ. ಅನಾಹತನಾದವು ಕಾರಣ. ಪ್ರಾಣ ಮತ್ತು ಅಗ್ನಿ ಇವುಗಳ ಸಂಯೋಗದಿಂದ ಇದು ಬಹಿರಂಗವಾದಾಗ ನಾದವೆನಿಸಿಕೊಳ್ಳುವುದು. ಪರಮಾತ್ಮನು ನಾದಬ್ರಹ್ಮ. ಮಾನವನಿಗೆ ಸಂಗೀತವು ಪ್ರಕೃತಿಯಿಂದ ದೊರೆತ ಕಾಣಿಕೆ ಎನ್ನಬಹುದು. ನಮ್ಮ ಶಾಸ್ತ್ರಗ್ರಂಥಗಳು ಸಂಗೀತವನ್ನು ಗಾಂಧರ್ವವೇದವೆಂದು ಸಾರಿವೆ. ಇದು ಸಾಮವೇದದ ಉಪವೇದವಾಗಿದೆ. ಭಗವಂತನ ಸಾಕ್ಷಾತ್ಕಾರವನ್ನು ಪಡೆಯಲು ಮಾನವನಿಗೆ ಅನೇಕ ಮಾರ್ಗಗಳನ್ನು ನಮ್ಮ ಪೂರ್ವಿಕರು ತೋರಿಸಿರುತ್ತಾರೆ. ಇವುಗಳಲ್ಲಿ ಒಂದು ಮಾರ್ಗಸಂಗೀತ. ಈ ಮಾರ್ಗಕ್ಕೆ ಸಂಗೀತೋಪಾಸನೆ ಎಂದು ಮಧುಸೂದನ ಸರಸ್ವತಿ ತನ್ನ 'ಅದ್ವೈತಸಿದ್ಧಿ' ಎಂಬ ಗ್ರಂಥದಲ್ಲಿ ಹೇಳಿದ್ದಾರೆ. ಪ್ರತಿಯೊಬ್ಬನ ಜೀವಮಾನದಲ್ಲಿ ಸುಖದುಃಖಗಳು ಸಮನಾಗಿರುವುದಿಲ್ಲ. ಸಾಮಾನ್ಯವಾಗಿ ದುಃಖವೇ ಹೆಚ್ಚಾಗಿರುತ್ತದೆ. ಸಂಸಾರದಲ್ಲಿನ ದುಃಖ ಹಾಗೂ ಚಿಂತೆಗಳನ್ನು

(29–12–1987 ರಂದು ನೀಡಿದ ಎಸ್. ಶ್ರೀಕಂಠಯ್ಯ ದತ್ತಿ ಉಪನ್ಯಾಸ.)

ಹೋಗಲಾಡಿಸುವ ಅನೇಕ ಸಾಧನಗಳಲ್ಲಿ ಸಂಗೀತ ಕಲೆಯು ಅತಿ ಮುಖ್ಯವಾದುದು. ವಿದ್ಯಾರಣ್ಯರು (14ನೆ ಶ.) ತಮ್ಮ 'ಸಂಗೀತಸಾರ'ವೆಂಬ ಗ್ರಂಥದಲ್ಲಿ ಸಂಗೀತದ ಗುರಿ ಮತ್ತು ಹಿರಿಮೆಯನ್ನು ಕುರಿತು ಈ ರೀತಿ ಹೇಳಿದ್ದಾರೆ :—

ಸಂಸಾರ ದುಃಖದಗ್ಧಾನಾಂ ಉತ್ತಮಾನಾಮನುಗ್ರಹಾತ್ ।
ಪ್ರಭುಣಾ ಶಂಕರೇಣಾತ್ರ ಗೀತವಿದ್ಯಾ ಪ್ರಕಾಶಿತಾ ॥

(ಸಂಸಾರ ದುಃಖದಿಂದ ದಗ್ಧರಾದ ಉತ್ತಮರ ಅನುಗ್ರಹಕ್ಕೋಸ್ಕರ ಪ್ರಭುವಾದ ಶಂಕರನಿಂದ ಸಂಗೀತ ವಿದ್ಯೆಯು ಪ್ರಕಾಶಿಸಲ್ಪಟ್ಟಿತು). ಸಂಸಾರ ಸಾಗರವನ್ನು ಸುಲಭವಾಗಿ ದಾಟಿ ಭಗವಂತನನ್ನು ಪಡೆಯುವುದೇ ಸಂಗೀತದ ಗುರಿ (ಬಾಗುಗ ಮಾನಸ ಭವಸಾಗರಮುನನು ದರಿಂಪ) ಎಂದು ಸದ್ಗುರು ತ್ಯಾಗರಾಜರು 'ಭಜನ ಸೇಯರಾದ' ಎಂಬ ಅಠಾಣ ರಾಗದ ಕೃತಿಯಲ್ಲಿ ಹೇಳಿದ್ದಾರೆ.

ಯಥಾ ನಯತಿ ಕೈಲಾಸಂ ನಗಂ ಗಾನಸರಸ್ವತೀ ।
ತಥಾ ನಯತಿ ಕೈಲಾಸಂ ನ ಗಂಗಾ ನ ಸರಸ್ವತೀ ॥

ಗಾನಸರಸ್ವತಿಯು ಹೇಗೆ ಕೈಲಾಸಕ್ಕೆ (ಮೋಕ್ಷಕ್ಕೆ) ಒಯ್ಯುತ್ತದೆಯೋ ಹಾಗೆ ಗಂಗೆಯಾಗಲೀ (ಕರ್ಮ), ಸರಸ್ವತಿಯಾಗಲೀ (ಜ್ಞಾನ-ವಿದ್ಯೆ) ಮೋಕ್ಷಕ್ಕೆ ಒಯ್ಯುವುದಿಲ್ಲ. ಎಂದು ಸಂಗೀತದ ಹಿರಿಮೆಯನ್ನು ಹೇಳಿದೆ.

ವೇದ: ವಿದ್–ಜ್ಞಾನೇ ಎಂಬುದು ವೇದದ ನಿಷ್ಪತ್ತಿಯನ್ನು ಹೇಳುತ್ತದೆ. ವೇದಯತಿ ಎಂದರೆ ತಿಳುವಳಿಕೆಯನ್ನು ನೀಡುತ್ತದೆ ಎಂಬ ಕಾರಣದಿಂದ ವೇದಕ್ಕೆ ಸಂಪೂರ್ಣ ಪಾತ್ರತೆಯನ್ನು ನೀಡಲಾಗಿದೆ. ವಿದ್ ಎಂಬ ಪದವು ಇರುವಿಕೆ, ತಿಳಿದುಕೊಳ್ಳುವುದು, ಪಡೆಯುವುದು ಎಂಬ ಮೂರು ಅರ್ಥಗಳನ್ನು ಸೂಚಿಸುತ್ತದೆ. ಮೊದಲನೆಯದು ಸತ್, ಎರಡನೆಯದು ಚಿತ್ ಮತ್ತು ಮೂರನೆಯದು ರಸ ಅಥವಾ ಆನಂದವನ್ನು ಸೂಚಿಸುವುದರಿಂದ ವೇದವೆಂದರೆ ಸಚ್ಚಿದಾನಂದ ಎಂದಾಗುತ್ತದೆ. ವೇದವೆಂದರೆ ಜ್ಞಾನ. ಈ ಜ್ಞಾನವು ಮೋಕ್ಷಸಂಬಂಧವಾದುದರಿಂದ ಅಲೌಕಿಕ ಅರ್ಥವನ್ನು ಬೋಧಿಸುವ, ಅತೀಂದ್ರಿಯ ವಿಷಯವನ್ನು ಪ್ರತಿಪಾದಿಸುವ ಗ್ರಂಥವು ವೇದ. ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳಲ್ಲಿ ಅರ್ಥ ಮತ್ತು ಕಾಮಗಳನ್ನು ಲೌಕಿಕ ವ್ಯವಹಾರದಿಂದ ತಿಳಿಯಬಹುದು. ಆದರೆ ಧರ್ಮ ಮತ್ತು ಮೋಕ್ಷಗಳಿಗೆ ವೇದದ ಜ್ಞಾನವು ಆವಶ್ಯಕ. ತರ್ಕಕ್ಕೆ ನಿಲುಗಡೆಯಿಲ್ಲದಿರುವುದರಿಂದ ಅಪೌರುಷೇಯವಾದ ವೇದವಿದ್ಯೆಯೇ ಪುರುಷಾರ್ಥಕ್ಕೆ ಸಾಧಕವೆಂದು ಆದಿಶಂಕರಾಚಾರ್ಯರು ಹೇಳಿದ್ದಾರೆ. ಈಶ್ವರಪ್ರಣೀತವೆಂದು ಅಂಗೀಕರಿಸಿದರೂ, ವೇದದಲ್ಲಿ ಲೌಕಿಕ ಶಬ್ದಗಳ ಪ್ರಯೋಗವಿದ್ದರೂ ವೇದವು ಸರ್ವಜ್ಞಸ್ವರೂಪ.

ವೇದವು ಒಂದೇ ಆದರೂ ವಿನಿಯೋಗದ ದೃಷ್ಟಿಯಿಂದ ಋಗ್, ಯಜುಸ್. ಸಾಮ, ಅಥರ್ವಣವೆಂದು ವಿಭಾಗಿಸಿದ್ದಾರೆ. ಜ್ಞಾನದ ಸೌಲಭ್ಯಕ್ಕಾಗಿ ಋಗ್ವೇದ, ಯಜ್ಞಕ್ಕಾಗಿ ಯಜುರ್ವೇದ, ಗಾನಕ್ಕಾಗಿ ಸಾಮವೇದ, ಅಭ್ಯುದಯಕ್ಕಾಗಿ ಅಥರ್ವ ಎಂದು ಬೇರ್ಪಡಿಸಿದೆ. ತೈತ್ತಿರೀಯ ಬ್ರಾಹ್ಮಣದಲ್ಲಿ ಹೇಳಿರುವಂತೆ ಸಾಮವು ಬ್ರಹ್ಮವಸ್ತುವಿನ ತೇಜಸ್ಸನ್ನು ಸೂಚಿಸುತ್ತದೆ (ಸರ್ವತೇಜಃ ಸಾಮರೂಪ್ಯಹಶಶ್ವತ್। ತೈ. ಉ. ಪ್ರ 3–ಅನು 9). ಆದ್ದರಿಂದಲೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು 'ವೇದಾನಾಂ ಸಾಮವೇದೋಽಸ್ಮಿ'—ವೇದಗಳಲ್ಲಿ ನಾನೇ ಸಾಮವೇದ ಎಂದಿರುವುದು. ವೇದಾದಿಯಾಗಿ ಅನೇಕ ಶ್ರುತಿಗಳಲ್ಲಿ, ಸ್ಮೃತಿಗಳಲ್ಲಿ, ಪ್ರಶ್ನೋಪನಿಷತ್, ಮನು-ಸ್ಮೃತಿ, ರಾಮಾಯಣ, ಮಹಾಭಾರತ. ಶ್ರೀಮದ್ಭಾಗವತ, ಪುರಾಣಗಳಲ್ಲಿ ಸಾಮ-ವೇದದ ಹಿರಿಮೆಯನ್ನು ಕೊಂಡಾಡಿದೆ.

ಸಾಮವೇದ : ಪ್ರತಿಯೊಂದು ವೇದಕ್ಕೂ ಶಾಖಾನುಸಾರವಾಗಿ ಬ್ರಾಹ್ಮಣ ಮುಂತಾದ ಗ್ರಂಥಗಳು ಹುಟ್ಟಿವೆ. ಸಾಮವೇದಕ್ಕೆ ಸಂಬಂಧಿಸಿದ ಗ್ರಂಥಗಳು ಯಾವುವೆಂದರೆ :—

1. **ಬ್ರಾಹ್ಮಣ** :—ತಾಂಡೀ, ಷಡ್ವಿಂಶ, ಸಾಮವಿಧಾನ, ಆರ್ಷೇಯ, ದೇವತಾಧ್ಯಾಯ, ಛಾಂದೋಗ್ಯ, ವಂಶ, ಸಂಹಿತೋಪನಿಷತ್.

2. **ಉಪನಿಷತ್** :—ಛಾಂದೋಗ್ಯ, ಕೇನ.

3, **ಶ್ರೌತಸೂತ್ರ** :—ಲಾಟ್ಯಾಯನ, ದ್ರಾಹ್ಯಾಯಣ, ಜೈಮಿನೀಯ.

4. **ಗೃಹ್ಯಸೂತ್ರ** :—ಖಾದಿರ, ಗೋಭಿಲ.

ಉಪನಿಷತ್ತುಗಳ ಪ್ರಕಾರ ಸಾಮ ಎಂದರೆ ಹಾಡು. 'ಸಾ' ಎಂದರೆ ಋಕ್ ಅಥವಾ ವಾಕ್. 'ಅಮ' ಎಂದರೆ ಸ್ವರ ಅಥವಾ ಪ್ರಾಣ ಅಥವಾ ಜೀವಶಕ್ತಿ. 'ಸಾ' ಮತ್ತು 'ಅಮ' ಇವೆರಡಕ್ಕೂ ಸಂಯೋಗವುಂಟಾದರೆ ಅದು ಸಾಮವಾಗುತ್ತದೆ. ('ಸಾ' ನಾಮ ಋಕ್ 'ಅಮ' ನಾಮ ಸ್ವರಃ । ಋಕ್ ಸ್ವರಯೋಃ ಸಂಯೋಗಾತ್ ಸಾಮಶಬ್ದೋ ನಿಷ್ಪನ್ನಃ ॥ ಛಾಂ. ಉ.). ಕೇವಲ ಋಕ್ ಆಗಲೀ ಸ್ವರವಾಗಲೀ ಸಾಮವೆನಿಸುವುದಿಲ್ಲ. ಇವೆರಡೂ ಪರಸ್ಪರಾವಲಂಬಿಗಳು. ಇವುಗಳ ಸಮ್ಮಿಳನದಿಂದ ಸಾಮವಾಗುತ್ತದೆ. ('ಋಗ್ವೈ ಮಾತಾ, ಸಾಮ ಪಿತಾ'—ಛಾಂ. ಬ್ರಾಹ್ಮಣ.). ಸಾಮಕ್ಕೆ ಆಶ್ರಯ ಯಾವುದು ಎಂದರೆ ತಿಳಿದ ಸ್ವರಗಳಿಂದ ವಿಸ್ತರಿಸುವಿಕೆ ಎಂದು ಹೇಳಿದೆ. (ಕಾ ಸಾಮ್ನಾ ಗತಿರಾಶ್ರಯಃ ಪರಾಯಣಮಿತಿ ಇತ್ಯೇತತೇ । ಛಾಂ.ಉ. 1–8–4). ಸಾಯಣಭಾಷ್ಯದ ಸಾಮವೇದಾರ್ಥ ಪ್ರಕಾಶದಲ್ಲಿ 'ಸಾಮಾನ್ಯ ವಾಚೀಶಬ್ದಃ ವಿಶೇಷ ವಾಚಿನೋ ಬೃಹದ್ರಥಾಂತರಾದಿ ಶಬ್ದಾಶ್ಚ ಗಾನಮಾತ್ರೇವ ವರ್ತಂತೇ, ನ ತು ಗಾನವಿಶಿಷ್ಟಾಯಾಂ ಋಚಿ ಇತ್ಯಯಂ ನಿಯಮಃ

ಸಪ್ತಮಾಧ್ಯಾಯೇ ಸಿದ್ಧಃ'. ಸಾಮಾನ್ಯ ಅರ್ಥದಲ್ಲಿ ಸಾಮ ಶಬ್ದವು ವಿಶೇಷಾರ್ಥವನ್ನು ಹೇಳುವ ಬೃಹದ್ರಥಂತರ ಇತ್ಯಾದಿ ಶಬ್ದಗಳೂ ಸಹ ಗಾನಮಾತ್ರವಾಗಿ ಇರುತ್ತವೆಯೇ ಹೊರತು ಋಕ್‌ಗಳ ಗಾನ ವಿಶಿಷ್ಟತೆಯಿಂದಲ್ಲ ಎಂದು ಸಪ್ತಮಾಧ್ಯಾಯದಲ್ಲಿ ಈ ನಿಯಮವು ಸಿದ್ಧವಾಗಿದೆ—ಎಂದು ಸಾಮ ಶಬ್ದದ ಗಾನಾರ್ಥಕತ್ವವನ್ನು ಹೇಳಿದೆ. 'ವಿನರ್ದಿ ಸಾಮ್ನೋವೃಣೇ'—ಅಂದರೆ ಸ್ವರವಿಶೇಷಗಳಿಂದ ಕೂಡಿ, ಮಧುರವೂ, ಹಿತಕರವೂ, ಗಂಭೀರವೂ, ಮೃದುವೂ, ಕೋಮಲವೂ ಆದ ಸಾಮಗಾನವನ್ನು ಉಪಾಸಿಸಬೇಕು. ಜೈಮಿನೀಯ ಸೂಕ್ತದಲ್ಲಿ 'ಗೀತಿಷು ಸಾಮಾಖ್ಯಾ' ಎಂದು ಸಾಮವೇದದ ಹಿರಿಮೆಯನ್ನು ಹೇಳಿ, ಸಾಮವೇದದ ಮುಖ್ಯಪ್ರಾಣವೇ ಗಾನ ಎಂದು ಒತ್ತಿ ಹೇಳಿದೆ. ಸಾಮವೇದವು ಉದ್ಗಾತೃ ಎಂಬವನು ಹಾಡಲು ಸಿದ್ಧವಾದ ವೇದ. ಸಾಮವೇದದಲ್ಲಿರುವ 1875 ಮಂತ್ರಗಳಲ್ಲಿ 75 ಮಂತ್ರಗಳನ್ನು ಬಿಟ್ಟರೆ ಉಳಿದುವೆಲ್ಲವೂ ಋಗ್ವೇದವೇ ಆಗಿದೆ. ಋಗ್ವೇದದ ಉಪಲಬ್ಧವಿರುವ ಶಾಕಲಸಂಹಿತೆಗೆ ಈ 1800 ಋಕ್ಕುಗಳು ಸೇರಿವೆ. ಋಗ್ವೇದ ಋಕ್ಕುಗಳೇ ಸಾಮವೇದ ಆಧಾರವಾಗಿರುವುದರಿಂದ ಮಿಕ್ಕ 75 ಮಂತ್ರಗಳು ಉಪಲಬ್ಧವಿಲ್ಲದಿರುವ ಬಾಷ್ಕಲ ಸಂಹಿತೆಗೆ ಸೇರಿದುವುಗಳಾಗಿರಬೇಕು ಎನ್ನಬಹುದು. ಒಟ್ಟು 3633 ಸಾಮಗಳೂ, 4 ಪರಿಶಿಷ್ಟ ಸಾಮಗಳೂ ಇವೆ. ಋಗ್ವೇದದ ಮಾತು. ಸಾಮವೇದದ ಧಾತು. ಸಂಗೀತವನ್ನು ಮಾರ್ಗ ಮತ್ತು ದೇಶೀ ಎಂದು ಎರಡು ಬಗೆಗಳಾಗಿ ಹೇಳುವುದು ರೂಢಿ. ಮಾರ್ಗ ಸಂಗೀತವೆಂಬುದು ನಿರ್ದಿಷ್ಟವಾದ ಸಂದರ್ಭದಲ್ಲಿ ಗೊತ್ತಾದ ಕ್ರಮದಿಂದ ರಾಗವನ್ನು ಅಭಿವ್ಯಕ್ತಿಗೊಳಿಸುವುದು ಎಂದು ಮತಂಗನು 'ಬೃಹದ್ದೇಶಿ' (7ನೇ-ಶ.) ಎಂಬ ಗ್ರಂಥದಲ್ಲಿ ಹೇಳಿದ್ದಾನೆ. ದೇಶಿ ಸಂಗೀತವೆಂದರೆ ಆಯಾ ಪ್ರದೇಶಗಳಲ್ಲಿ ಬಳಕೆಯಿರುವ ಕ್ರಮದಿಂದ ಭಾವವನ್ನು ತೋರ್ಪಡಿಸುವ ಪ್ರಕಾರ. ಇದು ಲೌಕಿಕ ಗಾನ. ಮಾರ್ಗ ಸಂಗೀತಕ್ಕೆ ಸಾಮವೇದವು ಆಧಾರ.

ಮುಖ್ಯಗಾನಗಳಾವುವೆಂದರೆ :—ಗಾಯತ್ರ, ಆಗ್ನೇಯ, ಐಂದ್ರ, ಪವಮಾನ, ಅರ್ಕ, ದ್ವಂದ್ವ, ವ್ರತಪರ್ವಗಳು, ಶುಕ್ರಿಯ ಮತ್ತು ಮಹಾನಾಮ್ನಿ. ಸಾಮಗಳಿಗೆ ಗಾಯತ್ರ, ಶಾಕ್ವರ, ವಾಮದೇವ್ಯ, ಬೃಹತ್, ಅಗ್ನಿಷ್ಟೋಮ, ಯಜ್ಞಾಯಜ್ಞೀಯ ಇತ್ಯಾದಿ ರೂಢಿಯಲ್ಲಿರುವ ಹೆಸರುಗಳು ಛಂದಸ್ಸು, ಋಷಿ, ದೇವತೆ, ಯಾಗ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಉಂಟಾಗಿವೆ. ಸಾಮವೇದದ ಋಕ್‌ಗಳು ಹೆಚ್ಚಾಗಿ ಗಾಯತ್ರೀ ಛಂದಸ್ಸಿನಲ್ಲಿವೆ.

ಸಾಮಗಾನ : ಛಾಂದೋಗ್ಯ ಉಪನಿಷತ್ತಿನಲ್ಲಿ ಉದ್ಗಾನಗಳು, ಸ್ವರಗಳು, ವಿವಿಧ ಸಾಮಗಳನ್ನು ಹಾಡುವ ವಿಧಾನಗಳನ್ನು ಹೇಳಿದೆ. ಉದ್ಗಾನಗಳಲ್ಲಿ ಓಂಕಾರವು ಮುಖ್ಯವಾದುದು ಮತ್ತು ಪ್ರಾಣ. ಆದ್ದರಿಂದ 'ಓಮಿತ್ಯೇ ತದಕ್ಷರಮುದ್ಗೀಥಮುಪಾಸೀತ'—ಅಂದರೆ ಉದ್ಗೀಥ ಶಬ್ದವಾಚ್ಯವಾದ ಓಂ ಎಂಬ ಅಕ್ಷರವನ್ನು ಉಪಾಸಿಸಬೇಕು. ಏಕೆಂದರೆ ಉದ್ಗಾತೃವು ಓಂಕಾರದಿಂದ ಪ್ರಾರಂಭಿಸಿಯೇ

ಹಾಡುತ್ತಾನೆ. ಓಂ ಎಂಬ ಅಕ್ಷರವು ಪರಮಾತ್ಮನಿಗೆ ಅತ್ಯಂತ ಸಮೀಪವಾದ ಹೆಸರು. ಇದು ನಾಮವೂ ಪ್ರತೀಕವೂ ಆಗಿ ಪರಮಾತ್ಮೋಪಾಸನೆಗೆ ಶ್ರೇಷ್ಠವಾದ ಸಾಧನವಾಗಿರುತ್ತದೆ. ಸಾಮದ ಭಾಗಗಳಿಗೆ ಭಕ್ತಿಗಳೆಂದು ಹೆಸರು. ಉದ್ಗಾತೃವು ಓಂ ಎಂದೇ ಉದ್ಗಾನ ಮಾಡುವುದರಿಂದ ಓಂಕಾರವು ಉದ್ಗೀಥವಾಗಿದೆ. ಏಕೆಂದರೆ 'ಪುರುಷಸ್ಯ ವಾಕ್ ರಸಃ, ವಾಚಃ ಋಕ್ ರಸಃ. ಋಚಃ ಸಾಮ ರಸಃ. ಸಾಮ್ನಃ ಉದ್ಗೀಥೋ ರಸಃ' (ಛಾಂ.ಉ. 1–1–4). ವಾಗಿಂದ್ರಿಯವು ಪುರುಷಾವಯವಗಳ ರಸವು; ಋಕ್ಕು ವಾಗಿಂದ್ರಿಯದ ರಸವು, ಸಾಮವು ಋಕ್ಕಿನ ರಸವು, ಉದ್ಗೀಥವು ಸಾಮದ ರಸವು. ಉಪನಿಷತ್ತು ಇನ್ನೂ ಮುಂದುವರಿದು 'ಸ ಏಷಃ ರಸಾನಾಂ ರಸತಮಃ'—ಇದು ರಸಗಳಿಗೆ ರಸತಮವು ಎಂದು ಹೇಳುತ್ತದೆ. ರಸವು ಸಾರವೂ ಮತ್ತು ಅಧಿಷ್ಠಾನವೂ (base) ಆಗಿದೆ. ಉದ್ಗೀಥದ ಅಕ್ಷರಗಳನ್ನು ಉತ್ ಗೀಥ ಎಂದು ಉಪಾಸಿಸಬೇಕು. ಪ್ರಾಣವೇ ಉತ್, ವಾಕ್ಕು ಗೀ, ಅನ್ನ ಅಥವಾ ಕಾರಣವು ಥ. ಆದ್ದರಿಂದ ಪ್ರತಿ ಸಾಮವನ್ನು ಓಂಕಾರದಿಂದಲೇ ಪ್ರಾರಂಭ ಮಾಡುತ್ತಾರೆ.

ಸಾಮವಿಕಾರ: ಸಾಹಿತ್ಯವನ್ನು ಗಾನಕ್ಕೆ ಅಳವಡಿಸಿ ಹಾಡುವಾಗ ಕೆಲವು ಮಾರ್ಪಾಡುಗಳಾಗುವುದು ಸಹಜ. ಈ ಮಾರ್ಪಾಡುಗಳಿಗೆ ಸಾಮವಿಕಾರಗಳೆಂದು ಹೆಸರು. ಸಂಗೀತವು ವಿಸ್ತಾರವಾದಷ್ಟೂ ಪದಗಳು ಕೆಲವು ವೇಳೆ ಗುರುತಿಸಲಾಗದಷ್ಟು ಬದಲಾವಣೆ ಹೊಂದುತ್ತವೆ. ಋಕ್ಕಿನ ಪದಗಳನ್ನು ಒಡೆದು ಮಧ್ಯೆ ಮಧ್ಯೆ ಬರುವ ಸ್ವರದಿಂದ ಹೊಸ ಪದ ಒದಗುತ್ತದೆ. ಸಾಮಗಾನದಲ್ಲಿ ಅ, ಇ, ಒ, ಔ, ಹ, ಹೋ, ಹಾಉ, ಉಹಾ, ಹಿಂ, ತಾಯೋ, ಹಸ್, ಹುಪ್ ಇತ್ಯಾದಿಗಳನ್ನು ಬಳಸುತ್ತಾರೆ. ನಮ್ಮ ಶಾಸ್ತ್ರೀಯ ಸಂಗೀತದಲ್ಲಿ ಅ, ಇ, ಒ, ತನರಿ, ತದರಿ ಇತ್ಯಾದಿಗಳನ್ನು ಬಳಸುವುದನ್ನು ಇಲ್ಲಿ ಸ್ಮರಿಸಬಹುದು. ಕೆಲವು ಸಾಮದಲ್ಲಿ ಸಾಹಿತ್ಯಕ್ಕೆ ಬದಲು ಛಕಾರವನ್ನೇ ಬಳಸುತ್ತಾರೆ. ಇದಕ್ಕೆ ಛಕಾರ ಸಾಮವೆಂದು ಹೆಸರು. ಇಂಥ ಪದಗಳಿಗೆ ಸ್ತೋಭಗಳೆಂದು ಹೆಸರು. ಇವು ಸಾಮಗಾನದಲ್ಲಿ ಅವಿಭಾಜ್ಯವಾಗಿವೆ. ಸಾಮಗಾನದಲ್ಲಿ ಋಕ್ಕುಗಳು ಆರು ಬಗೆಯ ವಿಕಾರವನ್ನು ಹೊಂದುತ್ತವೆ.

1. **ವಿಕಾರ :**—ಋಗ್ವೇದದ ಋಕ್ಕಿನ ಬದಲಾವಣೆ.
   ಉದಾ :—ಅಗ್ನ ಎಂಬುದು ಓಗ್ನಾಯಿ ಎಂದಾಗುತ್ತದೆ.

2. **ವಿಶ್ಲೇಷಣ :**—ಋಕ್ಕಿನ ಪದಭೇದ. ಉದಾ :—ವೀತಯೇ ಎಂಬುದು ಓಯ್-ತೋಯಾಯ್ ಎಂದಾಗುತ್ತದೆ.

3. **ವಿಕರ್ಷಣ :**—ಋಕ್ಕಿನ ಸ್ವರಾಕ್ಷರವು ಲಂಬವಾಗುತ್ತದೆ.
   ಉದಾ :—ಏ ಎಂಬುದು ಯಾ 2 3 ಯಿ ಎಂದಾಗುತ್ತದೆ.

4. **ಅಭ್ಯಾಸ** :—ಪುನರುಕ್ತಿಗೊಳ್ಳುವುದು ಅಂದರೆ ಅಕ್ಷರಗಳನ್ನು ಪುನಃ ಪುನಃ ಉಚ್ಚರಿಸುವುದು. ಉದಾ :—ನೃಮ್ಣಾಇನೃಮ್ಣಂ (3), ನಿಧಾಇಮಾಹೆ (3) ಇತ್ಯಾದಿ.

5. **ವಿರಾಮ** :—ಪದದ ಮಧ್ಯೆ ಸ್ವಲ್ಪಹೊತ್ತು ನಿಲ್ಲಿಸಿ ವಿರಾಮ ಕೊಟ್ಟು ಮುಂದಿನ ಭಾಗವನ್ನು ಹಾಡುವುದು.
ಉದಾ :—ಗೃಣಾನೋ ಹವ್ಯದಾತಯೇ ಎಂಬುದನ್ನು ಗೃಣಾನೋಃಹ । ವ್ಯದಾತೋಯಾಇ । ಎಂದು ಹಾಡುವುದು.

6. **ಸ್ತೋಭ** :—ಹಾಡಲು ಅನುಕೂಲವಾದ ಅಕ್ಷರಗಳ ಗುಂಪನ್ನು ಹಾಡಿನ ಮಧ್ಯೆ ಮಧ್ಯೆ ಸೇರಿಸಿ ಹಾಡುವುದು.
ಉದಾ :—ಔಹೋವಾ, ಹಾಉವಾ, ಬಇಡಾ, ಹಿಂವಾ ಇತ್ಯಾದಿ.

ಸ್ತೋಭಸ್ಯ ಲಕ್ಷಣಂ ನಾಸ್ತಿ ಕಿಂ ವ್ಯಾಪ್ತಿ ನ ವಿವರ್ಣತಾ ।
ಆದಿತ್ಯಮಪ್ಯತಿವ್ಯಾಪ್ತಂ ವಿಶಿಷ್ಟಂ ಲಕ್ಷಣಂ ಭವೇತ್ ॥

(—ಜೈಮಿನೀಯ ನ್ಯಾಯಮಾಲಾ, 9-2-11)

ಋಕ್ಕಿನ ಅಕ್ಷರಗಳ ವರ್ಣವಿಕಾರವೂ, ವಿಶಿಷ್ಟಲಕ್ಷಣಯುಕ್ತವೂ ಗಾನದ ಮಾಧುರ್ಯಕ್ಕಾಗಿ ಬಳಸಲಾಗಿರುವುದಕ್ಕೆ ಸ್ತೋಭವೆಂದು ಹೆಸರು. ಸ್ತೋಭಗಳನ್ನು ಎರಡು ಬಗೆಗಳಾಗಿ ವಿಂಗಡಿಸಲಾಗಿದೆ.

1. **ವಾಕ್ಯಸ್ತೋಭ** :—ಇದಕ್ಕೆ ಸಾರ್ಥಕಸ್ತೋಭವೆಂದೂ ಹೆಸರು. ಇದಕ್ಕೆ ಗೊತ್ತಾದ ಅರ್ಥವಿದೆ. ಇಂತಿಂಥ ಸ್ತೋಭಗಳನ್ನು ಇಂತಿಂಥ ಸಾಮಗಳಲ್ಲಿ ಬಳಸಬೇಕೆಂದು ಹೇಳಿದೆ.

ಪದಸ್ತೋಭ :—ಹಾಉ, ಹಾಇ, ಅಥ, ಇಹ, ಈ, ಊ, ಏ, ಔಹೋಯಿ, ಹಿಂ, ಸ್ವರ, ಯಾ, ವಿರಾಟ್ ಮತ್ತು ಅನಿರುಕ್ತವಾದ ಹುಂ ಇವೇ ಮೊದಲಾದ ಹದಿಮೂರು ಸ್ತೋಭಗಳು ಬರುತ್ತವೆ. (ಛಾಂ.ಉ. 1-13-1) ನಿರ್ದಿಷ್ಟವಾದ ಒಂದೇ ಅರ್ಥವಿರದಿದ್ದರೂ ದೇವತಾ ನಿರ್ದೇಶನದಿಂದ ಈ ಪದಗಳನ್ನು ಅರ್ಥೈಸಬಹುದು. ಉದಾ :—ಆದಿತ್ಯನು ಊಕಾರ, ಪ್ರಜಾಪತಿಯು ಹಿಂಕಾರ, ಅನ್ನವು ಯಾ, ಆತ್ಮನು ಇಹಕಾರ ಇತ್ಯಾದಿ. ಹೀಗೆ ಪದಸ್ತೋಭವು ಅಶರೀರಗಾನವೆಂದೂ, ಅನಿರ್ವಚನೀಯ ಗಾನದ ಆತ್ಮವೆಂದೂ ಪ್ರಾಮುಖ್ಯ ಪಡೆದಿದೆ. ಗಾನಕ್ಕೆ ಪೂರಕವಾಗಿ ರಾಗಗಳಿಗೆ ಒತ್ತುಕೊಡಲು ಆ, ಏ, ತನ ರೀ, ತದರಿ ನ, ತೊಂ ಇತ್ಯಾದಿ ಬಳಸುವುದನ್ನು ಇಲ್ಲಿ ಸ್ಮರಿಸಬಹುದು.

‘ಋಚಿ ಅಧ್ಯೂಢಂ ಸಾಮ ಗೀಯತೇ’ ಎಂದು ಛಾಂದೋಗ್ಯ ಉಪನಿಷತ್ತಿನಲ್ಲಿ
ಹೇಳಿರುವಂತೆ ಋಕ್ಕುಗಳು ಸಾಮಗಾನದ ಮೂಲಸಾಮಗ್ರಿ. ಸಹಜವಾದ ವಿಭಾಗ
ಮತ್ತು ಉಚ್ಚಾರಣೆಯನ್ನು ಕಡೆಗಣಿಸಿ, ಹಾಡಲು ಅನುಕೂಲವಾಗುವಂತೆ ಪದ
ಗಳನ್ನು ವಿಂಗಡಿಸಿ ಉಚ್ಚರಿಸಿ, ಅಲ್ಲಲ್ಲಿ ಹೊಸ ಅಕ್ಷರಗಳನ್ನೂ ಪದಗಳನ್ನೂ ಸೇರಿಸು
ವುದರ ಉದ್ದೇಶವೇನು ಎಂದರೆ ಸಾಮಗಾನದಲ್ಲಿ ಗಾನಕ್ರಿಯೆ ಮುಖ್ಯವಾದುದು.
ಇಲ್ಲಿ ವ್ಯಾಕರಣ, ಛಂದಸ್ಸು ಇತ್ಯಾದಿಗಳ ನಿಯಮಗಳನ್ನು ಮೀರಿದುದು ಸಾಮಗಾನ.
ಇದರಲ್ಲಿ ಗಾನವಶದಿಂದ ಕೆಲವು ಪದಗಳು ಭಂಗಗೊಂಡರೆ, ಪುನರುಕ್ತಿ ಮತ್ತು
ಅರ್ಥೋಕ್ತಿ ಉಂಟಾದರೆ ಅದನ್ನು ದೋಷವೆಂದು ಭಾವಿಸಬಾರದೆಂದು ಕಲ್ಲಿನಾಥನು
‘ಸಂಗೀತರತ್ನಾಕರ’ದ ವ್ಯಾಖ್ಯಾನದಲ್ಲಿ ಹೇಳಿದ್ದಾನೆ. (ಅಥ ಪದಾವೃತ್ತ್ಯಾ ಪುನರುಕ್ತಿ
ದೋಷಂ ಪದಾರ್ಥಭಂಗೇನ ಅನರ್ಥಕತ್ವಂಚಾಶಂಕ್ಯ ಮತಂಗೇನ ಪರಿಹೃತಮ್
ಯಥಾ—‘ಸಾಮವೇದೇ ಗೀತಪ್ರಧಾನೇ ಆವೃತ್ತಿಸ್ತ್ವರ್ಥಾ ನಾದ್ರಿಯತೇ’ ಇತಿ ।
ಪದಖಂಡನಾದರ್ಥಭಂಗೋ ಭವತೀತ್ಯತ್ರಾಪೀತಿ । ಅತಃ ಸಾಮವೇದ ಪ್ರಕೃತಿಕೇ
ಸಂಗೀತೇ ಗಾನವಶಾತ್ ಕ್ವಚಿತ್ ಪದಾನಾಂ ಪುನರುಕ್ತಿರರ್ಥೋಕ್ತಿಶ್ಚ ನ ದೋಷಾ-
ಯೇತ್ ಮಂತವ್ಯಮ್ ।).

ನಮ್ಮ ಶಾಸ್ತ್ರೀಯ ಸಂಗೀತದಲ್ಲೂ ಸಂಗೀತವು ವಿಸ್ತಾರವಾದಂತೆಲ್ಲಾ ಸಾಹಿತ್ಯವು
ಸ್ವಲ್ಪಮಟ್ಟಿಗೆ ವಿರೂಪಗೊಳ್ಳುವುದು ತಿಳಿದ ವಿಷಯವೇ ಆಗಿದೆ. ಸಾಹಿತ್ಯದ
ಪರಿಶುದ್ಧತೆಯನ್ನು ಹಾಡುವಾಗ ಕಾಪಾಡಿಕೊಳ್ಳಲೇಬೇಕೆನ್ನುವ ಮತವೂ ಇದೆ.
ಆದರೆ ಸಾಮಗಾನದಲ್ಲಿ ಕಂಡುಬರುವಂತೆ ಇದು ಅನೇಕ ವೇಳೆ ಸಾಧ್ಯವಾಗುವುದಿಲ್ಲ.
ಹಾಗೆಂದಮಾತ್ರಕ್ಕೆ ಅನವಶ್ಯವಾಗಿ ಕೃತಿಗಳ ಅಥವಾ ಹಾಡುಗಳ ಸಾಹಿತ್ಯವನ್ನು
ವಿರೂಪಗೊಳಿಸಬಹುದೆಂದು ತಮ್ಮ ನಿಲುವನ್ನು ಗಾಯಕರು ಸಮರ್ಥಿಸಿಕೊಳ್ಳಬಾರ
ದಷ್ಟೆ. ಇದು ಹೆಚ್ಚಾಗಿ ಕನ್ನಡದ ಹಾಡುಗಳಿಗೆ ಅನ್ವಯಿಸುತ್ತದೆ ಎನ್ನಬಹುದು.
‘ಪ್ರಹ್ಲಾದನ ಪಿತ’ ಎಂಬ ಪದವನ್ನು ‘ಪ್ರಹ್ಲಾದ ನಾಪಿತ’ ಎಂದು ಹಾಡಿ ವಿರೂಪ
ಗೊಳಿಸುವುದು ಸಾಧುವಲ್ಲ.

ಸಾಮದ ಋಕ್ಕುಗಳನ್ನು ಸಂಹಿತಾ ಮತ್ತು ಗಾನ ಎಂಬ ಎರಡು ವಿಭಾಗ
ಗಳನ್ನಾಗಿ ವಿಂಗಡಿಸಲಾಗಿದೆ. ಸಂಹಿತೆಯನ್ನು ಪೂರ್ವಾರ್ಚಿಕ ಮತ್ತು ಉತ್ತರಾರ್ಚಿಕ
ವೆಂದು ವಿಭಾಗ ಮಾಡಲಾಗಿದೆ. ಪೂರ್ವಾರ್ಚಿಕದ ಎರಡನೆಯ ಭಾಗಕ್ಕೆ ಆರಣ್ಯಕ
ಸಂಹಿತ ಎಂದು ಹೆಸರು. ಸಾಮಗಾನವನ್ನು ಗ್ರಾಮೇ ಗೇಯ ಮತ್ತು ಅರಣ್ಯೇ
ಗೇಯ ಎಂದೂ, ಊಹ ಮತ್ತು ಊಹ್ಯಗಾನ ಎಂದೂ ವಿಭಾಗಿಸಲಾಗಿದೆ.
ಪೂರ್ವಾರ್ಚಿಕವು ದೇವತೆಗಳನ್ನು ಕುರಿತು ಹಾಡುವಂತಹುದು. ಗ್ರಾಮೇ ಗೇಯ
ವನ್ನು ಹಳ್ಳಿಗಳಲ್ಲಿ ಜನರ ನಡುವೆ, ಸಭ್ಯರ ಮುಂದೆ ಸಂದರ್ಭಕ್ಕೆ ತಕ್ಕಂತೆ ಹಾಡು
ವುದು. ಪೂರ್ವಾರ್ಚಿಕದ ಮೊದಲ ಐದು ಅಧ್ಯಾಯಗಳಲ್ಲಿ ಅಗ್ನಿ, ಇಂದ್ರ,
ಪವಮಾನ ಇತ್ಯಾದಿ ದೇವತೆಗಳ ಸ್ತುತಿಪರವಾದುದನ್ನು, ಜನರ ನಿರೀಕ್ಷೆಯನ್ನು

ಮತ್ತು ರಂಜನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಡುತ್ತಿದ್ದರು. ಗ್ರಾಮದ ಜನರಿಗೆ ಸೇರಿದ ಈ ದೇವತೆಗಳನ್ನು ಕುರಿತು ಹಾಡುವ ಗ್ರಾಮಗೇಯದಲ್ಲಿ ಧರ್ಮದ ನೇರವಾದ ಪ್ರಯೋಜನ ಕಂಡುಬರುತ್ತದೆ. ಇವು ಈಗಿನ ಭಜನೆ, ಸಂಕೀರ್ತನೆ ಇತ್ಯಾದಿಗಳು ಇರುವಂತೆ. ಈ ಗೇಯದಲ್ಲಿ ಬಳಸಲಾಗುವ ರಾಗಗಳು ಊಹರಾಗಗಳು.

ಪೂರ್ವಾರ್ಚಿಕದ ಎರಡನೆ ಭಾಗದ ಋಕ್ಕುಗಳು ಅರಣ್ಯದ ಶಾಂತ ವಾತಾವರಣ ದಲ್ಲಿ ಏಕಾಂತದಲ್ಲಿ ಹಾಡಿಕೊಳ್ಳುವಂಥವು. ಇವುಗಳಿಗೆ ಒಂದು ವಿಶಿಷ್ಟವಾದ ಪವಿತ್ರತೆ ಮತ್ತು ಕಳೆ ಇದೆ ಎಂದು ಹೇಳಿದೆ. ಈ ಗಾನಪದ್ಧತಿಯು ಸಾಮಾನ್ಯರಿಗೆ ರುಚಿಸದೆ ಇರಬಹುದು. ಇಲ್ಲಿ ನಿಬಂಧನೆಯಿಲ್ಲದೆ ಸ್ವೇಚ್ಛೆಯಾಗಿ ಹರಿಯುವುದು ಊಹ್ಯಗಾನ. ಊಹ್ಯವೆಂದರೆ 'ಹಿಂದೆ ಇರದಿದ್ದುದನ್ನು ಹೊಸದಾಗಿ ಎತ್ತಿ ತೋರಿಸುವುದು.' (ಅಪೂರ್ವೋತ್ಕ್ಷೇಪಣಂ–ಜೈಮಿನಿ). 'ಸಹಸ್ರವರ್ತ್ಮಾ ಸಾಮವೇದಃ' (ಪತಂಜಲಿ) ಎಂಬ ಮಾತಿನಿಂದ ಮನೋಧರ್ಮಕ್ಕೆ ತಕ್ಕಂತೆ ಅನೇಕ ವಿಧವಾಗಿ ಸಂದರ್ಭಾನುಸಾರ ವಾಗಿ ಬೇರೆ ಬೇರೆ ಶೈಲಿಗಳಲ್ಲಿ ಸಾಮಗಾನ ಮಾಡುತ್ತಿದ್ದರು ಎಂದು ಹೇಳಬಹುದು. ಊಹ್ಯಗಾನದಲ್ಲಿ ಪ್ರಕೃತಿ ಮತ್ತು ವಿಕೃತಿ ಸ್ವರಗಳನ್ನು ಬಳಸಲಾಗುತ್ತಿತ್ತು. ಈ ಗಾನವು ಮನೋಧರ್ಮ ಸಂಗೀತದಂತೆ.

ಒಂದೇ ಋಕ್ಕನ್ನು ಸರಳವಾದ ರೀತಿಯಿಂದ ಪ್ರೌಢವಾದ ರೀತಿಯವರೆಗೆ ಸಂದರ್ಭೋಚಿತವಾಗಿ ಹಾಡುವುದನ್ನು, ಒಂದೇ ಹಾಡನ್ನು ಸರಳವಾಗಿಯೂ, ಸಂಗತಿ ಗಳು ಮತ್ತು ಗಮಕಗಳ ಸಹಿತ ಪ್ರೌಢವಾಗಿಯೂ ಹಾಡುವ ಈಗಿನ ಸಂಗೀತ ಪದ್ಧತಿಗೆ ಹೋಲಿಸಬಹುದು. ಯಜ್ಞಯಾಗಾದಿಗಳಲ್ಲಿ ಉದ್ಗಾತೃವು 2 ರಿಂದ 7 ಋಕ್ಕುಗಳನ್ನು ಒಂದೇ ರಾಗದಲ್ಲಿ ಹಾಡುತ್ತಿದ್ದನು. ಪೂರ್ವಾರ್ಚಿಕದಲ್ಲಿ ಮೊದಲ ನೆಯ ಋಕ್ಕನ್ನು ಹಾಡುತ್ತಿದ್ದರು. ಸಾಮ ಕಲಿಯುವವರಿಗೆ ರಾಗದ ಅಭ್ಯಾಸ ಮಾಡಲು ಇದು ಅನುಕೂಲವಾಗುತ್ತಿತ್ತು. ಉತ್ತರಾರ್ಚಿಕದಲ್ಲಿ ಅದೇ ವರ್ಗಕ್ಕೆ ಅಥವಾ ಸ್ತೋತ್ರಕ್ಕೆ ಸೇರಿದ ಇತರ ಋಕ್ಕುಗಳನ್ನು ಅದೇ ರಾಗದಲ್ಲಿ ಹಾಡಲಾಗು ತ್ತಿತ್ತು. ಪಲ್ಲವಿ, ಅನುಪಲ್ಲವಿ ಮತ್ತು ಮೊದಲ ಚರಣದ ಸಾಹಿತ್ಯ ಮತ್ತು ಸ್ವರ ಲಿಪಿಯನ್ನು ಕೊಟ್ಟು ಇತರ ಚರಣಗಳ ಸಾಹಿತ್ಯವನ್ನು ಮಾತ್ರ ಕೊಟ್ಟು 'ಮೇಲಿನ ಚರಣದಂತೆಯೇ' ಎಂದು ಹೇಳುವ ಈಗಿನ ಪದ್ಧತಿಗೆ ಇದನ್ನು ಹೋಲಿಸಬಹುದು.

ವೀಣೆ : ಯಜ್ಞಯಾಗಾದಿಗಳಲ್ಲಿ ಸಾಮಗಾಯಕರು ವೈದಿಕಗಾನಕ್ಕೆ ಸೇರಿದ ವಾದ್ಯವಾದ ವೀಣೆಯೊಂದಿಗೆ ಹಾಡುತ್ತಿದ್ದರು. ವೈದಿಕಸಾಹಿತ್ಯದಲ್ಲಿ ಹಲವು ಬಗೆಯ ವೀಣೆಗಳನ್ನು ಹೆಸರಿಸಿದೆ. 'ತತ್ ಯ ಇಮೇ ವೀಣಾಯಾಂ ಗಾಯಂತ್ಯೇತಂ ತೇ ಗಾಯಂತಿ' (ಛಾಂ.ಉ. 1–7–7). ಯಾರು ವೀಣೆಯಲ್ಲಿ ಹಾಡುತ್ತಾರೆಯೋ ಅವರು ಇವನನ್ನು ಹಾಡುತ್ತಾರೆ.' ವೈದಿಕಸಾಹಿತ್ಯದಲ್ಲಿ ಹಲವು ಬಗೆಯ ವೀಣೆ ಯನ್ನು ಹೆಸರಿಸಿದೆ. ಇವುಗಳಲ್ಲಿ ಬಹಳ ಹಿಂದಿನದು 'ಏಕತಂತ್ರೀ ವೀಣಾ'. ಈ ವೀಣೆಯು ಓಂಕಾರ ಅಥವಾ ಪ್ರಣವೋಪಾಸನಕ್ಕೆ ಅನುಕೂಲಕರವಾದುದೆಂದು

ತಿಳಿದಿದ್ದರು. ಪ್ರಾರಂಭದಲ್ಲಿ ಉದ್ಗಾತೃವು ಔದುಂಬರೀ ವೀಣೆಯನ್ನು ನುಡಿಸುತ್ತಿದ್ದನು. ಋಕ್ಕುಗಳನ್ನು ಹಾಡುವಾಗ ಮೇಲಿನ ಮತ್ತು ಕೆಳಗಿನ ಸ್ವರಭೇದಗಳನ್ನು ಗಮನಿಸಿ ಕಾಲಕ್ರಮದಲ್ಲಿ ದ್ವಿತಂತ್ರೀ, ತ್ರಿತಂತ್ರೀ, ಚತುಸ್ತಂತ್ರೀ ವೀಣೆ, ತರುವಾಯ ಸಪ್ತತಂತ್ರೀ ಅಥವಾ ಚಿತ್ರಾ ಎಂಬ ವೀಣೆಯು ಬಳಕೆಗೆ ಬಂದಿತು. ಜನರಂಜನೆಯ ದೃಷ್ಟಿಯಿಂದ ತಂತಿಗಳ ಸಂಖ್ಯೆ ಕಾಲಕ್ರಮದಲ್ಲಿ ಹೆಚ್ಚಿ ಶತತಂತ್ರೀ ಅಥವಾ ಕಾತ್ಯಾಯನ ವೀಣೆ ಉಂಟಾಯಿತು. ಇವಲ್ಲದೆ ವೈದಿಕ ಗಾನಕ್ಕಾಗಿ ಚತುಸ್ತಂತ್ರೀ ಮತ್ತು ಚಿತ್ರಾ ಎಂಬ ವೈದಿಕ ವೀಣೆ, ವ್ಯಾಖ್ಯಾಗಾನ ಅಥವಾ ಕಾವ್ಯಗಳ ಶ್ಲೋಕಗಳನ್ನು ರಾಗವಾಗಿ ಹಾಡಲು ಒಂಭತ್ತು ತಂತಿಗಳ ವಿಪಂಚಿ ವೀಣೆ, 21 ತಂತಿಗಳ ಮತ್ತಕೋಕಿಲ ಮುಂತಾದ ವ್ಯಾಖ್ಯಾಗಾನ ವೀಣೆಗಳು, ಜನರಂಜನೆ ಅಥವಾ ಲೌಕಿಕ ಗಾನಕ್ಕಾಗಿ ಹೆಚ್ಚು ಸಂಖ್ಯೆಯ ತಂತಿಗಳುಳ್ಳ ಲೌಕಿಕ ವೀಣೆಗಳೆಂಬ ವಿಭಾಗಗಳುಂಟಾದುವು. ವ್ಯಾಖ್ಯಾಗಾನವು ಈಗಿನ ಗಮಕವಾಚನ ಕಲೆಯ ಮೂಲವೆನ್ನಬಹುದು. ಇವೆಲ್ಲಾ ಮೆಟ್ಟಲುಗಳಿಲ್ಲದ ವೀಣೆಗಳಾಗಿದ್ದುವು. ಸಾಮಗಾನದ ವಾದ್ಯಗಳೆಂದರೆ ವೀಣೆ, ವೇಣು, ಮೃದಂಗ. ಇವಲ್ಲದೆ ಪಣವ, ಪುಷ್ಕರ, ಭಾಂಡ ಇತ್ಯಾದಿ ವಾದ್ಯಗಳನ್ನು ಅವಶ್ಯವಿದ್ದಾಗ ಬಳಸುತ್ತಿದ್ದರು.

ಸಾಮಗಾನ ಮಾಡುವ ಮುಖ್ಯಗಾಯಕನಿಗೆ ಹಲವು ಸಹಗಾಯಕರಿರುತ್ತಿದ್ದರು. ಗಾನರಚನೆಯನ್ನು ಛಾಂದೋಗ್ಯ ಉಪನಿಷತ್ತಿನಲ್ಲಿ ವಿವರಿಸಿ ರಚನಾಕ್ರಮವನ್ನು 5 ವಿಭಾಗ ಮಾಡಿದ್ದಾರೆ. ಅವುಗಳು ಪ್ರಸ್ತಾವ, ಉದ್ಗೀಥ, ಪ್ರತಿಹಾರ, ಉಪದ್ರವ, ಮತ್ತು ನಿಧನ. ಇವುಗಳಿಗೆ ಭಕ್ತಿಗಳೆಂದು ಹೆಸರು. ಮೊದಲು ಓಂಕಾರವನ್ನು ಹೇಳಿ ಋಕ್ಕನ್ನು ಎತ್ತಿಕೊಳ್ಳುವುದು ಪ್ರಸ್ತಾವ. ಇದನ್ನು ಹಾಡುವವನು ಪ್ರಸ್ತೋತ. ಅನಂತರ ಸಾಮದ ಉದ್ಗೀಥ ಭಾಗವನ್ನು ಉದ್ಗಾತನು ಹಾಡುವನು. ಇದು ಸಾಮದ ಮುಖ್ಯಭಾಗ. ಉದ್ಗೀಥವೆಂದರೆ ಮೇಲಿನ ಸ್ವರಗಳಲ್ಲಿರುವ ಹಾಡು. ಈ ಭಾಗದಲ್ಲಿ ಋಕ್ಕಿನ ಸಾಹಿತ್ಯವು ಸಾಮವಿಕಾರಗಳನ್ನು ಒಳಗೊಂಡಿರುತ್ತದೆ. ಉದ್ಗೀಥದ ಕೊನೆಯ ಪದವನ್ನು ಹಿಡಿದು ಮೂರನೆಯವನು ಪ್ರತಿಹಾರ ಭಾಗವನ್ನು ಹಾಡುವನು. ಉಪದ್ರವದ ನಂತರ ಮೂವರು ಋತ್ವಿಕರೂ ಸೇರಿ ಮುಕ್ತಾಯ ಅಥವಾ ನಿಧನ ಭಾಗವನ್ನು ಹಾಡಿ ಓಂಕಾರದೊಂದಿಗೆ ನಿಲ್ಲಿಸುವರು. ಕೊನೆಯಲ್ಲಿ ಏರಿದ ಸ್ವರವನ್ನು ಕ್ರಮವಾಗಿ ಇಳಿಸಿ ನೆಲೆಗೆ ನಿಲ್ಲಿಸುವುದು ನಿಧನ. ಹಿಂಕಾರವು ಆಧಾರ ಶ್ರುತಿ. ಹುಂಕಾರವು ಹಿಂಕಾರಕ್ಕೆ ಸಮನಾದುದು. ಹೀಗೆ ಮೊದಲು ಉದ್ಗಾಥವರೆಗೆ ಆರೋಹಣ ಕ್ರಮದಲ್ಲೂ ತರುವಾಯ ಅವರೋಹಣ ಕ್ರಮದಲ್ಲೂ ಸಾಮಗಾನವು ಜರುಗುವುದು. 11–12ನೇ ಶತಮಾನದ ವರೆಗೂ ಈ ಪದ್ಧತಿಯು ರೂಢಿಯಲ್ಲಿತ್ತು. ಇದೇ ಪದ್ಧತಿ ನಮ್ಮ ಸಂಗೀತದಲ್ಲಿ ಅನುಸರಿಸಲಾಗಿದೆ. ಆಸ್ಥಾಯಿ, ಉದ್ಗ್ರಾಹ, ಅಂತರಾ, ಆಭೋಗ ಎಂಬ ರಚನಾ ಕ್ರಮವು ಸಾಮವೇದದ ರಚನಾ ಕ್ರಮವನ್ನೇ ಅನುಸರಿಸಿದೆ ಎನ್ನಬಹುದು. ಯಜ್ಞಯಾಗಾದಿಗಳಲ್ಲಿ

ಉದ್ಗಾತೃಗಣದ ಋತ್ವಿಕರು ಅಂದರೆ ಉದ್ಗಾತೃ, ಪ್ರಸ್ತೋತ, ಪ್ರತಿಹರ್ತಾ ಮತ್ತು ಸುಬ್ರಹ್ಮಣ್ಯ ಮುಂತಾದವರು ಕೆಲವು ಗಾನಕ್ರಮಗಳಲ್ಲಿ ಒಂದೊಂದು ಭಾಗವನ್ನು ಒಬ್ಬೊಬ್ಬರು ಹೇಳಿ ಕಡೆಯಲ್ಲಿ ನಿಧನವನ್ನು ಒಟ್ಟಾಗಿ ಹೇಳುತ್ತಾರೆ. ಈ ಗೋಷ್ಠಿ ಗಾನದ ಕ್ರಮವನ್ನು ಸಂಗೀತದಲ್ಲಿ ಅದರಲ್ಲೂ ಜಾನಪದ ಗಾನದಲ್ಲಿ ಹೆಚ್ಚಾಗಿ ಕಾಣಬಹುದು.

ಸಾಮಗಾನದ ಸ್ವರಗಳು : ಛಾಂದೋಗ್ಯ ಉಪನಿಷತ್ತಿನಲ್ಲಿ ಸಾಮದ ಆಶ್ರಯವು ಸ್ವರ ಮತ್ತು ಸ್ವರದ ಆಶ್ರಯವು ಪ್ರಾಣವೆಂದು ಹೇಳಿದೆ. (ಕಾ ಸಾಮ್ನೋ ಗತಿರಿತಿ ಸ್ವರ ಇತಿ ಹೋವಾಚ ಸ್ವರಸ್ಯ ಕಾ ಗತಿರಿತಿ ಪ್ರಾಣ ಇತಿ ಹೋವಾಚ– 1–8–4) ಆರ್ಚಿನೋ ಗಾಯಂತಿ, ಗಾಥಿನೋ ಗಾಯಂತಿ, ಸಾಮಿನೋ ಗಾಯಂತಿ, ಹೀಗೆ ಈ ಪದ್ಧತಿಗಳು ರೂಢಿಯಲ್ಲಿದ್ದುವು. ಈ ರೀತಿಯ ಪ್ರಯೋಗಗಳು ಜೈಮಿನೀಯ ಶಾಖೆಯಲ್ಲಿ ಕಂಡುಬರುತ್ತವೆ. ಸಾಮಿಕ ಎಂದರೆ ಮೂರು ಸ್ವರಗಳ (ಗರಿಸ) ಗುಚ್ಛ ಎಂಬ ಅರ್ಥವುಂಟು.. ಇದಕ್ಕೆ ಸ್ವರಾಂತರ 'ನಿ'ಯನ್ನು ಸೇರಿಸಿ ಬಳಸುತ್ತಿದ್ದರು. ಸಂಗೀತದ ದೃಷ್ಟಿಯಿಂದ ಸಾಮಗಾನದಲ್ಲಿ ಬರುವ ಸ್ವರಗಳು ಮುಖ್ಯವಾದುವು. ಇವನ್ನು ಕುರಿತು ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರು ಅಧ್ಯಯನ ಹಾಗೂ ಸಂಶೋಧನೆ ಮಾಡಿದ್ದಾರೆ. ಇವರುಗಳ ಅಭಿಪ್ರಾಯದಂತೆ ಸಾಮವೇದದ ಸಂಗೀತವು ಅವರೋಹಣಕ್ರಮದಲ್ಲಿದೆ. ಅನೇಕ ಸ್ವರಸಾಮವನ್ನು 1) ಅನುಲೋಮ ಗೀತಂ (ಉಚ್ಚಾದಿ ನೀಚಾಂತಂ). 2) ಪ್ರತಿಲೋಮಗೀತಂ (ನೀಚಾದಿ ಉಚ್ಚಾಂತಂ), 3) ಉಭಯವಿಧಗೀತಂ (ಉಚ್ಚಾದಿ ಉಚ್ಚಾಂತಂ, ನೀಚಾದಿ ನೀಚಾಂತಂ), ಎಂದು ಮೂರು ವಿಭಾಗಗಳಾಗಿ ಮಾಡಿದೆ. ಕಾಲಾನುಕ್ರಮದಲ್ಲಿ ನಾಲ್ಕು ಸ್ವರಗಳ ಜೊತೆಗೆ ಇತರ ಸ್ವರಗಳೂ ಸೇರಿ ಸಪ್ತಸ್ವರಗಳುಳ್ಳ ಮೇಳವಾಯಿತು. ಸಾಮಾನ್ಯವಾಗಿ ಸಾಮಗಾನದಲ್ಲಿ ಐದು ಸ್ವರಗಳೇ ಹೆಚ್ಚು. ಕೌಥುಮಶಾಖೆಯಲ್ಲಿ ಮಾತ್ರ ಇಂದಿಗೂ ಸಪ್ತಸ್ವರಗಳಿವೆ. (ಪ್ರಕೃತಿಗಾನ 492–ಏಳನೆಯ ಪ್ರಪಾಠದ ಕೊನೆಯ ಸಾಮವಾದ ಮೋಷ್ತ್ವಾ (ಋಕ್) ಆತ್ರೇಂದ್ವೇ ಸಾಮದಲ್ಲಿ 2ನೇ ಬೃಹತೀ ಛಂದಸ್ಸು). (ಸಪ್ತಸು ಸ್ವರೇಷು ದ್ವೇ ಸಾಮಾನಿ ಗೀಯತೇ ಕೌಥುಮ ಶಾಖಿನಾಮ್ ।). ಈ ಎಲ್ಲ ಸ್ವರಗಳ ಶ್ರುತಿಯನ್ನು ಮಾನ್ಯಮಾಡಲಾಗಿತ್ತು. ಸಾಮವೇದ ಭಾಷೆಯಲ್ಲಿ ಸ್ವರಗಳಿಗೆ ಯಮ ಎಂದು ಹೆಸರು. (ಸಪ್ತಸ್ವರಾ ಯೇ ಯಮಾಸ್ತೇ । ಋಕ್–ಪ್ರಾತಿಶಾಖ್ಯ–ಶೌನಕ). ಸಾಮವೇದದ ಸ್ವರಗಳು (ಯಮಗಳು) ಕ್ರುಷ್ಟ (ಮಧ್ಯಮ), ಪ್ರಥಮ (ಗಾಂಧಾರ), ದ್ವಿತೀಯ (ರಿಷಭ), ತೃತೀಯ (ಷಡ್ಜ), ಚತುರ್ಥ (ನಿಷಾದ), ಮಂದ್ರ (ಧೈವತ), ಅತಿಸ್ವಾರ್ಯ (ಪಂಚಮ). ಕೆಲವೆಡೆ ಪಂಚಮದಿಂದ ಆರಂಭವಾಗುವ ಮೇಳವಿದ್ದಿತು. ಇವುಗಳಲ್ಲದೆ ಅವಾಂತರ ಸ್ವರಗಳೆನಿಸಿದ ಪರಿಸ್ವಾರ್ಯ, ಪ್ರಯುತ, ನಮನ, ವಿನತ, ದೀಪ್ತ, ಆಯತ, ಕರುಣ, ಸ್ವರಿತ, ಕರ್ಷಣ, ಸಂಪ್ರಸಾರಣ, ಅಭಿಗೀತ ಮುಂತಾದುವೂ ಪ್ರಯೋಗವಾಗಿವೆ. ಗುಜರಾತಿನ

ಸಾಮಗಾನದಲ್ಲಿ ಸ್ವರಗಳ ಕಂಪನವಿರುವುದು ಕಂಡುಬರುತ್ತದೆ. ಸ್ವರಸ್ಯ ಕಂಪೋ ಗಮಕಃ ಎಂಬ ಮಾತನ್ನು ಗಮನಿಸಿ, ಸಾಮವೇದದ ಸ್ವರಕಂಪನಗಳು ಸಂಗೀತದಲ್ಲಿ ಕಂಡುಬರುವ ವಿವಿಧ ಗಮಕಗಳಿಗೆ ಮೂಲವೆನ್ನಬಹುದು. ಸಾಮಗಾನದಲ್ಲಿ ಈಗಿನ ಸಂಗೀತದ ಸಪ್ತಸ್ವರಗಳು ಇದ್ದುದನ್ನು ಕಾಣುತ್ತೇವೆ. ಬಹಳ ಹಿಂದೆ ಸಾಮಗಾನವು ಔಡವ ರಾಗದ ಅಭೋಗಿ ರಾಗವನ್ನು ಹೋಲುತ್ತಿತ್ತು ಎನ್ನಬಹುದು. ಕಾಲಾನುಕ್ರಮದಲ್ಲಿ ಸಾಮಗಾನವು ಸಪ್ತಸ್ವರಗಳುಳ್ಳದ್ದಾಯಿತು. ತರುವಾಯ ಖರಹರಪ್ರಿಯ ಮೇಳವು ರೂಢಿಗೆ ಬಂದಿತು. ಶಾರ್ಙ್ಗದೇವನ ಕಾಲದ ವರೆಗೆ ಈ ಮೇಳಕ್ಕೆ ಶುದ್ಧಮೇಳವೆಂಬ ಹೆಸರಿದ್ದಿತು ಎಂಬುದು ಗಮನಾರ್ಹ. ಇದು ಹಿಂದೂಸ್ತಾನೀ ಸಂಗೀತದ ಕಾಫೀಥಾಟನ್ನು ಹೋಲುತ್ತದೆ. ಸಾಮವೇದದ ಸ್ವರಗಳನ್ನು ಮಂದ್ರ, ಮಧ್ಯ, ತಾರಗಳೆಂಬ ಮೂರು ಸ್ಥಾಯಿಗಳಲ್ಲಿ ಅಡಗಿಸಿರುವುದು ಪ್ರತಿ ಶಾಖೆಯಲ್ಲೂ ಕಂಡುಬರುತ್ತದೆ. ಸಾಮವೇದದ ಸಂಗೀತದಲ್ಲಿ ಮೊದಲಿನ ನಾಲ್ಕು ಸ್ವರಗಳು ಮೊದಲ ಹಂತದಲ್ಲೂ, ಮಿಕ್ಕವು ಎರಡನೆಯ ಹಂತದಲ್ಲೂ ಮಾನ್ಯತೆ ಪಡೆದುವು ಎನ್ನಬಹುದು. ಸಾಮಗಾನದಲ್ಲಿ ಬರುವ ಏಳು ಸ್ವರಗಳು ಕೊಳಲಿನ ಈ ಸ್ವರಗಳನ್ನು ಹೋಲುತ್ತವೆ:—ಮ ಗ ರಿ ಸ ನಿ ಧ ಪ (ಮ ಗ ರಿ ಸ ಧ ನಿ ಪ). (ಯಃ ಸಾಮಗಾನಾಂ ಪ್ರಥಮಃ ಸ ವೇಣೋರ್ಮಧ್ಯಮಃ ಸ್ವರಃ — ನಾರದೀಯ ಶಿಕ್ಷಾ) ಇದು ನಿಧನ ಪ್ರಕೃತಿ ಅಥವಾ ಅವರೋಹಣ ಕ್ರಮದಲ್ಲಿದೆ.

ಮಹಾಭಾಷ್ಯದಲ್ಲಿ ಸಾಮಗಾನವು ಅನೇಕ ವಿಧವಾಗಿದ್ದಿತು ಎಂದು ಹೇಳಿದೆ. ಆದರೆ ಕಾಲಾನುಕ್ರಮದಲ್ಲಿ ಈ ಶಾಖೆಗಳು ಅಳಿದುಹೋಗಿವೆ. ಪುರಾತನ ಗ್ರಂಥಗಳಲ್ಲಿ (ವಂಶಬ್ರಾಹ್ಮಣ) ಹದಿಮೂರು ಸಾಮಗಾಚಾರ್ಯರನ್ನೂ (ರಾಣಾಯನೀ, ಸಾಕ್ಯಮುಗ್ರಿ, ವ್ಯಾಸ, ಭಾಗುರೀ, ಔಲುಂಡೀ, ಗೌಗ್ಲವಿ, ಭಾನುಮಾನ್, ಔಪಮನ್ಯವ, ದಾರಾಲ, ಗಾರ್ಗ್ಯಸಾವರ್ಣೀ, ವರ್ಷಗಣ್ಯ, ಕುಥುಮಿ, ಶಾಲಿಹೋತ್ರ, ಜೈಮಿನಿ,) ಮತ್ತು ಹತ್ತು ಪ್ರವಚನಕಾರರನ್ನೂ [ಶಟಿ, ಭಾಲ್ಲವೀ, ಕಾಲಭವೀ, ತಾಂಡ್ಯ, ವೃಷಾಣಕ, ರುರುಕಿ, ಅಗಸ್ತ್ಯ, ಬಟುಕಶಿರ, ಶಮಬಾಹು, ಕುಹು (ಹುಹು)] ಹೆಸರಿಸಿದೆ. ಈಗ ಕೇವಲ ಜೈಮಿನೀಯ, ಕೌಥುಮ, ಮತ್ತು ರಾಣಾಯನೀಯ ಎಂಬ ಮೂರು ಶಾಖೆಗಳು ಉಳಿದಿವೆ. ರಾಣಾಯನೀಯರು ತಮಿಳುನಾಡಿನ ಕಾಂಚೀಪುರ–ವೇಲಾಂಬೂರ್ ಪ್ರದೇಶ, ಕರ್ನಾಟಕದ ಮೈಸೂರು, ಬೆಂಗಳೂರು, ಗೋಕರ್ಣ, ಉಡುಪಿ, ಉತ್ತರ ಭಾರತದ ಜಯಪುರ ಮತ್ತು ಮಥುರಾ, ಜೈಮಿನೀಯರು ಅಥವಾ ತಳವಕಾರರು ತಮಿಳುನಾಡು ಮತ್ತು ಕೇರಳ, ಕೌಥುಮರು ಗುಜರಾತ್, ತಮಿಳುನಾಡು, ಉತ್ತರ ಪ್ರದೇಶ ಮತ್ತು ಕರ್ನಾಟಕ ಮುಂತಾದ ಕಡೆ ಹೆಚ್ಚಾಗಿದ್ದಾರೆ. ಸಾಮಗಾನದ ಮೇಳವು ಹೆಚ್ಚಾಗಿ ಔಡವಮೇಳವಾಗಿದೆ. ಔಡವ ಮೇಳವು ಜನಪದ ಸಂಗೀತದಲ್ಲೂ, ಪುರಾತನ ಗ್ರೀಸಿನ ಸಂಗೀತದಲ್ಲೂ (F E D C B A G) ಜನಪ್ರಿಯವಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಕೇರಳ

ಮತ್ತು ತಮಿಳುನಾಡಿನ ಕೆಲವು ಪ್ರದೇಶಗಳಲ್ಲಿರುವ ಜೈಮಿನೀಯ ಅಥವಾ ತಳವಕಾರ ಸಾಮದಲ್ಲಿ ಮೂರು ಸ್ವರಗಳಿರುವುದು ಕಂಡುಬರುತ್ತದೆ. ಶ್ರೀರಂಗದ ಜೈಮಿನೀಯ ಸಾಮದಲ್ಲಿ 'ಓಗ್ನಾಯಿ'ಯನ್ನು ಹಾಡುವಾಗ ನಾಲ್ಕು ಸ್ವರಗಳ ಬಳಕೆಯು ಕಂಡು ಬರುತ್ತದೆ.

ಸ್ವರವಿನ್ಯಾಸ: ಸಾಮವೇದದ ಸ್ವರಲಿಪಿಯು ಸಂಖ್ಯಾಸೂಚಕವಾದುದು. 1, 2, 3 ಇತ್ಯಾದಿ ಸಂಖ್ಯೆಗಳನ್ನು ಸಾಮದ ಸಾಹಿತ್ಯದ ಪದಗಳ ಮೇಲೆ ಬರೆದು ಅವುಗಳ ಸ್ವರಗಳನ್ನು ಸೂಚಿಸಲಾಗಿದೆ. ಬೆರಳೆಣಿಕೆ ಕ್ರಮದಲ್ಲಿ ಸ್ವರವಿನ್ಯಾಸವನ್ನು ತೋರಿಸುವ ಪರಿಪಾಠವಿದೆ. ಸಾಮಗಾನದ ಮೇಳದ ಮೇಲೆ ಈ ರೀತಿ ಸಂಖ್ಯೆಗಳನ್ನು ಬರೆಯಬಹುದು.

1	2	3	4	5	6	7
ಮ	ಗ	ರಿ	ಸ	ನಿ	ಧ	ಪ

ಮೊದಲ ಅಕ್ಷರದ ಮೇಲೆ ಬರೆದಿರುವ ಸಂಖ್ಯೆಯು ಸೂಚಿಸುವ ಸ್ವರವೇ ಆ ಸಾಮದ ಆಧಾರಸ್ವರ. ಒಂದೇ ಅಕ್ಷರದ ಮೇಲೆ ಎರಡು ಸಂಖ್ಯೆಗಳಿದ್ದರೆ ಅದನ್ನು ಎರಡು ಸ್ವರಗಳಲ್ಲಿ ಹಾಡಲಾಗುವುದು. ಅಕ್ಷರದ ಮೇಲೆ 'ರ' ಎಂದು ಸಂಖ್ಯೆಯೊಡನೆ ಬರೆದಿದ್ದರೆ ಅದು ದೀರ್ಘಸ್ವರ ಮತ್ತು ಎರಡು ಮಾತ್ರೆಗಳಲ್ಲಿ ಹಾಡಬೇಕೆಂದು, ಒಂದು ಅಕ್ಷರದ ಮೇಲೆ ಅವಗ್ರಹ ಚಿಹ್ನೆ ಇದ್ದರೆ ಅದು ಎರಡು ಮಾತ್ರೆಗಳನ್ನು ಸೂಚಿಸುತ್ತದೆ. ಸಾಮಗಾಯಕನು ತನ್ನ ಬಲಗೈಯನ್ನು ಹಾಡಿನ ಸ್ವರವಿನ್ಯಾಸವನ್ನು ತೋರಿಸಲು ಮತ್ತು ಗೊತ್ತುಮಾಡಿಕೊಳ್ಳಲು ಬಳಸುತ್ತಾನೆ. ಹೆಬ್ಬೆರಳಿನ ಮಧ್ಯರೇಖೆಯು 1 ಅಥವಾ ಮಧ್ಯಮವನ್ನು, ತೋರುಬೆರಳಿನ ಮಧ್ಯರೇಖೆಯು 2 ಅಥವಾ ಗಾಂಧಾರವನ್ನೂ, ಮಧ್ಯದ ಬೆರಳಿನ ಮಧ್ಯರೇಖೆಯು 3 ಅಥವಾ ರಿಷಭವನ್ನೂ, ಉಂಗುರದ ಬೆರಳಿನ ಮಧ್ಯರೇಖೆಯು 4 ಅಥವಾ ಷಡ್ಜವನ್ನೂ, ಕಿರುಬೆರಳಿನ ಮಧ್ಯರೇಖೆಯು 5 ಅಥವಾ ನಿಷಾದವನ್ನೂ, ಅದೇ ಬೆರಳಿನ ಕೊನೆಯ ರೇಖೆಯು 6 ಅಥವಾ ಧೈವತವನ್ನು, ಹೆಬ್ಬೆರಳಿನ ತುದಿಯು 7 ಅಥವಾ ಪಂಚಮ ವನ್ನು ಸೂಚಿಸುತ್ತದೆ. ಹೀಗೆ ಮಾಡುವುದರಿಂದ ಸಾಮದ ಸ್ವರಗಳನ್ನು ನೆನಪಿನಲ್ಲಿಟ್ಟು ಕೊಳ್ಳಲು ಅನುಕೂಲ. ಆದ್ದರಿಂದ ಬಲಗೈಯನ್ನು ಗಾತ್ರವೀಣಾ ಎಂದು ಹೆಸರಿಸಿ ದ್ದಾರೆ. ಸಾಮಗಾನದ ಸಂಖ್ಯಾಸೂಚಕವಾದ ಸ್ವರವಿನ್ಯಾಸಪದ್ಧತಿಯು ಈಗಿನ ಸ್ವರಲಿಪಿ ಪದ್ಧತಿಗೆ ಮೂಲವಾಗಿದೆ ಎನ್ನಲು ಅಡ್ಡಿಯಿಲ್ಲ.

ತಾಳ: ಸಾಮಗಾನದಲ್ಲಿ ಸ್ವರಲಾಸ್ಯವು ಛಂದಸ್ಸಿನ ರೂಪದಲ್ಲಿ ವ್ಯಕ್ತವಾಗಿದೆ. ಸಾಮಗಳು ಹೆಚ್ಚಾಗಿ ಗಾಯತ್ರೀ ಛಂದಸ್ಸಿನಲ್ಲಿವೆ. ಕೆಲವು ಅನುಷ್ಟುಪ್ ಮತ್ತು ಜಗತೀ ಮುಂತಾದ ಛಂದಸ್ಸಿನಲ್ಲಿವೆ. 24 ಅಕ್ಷರಗಳಿದ್ದರೆ ಅದು ಗಾಯತ್ರೀ ಛಂದಸ್ಸಾಗುತ್ತದೆ. ಸ್ವರಗಳ ಲಾಸ್ಯವು ಅವುಗಳ ಮಾತ್ರೆಯನ್ನು ಅನುಸರಿಸಿವೆ.

ಹ್ರಸ್ವವು ಒಂದು ಮಾತ್ರಾಕಾಲ, ದೀರ್ಘವು ಎರಡು ಮಾತ್ರಾಕಾಲ. ಪ್ಲುತವು ಮೂರು ಮಾತ್ರಾಕಾಲ. ಸಾಮದಲ್ಲಿ ಪ್ರಯೋಗವಾಗಿರುವ ಎಲ್ಲ ತರದ ಅವಾಂತರ ಸ್ವರಗಳಿಗೂ ಪ್ರತ್ಯೇಕವಾದ ಸ್ವರವಿನ್ಯಾಸವಿದೆ. ಸಾಮಗಾನದ ಕಾಲಪ್ರಮಾಣವನ್ನು ಎರಡು ವಿಧವಾದ ರೀತಿಯಲ್ಲಿ ತೋರಿಸುತ್ತಿದ್ದರು. ಒಂದು ಸಶಬ್ದ ಕ್ರಿಯೆ–ಚಪ್ಪಾಳೆ ಹೊಡೆಯುವುದು ; ಮತ್ತೊಂದು ನಿಶ್ಶಬ್ದಕ್ರಿಯೆ–ಕೈಯನ್ನು ಸ್ವಲ್ಪ ಬೀಸುವುದು. ಈ ಕ್ರಮವು ಸಂಗೀತದಲ್ಲಿ ಕಾಲಕ್ರಮದಲ್ಲಿ ತಾಳಪದ್ಧತಿಯಾಗಿ ಬೆಳೆಯಿತು.

ಇದಲ್ಲದೆ ಒಂದೊಂದು ಸಾಮವೂ ಬೇರೆ ಬೇರೆ ಸ್ವರಗಳಿಂದ ಆರಂಭವಾಗುವುದ ರಿಂದ ಇದು ಮೂರ್ಛನಪದ್ಧತಿಗೆ ಆಧಾರವಾಗಿ, ಇದರಿಂದ ಕಾಲಾನುಕ್ರಮದಲ್ಲಿ 'ಜಾತಿ'ಗಳೂ, ಜಾತಿಗಳಿಂದ ರಾಗಗಳಿಗೆ ದಾರಿಯಾಯಿತು. ಸ್ವರಗಳು ಏಳು, ಗ್ರಾಮಗಳು ಮೂರು, ಮೂರ್ಛನಗಳು ಇಪ್ಪತ್ತೊಂದು, ತಾನಗಳು ಐವತ್ತೊಂದು ಹೀಗೆ ಸ್ವರಮಂಡಲವು ಯುಕ್ತವಾಗಿದೆ ಎಂದು ನಾರದೀಯ ಶಿಕ್ಷಾದಲ್ಲಿ ಹೇಳಿದೆ (ಸಪ್ತಸ್ವರಾಃ ತ್ರಯೋ ಗ್ರಾಮಾಃ ಮೂರ್ಛನಾಸ್ತ್ವೇಕ ವಿಂಶತಿಃ । ತಾನಾ ಏಕೋನ ಪಂಚಾಶದಿತ್ಯೇತ ಸ್ವರಮಂಡಲಮ್ ॥).

ಗಾನಕಾಲ : ಉಷ್ಣಾಂಶ. ವಾತಾವರಣದ ಸ್ಥಿತಿ, ನಮ್ಮ ದೇಹ ಹಾಗೂ ನರಮಂಡಲದ ಮೇಲೆ ಆಗುವ ಅನುಕೂಲ ಪ್ರತಿಕೂಲಗಳನ್ನು ಗಮನಿಸಿ ಯಾವ ಕಾಲದಲ್ಲಿ ಯಾವ ಸಾಮವನ್ನು ಹಾಡಿದರೆ ದೋಷವಿಲ್ಲದೆ ಸುಶ್ರಾವ್ಯವಾಗಿ ಮೂಡಿ ಬರುತ್ತದೆ ಮತ್ತು ಒಳ್ಳೆಯದು ಎಂಬುದನ್ನು ನಮ್ಮ ಋಷಿವರ್ಯರು ಮನಗಂಡು ಗಾನಗಳನ್ನು ಕಾಲಾನುಕ್ರಮವಾಗಿ ವಿಭಾಗಿಸಿದ್ದಾರೆ. ಕೆಲವು ಸಾಮಗಳು ಪ್ರಾತಃಕಾಲ ದಲ್ಲಿ ಹಾಡತಕ್ಕವು (ಬಹಿಷ್ಪವಮಾನ ಸ್ತೋತ್ರಗಳು), ಕೆಲವು ಬೆಳಗಿನ ಜಾವದಲ್ಲಿ ಹಾಡತಕ್ಕವು, ಕೆಲವು ಮಧ್ಯಾಹ್ನ ಹಾಡತಕ್ಕವು (ಪೃಷ್ಠ ಸ್ತೋತ್ರಗಳು), ಕೆಲವು ಸಂಜೆ ಹಾಡತಕ್ಕವು (ಆರ್ಭವ ಪವಮಾನ ಸ್ತೋತ್ರಗಳು) ಮತ್ತು ಕೆಲವು ರಾತ್ರಿ ಯಲ್ಲಿ ಹಾಡತಕ್ಕವು. ಈ ಬಗ್ಗೆ ವಿವರಗಳನ್ನು ತಾಂಡೀ ಬ್ರಾಹ್ಮಣದಲ್ಲಿ ಹೇಳಿದೆ.

ಈ ಕ್ರಮವು ಸಂಗೀತದಲ್ಲೂ ರೂಢಿಗೆ ಬಂದಿತು ಎಂಬುದು ಗಮನಾರ್ಹ. ಉದಾ : ಬೆಳಗಿನ ಜಾವದಲ್ಲಿ ಹಾಡಬಹುದಾದುವು—ಭೂಪಾಲಿ, ಭೌಳಿ, ಮಲಯ ಮಾರುತ ಇತ್ಯಾದಿ ; ಬೆಳಗ್ಗೆ ಹಾಡತಕ್ಕವು :—ಬಿಲಹರಿ, ಧನ್ಯಾಸಿ, ಕೇದಾರ ಇತ್ಯಾದಿ ; ಮಧ್ಯಾಹ್ನ ಹಾಡತಕ್ಕವು :—ಶ್ರೀರಾಗ, ಮಧ್ಯಮಾವತಿ ಇತ್ಯಾದಿ ; ಸಾಯಂಕಾಲ ಹಾಡತಕ್ಕವು—ವಸಂತ, ನಾಟಕುರಂಜಿ, ಪೂರ್ವೀಕಲ್ಯಾಣಿ ಇತ್ಯಾದಿ ; ಸಾರ್ವಕಾಲಿಕ ರಾಗಗಳು—ಭೈರವಿ, ಶಂಕರಾಭರಣ, ಕಲ್ಯಾಣಿ. ಆರಭಿ ಇತ್ಯಾದಿ.

ದೀರ್ಘರಚನೆಗಳು : ಸಾಮವೇದದಲ್ಲಿ ಹಲವು ದೀರ್ಘರಚನೆಗಳಿವೆ. ಕೆಲವನ್ನು ಹಾಡಲು ಸುಮಾರು 30 ನಿಮಿಷಗಳು ಬೇಕಾಗುತ್ತದೆ. ಉದಾ : ರಾಜಸಾಮ, ಮಹಾವೈಶ್ವಾನರಸಾಮ, ಕಶ್ಯಪ ಪುಚ್ಛಸಾಮ ಇತ್ಯಾದಿ. ಕೆಲವು ಸಾಮಗಳ ಗುಂಪನ್ನು

ಹಾಡಲು ಹೆಚ್ಚು ಕಾಲಾವಕಾಶ ಬೇಕು. ಈ ರೀತಿಯ ಗಾನಗಳನ್ನು ಸಮೂಹವಾಗಿ ವಿಸ್ತಾರವಾಗಿ ಹಾಡಲು 2–3 ಗಂಟೆಗಳ ಕಾಲಾವಕಾಶ ಬೇಕಾಗುತ್ತದೆ. ಸಂಗೀತದಲ್ಲೂ ಸಹ ಇಂತಹ ದೀರ್ಘವಾದ ರಚನೆಗಳಿವೆ. ರಾಮಸ್ವಾಮಿ ದೀಕ್ಷಿತರ 108 ರಾಗತಾಳಮಾಲಿಕೆ ಮತ್ತು ಮಹಾವೈದ್ಯನಾಥ ಅಯ್ಯರ್‌ರವರ 72 ಮೇಳ ರಾಗಮಾಲಿಕೆ ಇವುಗಳನ್ನು ಹಾಡಲು 2 ಗಂಟೆಗಳಿಗೂ ಹೆಚ್ಚು ಕಾಲಾವಕಾಶ ಬೇಕೆಂದು ವಿದ್ವಾಂಸರ ಅಭಿಪ್ರಾಯ. ಇವಲ್ಲದೆ ಮುತ್ತುಸ್ವಾಮಿ ದೀಕ್ಷಿತರ ಚತುರ್ದಶ ರಾಗಮಾಲಿಕಾ ಮತ್ತು 27 ರಾಗಗಳಲ್ಲಿರುವ ನಕ್ಷತ್ರರಾಗಮಾಲಿಕೆ—ಇಂತಹ ದೀರ್ಘ ರಚನೆಗೆ ಉದಾಹರಣೆ. ಇದರಿಂದ ಸಂಗೀತದ ರಚನೆಗಳ ಮೇಲೂ ಸಾಮವೇದದ ಪ್ರಭಾವ ಎಷ್ಟರಮಟ್ಟಿನದು ಎಂಬುದನ್ನು ಕಾಣಬಹುದು.

ರಸ: 'ಋಚಃ ಸಾಮರಸಃ ಸಾಮ್ನ ಉದ್ಗೀಥೋ ರಸಃ' ಎಂದು ಛಾಂದೋಗ್ಯ ಉಪನಿಷತ್ತು ಹೇಳುತ್ತದೆ (1–1–2), 'ಗೀತಿಸಾರತ್ವಾತ್ಸಾಮ್ನಾಮಿತಿ ಭಾವಃ, ಶ್ರಾವತ್ವಾತ್ಸಾರ ಇತ್ಯರ್ಥಃ' ಎಂದು ರಂಗರಾಮಾನುಜಾರ್ಯ ಭಾಷ್ಯದಲ್ಲಿ ಹೇಳಿದೆ. ಹಾಗೆಯೇ 'ಸ ಏಷ ರಸಾನಾಂ ರಸತಮಃ ಪರಮಃ' ಎಂಬುದಕ್ಕೆ 'ಓಂಕಾರಃ ರಸತಮಃ ಪರಮಃ' ಎಂದು ವ್ಯಾಖ್ಯಾನಿಸಿದ್ದಾರೆ. ಈ ಪರಮಶ್ರೇಷ್ಠವಾದ ರಸವನ್ನು ಪಡೆಯಲು ಎಲ್ಲಾ ಸ್ವರಗಳನ್ನೂ ಘಂಟಾಘೋಷವಾಗಿ ಮತ್ತು ಬಲವಾಗಿ ಉಚ್ಚರಿಸಬೇಕು, ಊಷ್ಮವರ್ಣಗಳನ್ನು ಒಳಗೆ ನುಂಗದೆ, ಹೊರಗೆ ಹಾಕದೆ ಸುಸ್ಪಷ್ಟವಾಗಿ ಉಚ್ಚರಿಸಬೇಕು ಮತ್ತು ಎಲ್ಲಾ ಸ್ಪರ್ಶಗಳನ್ನು ಮೃದುವಾಗಿ ಒಂದಕ್ಕೊಂದು ಕೂಡದ ಹಾಗೆ ಉಚ್ಚರಿಸಬೇಕು ಎಂದು ಹೇಳಿರುವುದನ್ನು ಗಮನಿಸಿದರೆ ಗಾನರಸಸಿದ್ಧಿಗೆ ಪ್ರಾಮುಖ್ಯ ಇರುವುದು ತಿಳಿಯುತ್ತದೆ. ಇದು ಗಾನರಸ ವಿವೇಕಕ್ಕೆ ದಾರಿಯಾಯಿತು ಎನ್ನಬಹುದು.

ಸಾಮಗಳ ಉಪಾಸನೆ ಮಾಡುವವನು ಯಾವ ರೀತಿ ಅತ್ಯಂತ ಜಾಗರೂಕನಾಗಿ ಸ್ತುತಿಸಬೇಕು, ಸಾಮ–ಉಪಾಸಕ ಇವೆರಡರ ತಾದಾತ್ಮ್ಯಭಾವವನ್ನು ಹೊಂದಿರುವುದು ಹೇಗೆ ಮುಖ್ಯವಾದುದು, ಸ್ವರಗಳನ್ನು ಯಾವ ರೀತಿ ಉಚ್ಚರಿಸಬೇಕು: ಹೀಗೆ ಗಾನ ಮಾಡುವುದರಿಂದ ಪೂರ್ಣಾಯುಸ್ಸನ್ನು ಹೊಂದುತ್ತಾನೆ, ಉಜ್ವಲವಾಗಿ ಜೀವಿಸುತ್ತಾನೆ, ಕೀರ್ತಿಯಿಂದ ಮಹಾನ್ ಆಗುತ್ತಾನೆ ಎಂಬುದಾಗಿ ಸಾಮಗಾನದ ಫಲಗಳನ್ನು ಛಾಂದೋಗ್ಯವು ಹೇಳುತ್ತದೆ. ಇದು ಗಾಯಕನ ಗುಣಗಳು ಯಾವುದಾಗಿರಬೇಕು ಎಂಬ ವಿವೇಚನೆಗೆ ಮೂಲವಾಗಿದೆ. ಆರೋಗ್ಯಭಾಗ್ಯವನ್ನು ಹೊಂದಲು, ದೀರ್ಘಾಯುಸ್ಸಿಗೆ, ರೋಗಶಮನಕ್ಕೆ, ಭಯ ನಿವಾರಣೆ ಇತ್ಯಾದಿಗಳಿಗೆ ಸಾಮವೇದದಲ್ಲಿ ಅನೇಕ ಪ್ರಯೋಗಗಳನ್ನು ವಿಶ್ಲೇಷಿಸಿದ್ದಾರೆ. ಸಾಮವಿಧಾನ ಬ್ರಾಹ್ಮಣದಲ್ಲಿ ಇವನ್ನು ಕುರಿತು ಹೇಳಿದೆ. ನಾದಬ್ರಹ್ಮವಾದ ಗಾನತರಂಗಗಳು ಅಲೆಅಲೆಯಾಗಿ ಸೂಕ್ಷ್ಮತರಂಗಗಳಾಗಿ ಸರ್ವದರಲ್ಲೂ ವ್ಯಾಪಿಸುವ ಚಿರಶಕ್ತಿಯುಳ್ಳದ್ದಾಗಿವೆ. ಇದರ ಪ್ರಭಾವವು ಅನೇಕ ಕಾಲ ನಿಲ್ಲಬಹುದಾದ ಸಾಮರ್ಥ್ಯವನ್ನು

ಹೊಂದಿದೆ. ನರಮಂಡಳಗಳ ಮೇಲೆ ಇದರ ಸ್ಪಂದನಗಳು ವಿಶಿಷ್ಟ ಪರಿಣಾಮವನ್ನು ಬೀರುತ್ತವೆ. ಸಾಮಗಾನದ ವೈಶಿಷ್ಟ್ಯವನ್ನು ಕಂಡುಕೊಂಡಿದ್ದ ಪೂರ್ವಿಕರು ಇದನ್ನು ಸಂಮೋಹನ ವಿದ್ಯೆಯಾಗಿ ಪ್ರಯೋಗಿಸುತ್ತಿದ್ದರು. ನಾನಾ ತರದ ಕಾಮನಾಸಿದ್ಧಿಗೆ ಜೀವನದ ಪ್ರತಿಹಂತದ ಉಪಯೋಗಕ್ಕೆ ಸಾಮವೇದವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದಕ್ಕೆ ನಿದರ್ಶನಗಳಿವೆ. ಸಂಗೀತದಲ್ಲೂ ಮಳೆಗಾಗಿ ಮೇಘಮಲ್ಹಾರ ರಾಗ, ಅಮೃತವರ್ಷಿಣಿ ರಾಗ, ದೀಪವನ್ನು ಪ್ರಜ್ವಲಿಸಲು ದೀಪಕ ರಾಗ, ಬದುಕಿಸಲು ಬಿಲಹರಿ ರಾಗಗಳನ್ನು ತಾನ್‌ಸೇನ್, ಮುತ್ತುಸ್ವಾಮಿ ದೀಕ್ಷಿತರು, ತ್ಯಾಗರಾಜರು ಹಾಡಿದ ನಿದರ್ಶನಗಳಿವೆ. ಮೈಸೂರಿನ ಬಿಡಾರಂ ಕೃಷ್ಣಪ್ಪನವರು ಬುದ್ಧಿಸ್ವಾಸ್ಥ್ಯವನ್ನು ಕಳೆದುಕೊಂಡಿದ್ದ ಆಳ್ವಾರ್ ಚೆಟ್ಟಿಯಾರ್ ಎಂಬವರ ಮುಂದೆ ಮದ್ರಾಸಿನಲ್ಲಿ 15 ದಿನಗಳ ಕಾಲ ಹಾಡಿ ಅವರು ಬುದ್ಧಿಸ್ವಾಸ್ಥ್ಯವನ್ನು ಪಡೆದುಕೊಳ್ಳುವಂತೆ ಮಾಡಿದರು ಎಂಬುದು ಇತ್ತೀಚಿನ ಒಂದು ನಿದರ್ಶನ.

ಒಟ್ಟಿನಲ್ಲಿ ಹೇಳುವುದಾದರೆ ಮಾರ್ಗೀ ಸಂಗೀತವು ಧಾರ್ಮಿಕ ವಿಧಿಗೆ ಸಾಧನವಾಗಿ ವೈದಿಕ ನಿಯಮಗಳ ಚೌಕಟ್ಟಿನಲ್ಲಿ ರೂಪುಗೊಂಡಿತು. ದೇಶೀ ಸಂಗೀತದ ಪ್ರಭಾವಕ್ಕೆ ಒಳಗಾಗಿ ಲೌಕಿಕ ಮನೋರಂಜನೆಯ ಸಂದರ್ಭಗಳಿಗನುಗುಣವಾಗಿ ಬೆಳೆಯಿತು. 'ಎಲ್ಲಾ ವರ್ಗಗಳ ಅಭಿಲಾಷೆ, ಆಶೋತ್ತರಗಳನ್ನು, ವಿವಿಧ ಕಾಲದ ಜನಪ್ರಿಯವಾದ ಸಂಪ್ರದಾಯಗಳನ್ನು ವೇದಗಳ ಋಕ್ಕುಗಳು ಪ್ರತಿಬಿಂಬಿಸುತ್ತವೆ' ಎಂದು ಪ್ರೊ॥ ಎ. ಹಿಲ್ಲೆಬ್ರಾಂಟ್ ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು. ಪಲ್ಲವಿ, ಅನುಪಲ್ಲವಿ, ಚರಣ ಇವುಗಳ ಸ್ವರಲಿಪಿ ಪದ್ಧತಿ, ಗಮಕವಾಚನ, ಗೋಷ್ಠಿಗಾನ, ತಾಳವಿನ್ಯಾಸ, ಮನೋಧರ್ಮ ಸಂಗೀತ, ಆವರ್ತದ ಕಲ್ಪನೆ, ವಿಳಂಬ ಕಾಲದ ಎಣಿಕೆ, ಮೂರ್ಛನೆ, ಜಾತಿಗಳು ಮತ್ತು ರಾಗಗಳ ಬೆಳವಣಿಗೆ, ಧ್ವನಿ ಮತ್ತು ರಸವಿವೇಕ, ಇತ್ಯಾದಿ ಗಾನಲೋಕವು ಅನೇಕ ರೀತಿಯಲ್ಲಿ ವಿಕಾಸಗೊಂಡು ಪ್ರತಿಯೊಂದು ಹಂತದ ಮೂಲವನ್ನು ಸಾಮವೇದದಲ್ಲಿ ಕಾಣಬಹುದು ಎಂಬುದು ಸುಸ್ಪಷ್ಟವಾಗುತ್ತದೆ. ಆದ್ದರಿಂದಲೇ ಪ್ರತಿಯೊಂದು ಸಂಗೀತ ಶಾಸ್ತ್ರ ಗ್ರಂಥದಲ್ಲಿ 'ಸಾಮವೇದಾದಿದಂ ಗೀತಂ ಸಂಜಗ್ರಾಹ ಪಿತಾಮಹಃ ।' ಎಂದು ಹೇಳಿರುವುದಲ್ಲದೆ ಸದ್ಗುರು ತ್ಯಾಗರಾಜರು 'ಸಾಮನಿಗಮಜ ಸುಧಾಮಯಗಾನ' ಎಂದು ಹಾಡಿದ್ದಾರೆ.

ಆಧುನಿಕ ಪದ್ಧತಿಯಂತೆ ಒಂದೆರಡು ಸಾಮಗಳ ಸಂಖ್ಯಾಪದ್ಧತಿಯನ್ನು ಅನುಸರಿಸಿ ಗುರುತಿಸಬಹುದು :—

1. **ಸಾವಿತ್ರ್ಯಸಾಮ** (ರಾಣಾಯನೀಯ)

ಓಂ ತತ್ಸವಿತುರ್ವರೇಣಿಯೋಂ — ಭಾರ್ಗೋದೇವಸ್ಯ ಧೀಮಾಹೀ ೨ — ಧಿಯೋ
ಯೋನಃ ಪ್ರಾಜೊ 1212—ಹಿಂ—ಆ 2—ದಾಯೊ—ಆ 3 4 5 – – –

2. **ಶ್ರೀಸೂಕ್ತಂ (ರಾಣಾಯನೀಯಂ)**

ಓಂ ಶ್ರಾಯಂತ ಇವ ಸೂ 4 ರಾಯಿಗಾಂ — ವಿಶ್ವಾ 2 ಇದಿಂದ್ರಾ 2 — ಸ್ಯ ಭಾ 2

ಕ್ಷಾ ತಾ — ವಾ ಸೂ ನೀ ಜಾ ತೊ ಜಾ ನೀ ಮಾ — ನಿ ಯೊ ಜಾ । ಸಾ 2 —

ಪ್ರ ತಿ ಭಾ ಗಂ ನಾ ದೀ 2 ಧಿ ಮಾಃ — ಮಾ 33 ತೀ — ಥಾ ಗಾ ನಾ 3 ದಾ —

ಓಂ — ಧೀ ಮಾ 3 ಃ — ಓ 2 3 4 ವಾ — ಶ್ರಿ ಯೊ 3 1 - - -

ಸಪ್ತಸ್ವರೈಸ್ಸಮಸ್ತಂ ಯೋ ಜಗದೇತಚ್ಚರಾಚರಮ್ ।
ಸಂಜೀವಯತಿ ವಿಶ್ವಾತ್ಮಾ ಸ ನೋ ವಿಷ್ಣುಃ ಪ್ರಸೀದತು ॥

(ಸಪ್ತಸ್ವರಗಳು ಜಗತ್ತಿನ ಸಕಲ ಜೀವರಾಶಿಗಳ ಜೀವಸ್ವರೂಪವು. ವಿಶ್ವಕ್ಕೆ ಆತ್ಮಸ್ವರೂಪವಾಗಿರುವ ವಿಶ್ವವನ್ನೇ ಆಸನವಾಗಿ ಉಳ್ಳ ವಿಷ್ಣುವಿನ ಅನುಗ್ರಹವಾಗಲಿ.)

ಆಧಾರ ಗ್ರಂಥಗಳು :

1. ಛಾಂದೋಗ್ಯ ಉಪನಿಷತ್—ಸ್ವಾಮಿ ಆದಿದೇವಾನಂದ. ಶ್ರೀ ರಾಮಕೃಷ್ಣಾಶ್ರಮ, ಮೈಸೂರು–1980.

2. ಛಾಂದೋಗ್ಯ ಉಪನಿಷತ್ — (ಶ್ರೀಮದಾನಂದಗಿರಿ ಟೀಕಾಸಹಿತ ಶ್ರೀ ಶಂಕರ ಭಾಷ್ಯೇಣ ಶ್ರೀರಂಗರಾಮಾನುಜಾರ್ಯ ಭಾಷ್ಯೇಣ ಚ ಯುಕ್ತಾ). ಪರಿಶೋಧಿತ— ಚಕ್ರವರ್ತಿ ಅಯ್ಯಂಗಾರ್ ಮತ್ತು ನರಸಿಂಹಶಾಸ್ತ್ರಿ–ಮೈಸೂರು, 1900.

3. ನನ್ನ ಹಿರಿಯ ದೊಡ್ಡಪ್ಪನವರು ಮೇಲಾಂಬೂರ್ ವೆಂಕಟಾಚಾರ್ಯರ ಸಾಮವೇದ ಎಂಬ ಹಸ್ತಲಿಖಿತ ಗ್ರಂಥ (ಅಪ್ರಕಟಿತ)–1932.

4. ಓಂಕಾರಚಂದ್ರಿಕಾ (ಸಂಸ್ಕೃತ)—ವೆಂಕಟನಾರಾಯಣ ಭಟ್ಟರು (ಮಂಗುಂಡ್ರಿ), ಮೈಸೂರು–1885 (ಪ್ರಕಟಿತ).

ಬಸವಣ್ಣನ ವಚನಗಳಲ್ಲಿ ಸ್ಥಾವರ–ಜಂಗಮ ಪರಿಕಲ್ಪನೆ

—ಡಾ॥ ಪಿ. ವಿ. ನಾರಾಯಣ

ಉಳ್ಳವರು ಶಿವಾಲಯವ ಮಾಡುವರು ;
ನಾನೇನ ಮಾಡುವೆ ಬಡವನಯ್ಯಾ.
ಎನ್ನ ಕಾಲೇ ಕಂಭ, ದೇಹವೆ ದೇಗುಲ
ಶಿರವೆ ಹೊನ್ನ ಕಲಶವಯ್ಯಾ.
ಕೂಡಲಸಂಗಮದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ (820)

ಎಂಬ ಬಸವಣ್ಣನ ಪ್ರಸಿದ್ಧ ವಚನದ ಕೊನೆಯ ಸಾಲು, "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂಬ ಸೂತ್ರಬದ್ಧವಾದ ಸಾಲು, ಪ್ರಾಯಶಃ ಬಸವಣ್ಣನ, ಅಷ್ಟೇಕೆ, ಎಲ್ಲ ವಚನಕಾರರ ಹಾಗೂ ಅವರು ನಡೆಸಿದ ಚಳವಳಿಯ ಧ್ಯೇಯವಾಕ್ಯವೆನಿಸುತ್ತದೆ. ಎಂದರೆ, ಸಮಾಜದ ಬಗ್ಗೆ, ಜೀವನದ ಬಗ್ಗೆ ವಚನಕಾರರು ಮಾಡಿದ ಎಲ್ಲ ಚಿಂತನೆಗಳ ಸಾರವೇ ಈ ವಾಕ್ಯದಲ್ಲಿದೆ.

ಬಸವಣ್ಣನ ವಚನಗಳ ಆಶಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಸ್ಥಾವರ ಮತ್ತು ಜಂಗಮ ಶಬ್ದಗಳ ಅರ್ಥವು ಸೀಮಿತವಾದದ್ದಲ್ಲ ಎಂಬ ಅರಿವುಂಟಾಗುತ್ತದೆ. ಸ್ಥಾವರಲಿಂಗಪೂಜೆಯನ್ನು ತಿರಸ್ಕರಿಸಿದ ಬಸವಣ್ಣನು ಜಂಗಮವನ್ನು 'ನಡೆಲಿಂಗ'ವನ್ನಾಗಿ ಪರಿಭಾವಿಸಿದ್ದು ತುಂಬ ಸ್ಪಷ್ಟವಾಗಿದೆ. ಉಣ್ಣದ ಲಿಂಗಕ್ಕೆ ಬೋನವಿಕ್ಕುವ ಬದಲು ಉಣ್ಣುವ ಜಂಗಮಕ್ಕೆ ನೀಡುವುದರ ಅರ್ಥಪೂರ್ಣತೆಯನ್ನು ಆತ ಪ್ರತಿಪಾದಿಸಿದ್ದು ಸರಿಯೇ ಸರಿ. ಆದರೆ ಈ ಶಬ್ದಗಳ ಅರ್ಥಗಳು ತುಂಬ ವಿಶಾಲವಾದವು: ಒಟ್ಟು ಬಸವಣ್ಣನ ಜನಪರ ಭಾವನೆಗಳೆಲ್ಲ ಈ ಶಬ್ದಗಳ ಅರ್ಥವ್ಯತ್ಯಾಸಗಳನ್ನು ಮುಖಾಮುಖಿಯಾಗಿಸುವುದರಲ್ಲಿಯೇ ಹುದುಗಿವೆ. ಆ ಬಗ್ಗೆ ವಿವರಿಸುವುದೇ ಪ್ರಸ್ತುತ ಲೇಖನದ ಉದ್ದೇಶ.

ಸ್ಥೂಲವಾಗಿ ಹೇಳುವುದಾದರೆ, 'ಸ್ಥಾವರ'ವು ಎಲ್ಲ ಬಗೆಯ ಜನವಿರೋಧಿ ಮನೋಭಾವಕ್ಕೆ ಸಂಕೇತವಾಗಿಯೂ, 'ಜಂಗಮ'ವು ಬಸವಣ್ಣನು ಕಂಡರಿಸಿಕೊಂಡ ಜೀವಪರವಾದ ಧೋರಣೆಗೆ ಸಂಕೇತವಾಗಿಯೂ ನಿಲ್ಲುತ್ತವೆ. ಈ ಶಬ್ದಗಳಿಗೇ ಬಸವಣ್ಣ ನಾನಾರ್ಥಗಳನ್ನಿತ್ತಿದ್ದಾನೆ ಎಂಬುದು ನಮ್ಮ ಅರ್ಥವಲ್ಲ; ಆದರೆ ಬಸವಣ್ಣನ ಮಾತುಗಳ ಹಿನ್ನೆಲೆಯ ಅರ್ಥವೆಲ್ಲ ಎಷ್ಟೋ ಸಂದರ್ಭಗಳಲ್ಲಿ ಸ್ಥಾವರ-ಜಂಗಮಗಳ ಅರ್ಥವ್ಯತ್ಯಾಸದ ಮೂಲಕವೇ ನಡೆಯುತ್ತದೆ. 'ಸ್ಥಾವರ' ಎಂಬುದು ಕಲ್ಲುಲಿಂಗವನ್ನು ಹೇಗೆ ಸೂಚಿಸುತ್ತದೆಯೋ ಹಾಗೆಯೇ ಎಲ್ಲ ಜಡವಾದ, ಸಂವೇದನಾರಹಿತವಾದ ಜನವಿರೋಧಿಯಾದ ವಸ್ತು–ಆಲೋಚನೆ–ವ್ಯವಸ್ಥೆಗಳಿಗೆ ಸಂಕೇತ;

'ಜಂಗಮ' ತದ್ವಿರುದ್ಧವಾದ ಜೀವಪರವಾದ ಆಶಯಗಳಿಗೆ ಸಂಕೇತ. ಪರಸ್ಪರ ವಿರುದ್ಧವಾದ ಎರಡು ವಿಷಯಗಳನ್ನು ಮುಖಾಮುಖಿಯಾಗಿಸಿ, ಅವರಲ್ಲಿ ಜನಪರವಾದದ್ದರ ಪರವಾಗಿ ವಾದಿಸುವ ವೈಖರಿಯು ಆತನ ಹಲವಾರು ವಚನಗಳ ಅಭಿವ್ಯಕ್ತಿ ತಂತ್ರವಾಗುತ್ತದೆ. ಎಂದರೆ, ಪರಸ್ಪರ ವಿರುದ್ಧವಾದ ಎರಡು ವಿಷಯಗಳ ಬಗ್ಗೆ ಬಸವಣ್ಣ ಹೋಲಿಸಿ ಮಾತನಾಡುವಾಗ, ಆತನ ಮಾತಿನ ಹಿಂದೆ ಸ್ಥಾವರ-ಜಂಗಮಗಳ ಅರ್ಥವ್ಯತ್ಯಾಸವೇ ಕೆಲಸ ಮಾಡುತ್ತಿರುವಂತೆ ಓದುಗನಿಗೆ ಗೋಚರವಾಗುತ್ತದೆ.

ಬಸವಣ್ಣನ ವಚನಗಳಲ್ಲಿನ ನಡೆ-ನುಡಿ ಶಬ್ದಗಳ ಅರ್ಥವಿಸ್ತಾರದ ಕಡೆಗೆ ಮೊದಲು ಗಮನ ಹರಿಸೋಣ. ಕೆಳಗಿನ ಈ ಎರಡು ವಚನಗಳನ್ನು ಪರಿಶೀಲಿಸಿ:

ಎನ್ನ ನಡೆಯೊಂದು ಪರಿ; ಎನ್ನ ನುಡಿಯೊಂದು ಪರಿ
  ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ
ನುಡಿಗೆ ತಕ್ಕ ನಡೆಯ ಕಂಡಡೆ
  ಕೂಡಲಸಂಗಮದೇವನೊಳಗಿದ್ದನಯ್ಯಾ (30)

ಭಕ್ತಿಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ
  ನಡೆಯೊಳಗೆ ನುಡಿಯ ಪೂರೈಸುವೆ
ಮೇಲೆ ತೂಗುವ ತ್ರಾಸುಕಟ್ಟಳೆ ನಿಮ್ಮ ಕೈಯಲ್ಲಿ
  ಒಂದು ಜವೆ ಕೊರತೆಯಾದಡೆ
ಎನ್ನನದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ (440)

ನಡೆ-ನುಡಿಗಳ ತಾದಾತ್ಮ್ಯದ ಬಗ್ಗೆ ವಚನಕಾರನಿಲ್ಲಿ ವಿವರಿಸುತ್ತಿದ್ದಾನೆ. ಇವೆರಡರ ಸಾನುರೂಪದ ಬಗ್ಗೆಯೇ ಆತನ ಕಾಳಜಿ. ನುಡಿಯೆಂಬುದು ಮಾತನ್ನು ತಿಳಿಸುತ್ತದೆ: ಆ ಮಾತಿಗೆ ಅನುಗುಣವಾದ ನಡವಳಿಕೆಯಿರಬೇಕೆಂಬುದು ಇಲ್ಲಿನ ಆಶಯ. ಆದರೆ ನಡವಳಿಕೆ ಎಂಬುದು ಬಾಹ್ಯಕ್ರಿಯೆಯನ್ನು ಮಾತ್ರ ಸೂಚಿಸುತ್ತಿದೆಯೆಂದು ಅನ್ನಿಸುವುದಿಲ್ಲ. ಏಕೆಂದರೆ ಕ್ರಿಯೆ ಹೊರರೂಪ ಮಾತ್ರ: ಅದರ ಹಿನ್ನೆಲೆಗೆ ನಿಜವಾಗಿ ಕ್ರಿಯಾಶೀಲವಾಗಿರುವುದು ಅನುಭವ. ಆದ್ದರಿಂದ ಆಂತರ್ಯದ ಅನುಭವ ಮತ್ತು ಬಾಹ್ಯ ನುಡಿ ಇವುಗಳ ಪರಸ್ಪರ ಅನುರೂಪದಿಂದಿರಬೇಕೆಂಬುದೇ ಬಸವಣ್ಣನ ನಿಲವು. ಹಾಗಾಗಿ ಅಸಲಿಯಾದ ಅನುಭವ ಸದಾ ಹೊಸತು, ಜೀವಂತವಾದದ್ದು. ಅದೇ 'ಜಂಗಮ'; ದಿನನಿತ್ಯದ ವ್ಯಾವಹಾರಿಕ ಬಳಕೆಯಿಂದ ಜಡ್ಡುಗಟ್ಟಿದ ಮಾತು 'ಸ್ಥಾವರ'. ಹೊಸತೂ ಸ್ವಂತದ್ದೂ ಆದ ಅನುಭವದಿಂದ ಮಾತ್ರ ವ್ಯವಹಾರ ಜಡವಾದ ಭಾಷೆ ಆರ್ದ್ರವಾಗಿ ಹರಿಯಲು ಸಾಧ್ಯ. (ಅನುಭವ-ಅಭಿವ್ಯಕ್ತಿಗಳ ಪರಸ್ಪರ ಸಂಬಂಧದ ಬಗೆಗಿನ ಕಾವ್ಯಮೀಮಾಂಸಕ ಪರಿಕಲ್ಪನೆಯೂ ಇದೇ ಅಲ್ಲವೇ ?)

ಸಾಮಾಜಿಕ ಸ್ತರದಲ್ಲಿಯೂ ಬಸವಣ್ಣನ ಆಲೋಚನೆ ಸ್ಥಾವರ-ಜಂಗಮಗಳ ವೈರುದ್ಧ್ಯದ ಹಿನ್ನೆಲೆಯಲ್ಲಿಯೇ ನಡೆಯುತ್ತದೆ. ನಮ್ಮ ಸಮಾಜದ ಎರಡು

ತುದಿಗಳೆಂದರೆ, ಮೇಲ್ತುದಿಯಲ್ಲಿ ಬ್ರಾಹ್ಮಣ; ಕೆಳತುದಿಯಲ್ಲಿ ಅಂತ್ಯಜ— ಇವೆರಡರ ನಡುವೆಯೇ ಇಡೀ ಸಮಾಜ ನೆಲೆಗೊಂಡಿದೆ. ಹೀಗಾಗಿ ಇಡೀ ಸಮಾಜವನ್ನು ಸೂಚಿಸುವಾಗ ಬ್ರಾಹ್ಮಣನಿಂದ ಅಂತ್ಯಜನವರೆಗೆ ಎಂಬ ಪದಸಮುಚ್ಚಯವನ್ನು ಬಳಸುವುದು ವಾಡಿಕೆ. ಬಸವಣ್ಣನೂ ಇದಕ್ಕೆ ಹೊರತಲ್ಲ. ಶ್ರೇಣೀಕೃತ ಸಮಾಜದ ವಿವಿಧ ಸ್ತರಗಳ ನಡುವೆಯೂ ಪರಸ್ಪರ ವ್ಯತ್ಯಾಸಗಳಿರಬಹುದು. ಆದರೆ ಅದರ ಆತ್ಯಂತಿಕ ವ್ಯತ್ಯಾಸವೆಂದರೆ ಬ್ರಾಹ್ಮಣ–ಅಂತ್ಯಜ ಇವರ ನಡುವಣ ಸ್ಥಿತಿ. ಬ್ರಾಹ್ಮಣನು ಗೌರವ, ವಿದ್ಯೆ–ಇಂತಹ ಇತ್ಯಾತ್ಮಕ ಗುಣಗಳನ್ನು ಪಡೆದ 'ಉಳ್ಳವನ' ಸಂಕೇತ ಹೇಗೆಯೋ ಹಾಗೆಯೇ ಮಿಕ್ಕೆಲ್ಲರಿಗಿಂತ ಮೇಲೆನಿಸಿ, ಶಾಸ್ತ್ರದ ಓದಿತ– ಪೌರೋಹಿತ್ಯ, ಸಂಸ್ಕೃತ ಜ್ಞಾನ ಇವೆಲ್ಲದರಿಂದಾಗಿ ಶೋಷಕನ ಸಂಕೇತವೂ ಆಗುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ ಅಂತ್ಯಜನು ಶೋಷಿತನ ಸಂಕೇತ. ಸಮಾಜದ ಈ ಎರಡು ತುದಿಗಳು ಹೀಗೆ ಪರಸ್ಪರ ವಿರುದ್ಧವಾಗಿಬಿಡುತ್ತವೆ. ಬಸವಣ್ಣನು ಸಾಮಾಜಿಕ ನೆಲೆಯ ವ್ಯತ್ಯಾಸಗಳನ್ನು ಹೇಳುವಾಗ ಈ ಎರಡು ತುದಿಗಳ ನಡುವೆಯಿರುವ ಇತರ ವಿವಿಧ ಜಾತಿಗಳ ನಡುವಣ ವ್ಯತ್ಯಾಸಗಳನ್ನು ಹೇಳುವುದಿಲ್ಲ: ಅಂತಹ ಕಡೆ ಬ್ರಾಹ್ಮಣ–ಅಂತ್ಯಜರ ನಡುವಣ ಹೋಲಿಕೆಯನ್ನೇ ಹೇಳುತ್ತಾನೆ. ಅಂತಹ ಎಲ್ಲ ಸಂದರ್ಭಗಳಲ್ಲಿ ಬಸವಣ್ಣನು, ತಾನು ಬ್ರಾಹ್ಮಣನ (ಎಂದರೆ ಮೇಲ್ತುದಿ ಅಥವಾ ಶೋಷಕನ) ಪರವಾಗಿರದೆ ಅಂತ್ಯಜ (ಕೆಳತುದಿ ಅಥವಾ ಶೋಷಿತನ) ಪರವಾಗಿರುವುದನ್ನು ಸ್ಪಷ್ಟಪಡಿಸುತ್ತಾನೆ. ಈ ಕೆಳಗಣ ವಚನಗಳ ಅರ್ಥವನ್ನು ಗಮನಿಸಿ:

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
  ತರ್ಕದ ಬೆನ್ನ ಬಾರನೆತ್ತುವೆ
ಆಗಮದ ಮೂಗ ಕೊಯಿವೆ, ನೋಡಯ್ಯಾ
ಮಹಾದಾನಿ ಕೂಡಲಸಂಗಮದೇವಾ,
  ಮಾದರ ಚೆನ್ನಯ್ಯನ ಮನೆಯ ಮಗ ನಾನಯ್ಯಾ (716)

ನಾ ನಡೆವುದೆಲ್ಲ ಅನಾಚಾರ, ನಾ ನುಡಿವುದೆಲ್ಲಾ ಅವಿಚಾರ;
ನಡೆನುಡಿ ಶುದ್ಧವಿಲ್ಲದ ಅಪವಿತ್ರನ ತಂದು
  ನಿರ್ಮಳ್ಕದನಿಕ್ಕಿ ಸಲಹಿದಿರಾಗಿ, ಎನಗಿನ್ನಾರ ಭಯವೂ ಇಲ್ಲ.
ಕೂಡಲಸಂಗಮದೇವರ ಸಾಕ್ಷಿಯಾಗಿ,
  ಆಯ್ದಕ್ಕಿ ಮಾರಯ್ಯನ ಮನೆಯ ಮಗ ನಾನು (1160)

ಬಸವಣ್ಣ ಇಲ್ಲಿ ತನ್ನನ್ನು ಮಾದರ ಚನ್ನಯ್ಯ, ಆಯ್ದಕ್ಕಿ ಮಾರಯ್ಯನ ಮಗನಾಗಿ ಗುರುತಿಸಿಕೊಳ್ಳಲು ಮುಂದಾಗುತ್ತಿದ್ದಾನೆ. ಅವರು ಶೋಷಿತವರ್ಗಕ್ಕೆ ಸೇರಿದವರು: ತಾನು ಮೂಲತಃ ಶೋಷಕವರ್ಗದಿಂದ ಬಂದವನು: ಮೇಲೆ ಉಕ್ತವಾದ ಮೊದಲ ವಚನದಲ್ಲಿ ಹೇಳಿದ ವೇದ, ಶಾಸ್ತ್ರ, ತರ್ಕ, ಆಗಮ – ಇವುಗಳೊಡನೆ

ಸಂಬಂಧವನ್ನು ಪಡೆದ ವರ್ಗದಿಂದ ಬಂದವನು. ತನ್ನ ಪ್ರಜ್ಞೆಯಿಂದ ಹೊರತಾಗಿರುವ ತನ್ನ ಈ ಶೋಷಕ ಸಂಬಂಧವನ್ನು ಅದನ್ನು ಧಿಕ್ಕರಿಸುವುದರ ಮೂಲಕ ಹರಿದುಕೊಂಡು ತನ್ನನ್ನು ಶೋಷಕರೊಡನೆ ಸೇರಿಸಿಕೊಳ್ಳುತ್ತಿದ್ದಾನೆ, ಅವರ ನೋವುಗಳನ್ನು ತಾನು ಅನುಭವಿಸುವುದರ ಮೂಲಕ.

ಬಸವಣ್ಣನನ್ನು ತನ್ನ ಬ್ರಾಹ್ಮಣಮೂಲ ಎಷ್ಟೋ ವೇಳೆ ಕಾಡುತ್ತದೆ. ಅದು ಎರಡು ರೀತಿಯಲ್ಲಿ: ತಾನು ಬ್ರಾಹ್ಮಣನಾದ್ದರಿಂದ ಇತರರಿಗಿಂತ ಮೇಲೆಂಬ ಭಾವನೆ ಒಂದು ಕಡೆ. ಆದ್ದರಿಂದಲೇ ತಾನು ಇತರರಿಗಿಂತ ಮೇಲಲ್ಲ ಎಂದು ಪ್ರಜ್ಞಾಪೂರ್ವಕವಾಗಿಯೂ ಬಹಿರಂಗವಾಗಿಯೂ ಸಾರಿಕೊಳ್ಳುತ್ತಾನೆ. "ಆನು ಹಾರುವನೆಂದರೆ ಕೂಡಲಸಂಗಮದೇವ ನಗುವನಯ್ಯಾ". "ಉತ್ತಮ ಕುಲದಲ್ಲಿ ಹುಟ್ಟಿಹೆನೆಂಬ ಕಷ್ಟದ ಹೊರೆಯ ಹೊರಿಸದಿರಯ್ಯಾ" ಮುಂತಾದ ಮಾತುಗಳ ಮೂಲಕ ತನ್ನ ಮೇಲರಿಮೆಯನ್ನು ತುಳಿದುಕೊಳ್ಳುತ್ತಾನೆ. ಮತ್ತೊಂದು ಕಡೆ, ತಾನು ಶೋಷಕಜಾತಿಯಲ್ಲಿ ಹುಟ್ಟಿಬಂದೆನಲ್ಲ ಎಂಬ ತೀವ್ರ ಮುಜುಗರ ಅವನನ್ನು ಕಾಡುತ್ತದೆ.

ಅಪ್ಪನು ಡೋಹರ ಕಕ್ಕಯ್ಯನಾಗಿ, ಮುತ್ತಯ್ಯ ಚೆನ್ನಯ್ಯನಾದಡೆ
ಆನು ಬದುಕೆನೆ ?
ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ
ಭಕ್ತಿಯ ಸದ್ಗುಣವ ನಾನಱಿವೆನಯ್ಯಾ.
ಕಷ್ಟಜಾತಿಯ ಜನ್ಮದಲ್ಲಿ ಜನಿಸಿದೆ ;
ಎನಗಿದು ವಿಧಿಯೆ ! ಕೂಡಲಸಂಗಮದೇವಾ (342)

ಈ ವಚನದಲ್ಲಿ ತಾನು ಬ್ರಾಹ್ಮಣನೆಂಬ ಭಾವನೆಯಿಂದಾಗಿ ಬಸವಣ್ಣನು ಅನುಭವಿಸಿದ ಇರುಸುಮುರುಸು ವ್ಯಕ್ತವಾಗಿದೆ. ಇದಕ್ಕೆ ಕಾರಣವಾದ ಜಾತಿಯನ್ನು 'ಕಷ್ಟಜಾತಿ' ಎಂದು ಕರೆಯುತ್ತಾನೆ.[1] ಡೋಹರ ಕಕ್ಕಯ್ಯ. ಚೆನ್ನಯ್ಯಗಳ ವಂಶದಲ್ಲಿ (ಎಂದರೆ ಅಂತ್ಯಜರ) ಹುಟ್ಟಿದ್ದರೆ ತಾನು ಚೆನ್ನಾಗಿ ಬದುಕುತ್ತಿದ್ದೆ ಎಂಬ ಭಾವನೆ ಈ ವಚನದಲ್ಲಿ ವ್ಯಕ್ತವಾಗಿದೆ. ಈ ಮುಜುಗರದಿಂದ ಪಾರಾಗುವ ಏಕೈಕ ಮಾರ್ಗವೆಂದರೆ ಆ ಜಾತಿವಲಯದಿಂದಲೇ ತನ್ನನ್ನು ಪಾರುಮಾಡಿಕೊಂಡುಬಿಡುವುದು. ಈ ಮನೋಭಾವವು ಕೆಳಗಿನ ವಚನದಲ್ಲಿದೆ :

ಸೂಳೆಗೆ ಹುಟ್ಟಿದ ಕೂಸಿನಂತೆ
ಆರನಾದಡೆಯೂ 'ಅಯ್ಯಾ ಅಯ್ಯಾ' ಎನಲಾಱೆ.
ಚೆನ್ನಯ್ಯನೆಮ್ಮಯ್ಯನು ; ಚೆನ್ನಯ್ಯನ ಮಗ ನಾನು,
ಕೂಡಲಸಂಗನ ಮಹಾಮನೆಯಲ್ಲಿ
ಧರ್ಮಸಂತಾನ ಭಂಡಾರಿ ಬಸವಣ್ಣನು (346)[2]

1 ತಾನು ಬ್ರಾಹ್ಮಣಜಾತಿಯಲ್ಲಿ ಹುಟ್ಟಿದೆನಾದ್ದರಿಂದ ಶ್ರೇಷ್ಠನಾಗಿದ್ದೇನೆ ಎಂಬ ಮೇಲರಿಮೆಯನ್ನು ಬಸವಣ್ಣ ಇನ್ನೊಂದು ವಚನದಲ್ಲಿ 'ಕಷ್ಟತನ' ಎಂದು ಕರೆಯುತ್ತಾನೆ. "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ" (ವ. 341)

2 347, 348, 350 – ಈ ಮುಂತಾದ ವಚನಗಳನ್ನು ನೋಡಿ.

ಹೀಗೆ ಶೋಷಿತರೊಡನೆ ತನ್ನನ್ನು ಸೇರಿಸಿಕೊಳ್ಳುವ ಮೂಲಕ, ಅವರ ನೋವನ್ನು ತಾನು ಆವಾಹಿಸಿಕೊಂಡು, ಅವರ ನೋವಿಗೆ ಬಾಯಿನೀಡುತ್ತಾನೆ. ಇಂತಹ ಸನ್ನಿವೇಶವಲ್ಲಿ ವೇದ, ಶಾಸ್ತ್ರ, ತರ್ಕ, ಆಗಮಗಳಂತಹ ವ್ಯತ್ಯಾಸಗೊಳ್ಳುವ ಹಾಗೂ ನೋವಿಗೆ ಕಿವಿಗೊಡದ ಪುರೋಹಿತಶಾಹಿಯು ಸ್ಥಾವರ; ಕೇವಲ ಸಂವೇದನೆಯುಳ್ಳ ಅಂತ್ಯಜನು ಜಂಗಮ – ಇವುಗಳ ಮತ್ತೊಂದು ರೂಪವಾಗುತ್ತಾರೆ.

ಬ್ರಾಹ್ಮಣನು ಶೋಷಕರ ಆತ್ಯಂತಿಕ ನೆಲೆಯಾದರೆ, ಅಂತ್ಯಜನು ಶೋಷಿತನ ಆತ್ಯಂತಿಕ ಸ್ಥಿತಿಯನ್ನು ಸೂಚಿಸುತ್ತದೆ ಎಂಬುದು ನಿಜ. ಆದರೆ ಇವೆರಡರ ನಡುವೆಯೂ ವಿವಿಧ ಹಂತಗಳಲ್ಲಿಯೂ ವಿವಿಧ ರೂಪಗಳಲ್ಲಿಯೂ ಈ ಶೋಷಣೆಯ ಪ್ರಕ್ರಿಯೆ ನಡೆಯುತ್ತದೆ. ಹೀಗಾಗಿ ಒಟ್ಟು ಮಾನವ ಸಮುದಾಯವನ್ನು ಶೋಷಕ-ಶೋಷಿತ ಎಂಬ ಎರಡು ಪಂಗಡವಾಗಿ ವಿಂಗಡಿಸಿ, ತಾನು ಎಲ್ಲ ಶೋಷಿತರ ಧ್ವನಿಯಾಗಲು ಬಸವಣ್ಣ ಬಯಸುತ್ತಾನೆ. ಈ ಬಗೆಯ ಸಾಮಾಜಿಕ ಪುನರ್ವಿಂಗಡಣೆಯ ಪ್ರಯತ್ನದಲ್ಲಿ ಮೂಡಿಬಂದ ಕಲ್ಪನೆಯೇ ಭವಿ-ಭಕ್ತವರ್ಗಗಳು. "ದೇವ, ದೇವಾ, ಬಿನ್ನಪ, ಅವಧಾರು, ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರ-ನೊಂದೆ ಎಂಬೆ; ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೆಲ್ಲರ-ನೊಂದೆ ಎಂಬೆ" (710) ಎಂಬಲ್ಲಿ ಇಂತಹ ದ್ವಿಭಜನೆಯ ರೀತಿ ಸ್ಪಷ್ಟವಾಗಿದೆ. ಇಲ್ಲಿ ಭವಿಯು ಬದಲಾಗದ ಸ್ಥಿತಿಯನ್ನು ಸೂಚಿಸಿದರೆ, ಭಕ್ತ ಹೊಸತೊಂದು ಸ್ತರರಹಿತ ಸಮಾಜದ ಪ್ರತೀಕವಾಗುತ್ತದೆ. 'ಭವಿ'ಗಳಲ್ಲಿ ಶ್ರೇಣೀಕೃತ ಸಮಾಜದ ತರತಮಗಳಿದ್ದರೆ 'ಭಕ್ತ'ರೆಲ್ಲರೂ ಸಮಾನರು.[3]

ಭಕ್ತಿ ಎಂಬುದು ಒಂದು ಅನುಭವ; ದೇವರ ಅನುಭವ. ಆದರೆ ಅದು ವೇದಶಾಸ್ತ್ರಗಳಲ್ಲಿ ಆಚರಣೆಯ ಮಟ್ಟದಲ್ಲಿ ಮಾತ್ರ ನೆಲೆಗೊಂಡಿದೆ. ಏಕೆಂದರೆ ವೇದಾದಿಗಳನ್ನು ಬಲ್ಲವರು ದೈವಭಕ್ತಿಯನ್ನು ಅನುಭವರಹಿತವಾದ ಜಿಜ್ಞಾಸೆಯ ಮಟ್ಟಕ್ಕೆ ತಂದು ನಿಲ್ಲಿಸಿರುವುದರಿಂದಾಗಿ ಅಲ್ಲಿ ಆರ್ದ್ರತೆಯಿಲ್ಲ: ಕನಿಷ್ಠಪಕ್ಷ, ಅದು ಉಳಿದಿಲ್ಲ. ಆದರೆ ತಿಳಿವಳಿಕೆಯಿರದಿದ್ದರೂ ಅನುಭವವನ್ನು ಪಡೆವ ಅಂತ್ಯಜ ಈ ಆರ್ದ್ರತೆಯ ಸಂಕೇತ. ಆದ್ದರಿಂದಲೇ ಅಂತ್ಯಜನಾದ ಮತ್ತು ಶಿವನ ಸ್ವರೂಪ ಜ್ಞಾನದ ಜಿಜ್ಞಾಸೆಯಿಂದ ಹೊರತಾದರೂ ಶಿವನನ್ನು ಅನುಭವರೂಪದಲ್ಲಿ ಕಂಡ ಮಾದಾರ ಚೆನ್ನಯ್ಯನ ಮನೆಯ ಅಂಬಲಿಯನ್ನು ಶಿವನು ಉಂಡ: ಅದೇ ಶಿವನು ಜ್ಞಾನಿಯಾದ ಬ್ರಾಹ್ಮಣನಿಗೆ ಕಾಣಿಸದಾದ – ಇದು ಬಸವಣ್ಣನು ಶ್ರೇಷ್ಠತೆಯನ್ನು

3 ವಚನಕಾರರು ಕಟ್ಟಬಯಸಿದ ಹೊಸ ಸಮಾಜವು ಈ ಸಮಾನತೆಯ ನೆಲೆಗಟ್ಟಿನ ಮೇಲೆ ಸ್ಥಿರಗೊಳ್ಳಬೇಕೆಂದು ಬಸವಾದಿಗಳು ಬಯಸಿದರು. ಹಾಗೆ ಮಾಡಲು 'ಪಂಚಾಚಾರ'ದ ಸಾಮಾಜಿಕ ನಡೆವಳಿಯನ್ನು ಹೊಸ ಪಂಥದವರಿಗೆ ವಿಧಿಸಿದರು. 'ಪಂಚಾಚಾರ'ದಲ್ಲಿ ಒಂದಾದ 'ಶಿವಾಚಾರ'ವು ಭಕ್ತರನ್ನೆಲ್ಲ ಸಮಾನರೆಂದು ಭಾವಿಸಬೇಕಾದುದನ್ನು ವಿಧಿಸುತ್ತದೆ.

ನಿರ್ಧರಿಸಲು ಅನುಸರಿಸುವ ಮಾರ್ಗ, ಕೆಳಗಣ ವಚನವನ್ನು ನೋಡಿ :

ವೇದ ನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತ್ತಯ್ಯಾ!
ಆಗಮ ಹೆರತೊಲಗಿ ಅಗಲಿದ್ದಿತ್ತಯ್ಯಾ,
ನಮ್ಮ ಕೂಡಲಸಂಗಯ್ಯನ ಚನ್ನಯ್ಯನ ಮನೆಯಲುಂಡ ಕಾರಣ (749)

ಶಿವತ್ವವು ಹೀಗೆ ಆರ್ದ್ರಭಕ್ತಿಯಿಂದ ಹೊಸಹೊಸತಾಗಿ ಅನುಭವಕ್ಕೆ ಬರುವಂಥದೇ ಹೊರತು, ವೇದಾಗಮಗಳಲ್ಲಿ ಹೇಳಿದ ಒಂದೇ ರೂಪವನ್ನು ಪಡೆದುದಲ್ಲ. ಆದ್ದರಿಂದ ಬಸವಣ್ಣನಿಗೆ ವೇದ(ಜ್ಞಾನ)ಕ್ಕಿಂತ ಸಂವೇದನೆ–ಅನುಭವ (ಭಕ್ತಿ) ಮುಖ್ಯವೆನ್ನಿಸಿತು. ಜ್ಞಾನವು ಅನುಭವರಹಿತವಾದರೆ ಪ್ರಯೋಜನವೇನು ? ಏಕೆಂದರೆ ಇಡೀ ಜೀವನವು ಅನುಭವೈಕವಾಗಿದೆ ; ಅನುಭವವನ್ನು ಹೊರತುಪಡಿಸಿದರೆ ಜೀವನದಲ್ಲಿ ಉಳಿಯುವಂಥದ್ದೇನೂ ಇಲ್ಲ.

ದ್ವೈತಾದ್ವೈತವನೋದಿ ಏನ ಮಾಡುವಿರಯ್ಯಾ,
ನಮ್ಮ ಶರಣರ ಉರಿಗೆ ಅರಗಾಗಿ ಕರಗದನ್ನಕ್ಕ,
ಸ್ಥಾವರಜಂಗಮವೊಂದೆ ಎಂದು ನಂಬದನ್ನಕ್ಕ,
ಕೂಡಲಸಂಗಮದೇವಾ
ಬರಿಯ ಮಾತಿನ ಮಾಲೆಯಲೇನಹುದು ? (191)

ವೇದವನೋದಿದಡೇನು, ಶಾಸ್ತ್ರವ ಕೇಳಿದಡೇನಯ್ಯ ?
ಜಪವ ಮಾಡಿದಡೇನು, ತಪವ ಮಾಡಿದಡೇನಯ್ಯ ?
ಏನ ಮಾಡಿದಡೇನು
ನಮ್ಮ ಕೂಡಲಸಂಗಯ್ಯನ ಮನವಮುಟ್ಟದನ್ನಕ್ಕ ? (598)

ಈ ವಚನಗಳಲ್ಲಿ ಬಸವಣ್ಣನು ಪ್ರತಿಸ್ಪಂದನೆಯ ಬಗ್ಗೆ ಸ್ಪಷ್ಟವಾಗಿ ಮಾತನಾಡುತ್ತಿದ್ದಾನೆ. ಮನುಷ್ಯನಿಗೆ ಬೇಕಾದದ್ದು ಜ್ಞಾನಕ್ಕಿಂತ ಮಿಗಿಲಾಗಿ ಮತ್ತೊಬ್ಬರ ಭಾವನೆಗಳಿಗೆ ಸ್ಪಂದಿಸುವ ಗುಣ. ಏಕೆಂದರೆ ಜಡಜ್ಞಾನವು ಇತರರ ನೋವು ನಲಿವುಗಳಿಗೆ ಸಮಾಂತರವಾಗಿ ಸ್ಪಂದಿಸದೆ ನಿಶ್ಚೇಷ್ಟಿತವಾಗಿದ್ದರೆ, ಅನುಭವ ತೀವ್ರತೆಯು ಇತರರ ಅನಿಸಿಕೆಗಳಿಗೆ ಮಿಡಿಯುವಂತೆ ಮಾಡುತ್ತದೆ. ಹಾಗಾಗಿ ಬಸವಣ್ಣನ ದೃಷ್ಟಿಯಲ್ಲಿ ಜಡಜ್ಞಾನವು ಸ್ಥಾವರ, ಚಲನಶೀಲ ಅನುಭವ-ಸಂವೇದನಾಶೀಲತೆಗಳು ಜಂಗಮವಾಗುತ್ತದೆ.

ಇಂತಹ ಜಡಜ್ಞಾನ ಮನುಷ್ಯನನ್ನು ಅಮಾನವೀಯಗೊಳಿಸಬಹುದು. ಆದ್ದರಿಂದಲೇ ಪುರೋಹಿತಶಾಹಿಯು ಜ್ಞಾನವನ್ನು ತನ್ನಲ್ಲಿ ತುಂಬಿಕೊಂಡಿದ್ದರೂ ನಿರ್ದಯವಾಗಿ ವರ್ತಿಸುತ್ತದೆ; ನೋವನ್ನು ಕಂಡರೆ ಕಣ್ಣೀರು ಮಿಡಿಯುವ ಮುಗ್ಧತೆ ನಾಶವಾಗುವಂತೆ ಮಾಡುತ್ತದೆ. ಇದನ್ನೇ ತಾನೇ ಶೋಷಣೆ ಎನ್ನುವುದು ?

ಮುಗ್ಧಪಶುವಿನ ಚಿತ್ರ ನೀಡುವ ಬಸವಣ್ಣನ ಎರಡು ವಚನಗಳಲ್ಲಿ ಈ ನಿರ್ದಯಿಯ ಚಿತ್ರ ಪರಳುಗಟ್ಟಿ ನಿಂತಿದೆ :

ನಿಮ್ಮ ವಚನವೆನ್ನ ಪುಣ್ಯವೆಂಬುದು ಹುಸಿಯಾಯಿತ್ತು ನೋಡಾ,
ಶಾಸ್ತ್ರದ ವಚನ ಘೋತಿಂಗೆ ಮಾರಿ;
ಎಂತು ನಂಬುವೆನಯ್ಯಾ ?
ನಾನು ಕೊಲ್ಲೆ, ನೇಣು ಕೊಂದಿತ್ತೆಂಬ ಸೂನೆಗಾಱರನೇನೆಂಬೆ
ಕೂಡಲಸಂಗಮದೇವಾ ? (571)

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೆ ಅಳು ಕಂಡಾ !
ವೇದವನೋದಿದವರ ಮುಂದೆ ಅಳು ಕಂಡಾ !
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ !
ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ (572)

ಈ ಎರಡೂ ವಚನಗಳಲ್ಲಿ ಬಲಿಗೆ ಈಡಾಗುವ ಮುಗ್ಧ ಪಶುವಿನ ಪಕ್ಕದಲ್ಲಿ ನಿಂತ ಕ್ರೂರ ಪುರೋಹಿತಶಾಹಿಯ ಚಿತ್ರವಿದೆ. "ನಾನು ಕೊಲ್ಲೆ, ನೇಣು ಕೊಂದಿತ್ತು" ಎಂಬಂತಹ ಜಾಣತನದಿಂದ ಪುರೋಹಿತಶಾಹಿ ಬಲಿಕೊಡುತ್ತದೆ. ಬಲಿಯಾಗಲಿರುವ ಕುರಿ ಪುರೋಹಿತಶಾಹಿಯ ಕ್ರೌರ್ಯಕ್ಕೊಳಗಾಗುವ ಮುಗ್ಧ ಶೋಷಿತವರ್ಗವನ್ನೇ ಇಲ್ಲಿ ಸಂಕೇತಿಸುತ್ತಿದೆ. ಬಸವಣ್ಣ ಆ ಪುರೋಹಿತಶಾಹಿಯ ವಿರುದ್ಧ ಹಲ್ಲುಮಸೆಯುತ್ತಾನೆ; "ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ" ಎಂದು ಕುರಿಗೆ ಸಮಾಧಾನ ಮಾಡುತ್ತಾನೆ; ಅಂತಹ ಶೋಷಿತರಪರವಾದ ಧ್ವನಿಯಾಗಲು ಹಾತೊರೆಯುತ್ತಾನೆ. ಹೀಗೆ, ಪುರೋಹಿತಶಾಹಿಯು ಜಡತೆ, ನಿರ್ದಯಗಳ ಸಂಕೇತವಾಗಿ ಸ್ಥಾವರವಾಗಿಬಿಟ್ಟರೆ; ಬದುಕು ಮುಗ್ಧತೆ ಆರ್ದ್ರತೆಗಳ ಸಂಕೇತವಾದ ಕುರಿ (ಶೋಷಿತವರ್ಗ) ಜಂಗಮವಾಗುತ್ತದೆ. ಏಕೆಂದರೆ ಪುರೋಹಿತಶಾಹಿ ನಿಶ್ಚಲ, ಸಾಮಾನ್ಯ ಬದುಕು ಚಲನಶೀಲ.

ಸ್ಥಾವರ-ಜಂಗಮಗಳು ವಾಚ್ಯಾರ್ಥದ ನೆಲೆಯಲ್ಲಿಯೂ ನಿಶ್ಚಲತೆ-ಚಲನೆಗಳನ್ನೇ ಹೇಳುತ್ತವೆ. ಬಸವಣ್ಣ ತನ್ನ ಆರಾಧ್ಯದೈವವಾದ ಶಿವನನ್ನು ಚಲನಶೀಲವೂ ಸಂವೇದನಾಶೀಲವೂ ಆದುದರಲ್ಲಿ ಕಾಣಬಯಸುತ್ತಾನೆಯೇ ಹೊರತು, ನಿಶ್ಚಲವೂ ಸಂವೇದನಾರಹಿತವೂ ಆದ ಕಲ್ಲಿನ ಲಿಂಗದಲ್ಲಲ್ಲ. ಬಸವಣ್ಣ ಒಲಿದದ್ದು ಹರಿವ ನದಿಯನ್ನೇ ಹೊರತು ನಿಂತ ಸಮುದ್ರವನ್ನಲ್ಲ. ಸಮುದ್ರ ಆಳ-ವಿಸ್ತಾರಗಳನ್ನು ಪಡೆದಿರಬಹುದು ; ಆದರೆ ಅಂಕುಡೊಂಕಾಗಿ, ಕ್ಷಣಕ್ಕೊಂದು ಮುಖಭಾವ ಪ್ರದರ್ಶಿಸುವ, ಪರಿಸ್ಥಿತಿಗನುಗುಣವಾಗಿ ಸಾಗುವ ನದಿ ಬಸವಣ್ಣನನ್ನು ಆಕರ್ಷಿಸುತ್ತದೆ.

ಸ್ಥಾವರಭಕ್ತಂಗೆ ಸೀಮೆಯಲ್ಲದೆ
  ಘನಲಿಂಗಜಂಗಮಕ್ಕೆ ಸೀಮೆಯೆಲ್ಲಿಯದು ?
ಅಂಬುಧಿಗೆ ಸೀಮೆಯಲ್ಲದೆ
  ಹರಿವ ನದಿಗೆ ಸೀಮೆಯೆಲ್ಲಿಯದು ?
ಭಕ್ತಂಗೆ ಸೀಮೆಯಲ್ಲದೆ
  ಜಂಗಮಕ್ಕೆ ಸೀಮೆಯುಂಟೆ ಕೂಡಲಸಂಗಮದೇವಾ ? (418)

ತುಂಬ ಸುಂದರವಾದ ರೀತಿಯಲ್ಲಿ ಜಡ-ಚೇತನಗಳ ನಡುವಣ ವ್ಯತ್ಯಾಸವನ್ನು ಬಸವಣ್ಣ ಈ ವಚನದಲ್ಲಿ ಹೇಳುತ್ತಿದ್ದಾನೆ. ಹೀಗಾಗಿ ಒಂದೇ ಆಕಾರವನ್ನು ಪಡೆದ ಜಡಶಿವ ಬಸವಣ್ಣನ ಆದರ್ಶವಲ್ಲ ; ವಿವಿಧಾಕಾರಗಳನ್ನು ಪಡೆದ ಚಲನಶೀಲ ಬದುಕಿನಲ್ಲಿ ಶಿವನನ್ನು ಕಾಣುವುದೇ ಅವನ ವೈಶಿಷ್ಟ್ಯ. ಭಕ್ತಿಯೂ ಅಂತಹುದೇ–ಚಲನೆಯುಳ್ಳದ್ದು : "ಹರಿವ ನದಿಯು ತೆಜನ ಹೋಲಬಲ್ಲಡೆ ಭಕ್ತಿ" (523) ಎಂದು ಸ್ಪಷ್ಟವಾಗಿಯೇ ನುಡಿಯುತ್ತಾನೆ. ಭಕ್ತಿಗನುಗುಣವಾಗಿಯೇ ಶಿವತ್ವವೂ ವ್ಯತ್ಯಾಸಗೊಳ್ಳುವಂತಹುದು.[4] ಆದ್ದರಿಂದ ಶಿವ ಅಮೂರ್ತ, ಜೀವನದಂತೆ ; ನಿರಂತರ, ನದಿಯಂತೆ. ಅಂತಹ ಶಿವನ ಕಲ್ಪನೆಯನ್ನೇ 'ಜಂಗಮ' ಎಂದು ಕರೆಯುವುದು. ಜಂಗಮ ಕಾವಿ-ರುದ್ರಾಕ್ಷಿಗಳನ್ನು ಧರಿಸಿದ ವ್ಯಕ್ತಿದ್ಯೋತಕಮಾತ್ರವಾಗದೆ ಇಡೀ ಬದುಕಿಗೇ ಪ್ರತೀಕವಾಗುತ್ತದೆ.

ಮೇಲೆ ಉಕ್ತವಾದ ವಚನದಲ್ಲಿನ ಸಮುದ್ರ-ನದಿಗಳ ಪ್ರತಿಮೆಗಳು ಭಾಷೆಯನ್ನು ಸೂಚಿಸುವ ನೆಲೆಯಲ್ಲಿಯೂ ಅರ್ಥಪೂರ್ಣವಾಗುತ್ತವೆ. "ಎಲವೋ, ಎಲವೋ, ಪಾಪಕರ್ಮವ ಮಾಡಿದವನೆ, ಎಲ್ಲವೋ, ಎಲವೋ, ಬ್ರಹ್ಮಹತ್ಯವ ಮಾಡಿದವನೆ, ಒಮ್ಮೆ ಶರಣೆನ್ನೆಲವೋ" (619) ಎಂಬ ಪತಿತನ–ದಲಿತನ ಉದ್ಧಾರದೆಡೆಗೆ ಗಮನವಿಟ್ಟ ವಚನಕಾರರು ಅಂತಹನ ಭಾಷೆಯನ್ನೇ ತಮ್ಮೆಲ್ಲ ಭಾವಾಭಿವ್ಯಕ್ತಿಗೆ ಮಾಧ್ಯಮವಾಗಿಸಿಕೊಂಡರು. ಸಮುದ್ರ–ನದಿಗಳ ಪ್ರತಿಮೆಗಳ ಹಿಂದೆ ಸಂಸ್ಕೃತ–ಕನ್ನಡಗಳ ವ್ಯತ್ಯಾಸವೂ ಸೂಚಿತವಾಗುವಂತಿದೆ. ಅಪಾರವೂ ಆಳವೂ ಆದ ಸಮುದ್ರವೇ ಸಂಸ್ಕೃತಭಾಷೆ : ಅದರಲ್ಲಿ ಅಮೂಲ್ಯ ಮುತ್ತುರತ್ನಗಳಿವೆ. ಆದರೆ ಬದುಕಿನ ದೈನಂದಿನ ಭಾವನೆಗಳಿಗೆ ಧ್ವನಿಕೊಡುವ ಸಾಮರ್ಥ್ಯ ಕನ್ನಡಕ್ಕೆ ಮಾತ್ರವಿದೆ. ಏಕೆಂದರೆ ನಡೆ-ನುಡಿಯ ಸಾನುರೂಪ್ಯ ಸಾಧ್ಯವಾಗಬೇಕಾದರೆ ಸಂಸ್ಕೃತ ಅಭಿವ್ಯಕ್ತಿ ಮಾಧ್ಯಮವಾಗಲಾರದು. ಅದಕ್ಕೆ ಅಂತಹ ಸ್ಪಂದನಶಕ್ತಿ ಉಳಿದಿಲ್ಲ. ಆ ಭಾಷೆ ವ್ಯಕ್ತಿವ್ಯಕ್ತಿಗೂ ಭಿನ್ನವಾಗುವ ಅನುಭವಕ್ಕೆ ಮಾತು ನೀಡಲಾರದು ; ವಿವಿಧ ಭಾವ-ಸ್ಫುರಣೆಗೆ ಆಸ್ಪದವಿಲ್ಲದ ವಿಚಾರಗಳಿಗೆ ಮಾತ್ರ ಅದು ಮಾಧ್ಯಮವಾಗಬಲ್ಲುದು.

---

4 ವೀರಶೈವದ 'ಇಷ್ಟಲಿಂಗ' ಪರಿಕಲ್ಪನೆಯ ಹಿಂದಿನ ಆಶಯವೂ ಇದೇ ಆಗಿದೆ. ಯಾರೋ ತಮ್ಮ ಕಲ್ಪನೆಗೆ ಅನುಗುಣವಾಗಿ ನಿರ್ಮಿಸಿದ ಪ್ರತಿಮೆ (ಶಿವ) ಯನ್ನು ಪೂಜಿಸದೆ, ತನ್ನ ಕಲ್ಪನೆಯ ಶಿವನನ್ನು ವ್ಯಕ್ತಿ ಪರಿಭಾವಿಸಬೇಕು. ಹಾಗಾಗಿ ದೈವದ ಕಲ್ಪನೆ ವ್ಯಕ್ತಿವಿಶಿಷ್ಟವಾದದ್ದೇ ಹೊರತು ಸಮೂಹನಿರ್ಮಿತವಾದದ್ದಾಗಬೇಕಾಗಿಲ್ಲ.

ಅದಕ್ಕೇ ಸಂಸ್ಕೃತ ಭಾಷೆ ವ್ಯತ್ಯಾಸವಾಗದ ವಿಧಿಗಳಿಗೆ, ಶಾಸ್ತ್ರಕ್ಕೆ ಮಾಧ್ಯಮವಾಯಿತೇ ವಿನಾ ಬದುಕಿನ ದಿನನಿತ್ಯದ ಸಂವೇದನೆಗಳಿಗೆ ಕನ್ನಡದಂತಹ ಜನಭಾಷೆ ಮಾತ್ರವೇ ವಾಹಕವಾಯಿತು.

ಆದ್ದರಿಂದಲೇ ವಚನಕಾರರು ಕನ್ನಡವನ್ನು ಆರಿಸಿಕೊಂಡರು: ಅವರ ಈ ಆಯ್ಕೆಯು ಒಂದೆ ಜನಪರ ನಿಲುವಿದೆ. ಆದರೆ ಕನ್ನಡದ ಮೂಲಕ ತಮ್ಮ ಭಾವನೆಗಳಿಗೆ ರೂಪ ಕೊಡುವ ಕೆಲಸವನ್ನು ವಚನಕಾರರು ಪ್ರಜ್ಞಾಪೂರ್ವಕವಾಗಿ ಕೈಗೆತ್ತಿಕೊಂಡರೆಂದು ಇದರರ್ಥವಲ್ಲ. ಅಥವಾ ಸಂಸ್ಕೃತದ ವಿರುದ್ಧ ಅವರು ಕತ್ತಿಮಸೆದರೆಂದೂ ಅಲ್ಲ. ಹಾಗೆ ನೋಡಿದರೆ ಭಾಷೆಯ ಬಗ್ಗೆ ಅವರು ಮಾತೇ ಆಡುವುದಿಲ್ಲ. ಕನ್ನಡ ಎಂಬ ಶಬ್ದವನ್ನು ಬಸವಣ್ಣ (ಅಥವಾ ಇತರ ವಚನಕಾರರು) ಭಾಷೆಯನ್ನು ಸೂಚಿಸುವ ರೀತಿಯಲ್ಲಿ ಬಳಸಲೇ ಇಲ್ಲ.[5]

ತಾಳಮಾನ ಸರಿಸಪನಱಿಯೆ
ಓಜೆಬಜಾವಣೆಯ ಲೆಕ್ಕವನಱಿಯೆ
ಅಮೃತಗಣದೇವಗಣವನಱಿಯೆ
ಕೂಡಲಸಂಗಮದೇವಾ,
ನಿಮಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ. (493)

ಈ ವಚನದ ಅರ್ಥವನ್ನು ಪರಿಭಾವಿಸಿ. ಹಾಡು, ಅದೂ 'ಒಲಿದಂತೆ ಹಾಡುವ' ಹಾಡು, ಶಾಸ್ತ್ರಬದ್ಧವಾದ ರಚನೆಯಾಗಿರಲಾರದು. ಅಂತಹ ಹಾಡಿನಲ್ಲಿ ನಿಯಮಗಳಿಗಿಂತ, ಅನುಭವ ಮುಖ್ಯ. ಹೀಗಾಗಿ ತಾನಾಗಿ ಸ್ಫುರಿಸುವ ಹಾಡಿನಲ್ಲಿ ತಾಳ, ಗಣಗಳ ಲೆಕ್ಕಾಚಾರಕ್ಕೆ ಅನುಗುಣವಾದ ಪ್ರಜ್ಞಾಪೂರ್ವಕವಾದ ರಚನೆಯಿರುವುದಿಲ್ಲ. ಅಂತಹ ಕಡೆ ನಿಯಮಗಳು ಅನುಭವಕ್ಕೆ ಅಧೀನವಾಗಿರುತ್ತವೆ. ಹೀಗಾಗಿ ಬಸವಣ್ಣನಿಗೆ ನಿಯಮಬದ್ಧ ರಚನೆಗಿಂತ 'ಒಲಿದಂತೆ ಹಾಡುವ' ಹಾಡು, ಅದು ಅಸ್ತವ್ಯಸ್ತವಾಗಿರಬಹುದಾದರೂ ಹತ್ತಿರವೆನಿಸುತ್ತದೆ. ಈ ಒಲಿದಂತೆ ಹಾಡುವ ಹಾಡು, ಪೂಜೆಯ ಕಾಲಕ್ಕೆ ಹೇಳುವ ಮಂತ್ರದ ನಿರ್ದಿಷ್ಟತೆಗೆ ವಿರುದ್ಧವಾದ ಬಂಧವುಳ್ಳದ್ದು. ಅಂತಹ ಮಂತ್ರ ಸಂಸ್ಕೃತದಲ್ಲಿದ್ದರೆ. ಒಲಿದಂತೆ ಹಾಡುವ ಹಾಡು ಅಂದಂದಿಗೆ ಸ್ಫುರಿಸುತ್ತದೆ. ಹೀಗಾಗಿ ಚಲನಶೀಲತೆಯನ್ನು ಕಳೆದುಕೊಂಡ ಸಂಸ್ಕೃತವು ಸ್ಥಾವರವಾದರೆ, ಜನರ ಬದುಕಿಗೆ ತಕ್ಕಂತೆ ಬಳುಕಿ ಬಾಗುವ ಕಂಬನಿಮಿಡಿದು ನಕ್ಕುನಲಿವ ಕನ್ನಡ ಜಂಗಮವಾಗುತ್ತದೆ.

---

5 'ಕನ್ನಡ' ಎಂಬ ಶಬ್ದ ವಚನಕಾರರಲ್ಲಿ 'ಕಣ್ಣಡ' ಎಂಬುದರ ಪರ್ಯಾಯಶಬ್ದವಾಗಿ ಬಳಕೆಯಾಗುತ್ತದೆ. ಕಣ್ಣು + ಅಡ್ಡ = ಕಣ್ಣಡ್ಡ, ಕಣ್ಣಡ, ಕನ್ನಡ – ಇದು ನಿಷ್ಪತ್ತಿ. ದೃಷ್ಟಿಗೆ ಮರೆಮಾಡುವುದು ಎಂಬ ಅರ್ಥವೇ ಇಲ್ಲಿರುವುದು.

ಒಟ್ಟಾರೆ, ಬಸವಣ್ಣನ ವಚನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಸ್ಥಾವರ–ಜಂಗಮಗಳು ಕೇವಲ ಪರಿಮಿತ ಅರ್ಥವ್ಯಾಪ್ತಿಯನ್ನು ಪಡೆಯವೆ. ಬದುಕಿನ ಎಲ್ಲ ಮುಖಗಳನ್ನೂ ನೆಲೆಗಳನ್ನೂ ಒಳಗೊಳ್ಳುವ ವ್ಯಾಪಕ ಪರಿಕಲ್ಪನೆಗಳಾಗಿವೆ ಎಂಬ ಭಾವನೆ ಬಾರದಿರದು. ಜನವಿರೋಧಿ–ಜನಪರವಾದುದೆಲ್ಲವನ್ನೂ ತಮ್ಮ ತೆಕ್ಕೆಯಲ್ಲಿ ಈ ಶಬ್ದಗಳು ಸೇರಿಸಿಕೊಳ್ಳುತ್ತವೆ. ಎರಡು ಪರಸ್ಪರ ವಿರೋಧಿಗಳಾದ ವಿಷಯಗಳನ್ನು ಮುಖಾಮುಖಿಯಾಗಿಸಿ, ಅವುಗಳಲ್ಲಿ ಚಲನಶೀಲವಾದುದರ ಪರವಾಗಿ ನುಡಿಯುವ ಬಸವಣ್ಣ ಜನಪರವಾದುದರ ಕಡೆಗೇ ಮಿಡಿಯುತ್ತಾನೆ. ಹೀಗಾಗಿ ಬಸವಣ್ಣನ ಜೀವನದರ್ಶನವು ಅತ್ಯಂತ ಸಂಗ್ರಹವೂ ಸೂತ್ರಬದ್ಧವೂ ಆದ ರೀತಿಯಲ್ಲಿ ವ್ಯಕ್ತಗೊಳ್ಳುವುದು ಈ ಒಂದು ಸಾಲಿನಲ್ಲಿ: "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.*

---

* ಈ ಲೇಖನದಲ್ಲಿ ಉದ್ಧೃತವಾದ ವಚನಗಳ ಮುಂದೆ ಕೊಟ್ಟಿರುವ ಸಂಖ್ಯೆಗಳು 'ಭಕ್ತಿಭಂಡಾರಿ ಬಸವಣ್ಣನವರ ವಚನಗಳು' ಸಂ. ಆರ್. ಸಿ. ಹಿರೇಮಠ (೧೯೬೮) ಕ. ವಿ. ವಿ. ಧಾರವಾಡ – ಈ ಆವೃತ್ತಿಯಲ್ಲಿ ಸೂಚಿತವಾದವು.

ಕೋರಾಣ್ಯದ ಶಿವಲಿಂಗಾಂಕಿತ ಅಪ್ರಕಟಿತ ಸ್ವರವಚನಗಳು

—(ಸಂ.) ಎಸ್. ಶಿವಣ್ಣ

ಕೋರಾಣ್ಯದ ಶಿವಲಿಂಗಾಂಕಿತದ ಸ್ವರವಚನಗಳ ಕರ್ತೃ ಅಜ್ಞಾತ. ಲಿಂಗಣ್ಣ (ಸು. 1750)ನ 'ಕೆಳದಿ ನೃಪ ವಿಜಯ' ಈ ಬಗೆಗೆ ಸ್ವಲ್ಪ ಬೆಳಕು ಬೀರುತ್ತದೆ. ಕೆಳದಿ ನೃಪವಿಜಯದ ಸಪ್ತಮಾಶ್ವಾಸ ಪು. 107–08 ರ ಅಡಿಟಿಪ್ಪಣಿಯಲ್ಲಿ * 'ಕ' ಸಂಕೇತದ ಪ್ರತಿಯಲ್ಲಿನ ಅಧಿಕ ಭಾಗವನ್ನು ಕೊಡಲಾಗಿದೆ. ಇದರಂತೆ ಶಿವಪ್ಪ ನಾಯಕರ (ಕ್ರಿ.ಶ. 1645–1661) ಪುತ್ರಿ ಬಸಲಿಂಗಮ್ಮಾಜಿಯನ್ನು ಕೋರಾಣ್ಯದ ಶಿವಲಿಂಗದೇವರ ಶಿಷ್ಯ ಬಸವಲಿಂಗಯ್ಯನಿಗೆ ಕೊಟ್ಟು ವಿವಾಹ ಮಾಡಿದಂತೆ ತಿಳಿಯುತ್ತದೆ. ಇಲ್ಲಿನ ಕೋರಾಣ್ಯದ ಶಿವಲಿಂಗದೇವರ ಹೆಸರನ್ನೇ ಸ್ವರವಚನಾಂಕಿತವನ್ನಾಗಿ ಆತನ ಶಿಷ್ಯರಲ್ಲೊಬ್ಬ ಬಳಸಿಕೊಂಡು ಸ್ವರವಚನಗಳನ್ನು ರಚಿಸಿದಂತೆ ಕಾಣುತ್ತದೆ. ಹೀಗಾಗಿ ಈ ಅಜ್ಞಾತ ಕರ್ತೃ ಬಹುಪಾಲು ಕೋರಾಣ್ಯದ ಶಿವಲಿಂಗದೇವರ ಸಮಕಾಲೀನನಾಗಿದ್ದು ಆತ ಸು. 1650 ರ ವೇಳೆಯಲ್ಲಿ ಸ್ವರವಚನಗಳನ್ನು ರಚಿಸಿರಬಹುದೆಂದು ತಾತ್ಪೂರ್ತಿಕವಾಗಿ ಭಾವಿಸಬಹುದಾಗಿದೆ.

ಇಲ್ಲಿ ಪ್ರಕಟವಾಗಿರುವ 3 ಸ್ವರವಚನಗಳನ್ನು ಕನ್ನಡ ಅಧ್ಯಯನ ಕೇಂದ್ರ (ಬೆಂಗಳೂರು ವಿಶ್ವವಿದ್ಯಾಲಯ) ದ ಸಂಗ್ರಹದಲ್ಲಿನ ಕ್ರಮಾಂಕ ಬಿ. 1398ನೆಯ ಪ್ರತಿಯನ್ನು ಆಧರಿಸಿ ಪ್ರಕಟಿಸಲಾಗಿದೆ. ಹಸ್ತಪ್ರತಿಯನ್ನು ಉಪಯೋಗಿಸಿಕೊಳ್ಳಲು ಅನುಮತಿಯಿತ್ತ ಸಂಬಂಧಿಸಿದ ಅಧಿಕಾರಿಗಳಿಗೆ ವಂದನೆಗಳು.

ಕುದುರಿಯ ಕಂಡಿರೇನೆ । ಮಾನಸವೆಂಬ
ಕುದುರಿಯ ಕಂಡಿರೇನೆ
ಸದಮಲ ಗುರುವಿನ ಸದನದೊಳಿರುವಂಥ
ಕುದುರಿಯ ಕಂಡಿರೇನೆ ॥ ಪಲ್ಲ ॥

ಜ್ಞಾನ ಕ್ರೀಗಳೆ ಪಾಪಡ । ಇತ್ತರವೆನಿ
ಪಾನಂದವೆನಿಪ ರಖಲ್ಲಿ
ಧ್ಯಾನವೆನಿಪ ಜೀನು ಮವುನಾದ ಕಡಿವಾಣ
ತಾನು ತಾನಲ್ಲದಿನ್ನೇನನೆಣಿಸದಿಹ ॥ ೧ ॥

---

* (ಸಂ.) ಆರ್. ಶಾಮಶಾಸ್ತ್ರಿ, ಮೈಸೂರು, 1921.

ಭವನಾಶವೆನಿಪ ಪೆಂಡ್ಯೆ । ಶಿವಕೃಪೆ ತುರಾಯಿ
ತವೆ ಭಕ್ತಿ ಮೊಗರಂಬವು
ಶಿವಪಥವೆನಿಪ ಮಾರ್ಗದೊಳು ತಾನಡಿಯಿಟ್ಟು
ಸುವಿಲಾಸ ಗಮಕದಿಂದಲಿ ಚರಿಸಾಡುವ ॥ ೨ ॥

ತ್ರಿವಿಧಪ್ರಸಾದವೆಂಬೀ । ಕವಳಗೊಂಡು
ಶಿವರಸಾಮೃತವನೀಂಟಿ
ಶಿವೋಹಮೆಂದೆನಿಸುವ ಸ್ವರವನಿಕ್ಕುತ ಬೇಗ
ಬುವಿಯೊಳು ಕೋರಣ್ಯ ಶಿವಲಿಂಗನಾಳುವ ॥ ೩ ॥

ಆಕರ : ಬಿ. 1398 (67 ಮುಂಭಾಗ)

ತನ್ನಂತೆ ಮಾಡಿದನೆ । ಚೆನ್ನ ಶ್ರೀಗುರು
ತನ್ನಂತೆ ಮಾಡಿದನೆ
ತನ್ನಂತೆ ಮಾಡಿದ ಎನ್ನನೊಲಿಸಿ ಬೇಗ
ಉನ್ನತ ಸುಖವನು ಚೆನ್ನಾಗಿ ತೋರಿಸಿ ॥ ಪಲ್ಲ ॥

ಭೂತವೆರಡರೊಳಗೆ । ತಾ ತೋರಿಸುವ
ಆತ್ಮನ ಒಳಹೊರಗೆ
ಸಾತ್ವಿಕಾತಿಶಯದೊಳಿರ್ಪ ಜ್ಯೋತಿಯು ಕೊನೆಯೊಳೆ
ಪ್ರೀತಿಯಿಂ ಮಿನುಗುವ ಜ್ಯೋತಿ ಮುತ್ತನೆ ತೋರಿ ॥ ೧ ॥

ಧಾರುಣಿವ್ಯೆಡಬಲದಿ । ಚಂದಿರ ಸೂರ್ಯ
ನೀರಿಗಿಳಿವುತೆ ರವಿ
ಮೇರೆಯೆನಿಸಿ ಮನವೇರೀಗ ಘನವತ್ತ
ಸಾರಿ ಸತ್ಯಲೋಕ ಸೂರೆಗೊಂಬುದ ತೋರಿ ॥ ೨ ॥

ನೀನೆ ನಿನ್ನೊಳು ನೋಡೆಂದು । ಹೇಳಲು ಕೇಳಿ
ನಾನೆ ನನ್ನೊಳು ನೋಡಲು
ಆನಂದವೆನಿಪ ಚಿದ್ಭಾನುವಿನಂದದಿ
ತಾನೆ ತಾನಾದನು ಕೋರಣ್ಯ ಶಿವಲಿಂಗ ॥ ೩ ॥

ಆಕರ : ಬಿ. 1398 (66 ಮುಂಭಾಗ)

---

* ಆದಿಯಲ್ಲಿ 'ಕೋರಣ್ಯದ ಸ್ವಾಮಿಗಳು ನಿರೂಪಿಸಿದ ವಚನ' ಎಂದಿದೆ.

ದೇವ ತೋರಿದನೆನಗೆ । ಶ್ರೀ ಗುರುರಾಯ
ತೋರಿ ತೋರಿದನೆನಗೆ
ಜೀವನ ಬುದ್ಧಿಯನಳಿದು ತನ್ನಯ ಪಾದ
ಸೇವೆಯೊಳಿರುವ ಮಹಾಘನನಾದಿಯ ॥ ಪಲ್ಲ ॥

ಆಸನ ಸ್ಥಿರನಾಗಿ । ಸಹಿನದ । ಲೇಸಿನ ತನುವಾಗಿ
ಸೂಸದನಿಲನಾಗಿ । ಪರಮ ಉ।ಲ್ಲಾಸದ ಮನವಾಗಿ
ನಾಸಿಕಾಗ್ರದ ಕಾಶಿಯ ಕ್ಷೇತ್ರದ
ವಾಸದೊಳಿರುವಂಥ ಈಶನ ನೋಡೆಂದು ॥ ೧ ॥

ಪಿಂಡದೊಳಿರುವಂಥ । ಮರವೆಯ । ಖಂಡಿಸಿ ಕಡೆಮಾಡು
ಕುಂಡಲಿ ಪಕ್ಕ್ರವನು । ಊರ್ಧ್ವಕ್ಕೆ । ದಂಡವಂಪದಿ ಮಾಡು
ಪಿಂಡ ಬ್ರಹ್ಮಾಂಡವುಯೆಲ್ಲರೊಳಿರುವ ಅ-
ಖಂಡ ಚಿದಬ್ವಯ ರೂಪನೊಳಾಡೆಂದು ॥ ೨ ॥

ಆರು ಚಕ್ರಗಳಿಂದ । ಮೇಲಕೆ । ತೋರುವ ಅಜರಂಧ್ರ
ಏರಿ ನಮಿಸುಯೆಂದ । ಅದರೊಳು । ತೋರುವ ಪ್ರಭೆ ಚಂದ
ಕೋರಾಣ್ಯದ ಶಿವಲಿಂಗೇಶನೊಲಿ
ದಾರೈದನುಭವ ಸುಧೆಯೊಳಗಿರಿಸಿದ ॥ ೩ ॥

ಆಕರ : ಬಿ. 1398 (67 ಮುಂಭಾಗ + ಹಿಂಭಾಗ)

ಧರ್ಮಸ್ಥಳದಲ್ಲಿರುವ ತಾಮ್ರಶಾಸನ

—ಕೆಳದಿ ಗುಂಡಾಜೋಯಿಸ್

ಧರ್ಮಸ್ಥಳವು ದಕ್ಷಿಣ ಭಾರತದಲ್ಲಿ ಪುರಾತನ ಪ್ರಸಿದ್ಧ ಯಾತ್ರಾಸ್ಥಳ. ಇದು ಯಾತ್ರಾಸ್ಥಳ ಮಾತ್ರವಲ್ಲದೆ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯ ಹಾಗೂ ಸರ್ವಧರ್ಮಸಮನ್ವಯತೆಯ ವಿಶಿಷ್ಟ ಕೇಂದ್ರವೆನಿಸಿ ಪುರಾತತ್ತ್ವ ಭಾಂಡಾಗಾರವೂ ಆಗಿದೆ. ಈ ಕ್ಷೇತ್ರದ ಧರ್ಮಾಧಿಕಾರಿಗಳಾದ ಶ್ರೀ ಹೆಗ್ಗಡೆ ಮನೆತನದವರು ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಿಪುಲ ಸೇವೆಗೆಯ್ದಿದ್ದಾರೆ. ಐತಿಹಾಸಿಕ ಪರಂಪರೆಯನ್ನು ಹೊಂದಿದ ಧರ್ಮಸ್ಥಳ ಹಾಗೂ ಹೆಗ್ಗಡೆ ಮನೆತನವು ಬಹುಕಾಲದಿಂದಲೂ ಪುರಾತನ ಸಾಮಗ್ರಿಗಳನ್ನು ಶೇಖರಿಸಿ ವಸ್ತುಸಂಗ್ರಹಾಲಯವೊಂದನ್ನು ಸ್ಥಾಪಿಸಿ ನಡೆಸಿಕೊಂಡು ಬರುತ್ತಿದೆ. ಅಪೂರ್ವ ಪ್ರಾಚ್ಯ ಸಂಗ್ರಹವುಳ್ಳ ಈ ವಸ್ತುಸಂಗ್ರಹಾಲಯವು ಕರ್ನಾಟಕದಲ್ಲಿಯೇ ಗಣನೀಯವಾದುದು.

ಧರ್ಮಸ್ಥಳವನ್ನು ಭಾರತದಲ್ಲಿಯೇ ಅಪೂರ್ವ ಸಾಂಸ್ಕೃತಿಕ ಕೇಂದ್ರವೊಂದನ್ನಾಗಿ ಪರಿವರ್ತಿಸಲು ಅಹರ್ನಿಶವೂ ಅಮಿತೋತ್ಸಾಹದಿಂದ ಕೂಡಿರುವ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಪುರಾತತ್ತ್ವ ಸಂಗ್ರಹ ಹಾಗೂ ಐತಿಹಾಸಿಕ ಸಂಶೋಧನೆಯಲ್ಲಿ ಗಮನಾರ್ಹವಾಗಿ ಆಸಕ್ತಿ ತಾಳಿದ್ದಾರೆ. ವಿದ್ವಾಂಸರಿಗೆ ಈ ದಿಶೆಯಲ್ಲಿ ಸಾಕಷ್ಟು ಪ್ರೋತ್ಸಾಹವನ್ನೂ ನೀಡುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದಲೂ ಶ್ರೀ ಧರ್ಮಸ್ಥಳ ಕ್ಷೇತ್ರದ ಪುರಾತತ್ತ್ವ ಹಾಗೂ ಚಾರಿತ್ರಿಕ ದಾಖಲೆಯ ಅನ್ವೇಷಣೆಯಲ್ಲಿ ನನಗೆ ನೀಡುತ್ತಿರುವ ಅವರ ಪ್ರೋತ್ಸಾಹವು ಅನುಪಮವಾದುದು.

ಶ್ರೀ ವೀರೇಂದ್ರ ಹೆಗ್ಗಡೆಯವರ ಪ್ರೋತ್ಸಾಹದಿಂದ ಲಭಿಸಿದ ಧರ್ಮಸ್ಥಳದ ಅಪ್ರಕಟಿತ ತಾಮ್ರಶಾಸನವೊಂದು ಗಮನಾರ್ಹವಾದುದು. ಇದು ಮಧ್ಯಕಾಲೀನ ಇತಿಹಾಸದಲ್ಲಿಯ ಸಾಂಸ್ಕೃತಿಕ ಕೊಡುಗೆಯಲ್ಲಿ ನೂತನ ಬೆಳಕನ್ನು ಹೊರಗೆಡವುತ್ತದೆ. ಔರಂಗಾಬಾದಿನಲ್ಲಿರುವ ಮರಾಠವಾಡಾ ವಿಶ್ವವಿದ್ಯಾಲಯದಲ್ಲಿ 1984ರಲ್ಲಿ ಜರುಗಿದ ಹತ್ತನೆಯ ಶಾಸನ ಶಾಸ್ತ್ರ ವಿದ್ವತ್ ಸಮ್ಮೇಳನದ ಅಧಿವೇಶನದಲ್ಲಿ ಇದರ ಸಾರಾಂಶವನ್ನು ನೀಡಲಾಗಿತ್ತು. ಶಾಸನದ ಪೂರ್ಣ ಪಾಠವನ್ನು ತೌಲನಿಕ ಅಧ್ಯಯನದೊಂದಿಗೆ ಇಲ್ಲಿ ನಿರೂಪಿಸಲಾಗಿದೆ.

ಶಾಸನ ವಿವರ

ಲಿಪಿ : ಕನ್ನಡ ; ಭಾಷೆ : ಕನ್ನಡ ; ತೂಕ : 1700 ಗ್ರಾಂ ;
ಪ್ರಮಾಣ : ಉದ್ದ 37–00 ಸೆ.ಮೀ ; ಅಗಲ : 32–6 ಸೆ.ಮೀ ;
ದೊರೆತ ಸ್ಥಳ : ಶ್ರೀ ಧರ್ಮಸ್ಥಳ ಕ್ಷೇತ್ರ.

ಮುಂಭಾಗ :

ಸಾಲು– 1 ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಖಾಬ್ದ ಸಂವತ್ಸರ ಗಳೂ ೧೬೨೨ನೆ ಸಂದ ವರ್ತಮಾನ ಧಾತುನಾಮ ಸಂವತ್ಸರ ಮಾರ್ಗ

2 ಶಿರ ಶು ೧೦ ಸೋಮವಾರದ ವರಿಗೆ ಪುತ್ತೂರಾದಿ ಗುಂಡ್ಲ ಕಂಮವ ಪತ್ತರ ಭೂತಾಲಹಳ್ಳಿಯಲ್ಲಿ ವಾಲಗದವರು ಡೋಳಿನ ಮ್ಯಲೆ ಜಿಳೀಪ

3 ಸ್ತ್ರ ಹಾಕಿಕೊಂಡು ಯಿರುವದ ನೋಡಿ ಯಿದು ನಿಮಗೆ ಸಲ್ಲದೆಂದು ಅಗಸರು ಹಿಡಿದರುಗನಕಯಿದು ನಮಗೆ ಯಾಕೆ ಸಲ್ಲುವದಿ

4 ಲ್ಲವೆಂದು ವಾಲಗದವರು ಕೇಳಿದರಿಂದಾ ಅಗಸರು ವ್ಯವಹಾರಕ್ಕೆ ಬರ ಹೇಳಿದ್ದರಿಂದಾ ಯಿಕರ್ತರು ಕೂಡಿ ವ್ಯವಾರ ಮಾಡಿಪ್ಪಲ್ಲಿ ದೇಶದವರು.

5 ಕೇಳಿ ಹದಿನೆಂಮ (ಟು ?) ಪಣದವರು ಕೂತುಕ್ಕೊಂಡು ಯಿವರ ಕುಲದ ಬಂಧುಗಳು ಅವರ ಕುಲಬಂಧುಗಳು ಸಹಾ ಕರಸಿ ಯಿವರ ಮಾತು ಅ

6 ವರ ಮಾತು ಸಹಾ ಕೇಳಿ ದೇಶದವರಲ್ಲಿ ದೊಡ್ಡ ಚಿಲ್ಲ ರಾಘವಶೆಟ್ಟಿರು ಆ ಗ್ರಾಮಾದಿಪತಿಗಳು ಗುರುವನಾಯುಕ ಯಿಂನೂ

7 ಸಮಸ್ತವಾದವರು ಕೇಳಿ ವಿಚಾರಿಸುವಲ್ಲಿ ವಾಲಗದವರಲ್ಲಿ ದೊಡ್ಡ ದಯಾಲಪುರಿ ವೆಂಕಟಪ್ಪಾ ಅಗಸರಲ್ಲಿ ದೊಡ್ಡ ಪ್ಯಾಟೆ ಪಾಳ್ಯದ

8 ವೆಂಕಟಪ್ಪ ಯಿವರು ಯಿಕ್ಕರ್ತರಂನು ಕರಸಿ ನಿಂಮಲ್ಲಿ ಯೇನೇನು ಮಾತುಗಳು ಯಿಕರ್ತರಲ್ಲಿ ಯಾರ ಮಾತು ತಪ್ಪು ಬಂದಲ್ಲಿ ದಿ

9 ವಾನರಿಗೆ ೧೨೦ ಚನ್ನಪಟ್ಣದವರ ಹಗಳುದೇವರ ತಪ್ಪುದೇಶದವರ ತಪ್ಪುಕುಲದವರ ತಪ್ಪುಕೊಟ್ಟು ಹೋಗಲುಳ್ಳವರೆಂದುವು

10 ಭಯರ್ತರಿಗೆ ನಿಷ್ಕರ್ಷೆ ಮಾಡಿ ದಿವಾನರಿಗೆ ತದ್ವಿಚಾರ ತಿಳಿಸಿ ಅಪ್ಪಣೆ ತೆಗದುಕೊಂಡು ಕಂಚಿಯಲ್ಲಿ ಯಾರ್ಯಾ

11 ರಿಗೆ ಕೃಷ್ಣರಾಯರು ತಮ್ಮ ಕಾಲದಲ್ಲಿ ಯಾವ ಮೇರೆ ನಡಿಯುತಕ್ಕ ಪದ್ಧತಿಗಳು ಅಲ್ಲದೆ ತಿರುವದಿಲ್ಲವೆಂದು ಯಿಕ್ಕ

12 ತರಾನು ದೇಶದವರು ದಿವಾನರು ಕಳುಹ್ಸಿದರುಗನಕ ಅವರು ನೀವು ಕೂಡಾ ಬಂದಿರಿಗನತ **ದನಪಾಲಶೆಟ್ರರು*** ಗುಂಡಾ

13 ಲೈಯ್ಯನವರು ಸಹ ಕೂಡ ಬಂದು ಕಂಚಿಯಲ್ಲಿ ಗ್ರಾಮಾದಿಪತಿಗಳು ಗ್ರಾಮಕರಣೀಕರು ಅದಿಪತಿಗಳು ದೇಶದವರು

14 ಕೇಳುವಲ್ಲಿ ಯಿಾ ಧರ್ಮ ಯಿದ್ದದು ಆರತಾಟು ಮಂಮದ ಹಸೇನು ವೇಲೂರು ಬರದಿ ರಾಮಂಣ–ಕಾಳಾಸ್ತಿ ಕೋಟೆಯವ

15 ರು ತಿರುವಳೂರವರು ಆರಣಿ ಸರಣಪ್ಪಾ–ಚೆಂನಪಟ್ಣದ ವೆಂಕಟಾ ಚಲಂ—ತಿರುಪತಿಯವರು ವಾಲಾಜಿ ಪ್ಯಾಟೆಯವ

16 ರು—ಸಮಸ್ತ ದೇಶದ ವಾಲಗದವರ ಕುಲಸ್ತ್ರರಿಗು ಕಂಚಿಯಲ್ಲಿ ಯೇಕಾಂಬರೇಶ್ವರನ ಸಂನಿಧಿಯಲ್ಲಿ ತೀರಿದದ ಶಾಸನ

17 ಪತ್ರಿಕ - ಯಿವರು - ಯವರು ಸಂಮತಿಪಟ್ಟುಯಿದಾರೆ—ಶ್ರಿಮಸ್ವಸ್ತಿ ಸಮಸ್ತ ಸದ್ಗುಣ ಸಮಗ್ರೀವ ವಿಶೇಷ ಭಾನು

18 ತರಾದ ಯಿಾಶ್ವರ ನಯನನಿರ್ಮಿತ ನಯನಕ್ಷತ್ರಿಯರಾದ ಶ್ರಿ ಮಹಂಮೇರುವೆಗೆ ದಕ್ಷಿಣದಿಗ್ಭಾಗದಲ್ಲಿ ಮಂಗಳ

19 ಮುನಿಮಂಗಳ ವೃಕ್ಷಮಂಗಳ ಸೂತ್ರಮಂಗಳಾರತಿ ಮಂಗಳ ವಾದ್ಯಪರರಾದ ಅಂಗರಂಗಭಯಾಂಕಿತ ಗಂಡಗೊಂಡಾ

20 ಯುಧ ದಂಡೀಶದರರಾದ ಶ್ರೀಮದಖಂಡಿತ ಲಕ್ಷ್ಮಿಪೂಜಿತರಾದ ಗರುಡ ಕೇತನ ಕಿಂಪುರುಷ ಅಂಗ ತರಂಗ ಭಯಂಕರ

21 ಅಮ್ಮೃತ ಕಲಶದ ಬಸ್ಕೀಲು ಸ್ತೂಲದ ಕೆತ್ತಿ ಪೇಚರದ ಗೋರಕಲ್ಲು ಗಡ್ಡಣಯುಧ ದಂಡೀಶಧರರಾದ ಪಂಚವರ್ನ ಬಿರು

22 ದುಗಳಿಗೆ ಆಶೆಯಪರರಾದ ಪಂಚಮಹಾವಾದ್ಯಗಳಿಗ ಅಧೀನಪರರಾದ ಪಂಚವರ್ನ ಪುಷ್ಪಗಳಿಗೆ ಆಶ್ರಿಯ

23 ಪರರಾದ ನವರತ್ನಾಭರಣ ಮರಕತ ಮಾಣಿಕ್ಯ ವಜ್ರ ವೈಡೂರ್ಯ ಮಣಿಖಚಿತಭೂಷಣರಾದ ಚಿನಿ ಚೀನಾಂ

24 ಬರಧಾರಿಗಳಾದ ನಾಗಸ್ವರ ಮುರಳಿ ವೇಣುನಾದ ಮಂಡಲ ಸೂರ್ಯ ಮಂಡಲ ವಾದ್ಯಪರರಾದ ತುಂಬುರ ನಾರದ

25 ವೀಣರುದ್ರವೀಣ ಸಾರಂಗಸಿತಾರುರ ಬಾಬು ಸ್ವರಮಂಡಲ ಸಂಗೀತ ಮಂದಾರ ಮದ್ಯಮ ಪಂಚಮ ಸ್ವರ ಷಡುಮ

---

* ಧನಪಾಲಶೆಟ್ರರು

26 ಸ್ವರಸಮಕಾಲ ಸಪ[1] ಮಸ್ವರ ನಾನಾವಿಧವರ್ನಗೀತ ತಾನ ಅಕ್ಷರತಾನ
ಸ್ವರಭೇದ ಸಂಗೀತರತ್ನಾಕರನಾಟಕಾರ್ಯಾಭಿನಯನ

27 ಶೋಭಿತಪರರಾವ ತ್ರಿಲೋಕಧರ್ಂಮ್ಮತ್ರಿ ಅಶ್ವಭೂತ ಆಯುರ್ವೇದ
ಚಿಂತಮ ವೈದ್ಯಶಾಸ್ತ್ರ ಪರಿಶೋಭಿತ ಪುರುಷಾಂಪ್ಯ

28 ಗ ಬಿರುದಾವಳಿಗಳಾದ ಮಕುಟಾಲಂ ಕೃಭೂಷರಾದ ಕಾಸಿಯಲ್ಲಿ
ಸುಂಕಾ ತೀರಿಸಿದ ಮಹಾಶೂರರಾದ ಕಾಸಿಮುಚು

29 ಕುಂನ ಚಕ್ರವರ್ತಿಯು ವರಕೃಪಾಪಾತ್ರರಾದ ಅಮ್ಮುತಪುಂಗಾವ ಗಂ-
ಗೋಬಿ ಶುಭಮಂಗಳ ಸರಿಗೆದ್ದುಗೆ ಸಿಂಹ್ಮಾಸನಾಧೀಶ್ವರಪಾ

30 ದಪ್ರೊಹುಂಗೆ ತೀರಿಸಿದಲ್ಲಿ ಕಂಚಿಯಲ್ಲಿ ಗ್ರಾಮಹಾಧಿಪತಿಗಳು ದೇಶವರು
ದೊಡ್ಡ ಮನುಷ್ಯರು ಸುಬ್ಬಾದೀಕ್ಷಿತ ಮಹಿನಿ ರಾಮಾಶಾಸ್ತ್ರಿ

31 ಗಳು ವರದೈಯನವರು ರಾಮಾನುಜೈಯ್ಯನವರು ಕೊಂಡಾವಧಾನಿ
ಗಳು ತಂಮ್ಮವಧಾನಿಗಳು **ಧನಪಾಲಶೆಟ್ರರು**[2] ಯಿಾ ಸ.

ಹಿಂಭಾಗ :

1 32 ಮಸ್ತರು ಹದಿನೆಂಟ್ತು ಪಣದವರು ಸಹ ಸೇರಿಸಿ ಅವರಿಂನ ಕೇಳಿದ್ದು
ಯೇನಂದರೆ ಡೋಳಿನ ವ್ಯಾಲೆ ಬಿಳೀವಸ್ತ್ರಾ ಹಾಕಿಕೊಂ

2 33 ಡು ಪಾಲಗವವರು ಯಿರುವಲ್ಲಿ ಆಗಸರು ಅಡ್ಡಿ ಮಾಡಿದ್ದರಿಂದಾ
ನವಗೆ ಯೇನು ಸಲತ್ಕರಿದೆಯೊ ಅವರುಗಳು ಕಚ್ಚೆಯಲ್ಲಿ ಶ್ಯಾ

3 34 ಸನ ಪ್ರಕಾರ ಯಿದ್ದ ಹಾಗೆ ಧರ್ಮದಲ್ಲಿ ತೀರಿಸಬೇಕು ಯಂದು ಬಿಂ-
ನೈಸುವಲ್ಲಿ ಯಿಾ ಸಬೆಯುವರು ನೋಡಿ ಆ ಶ್ಯಾಸನವಂ

4 35 ನು ನೋಡುವವಕ್ಕೆ ಶ್ಯಾನೆ ಕರ್ಚು ಮುಟ್ತಿಸಬೇಕು ಯಂದು ಹೇಳಿ
ದರು ಅದಕ್ಕೆ ಆದರೇನು ಯಂದರೆ ಯಿಂತ್ತಾ ಸ್ತಳಕ್ಕೆ ನೀವು

5 36 ಯಾಕೆ ಬಂದಿರಿ ಯಂದು ಕೇಳುವಲ್ಲಿ ಯಿಾಗ ಯಿಾಕ್ಕರ್ತರು ೨೦೯೦*
ವರಪ ಕರ್ಚು ಮುಟ್ಟಿಸಿ ತೆಗಿಸಿಯಂದು ಸಭೆಯವರು ಕೇಳು

6 37 ಪಾಲಗದವರು ೨೦೦೦ ಯರಡು ಸಾವಿರ ವರಹ ಆಗಸರು ೨೦೦೦
ಯರಡು ಸಾವಿರ ವರಹ ಯಿಾ ನಾಲ್ಕು ಸಾವಿರ ವರಹ ಸಾಲದೇ

7 38 ಹೋದಲ್ಲಿ ಯಿಂನು ಸಾಲಾ ತೆಗದು ಆ ಶ್ಯಾಸನದಲ್ಲಿ ಯಿದ್ದ ಪ್ರಕಾರ
ಯಿವರು ನಡಿಯತಕ್ಕ ಪದ್ಧತಿ ಅವರಿಗೆ ನೀವು ನಡಿಯ

1, 2 ಪ.ಹೊ.ಪಾ.ದಲ್ಲಿಲ್ಲ.

* ೨೦೦೬೦ ಇರಬಹುದಾಗಿದೆ– ೨೦೦೯೦ > ೨೦೦೬೦ ?

8 39 ತಕ್ಕ ಪದ್ಧತಿ ಮತ್ತು ಆ ಕಾಲದಲ್ಲಿ ಕೃಷ್ಣರಾಯರು ಕಂಚಿಯಲ್ಲಿ ಯೇಕಾಂಬರೇಶ್ವರ ಸಂನಿಧಿಯಲ್ಲಿ ಯಿರುವ ಶ್ಯಾಸನದ

9 40 ಲ್ಲಿರುವದು ಯೇನೆಂದರೆ ವಾಲಗದವರು ಹಿಡಿಯುವ ಆಯುಧ ಸೂರ್ಯನಿರ್ಮಿತವಾದ ಕಲ್ಲುಚಂದ್ರ ನಿರ್ಮಿತವಾದ ಆ

10 41 ಯುಧ ನೃಪಾಲರಿಗೆ ಸರಿಯಾದ ಸಮಗದ್ದುಗೆ ಕ್ಷವುರಿತನಿಗೂ ಸರಿ-ಗದ್ದಿಗೆ ಆದ್ದಂದಾ ಆಗ ಕೃಷ್ಣರಾಯರುಗಳಿಗ ಸಲತಕ್ಕ ಬಿ

11 42 ರುದುಗಳು ಬಿಳಿ ಆನೆ ಬಿಳಿ ಕುದುರೆ ವಹನವು ಅಂದೋಳಿಕ ಶ್ವೇತ ಛತ್ರಿ ಪಂಚತುರಾಯಿ ತಲ್ಕಿ ತರಾಯಿ ಬಿಳಿವಸ್ತ್ರಾಹ

12 43 ಸುರುವಸ್ತ್ರ ನೃಪಾಲರಿಗೆ ಸಲತಕ್ಕದು ಯೆಂದು ಶ್ಯಾಸನದಲ್ಲಿ ಬರಸಿ ಯಿರುವದು ಮತ್ತು ಅರಸರಿಗೆ ಸಲತಕ್ಕದು ಯೇನೆಂದರೆ ಗಡಬಂ

13 44 ಡೆ ಅಳಗೆ ದೀವ್ಟಿ ಸಲ್ಲುವದೆಂದು ಶ್ಯಾಸನದಲ್ಲಿ ಬರಸಿ ಯಿದ್ದೀತು ಯಿಾ ಸಭೆಯವರು ನೋಡಿ ವಿಚಾರಿಸಿ ಯಿಷ್ಟು ಮಾತ್ರಕ್ಕೆ ವಿವಾ

14 45 ದ ಮಾಡಿ ಯಿಷ್ಟು ದೂರ ಯಾಕೆ ಬಂದಿರಿ ಯೆಂದು ಅಗಸರ ಕೇಳಿ ದಲ್ಲಿ ತುಚ್ಚು ಹಿಡಿದು ಬಂದೆವು ಯೆಂಬದಾಗಿ ಹೇಳಿದರು.

15 46 ದಿವಾನರು ದೇಶದವರು ಸಭೆಯವರು ಚತುರ್ದಿಕ್ಕುಗಳಿಗೆ ಛ್ಯಪತ್ತಾರು ದೇಶಗಳಿಗು ವಾಲಗದವರು ಸರ್ವವಿ

16 47 ಧದಲ್ಲಿ ಬೇಕಾಗಿರುವದ್ದರಿಂದಾ ವಾಲಗದವರಿಗೆ ಕೈದಾರೆ ಅಕ್ಕಿ ಮಲ್ಲಿಗೆ ಹೂವು ಸಹ ಪ್ರಸ್ತಕಾಲದಲ್ಲಿ ಯಿವರಿಗೆ ಸ

17 48 ಲತಕ್ಕದು ಯೆಂದು ತಿಳಿದು ಳಳ ಗ್ರಾಮಾದಿಗಳಲ್ಲಿ ನಡಿಯುವ ಪದ್ಧತಿ ವಾಲಗದವರು ಮನೆಯಲ್ಲಿ ಮದುವೆಯಾ

18 49 ದರೆ ಅಗಸರು ಬಟ್ಟೆ ಬರೆ ಮಾಡಿ ಮಾಡುವದು ಪಂತಿಗೆ ಪ್ಯಾಟಕ್ಕೆ ಬಟ್ಟೆ ಹಾಸುವದು ದೀವಿಟಿ ಹಿಡಿಯುವದು ನೆಡಮು

19 50 ಡಿ ಹಾಸುವದು ಚಪ್ಪರಕ್ಕೆ ಮೇಲುಕಟ್ಟು ಕಟ್ಟುವದು ಅಗಸರ ಮನೆ ಯಲ್ಲಿ ಮದುವೆ ಆದರೆ ವಾಲಗದವರು ಕಾಲುಗುರು

20 51 ತೆಗೆಯುವದು ಪಂಸೆ ತೆಗೆಯುವದು ಪ್ಯಾಳ ಮಾಡತಕ್ಕದ್ದು ಯಲ್ಲ ಯಿದು ಕಂಚಿಯಲ್ಲಿ ನಡೆಯುವ ಪದ್ಧತಿ ನೀವು ದೊ

21 52 ಡ್ಡ ಮನುಷ್ಯರು ಯಿವರಂಸ ಯಿಲ್ಲಿ ಪರಿಯಂತ್ರ ಕಳುಹಿಸಿದಿರಿಗಾಸಕ ಯಿಲ್ಲಿ ನಾವು ಅಧಿಪತಿಗಳಾಗಿ ಯಿದ್ದು ಗ್ರಾಮಾದಿ

22 53 ಗಳಲ್ಲಿ ಯಿದ್ದ ಪ್ರಕಾರ ತೀರಿಸಿ ಯಿವರುಗಳ ರಮಾನೆ ಮಾಡಿದೆವು ಯಿಾ ಮೆರೆ ನಡತೆ ನಡಯದೆ ಯಾರಾದರು ತಿರಿಗಿ ಬ

23 54 ದ್ದರೆ ಅವಸ್ಥಳದಲಿ ಅವರಿಗೆ ತಕ್ಕ ಸೀಕ್ಷೆ ಮಾಡತಕ್ಕದು ಮಾಡುವರಪ
ವ್ಯವಹಾರ ಅಗಸರು ಮಾಡಿದರುಗನಕ ಆದ್ದರಿಂದ

24 55 ಅಗಸರದು ನ್ಯಾಯುವಲ್ಲ ಅಗಸರ ಕೈಲಿ ತಪ್ಪು ದಿವಾನರಿಗು ದೇಶಕ್ಕು
ಕುಲಕ್ಕು ಸಹಾ ತೆಗದುಕೊಂಡು ಅನಂತರ ಯುದ

25 56 ಕ್ಕ ಯುವರಿಗು ಅವರಿಗು ಸಹಾ ತೀರ್ಪು ಕೊಟ್ಟದ್ದರಿಂದಾ ಯುವರು
ತೆಗದುಕೊಂಡು ಹೋದರು ಅವರು ತೆಗದುಕೊಂ

26 57 ಡು ಹೋದರು ಗುರುಗಳು ಮುಂತಾಗಿ ದಿವಾನರು ಮುಂತಾಗಿ ದೇಶ
ದವರು ಮುಂತಾಗಿ ಹದಿನೆಂಟ್ಟು ಪಣದವರು

27 58 ಮುಂದೆಯು ತೀರಿದ್ದೆ ಹೊರ್ತು ಮತ್ತು ಬ್ಯಾರೆಯುಂದಿರಿ ಯಾ
ಪ್ರಕಾರ ತೀರಿಸಿದವರು - ಸುಬ್ಬಾದೀಕ್ಷಿತರು -

28 59 ಮಹಿನಿ ರಾಮಶಾಸ್ತ್ರಿಗಳು–ವರದೈಯನವರು–ರಾಮಾಜೈಯನವರು
ಕೊಂಡಾವದಾನಿಗಳು

29 60 ತಿಂಮಾವದಾನಿಗಳು - ದಿವಾನರು - ದೇಶದವರು ಸಹ ತೀರಿಸಿದ ತೀ-
ರ್ಪು - ಪಾಲಗದವರಲ್ಲಿ ಯುದ್ದವರು ಕಂಚಿ ಮುತ್ಯಾಲೈ

30 61 ಯ್ಯನವರು.

ವಿಶ್ಲೇಷಣೆ : ಈ ತಾಮ್ರಶಾಸನದ ತಗಡಿನ ಚೌಕಟ್ಟಿನ ನಾಲ್ದೆಸೆಯಲ್ಲಿಯೂ ಎರಡೆರಡು ಸಾಲು ಗೆರೆಗಳಿವೆ. ಕ್ರಿ.ಶ. ೧೭೦೦ರ ಈ ಶಾಸನವು ಅಚ್ಚ ಕನ್ನಡ ಲಿಪಿಯಲ್ಲಿದ್ದು ಓದಲು ಸುಲಭಗ್ರಾಹ್ಯವಾಗಿದೆ. ಉತ್ತರಾದಿ ಗುಂಡ್ಲಕಂಮದ ಹತ್ತಿರ ಇರುವ ಭೂತಾಲಹಳ್ಳಿಯಲ್ಲಿ ಓಲಗ (ವಾದ್ಯ) ದವರಿಗೂ ಹಾಗೂ ಅಗಸರಿಗೂ ನಡೆದ ತಂಟೆ ತಕರಾರಿನ ವ್ಯವಹಾರವಲ್ಲಿ ಅಗಸರ ಕರ್ತವ್ಯಗಳಲ್ಲಿ ಒಂದೆನಿಸಿದ್ದ ಬಿಳಿವಸ್ತ್ರ ಹಾಕುವ ಧಾರ್ಮಿಕ ಕಟ್ಟುಪಾಡನ್ನು ಓಲಗದವರು ಕ್ರಮತಪ್ಪಿ ಸಂಪ್ರದಾಯಬದ್ಧತೆಯನ್ನು ಮೀರಿ ಕೈಗೊಂಡಿದ್ದುದರ ಕ್ರಮಬದ್ಧತೆಯನ್ನು ನ್ಯಾಯಾಲಯದ ಮುಖಾಂತರ ಬಗೆಹರಿಸಿಕೊಡಲು ಅಗಸರು ಕೇಳಿಕೊಂಡರು. ಇದನ್ನು ಗ್ರಾಮಸಭೆಯಿಂದ ಆರಂಭಿಸಿ ಉಚ್ಚನ್ಯಾಯಾಲಯದ ವರೆಗೂ ಮೂರು ವಿಭಾಗದಲ್ಲಿ ಸೇರ್ಪಡಿಸಿರುವುದು ಈ ಶಾಸನದಲ್ಲಿ ಕಂಡುಬಂದ ಪ್ರಮುಖ ಅಂಶವಾಗಿದೆ. ಆಯಾ ವಿಭಾಗಗಳಲ್ಲಿದ್ದ ನ್ಯಾಯವಾದಿಗಳ ಹಾಗೂ ತೀರ್ಪು ನೀಡಿದವರ ಹೆಸರುಗಳೂ ಶಾಸನದಲ್ಲಿ ಉಲ್ಲೇಖಿಸಿರುವುದು ಕುತೂಹಲವನ್ನುಂಟುಮಾಡುತ್ತವೆ.

ಗ್ರಾಮಮಟ್ಟದಲ್ಲಿ

I ಗ್ರಾಮ ಪ್ರಮುಖರು — ದೊಡ್ಡಚಿಲ್ಲಿ ರಾಘವ ಶೆಟ್ಟರು.
ಗ್ರಾಮಾಧಿಪತಿ — ಗುರುವನಾಯಕ.

II ನ್ಯಾಯವಾದಿಗಳು
ಓಲಗದವರ ಪರವಾಗಿ — ದೊಡ್ಡದಯಾಲಪುರಿ ವೆಂಕಟಪ್ಪ.
ಅಗಸರ „ — ದೊಡ್ಡಪ್ಯಾಟೆ ಪಾಳ್ಯದ ವೆಂಕಟಪ್ಪ.

ಶಾಸನದಲ್ಲಿಯೇ ಉಕ್ತವಾಗಿರುವಂತೆ ನ್ಯಾಯ ತೀರ್ಪಿಗೆ ಬರುವ ಮುನ್ನ ದಿವಾನರಿಗೆ ನಿವೇದಿಸಿಕೊಂಡು ಚನ್ನಪಟ್ಟಣದ ಹಗಳು ದೇವರಿಗೆ, ದೇಶದವರಿಗೆ ಹಾಗೂ ಕುಲಪ್ರಮುಖರಿಗೆ ತಪ್ಪುಗಾಣಿಕೆ ಸಲ್ಲಿಸಿ ದಿವಾನರಿಗೆ ೧೨೦ (ವರಹ ?) ಸಲ್ಲಿಸಲು ತೀರ್ಮಾನ ಕೈಗೊಳ್ಳಲಾಯಿತು. ಕಂಚಿಯ ಶ್ರೀ ಏಕಾಂಬರೇಶ್ವರನ ಸನ್ನಿಧಿಯಲ್ಲಿ ಈ ಹಿಂದೆ ನೀಡಿದ ಶಾಸನದಲ್ಲಿ ಉಲ್ಲೇಖಿಸಿದ ಮೇರೆಗೆ ಧಾರ್ಮಿಕ ಕಟ್ಟಳೆಗೆ ಬದ್ಧರಾಗಿರತಕ್ಕದೆಂದು ಒಪ್ಪಿಕೊಳ್ಳಲಾಯಿತು. ಈ ಶಾಸನದಲ್ಲಿ ಸಮಸ್ತ ದೇಶದ ಓಲಗದ ಕುಲದವರಿಗೂ ಧಾರ್ಮಿಕ ನೀತಿಯಲ್ಲಿ ಅನ್ವಯಿಸುವಂತಹ ಕಟ್ಟುಪಾಡುಗಳನ್ನೊಳಗೊಂಡು ಈ ಕೆಳಕಂಡ ಪ್ರಮುಖರ ಸಮ್ಮುಖದಲ್ಲಿ ಶಾಸನ ಬರೆಸಿದುದು ಕಂಡುಬರುತ್ತದೆ.

ಶಾಸನದಲ್ಲಿ ಉಲ್ಲೇಖಿಸಿದ ಭಾಗವಹಿಸಿದ್ದ ಪ್ರಮುಖರ ಹೆಸರು

೧. ಧನಪಾಲ ಶೆಟ್ಟರು (ಶ್ರೀ ಧರ್ಮಸ್ಥಳ?)
೨. ಗುಂಡಾಲಯ್ಯನವರು
೩. ಕಂಚಿಯಲ್ಲಿ ಗ್ರಾಮಾಧಿಪತಿಗಳು (ಹೆಸರು ಉಲ್ಲೇಖವಿಲ್ಲ)
೪. ಗ್ರಾಮ ಕರಣೀಕರು („)
೫. ಮಮ್ಮದ ಹಸೇನು (ಮಹಮ್ಮದ ಹಸೆನ್)
೬. ಬರದಿ ರಾಮಣ್ಣ (ವೇಲೂರು)
೭. ಕಾಳಾಸ್ತಿ ಕೋಟೆಯವರು (ಕಾಳಹಸ್ತಿ? ಹೆಸರು ಉಲ್ಲೇಖವಿಲ್ಲ)
೮. ತಿರುವಳೂರವರು (ಹೆಸರು ಉಲ್ಲೇಖವಿಲ್ಲ)
೯. ಆರಣಿ ನರಣಪ್ಪ
೧೦. ಚೆನ್ನಪಟ್ಣದ ವೆಂಕಟಾಚಲಂ
೧೧. ತಿರುಪತಿಯವರು (ಹೆಸರು ಉಲ್ಲೇಖವಿಲ್ಲ)
೧೨. ವಾಲಾಜಿ ಪ್ಯಾಟೆಯವರು („)

ಅಪ್ರಕಟಿತವಿರಬಹುದೆಂದು ಕಂಡುಬರುವ ಐತಿಹಾಸಿಕ ಅಂಶಗಳನ್ನೊಳಗೊಂಡ ಈ ಮೂಲ ಶಾಸನದಲ್ಲಿ ಕೃಷ್ಣರಾಯರಿಗೆ ಸಲತಕ್ಕ ಬಿರುದುಗಳು ಬಿಳಿ ಆನೆ, ಬಿಳಿ ಕುದುರೆ, ಆಂದೋಳಿಕ, ಶ್ವೇತಛತ್ರಿ, ಪಂಚತುರಾಯಿ, ಕಲ್ಕಿತುರಾಯಿ, ಬಿಳಿವಸ್ತ್ರ, ಹಸುರು ವಸ್ತ್ರ ಇವುಗಳು ನೃಪಾಲರಿಗೆ ಸಲ್ಲತಕ್ಕದು ಎಂಬ ಉಲ್ಲೇಖವಿರುವುದನ್ನೂ ಪುನರುಚ್ಚರಿಸಿದುದು ಗಮನಾರ್ಹ ಹಾಗೂ ಕುತೂಹಲಕರ ಅಂಶಗಳಾಗಿವೆ. ಅಂತೆಯೇ ಕಂಚಿಯಲ್ಲಿ ಭಾಗವಹಿಸಿದವರ ಹೆಸರುಗಳೂ ಈ ಕೆಳಕಂಡಂತಿದ್ದು ಆಸಕ್ತಿಯನ್ನು ಕೆರಳಿಸುತ್ತವೆ.

ಮೂಲಪಾಠದಲ್ಲಿ ಇರಬಹುದಾದ ಹೆಸರುಗಳು

೧. ಗ್ರಾಮಾಧಿಪತಿಗಳು (ಹೆಸರು ಉಲ್ಲೇಖವಿಲ್ಲ)
೨. ಸುಬ್ಬಾದೀಕ್ಷಿತರು
೩. ಮಹಿನಿ ರಾಮಾಶಾಸ್ತ್ರಿಗಳು
೪. ವರದೈಯ್ಯನವರು
೫. ರಾಮಾನುಜಯ್ಯನವರು
೬. ದನಪಾಲಶೆಟ್ಟರು (ಶ್ರೀ ಧರ್ಮಸ್ಥಳ ?)
೭. ಕೊಂಡಾವದಾನಿಗಳು
೮. ತಮ್ಮಾವದಾನಿಗಳು
೯. ಹದಿನೆಂಟು ಪಣಗಳು (ಹೆಸರು ಉಲ್ಲೇಖವಿಲ್ಲ)

ಶಾಸನಪಾಠದಲ್ಲಿ ಕಂಡುಬಂದ ತೀರ್ಪುಗಳು

ಈ ಶಾಸನದಲ್ಲಿಯೇ ವರದಿ ಉಲ್ಲೇಖಿಸಿದಂತೆ ಸಾಮಾನ್ಯ ಜನತೆಗೆ ಮಾರ್ಗ ಕ್ರಮಣಕ್ಕೆ ಕಷ್ಟವಾಗಿರುವ ಆ ಕಾಲದಲ್ಲಿ ನ್ಯಾಯಾಧೀಶರು ಹಳ್ಳಿಯ ಅಗಸರನ್ನು ಪ್ರಶ್ನಿಸಿ ಇಷ್ಟು ಅಲ್ಪ ವಿಷಯಕ್ಕೆ ಬಹು ದೂರ ಬಂದಿರುವ ಅವರ ಅಜ್ಞಾನ ವನ್ನು ಕಂಡು ಮರುಗಿ, ಅಂತ್ಯದಲ್ಲಿ ಕೈಗೊಂಡ ತೀರ್ಮಾನವನ್ನು ಗಮನಾರ್ಹವಾಗಿ ಈ ರೀತಿ ಬಿತ್ತರಿಸಿದೆ—

೧. ಓಲಗದವರ ಸೇವೆ ಎಲ್ಲ ವಿಧಗಳಲ್ಲಿ ಆಗತ್ಯವಿರುವುದರಿಂದ ೪೪ ಗ್ರಾಮಗಳಲ್ಲಿ ಅವರಿಗೆ ಸಲ್ಲತಕ್ಕ ಮಾಮೂಲಾದಿ ಮರ್ಯಾದೆಗಳನ್ನು ಸೂಕ್ತ ರೀತಿಯಲ್ಲಿ ಸಲ್ಲಿಸಬೇಕು.

೨. ಓಲಗದವರ ಮನೆಯಲ್ಲಿ ಮದುವೆಯಾದಲ್ಲಿ ಅಗಸರು ಬಟ್ಟೆ ಶುದ್ಧ ಮಾಡುವುದು, ಪಂಕ್ತಿಗೆ ಊಟಕ್ಕೆ ಬಟ್ಟೆ ಹಾಸುವುದು, ದೀವಟಿ ಹಿಡಿಯುವುದು, ನೆಡಮುಡಿ ಹಾಸುವುದು, ಚಪ್ಪರಕ್ಕೆ ಮೇಲುಕಟ್ಟು ಕಟ್ಟುವುದು ಮುಂತಾದುವುಗಳನ್ನು ಕೈಗೊಳ್ಳತಕ್ಕದು.

೩. ಅಗಸರ ಮನೆಯಲ್ಲಿನ ವಿವಾಹ ಸಮಾರಂಭಗಳಲ್ಲಿ ಓಲಗದವರು ಕಾಲುಗುರು ತೆಗೆಯುವುದು, ಪಂನೆ ತೆಗೆಯುವುದು, ಮೇಳ ಮಾಡುವುದು ಇವುಗಳನ್ನು ಕೈಗೊಳ್ಳತಕ್ಕದು.

೪. ಮೂಲ ಶಾಸನದಲ್ಲಿಯೇ ಪ್ರಸ್ತಾವಿಸಿದಂತೆ ಕಂಚಿಯಲ್ಲಿ ಅನಾದಿಯಿಂದಲೂ ಇದೇ ಪದ್ಧತಿಯಿರುವುದರಿಂದ ಇದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸ ತಕ್ಕದು.

೫. ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಲ್ಲಿ ಅದಾ ಸ್ಥಳದಲ್ಲಿಯೇ ಅವರಿಗೆ ಶಿಕ್ಷೆ ವಿಧಿಸತಕ್ಕದು.

ತೀರ್ಪನ್ನು ನೀಡಿದ ನ್ಯಾಯಾಧೀಶರುಗಳ ಹೆಸರನ್ನೂ ಶಾಸನ ಪಾಠವು ಈ ರೀತಿ ಲಿಖಿಸಿದೆ—

೧. ಸುಬ್ಬಾದೀಕ್ಷಿತರು
೨. ಮಹಿನಿ ರಾಮಶಾಸ್ತ್ರಿಗಳು
೩. ವರದೈಯನವರು
೪. ರಾಮಾಜೈಯನವರು
೫. ಕೊಂಡಾವಧಾನಿಗಳು
೬. ತಿಂಮಾವಧಾನಿಗಳು
೭. ದಿವಾನರು (ಹೆಸರು ಉಲ್ಲೇಖವಿಲ್ಲ)
೮. ದೇಶದವರು (,,)

ತೀರ್ಪಿನ ಕಾಲದಲ್ಲಿ ಕಂಚಿಯಲ್ಲಿ ಓಲಗದ ಪರವಾಗಿ ಕಂಚಿ ಮುತ್ತಾಲಯ್ಯನವರಿದ್ದುದನ್ನು ಶಾಸನವು ಹೇಳಿದೆ.

ಉಪಸಂಹಾರ: ಈ ಶಾಸನವು ಎರಡು ದೃಷ್ಟಿಯಲ್ಲಿ ಗಮನಾರ್ಹವಾಗಿದೆ. ಅದರಲ್ಲಿ ಮುಂಚಿನ ಶಾಸನದ ಪ್ರಸ್ತಾಪವಿದೆ. ಈ ಶಾಸನವನ್ನು ನ್ಯಾಯ ತೀರ್ಮಾನಕ್ಕೆ ಬಳಸಿಕೊಂಡು ಆಧಾರವಾಗಿಟ್ಟುಕೊಳ್ಳಲು ಪ್ರಕೃತ ಶಾಸನದಲ್ಲಿ ಮೌಲ್ಯವನ್ನು ನಿರ್ಧರಿಸಿದ ಸಂಗತಿಯನ್ನೊಳಗೊಂಡಿದೆ. ಹದಿನಾರು-ಹದಿನೇಳನೆಯ

ಶತಮಾನದ ಸುಮಾರಿನಲ್ಲಿ ಗ್ರಾಮಮಟ್ಟದಿಂದ ಆರಂಭಿಸಿ ರಾಜ್ಯದಲ್ಲಿ ಪ್ರಚಲಿತ ವಿರುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮತ್ತು ಧಾರ್ಮಿಕ ರೀತಿಯಲ್ಲಿ ನ್ಯಾಯ ವಿತರಣೆಯ ಸ್ವರೂಪವನ್ನು ವಿಧಿವತ್ತಾಗಿ ನಿರೂಪಿಸಲ್ಪಟ್ಟಿದೆ. ವರದಿಯೋಪಾದಿ ಯಲ್ಲಿರುವ ಈ ಶಾಸನದಲ್ಲಿ ನ್ಯಾಯ ತೀರ್ಪಿನಲ್ಲಿ ಅನುಸರಿಸುತ್ತಿದ್ದ ಕ್ರಮಗಳು, ಬಿಕ್ಕಟ್ಟಿಗೆ ಪರಿಹಾರಗಳು, ಅದಕ್ಕನುಸಾರವಾಗಿ ಆರ್ಥಿಕ ಸೌಲಭ್ಯಗಳು ಗಮನಾರ್ಹ ವಾಗಿ ಕಂಡುಬಂದಿವೆ. ತೀರ್ಪು ನೀಡುವ ಮುನ್ನ ನ್ಯಾಯಾಧೀಶರು ಸಮಯೋಚಿತ ವಾಗಿ ಅನುಸರಿಸುತ್ತಿದ್ದ ಚಿಕಿತ್ಸಕಾ ಬುದ್ಧಿಯೂ ಹಾಗೂ ಹಿಂದಿನ ತೀರ್ಮಾನಕ್ಕೆ ಮಾನ್ಯತೆ ನೀಡಿರುವುದೂ ವಿಶ್ಲೇಷಣಾರ್ಹವಾಗಿವೆ. ಶೀಘ್ರ ತೀರ್ಮಾನಗಳಿಗೆ ಇವು ಗಳನ್ನು ಬಳಸಿಕೊಂಡಿರುವುದು ಪೂರಕ ಅಂಶಗಳಾಗಿವೆ. ಹಲವು ಧಾರ್ಮಿಕ ಕಟ್ಟು-ಪಾಡುಗಳು ಈಗಲೂ ಬಳಕೆಯಲ್ಲಿರುವುದನ್ನು ಕಂಡುಕೊಳ್ಳಬಹುದು. ಅವುಗಳಲ್ಲಿ ಒಂದಾದ ತೀರ್ಪಿನ ೨ನೇ ಕಾಲಂನಲ್ಲಿ ಕಂಡುಬಂದ ಅಗಸರು ಚಪ್ಪರಕ್ಕೆ ಮೇಲುಕಟ್ಟು ಕಟ್ಟುವ ಪದ್ಧತಿಯು ಈಗಲೂ ಪ್ರಚಲಿತವಿದೆ. ಹಳ್ಳಿಯ ಜನಸಾಮಾನ್ಯರಿಗೂ ಸಾಲದ ಮೂಲಕವಾಗಿಯಾದರೂ ಆರ್ಥಿಕ ಸೌಲಭ್ಯವನ್ನು ಕಲ್ಪಿಸಿ ಪ್ರಾಮಾಣಿಕವಾಗಿ ಯಾರಿಗೂ ಅನ್ಯಾಯವಾಗದಂತೆ ತೀರ್ಪನ್ನು ಒದಗಿಸಿದ ಉಲ್ಲೇಖಗಳನ್ನೊಳಗೊಂಡ ಈ ಶಾಸನವು ಕೂಟಸ್ಥ ಶಾಸನದ ಗುಂಪಿಗೆ ಸೇರಿದ್ದು ಆಧುನಿಕ ನ್ಯಾಯ ಪರಿಪಾಲನೆಗೆ ಶ್ರೇಷ್ಠ ನಿದರ್ಶನಗಳಲ್ಲಿ ಒಂದಾಗಿದೆ. ಇವುಗಳ ಪರಿಶೋಧನೆಯಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿಯೇ ಸಂಗ್ರಹಿಸಿದ ಈ ಕೂಟಸ್ಥ ಶಾಸನದಿಂದ ಮೂಲ ಆಕರಗಳ ಸಂಶೋಧನೆಗೆ ಇದು ವಿಪುಲ ಸಾಮಗ್ರಿಗಳನ್ನು ನೀಡಬಲ್ಲುದಾಗಿದೆ. ಧಾರ್ಮಿಕ ಕಟ್ಟುಪಾಡುಗಳಲ್ಲಿ ಆಧುನಿಕ ನ್ಯಾಯಾಲಯಕ್ಕೆ ಪೂರಕವಾಗಿ ಇದೊಂದು ಮಾದರಿಯ ಶಾಸನವೆಂದು ಪರಿಗಣಿಸಬಹುದಾಗಿದೆ.

ಸಂಶೋಧನೆಗೆ ಇದನ್ನು ಒದಗಿಸಿದ ಪೂಜ್ಯ ಶ್ರೀ ವೀರೇಂದ್ರ ಹೆಗ್ಗಡೆಯವರಿಗೆ ಅಪಾರ ಕೃತಜ್ಞತೆಯನ್ನು ಅರ್ಪಿಸುವೆನು.

—ಲೇಖಕ

ಕೆಳದಿ ಅರಸರ ಕಾಲದ ಘಟನಾವಳಿ ಸೂಚಿ

—**ಕೆಳದಿ ವೆಂಕಟೇಶ ಜೋಯಿಸ್**, ಎಂ.ಎ.

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಆಡಳಿತ ನಡೆಸಿದ ಅರಸುಮನೆತನಗಳಲ್ಲಿ ಕ್ರಿ.ಶ. 1499 ರಿಂದ 1763ರ ವರೆಗೆ ಆಳಿದ ಕೆಳದಿ ಅರಸುಮನೆತನವು ತನ್ನದೇ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದಿದೆ. ಆ ಕಾಲದಲ್ಲಿ ನಡೆದಿರುವಂತಹ ಅನೇಕ ಮಹತ್ವಪೂರ್ಣ ಘಟನೆಗಳನ್ನು ಒಂದೆಡೆ ಸೇರಿಸಿ ಕೊಡುವುದು ಈ ಲೇಖನದ ಮುಖ್ಯ ಉದ್ದೇಶ. ಈ ಲೇಖನ ಸಿದ್ಧಪಡಿಸುವಲ್ಲಿ ಉಪಯೋಗಿಸಿಕೊಂಡಿರುವ ಗ್ರಂಥಗಳ ಹೆಸರುಗಳನ್ನು ಕೊನೆಯಲ್ಲಿ ಕೊಡಲಾಗಿದೆ.

8-1-1500	ಕೆಳದಿ ರಾಜ್ಯಸ್ಥಾಪನೆ. ಕೆಳದಿ ಮೂಲಸಂಸ್ಥಾನಕ್ಕೆ ಮೊದಲ ದೊರೆ ಕೆಳದಿಯ ಚೌಡಪ್ಪನಿಗೆ ಕೆಳದಿ ಅರಮನೆಯಲ್ಲಿ ಭದ್ರಪ್ಪ ನಾಯಕ, ವೆಂಕಟಾದ್ರಿ ಜೋಯಿಸರ ಸಮಕ್ಷಮದಲ್ಲಿ ಪಟ್ಟಾಭಿಷೇಕ.
9-10-1506	ಕಲಸೆ ವೀರಪ್ಪಯ್ಯನಿಗೆ ಭೂಮಿಯ ದಾನ.
1512	ಕೆಳದಿಯಿಂದ ಇಕ್ಕೇರಿಗೆ ರಾಜಧಾನಿಯ ಬದಲಾವಣೆ.
1514	ಚೌಡಪ್ಪನ ಮರಣ.
	ಮಗ ಸದಾಶಿವನಾಯಕನಿಗೆ ಇಕ್ಕೇರಿ ಅರಮನೆಯಲ್ಲಿ ಪಟ್ಟಾಭಿಷೇಕ.
1514-1545	ಕೆಳದಿಯ ಶ್ರೀ ರಾಮೇಶ್ವರ ದೇವಾಲಯ ನಿರ್ಮಾಣ.
1544-1545	ತೊಗರಸೆಯ ಶ್ರೀ ಮಲ್ಲಿಕಾರ್ಜುನ ದೇವರಿಗೆ ಭೂದಾನ.
1545	ಸದಾಶಿವನಾಯಕನ ಮರಣ.
	ದೊಡ್ಡಸಂಕಣ್ಣನಾಯಕನಿಗೆ ಇಕ್ಕೇರಿಯ ಅರಮನೆಯಲ್ಲಿ ಪಟ್ಟಾಭಿಷೇಕ.
1545-1559	ಕಾಶಿ, ದೆಹಲಿ ಯಾತ್ರೆ.
	ಇಕ್ಕೇರಿ ಅಘೋರೇಶ್ವರ ದೇವಾಲಯದ ನಿರ್ಮಾಣ.
1559	ದೊಡ್ಡಸಂಕಣ್ಣನಾಯಕನ ಮರಣ.
	ಚಿಕ್ಕಸಂಕಣ್ಣನಾಯಕನಿಗೆ ಇಕ್ಕೇರಿ ಅರಮನೆಯಲ್ಲಿ ಪಟ್ಟಾಭಿಷೇಕ.
1565	ರಕ್ಕಸಗಿ ತಂಗಡಗಿ ಯುದ್ಧ.

1572 ಚಿಕ್ಕಸಂಕಣ್ಣನಾಯಕನ ಮರಣ.
ರಾಮರಾಜನಾಯಕನಿಗೆ ಇಕ್ಕೇರಿ ಅರಮನೆಯಲ್ಲಿ ಪಟ್ಟಾಭಿಷೇಕ.
ರಾಮರಾಜನಾಯಕನು ದ್ವೈತಗುರುಗಳಿಗೆ,
ವಿದ್ವಾಂಸರಾದ ವಾದಿರಾಜ ತೀರ್ಥರಿಗೆ,
ಉಡುಪಿ ಶ್ರೀಕೃಷ್ಣಮಠಕ್ಕೆ ದಾನ ನೀಡಿದ್ದು.

1583 ರಾಮರಾಜ ನಾಯಕನ ನಿಧನ.
ಹಿರಿಯ ವೆಂಕಟಪ್ಪನಾಯಕನಿಗೆ ಇಕ್ಕೇರಿ ಅರಮನೆಯಲ್ಲಿ ಪಟ್ಟಾಭಿಷೇಕ.

1613 ಉಡುಪಿಯ ಶ್ರೀಕೃಷ್ಣದೇವಾಲಯದ ಪುನರ್‌ಪ್ರತಿಷ್ಠಾಪನೆ ಕಾರ್ಯಕ್ಕಾಗಿ ವೇದ ವಿದ್ಯಾತೀರ್ಥರು, ವಾದಿರಾಜ ತೀರ್ಥರು ಇವರಿಗಾಗಿ ಹೂವಿನ ಕೆರೆಯನ್ನು ದಾನವಾಗಿ ನೀಡಿದ್ದು.

14-3-1616 ರಾಜ್ಯವಿಸ್ತರಣೆಗಾಗಿ ಬಂಗರ ಮೇಲೆ ಯುದ್ಧ.

29-10-1623 / 23-11-1623 ಇಟಾಲಿಯನ್ ಪ್ರವಾಸಿ ಪಿಯತ್ರೋಡೆಲ್ಲಾವಲ್ಲೆಯು ರಾಜಧಾನಿ ಇಕ್ಕೇರಿಗೆ ಭೇಟಿ ಇತ್ತುದು. ಪ್ರವಾಸಿ ಕಥನ ರಚನೆ.

1623 ಸಾಗರದ ಶ್ರೀ ಮಹಾಗಣಪತಿ ದೇವಾಲಯ ರಚನೆ.

1630 ಹಿರಿಯ ವೆಂಕಟಪ್ಪ ನಾಯಕನ ನಿಧನ.
ವೀರಭದ್ರ ನಾಯಕನಿಗೆ ಇಕ್ಕೇರಿ ಅರಮನೆಯಲ್ಲಿ ಪಟ್ಟಾಭಿಷೇಕ.

25-1-1637 ಇಂಗ್ಲೆಂಡಿನ ಪ್ರವಾಸಿ ಪೀಟರ್ ಮಂಡಿ ರಾಯಭಾರಿಯಾಗಿ ಇಕ್ಕೇರಿಗೆ ಭೇಟಿ ಇತ್ತುದು. ಪ್ರವಾಸಿ ಕಥನ ರಚನೆ.

1638 ರಾಜಧಾನಿಗೆ ರಣದುಲ್ಲಾಖಾನನ ಧಾಳಿ, ಇಕ್ಕೇರಿ ಪಟ್ಟಣದ ನಾಶ.

1639 ಇಕ್ಕೇರಿಯಿಂದ ಬಿದನೂರು (ನಗರ)ಕ್ಕೆ ಅರಮನೆ, ರಾಜಧಾನಿಯ ಬದಲಾವಣೆ.

1646 ವೀರಭದ್ರ ನಾಯಕನ ನಿಧನ.
ಶಿವಪ್ಪನಾಯಕನಿಗೆ ಬಿದನೂರು (ವೇಣುಪುರ) ಅರಮನೆಯಲ್ಲಿ ಪಟ್ಟಾಭಿಷೇಕ.
ಚನ್ನರಾಯಪಟ್ಟಣ, ಹೊಳೆನರಸಿಪುರ, ಐನೂರು ಸಂಸ್ಥಾನದ ಮೇಲೆ ಜಯ ಸಾಧಿಸಿದ್ದು.
ವಿಜಯನಗರದ ಶ್ರೀ ರಂಗರಾಯನು ಶಿವಪ್ಪನಾಯಕನ ಬಳಿಗೆ ಓಡಿ ಬಂದು ಮರೆ ಹೊಕ್ಕಿದ್ದು.

1648 ಐನೂರು ಸಂಸ್ಥಾನದ ಮೇಲೆ ಎರಡನೆಯ ಸಾರಿ ಜಯ ಸಾಧಿಸಿದ್ದು.

1652 ಸಕ್ಕರೆ ಪಟ್ಟಣದ ಜಯ.
ಶೃಂಗೇರಿ ಮಠಕ್ಕೆ ದಾನ ಕೊಟ್ಟಿದ್ದು.
ಬಿಜಾಪುರದ ಬಾದಷಹನ ನಿಧನವಾರ್ತೆ ಕೇಳಿ ಅವರು ಸ್ವಾಧೀನ ಪಡಿಸಿಕೊಂಡಿದ್ದ ಇಕ್ಕೇರಿ, ಸೊರಬ, ಉಡುಗಣಿ, ಮಹದೇವಪುರ, ಅಂಬಲಿಗೊಳ ಪ್ರದೇಶಗಳನ್ನು ವಶಪಡಿಸಿಕೊಂಡು ಸೋದೆಯವರು ಆಳುತ್ತಿದ್ದ ಶಿರಸಿ, ಹೇರೂರು, ಬೋಳೂರು, ಪುಲಿಯಕರ್, ಕರೂರು, ಬನವಾಸಿ, ಬದನಗೋಡು ಮುಂತಾದ ಸೀಮೆ ವಶಪಡಿಸಿಕೊಂಡುದು.

1653 ಇಂಗ್ಲೀಷರೊಡನೆ ಯುದ್ಧ.

1654 ಶಿವಪ್ಪನಾಯಕನು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದ್ದು.
ಶ್ರೀ ರಂಗರಾಯನಿಗೆ ಸಕ್ಕರೆ ಪಟ್ಟಣದಲ್ಲಿ ಆಧಿಪತ್ಯ ನೀಡಿದ್ದು.

1658 ಹಾಸನ ಬೇಲೂರುಗಳನ್ನು ಜಯಿಸಿದ್ದು.

1660 ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದ್ದು.
ಕಂದಾಯ ಪಿಸ್ತು-ಕಂದಾಯ ನಿಗದಿಗೆ ಪ್ರಯತ್ನ.
ಮೊದಲ ಬಾರಿ ಮೈಸೂರು ಗೆದ್ದುದು.
ಶಿವಪ್ಪನಾಯಕ ವಿಜಯನಗರ ಸಂಸ್ಥಾನ ಉದ್ಧರಿಸಲು ಪ್ರಯತ್ನ.

1661 ಶಿವಪ್ಪನಾಯಕನ ನಿಧನ. ವೇಣುಪುರದ ಅರಮನೆಯಲ್ಲಿ ಚಿಕ್ಕವೆಂಕಟಪ್ಪನಾಯಕನಿಗೆ ಪಟ್ಟ.

1662 ಇಮ್ಮಡಿ ಭದ್ರಪ್ಪನಾಯಕನಿಗೆ ವೇಣುಪುರದ ಅರಮನೆಯಲ್ಲಿ ಪಟ್ಟ.

1664 ಅಂಬಳಗೊಳದಲ್ಲಿ ಯುದ್ಧ. ಭದ್ರಪ್ಪನಾಯಕರ ಪರಾಭವ. ವೇಣುಪುರ ತುರುಕರ ವಶ.

1667 ಚಿಕ್ಕವೆಂಕಟಪ್ಪನಾಯಕನ ನಿಧನ.

1672 ಬಿಜಾಪುರದ ಅಲಿ ಅದಿಲ್‌ಷಹನ ಕುತಂತ್ರಕ್ಕೆ ಮಣಿದು ಬಿಜಾಪುರದ ಸೇನಾಪತಿ ಜಿನ್ನೋಪಂತನ ಮನೆಯವರು ಸೋಮಶೇಖರನಾಯಕನನ್ನು ಮೋಸಮಾಡಿ ಕೊಂದುದು.
ರಾಣಿ ಚೆನ್ನಮ್ಮಾಜಿಗೆ ಭುವನಗಿರಿ ದುರ್ಗದಲ್ಲಿನ ಅರಮನೆಯಲ್ಲಿ ಪಟ್ಟ.
ಮೈಸೂರು ಒಡೆಯರನ್ನು ಸೋಲಿಸಿದ್ದು.

1672–1698 ಚನ್ನಗಿರಿ ಕೋಟೆ ರಚನೆ.

1672 ಚನ್ನಮ್ಮಾಜಿ ಬಸವಪ್ಪನನ್ನು ದತ್ತುಪುತ್ರನನ್ನಾಗಿ ಸ್ವೀಕರಿಸಿದ್ದು.

1679 ಬಸವಪ್ಪನಾಯಕನಿಗೆ ಹೆಚ್ಚಿ ಮುಹಂತಯ್ಯನ ಕುವರಿ ಚನ್ನಮ್ಮಾಜಿ ಮತ್ತು ಮಳಿಗೆ ಚನ್ನವೀರಪ್ಪನವರ ಕುವರಿ ಬಸವಮ್ಮಾಜಿ ಎಂಬಿಬ್ಬರು ಕನ್ನಿಕೆಯರನ್ನು ತಂದು ವಿವಾಹ ಮಾಡಿಸಿದ್ದು.

1690 ಆನಂದಪುರವನ್ನು ಆಕ್ರಮಿಸಲು ಜಾನ್ ಸರಖಾನನನ್ನು ಔರಂಗ ಜೇಬನು ಕಳುಹಿಸಿದ್ದು.

1690–1698 ರಾಣಿ ಚನ್ನಮ್ಮಾಜಿ ಸೇನೆಗೂ, ದಿಲ್ಲಿ ಔರಂಗಜೇಬನ ಸೇನೆಗೂ ಯುದ್ಧ. ಕೆಳದಿಯವರಿಗೆ ಜಯ.

1698 ರಾಣಿ ಚೆನ್ನಮ್ಮಾಜಿ ಮರಣ.
ಹಿರಿಯ ಬಸಪ್ಪನಾಯಕನಿಗೆ ಭುವನಗಿರಿಯ ಅರಮನೆಯಲ್ಲಿ ಪಟ್ಟ.

1715 ಹಿರಿಯ ಬಸಪ್ಪನಾಯಕನ ಮರಣ. ಬಿದನೂರಿನ ಕೊಪ್ಪಲ ಮಠದಲ್ಲಿ ಈತನ ಸಮಾಧಿ.
ಇಮ್ಮಡಿ ಸೋಮಶೇಖರನಾಯಕನಿಗೆ ವೇಣುಪುರದ ಅರಮನೆ ಯಲ್ಲಿ ಪಟ್ಟಾಭಿಷೇಕ.

1722 ವೇಣುಪುರಕ್ಕೆ ಶೃಂಗೇರಿ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮಿಗಳ ಆಗಮನ.

1723 ಸೀರ್ಯದ ಕೋಟೆಗೆ ಮುತ್ತಿಗೆ ಹಾಕಿ, ಅದನ್ನು ವಶಪಡಿಸಿ ಕೊಂಡುದು. ಇಮ್ಮಡಿ ಸೋಮಶೇಖರನಾಯಕನ ತೀರ್ಥ ಯಾತ್ರೆ. (ಕೊಲ್ಲೂರು, ಕೆಳದಿ. ತೀರ್ಥರಾಜಪುರ, ಶೃಂಗೇರಿ, ಸುಬ್ರಹ್ಮಣ್ಯ, ಕೋಟೇಶ್ವರ ಗೋಕರ್ಣ ಮುಂತಾದವು)

1725 ರಾಜಧಾನಿ ವೇಣುಪುರಕ್ಕೆ ಹಿಂದಿರುಗಿದ್ದು. ಬಾದಷಹನ ಅಪೇಕ್ಷೆಯಂತೆ ಆರೆಯರ ದೊರೆ ಶಾಹುರಾಜನ ಮಂತ್ರಿಯು ಶ್ರೀಪತಿರಾಯನನ್ನು ಕೂಡಿಕೊಂಡು ಅವನ ಮತ್ತು ತನ್ನ ಸೈನ್ಯ ಸೇರಿಸಿ ಅಸಮಾನನಾದ ಚಿಕಲೀಸಖಾನನು ಹೆಚ್ಚಿನ ಹಣಕ್ಕೆ ಆಸೆ ಪಟ್ಟು ಬಂದಾಗ ಅವನಿಂದ ರಾಜ್ಯದ ರಕ್ಷಣೆ.

30–8–1726 ಬಂಗಾರದ ನಾಣ್ಯ (ಇಕ್ಕೇರಿ ವರಹ) ದ ಚಲಾವಣೆ.
ದಿಳ್ಳಿ ಬಾದಶಹನ ಅಪೇಕ್ಷೆಯಂತೆ ಸೀರ್ಯದ ಮುತ್ತಿಗೆ ಹಾಕಿ ಫಿರಜ್ ಆದುಖಾನನನ್ನು ಉಚ್ಚಾಟಿಸಿ ಅವನ ಅಧಿಕಾರ ಸ್ಥಾನಕ್ಕೆ ತಾಯರಖಾನನನ್ನು ನೇಮಿಸಿದ್ದು.

1715–1726 ದಿಳ್ಳಿ ಚಕ್ರವರ್ತಿಯು ಸೋಮಶೇಖರನಾಯಕನ ಸಹಾಯ ಯಾಚಿಸಿದ್ದು, ಮೈಸೂರು–ಸೀರ್ಯಕ್ಕೆ ಮುತ್ತಿಗೆ ಹಾಕಿ ಜಯಿಸಿ ತರುವಾಯ ಮಿರ್ಜಾ ಆದಂಖಾನನನ್ನು ಉಚ್ಚಾಟನೆ ಮಾಡಿ

ತಾಯುರಖಾನನನ್ನು ಅಲ್ಲಿಯ ಅಧಿಕಾರಸ್ಥಾನಕ್ಕೆ ನೇಮಿಸಿ ಬಾದಷಹನಿಗೆ ಜಯ ದೊರಕಿಸಿ ರಾಜಧಾನಿಗೆ ಹಿಂದಿರುಗಿದ್ದು.

1735 ಕೆಳದಿಯವರಿಗೆ ಜಯ. ಇದಕ್ಕಾಗಿ ರಾಜಧಾನಿಯಲ್ಲಿ ಸಕ್ಕರೆ ಬೀರಿಸಿದ್ದು, ಮೂರು ದಿನ ನವಬತ್ತು ಹೊಡಿಸಿದ್ದು.
ಮರಾಠೆಯವರ ಹಾವಳಿ ನಿವಾರಿಸಿದ್ದು.

1736 ಇಮ್ಮಡಿ ಸೋಮಶೇಖರನಾಯಕನಿಗೆ ನಾಲತಿ ಉತ್ಸವ.

1739 ಇಮ್ಮಡಿ ಸೋಮಶೇಖರನಾಯಕನು ಕೂಡಲಿಯಲ್ಲಿ ಶಿವ-ಸಾಯುಜ್ಯ ಹೊಂದಿದ್ದು. ಬೂದಿ ಬಸಪ್ಪನಾಯಕನಿಗೆ (ವೀರ-ಭದ್ರನಾಯಕನ ಮಗ) ಪಟ್ಟಾಭಿಷೇಕ.

1741–42 ಶಾಹುರಾಜನ ಅಪ್ಪಣೆಯಂತೆ ಸಾಗರದಲ್ಲಿ ಬಂದಿಳಿದ ಬಾಪು-ರಾಯ ಎಂಬವನನ್ನು ಸಮಭಯದಿಂದ ಗಡಿ ದಾಟಿಸಿ ರಾಜ್ಯ ವನ್ನು ರಕ್ಷಿಸಿದ್ದು.

1747 ಮರಾಠೆ ದೊರೆ ಸದಾಶಿವರಾವ್ ಬಾವುರವರು ಬಿದನೂರಿನ ಮೇಲೆ ಧಾಳಿ ಮಾಡಿ ಬಸಪ್ಪನಾಯಕನಿಂದ ಕಪ್ಪಕಾಣಿಕೆ ಪಡೆದದ್ದು.

1748 ಮಾಯಿಗೊಂಡದ ಮುತ್ತಿಗೆ. ಮದಕರಿನಾಯಕನು ಯುದ್ಧ ದಲ್ಲಿ ಪೆಟ್ಟುತಿಂದು ಮೃತಿಹೊಂದಿದ್ದು.

1750 ಹರಪನಹಳ್ಳಿಯವರ ಸಹಾಯಕ್ಕಾಗಿ ಮದಕರಿನಾಯಕನ ಮಗ ಇಮ್ಮಡಿ ಕಸ್ತೂರಿರಂಗಪ್ಪನಾಯಕನು ದಂಗೆ ಎದ್ದಾಗ ಬಸಪ್ಪ ನಾಯಕನು ಅಡಗಿಸಿದ್ದು.

1751 ಗುತ್ತಲ ಸಂಸ್ಥಾನದವರು ಕೆಳದಿಯ ಮೇಲೆ ದಂಗೆ ಎದ್ದಾಗ ಬಸಪ್ಪನಾಯಕ ಅಡಗಿಸಿದ್ದು.
ಬಸಪ್ಪನಾಯಕ ಸೈನ್ಯಸಹಿತ ಕೊಲ್ಲೂರು, ಕೋಟೇಶ್ವರ, ಬಸ್ರೂರು, ಶಂಕರನಾರಾಯಣ, ಕಮಲಶಿಲೆ, ಕೆಳದಿ ಮುಂತಾದ ತೀರ್ಥಸ್ಥಳಗಳಿಗೆ ದರ್ಶನವಿತ್ತದ್ದು.

1753 ನಾಯಮಾರರು ದಂಗೆ ಎದ್ದಾಗ ಅಡಗಿಸಿದ್ದು.

1754 ಸಿರ್ವಾಣಯ್ಯನವರ ಮೊಮ್ಮಗ ಗುರುವಪ್ಪನವರ ಮಗ ಚೆನ್ನಪ್ಪ ನನ್ನು ದತ್ತು ಪಡೆದು ಚನ್ನಬಸಪ್ಪನಾಯಕ ಎಂದು ನಾಮಕರಣ ಮಾಡಿದ್ದು. ಗ್ರಾಮಶಾಂತಿ ಮಾಡಿಸಿದ್ದು.

1755 ಬಸಪ್ಪನಾಯಕನ ನಿಧನ.
ಚನ್ನಬಸವನಾಯಕನ ಪಟ್ಟ.

ನಾನಾಸಾಹೇಬನ ಪ್ರೇರಣೆಯಿಂದ ಮಾಧೋಜಿ ಪುರಂದರ ಮತ್ತು ವಜೀರನ ಮುತ್ತಿಗೆ—ಚನ್ನಬಸವನಾಯಕನು ಸಂಧಿವಿಗ್ರಹದ ಮೂಲಕ ಮುತ್ತಿಗೆ ಹಿಂತೆಗೆದುಕೊಂಡದ್ದು.

1758 ಚನ್ನಬಸವಪ್ಪನಾಯಕನನ್ನು ವಿಷ ಹಾಕಿ ಕೊಂದುದು.
ಮುಮ್ಮಡಿ ಸೋಮಶೇಖರನಾಯಕನಿಗೆ ಪಟ್ಟ.
ವೀರಮ್ಮಾಜಿ ಮತ್ತು ಸೋಮಶೇಖರನಾಯಕರ ಆಡಳಿತ.

19-1-1763 ಹೈದರಾಲಿ ಪ್ರವೇಶ. ಬಿದನೂರು ಮುತ್ತಿಗೆ. ಕೆಳದಿ ಸಂಸ್ಥಾನದ ನಾಶ.

ಆಧಾರ ಗ್ರಂಥಗಳು :

(1) ಲಿಂಗಣ್ಣಕವಿ ವಿರಚಿತ ಕೆಳದಿ ನೃಪವಿಜಯಂ
ಸಂ : ಆರ್. ಶಾಮಾಶಾಸ್ತ್ರಿ—1921

(2) ಲಿಂಗಣ್ಣಕವಿ ವಿರಚಿತ ಕೆಳದಿ ನೃಪವಿಜಯು
ಗದ್ಯಾನುವಾದ : ಕೆಳದಿ ಗುಂಡಾಜೋಯಿಸ್—1977

(3) ಇಕ್ಕೇರಿಯ ಐತಿಹಾಸಿಕ ಹಿನ್ನೆಲೆ
ಕೆಳದಿ ಗುಂಡಾಜೋಯಿಸ್—1975

(4) ಇಕ್ಕೇರಿ ಸಂಸ್ಥಾನದ ಚರಿತ್ರೆ
ಎಂ. ಎಸ್. ಪುಟ್ಟಣ್ಣ—1931

(5) ಕೆಳದಿ ಅರಸರ ಕಾಲದ ವಾಸ್ತುಶಿಲ್ಪ-ಮೂರ್ತಿಶಿಲ್ಪ
ಸಂಪುಟ ೧. ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆ
ಅ. ಸುಂದರ—1986

(6) The Nayakas of Ikkeri, University of Madras
Dr. Swaminathan, K.D.—1957

(7) Keladi Polity—Karnataka University
Chitnis, K.N.—1974

(8) ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ
ಡಾ॥ ಸಾ. ಶಿ. ಮರುಳಯ್ಯ—ಬೆಂಗಳೂರು ವಿಶ್ವವಿದ್ಯಾಲಯ—1980

‘ಜನ’ ಶಬ್ದದ ಪ್ರಯೋಗ

—ಟಿ. ಕೇಶವ ಭಟ್ಟ

‘ಜನ’ ಎಂಬ ಸಮಸಂಸ್ಕೃತ ಶಬ್ದ ಯಾರಿಗೂ ಹೊಸತಲ್ಲ. ಇದನ್ನು ಮಾತಿನಲ್ಲಿ ಬರೆಹದಲ್ಲಿ ಪ್ರಯೋಗಿಸದವರಿಲ್ಲ. ಆದರೆ ಈ ಶಬ್ದದ ಲಿಂಗ-ವಚನಗಳನ್ನು ಲಕ್ಷಿಸಿ ಸಾಧುಪ್ರಯೋಗ ಮಾಡುವವರು ಇಂದು ವಿರಳ. ಆದುದರಿಂದ ಇದರ ಒಂದು ಪರಿಶೀಲನೆ ಸಹೃದಯರ ಅವಧಾನಕ್ಕಾಗಿ ಅವಶ್ಯವೆನಿಸಿತು.

ಸಂಸ್ಕೃತದಲ್ಲಿ ಈ ಶಬ್ದವು ‘ಜನಃ’ ಎಂದು ಅಕಾರಾಂತ ಪುಲ್ಲಿಂಗದ ಏಕವಚನ. ವ್ಯಕ್ತಿನಿರ್ದೇಶಕವಾಗಿ ಪುರುಷರಿಗೂ ಸ್ತ್ರೀಯರಿಗೂ ಅನ್ವಿತವಾಗುತ್ತದೆ—ಕವಿಜನಃ, ಬುಧಜನಃ, ಸ್ತ್ರೀಜನಃ—ಇತ್ಯಾದಿ. ಬಹುವಚನದಲ್ಲಿ ‘ಜನಾಃ’ ಎಂಬ ರೂಪವಿದೆ. ‘ನಾನು’ ಎಂಬರ್ಥದಲ್ಲಿ ‘ಅಯಂ ಜನಃ’ (ಈ ಜನ) ಎಂಬ ಪ್ರಯೋಗವಿದೆ. ‘ಜನಸಮೂಹ’ ಎಂಬರ್ಥದಲ್ಲಿಯೂ ಸಂಸ್ಕೃತದಲ್ಲಿ ಬರುತ್ತದೆ. ಆದರೆ ಶಬ್ದರೂಪವು ಪುಲ್ಲಿಂಗ–ಏಕವಚನ. ಉದಾ :

> ಸತೀಮಪಿ ಜ್ಞಾತಿ ಕುಲೈಕ ಸಂಶ್ರಯಾಂ
> ಜನೋಽನ್ಯಥಾ ಭರ್ತೃಮತೀಂ ವಿಶಂಕತೇ (ಅಭಿಜ್ಞಾನಶಾಕುಂತಲಂ. V)

ಇಲ್ಲಿ ‘ಜನವು ಸಂಶಯದಿಂದ ಕಾಣುತ್ತದೆ’–ಎಂಬ ಅರ್ಥದ ಮಾತಿದೆ. ಇದೇ ‘ಜನಃ’ ಎಂಬ ಸಂಸ್ಕೃತ ಶಬ್ದ ಸಮಸಂಸ್ಕೃತವಾಗಿ ಕನ್ನಡದಲ್ಲಿ ಬಳಕೆಯಾಗುವಾಗ ಅದರ ಲಿಂಗ–ವಚನ ಯಾವುದು ? ಎಂಬುದೇ ಪ್ರಕೃತ ಜಿಜ್ಞಾಸೆ.

‘ಜನ’ ಶಬ್ದದ ಬಹುವಚನ ಜನಂಗಳ್ ಮತ್ತು ಜನರ್—ಎಂದು ಎರಡು ರೂಪಗಳಲ್ಲಿದೆ. ಇದೇ ಶಬ್ದವು ವಿಶೇಷಣವಾಗಿರುವ ಪ್ರಯೋಗಗಳಿವು :—

1) ಆ ಸಭೆಗೆ ಐವತ್ತು ಜನ ಪುರುಷರು ಬಂದಿದ್ದರು.

2) ಅನೇಕ ಜನ ಮಹನೀಯರು ನೆರೆದಿದ್ದರು.

3) ನಾಲ್ಕು ಜನ ಹೆಂಗುಸರು.

ಇಂತಹ ಕಡೆ ‘ಜನ’ ಎಂಬುದಕ್ಕೆ ‘ಮಂದಿ’ ಎಂಬರ್ಥವಾಗಿ ಅದು ವಿಶೇಷಣ ರೂಪದಲ್ಲಿರುತ್ತದೆ. ನಮಗೆ ಲಕ್ಷ್ಯಾರ್ಹವಾದುದು ವಿಶೇಷ್ಯರೂಪ, ಅಥವಾ ವಿಶೇಷ್ಯವಿಲ್ಲದಿರುವ ಕರ್ತೃನಾಮರೂಪ. ಈಗೀಗ ಹೆಚ್ಚಿನವರೂ ‘ಜನರು’ ಎಂಬರ್ಥದಲ್ಲಿಯೇ ‘ಜನ’ ಶಬ್ದವನ್ನು ಪ್ರಯೋಗಿಸುತ್ತಾರೆ—‘ಜನ ಹೇಳುತ್ತಾರೆ’, ‘ಕಾವ್ಯವನ್ನು ಜನ ಓದುತ್ತಾರೆ’—ಇತ್ಯಾದಿ. ಇಂತಹ ಪ್ರಯೋಗಗಳಲ್ಲಿ ಕರ್ತೃ

ಏಕವಚನವಾಗಿದ್ದು ಕ್ರಿಯೆ ಬಹುವಚನವಾಗಿದೆ. ಆದುದರಿಂದ ವಚನದೋಷವುಳ್ಳ ವಾಕ್ಯ ಇದಲ್ಲವೆ ?

ಜಾತ್ಯೇಕವಚನದಲ್ಲಿ ಕರ್ತೃ ಏಕವಚನವಾಗಿ, ಕ್ರಿಯೆ ಬಹುವಚನವಾಗಿರಬಹುದು. ಉದಾ : ಕಾಲಾಳ್ ಕವಿದುವು, ಕೋಳಿ ಕೂಗಿದುವು, ಕುದುರೆ ಓಡಿದುವು –ಎಂಬಿವು. ಆದರೆ ಮನುಷ್ಯ ಹೋದರು, ಬ್ರಾಹ್ಮಣ ಬಂದರು, ಗೌಡ ನಡೆದರು– ಎಂಬುದು ಅಶುದ್ಧವೇ ಸರಿ. ಮನುಷ್ಯವರ್ಗವನ್ನು ಈ ಬಗೆಯಲ್ಲಿ ಜಾತಿವರ್ಗಕ್ಕೆ ಸೇರಿಸಲಾಗುವುದಿಲ್ಲ. ಇವುಗಳಂತೆ 'ಜನ ಹೇಳುತ್ತಾರೆ' ಎಂಬುದು ಅಸಾಧುವಾಗಿಯೇ ಕಂಡುಬರುತ್ತದೆ. ಈ ವಿಷಯದಲ್ಲಿ ಪೂರ್ವಕವಿ ಪ್ರಯೋಗ ಹಾಗೂ ವ್ಯಾಕರಣ ಏನೆನ್ನುತ್ತದೆ ? ನೋಡೋಣ—

(1) ಗುಣವಿದು ದೋಷವಿದೆಂಬೀ
ಗಣಿದಮನೆತ್ತಱಿಗುಮಶ್ರುತ ಪ್ರಕೃತಿ ಜನಂ
(2) ಶೋಕರಸಭಾಜನವಾದುದು ತತ್ಸಭಾಜನಂ
(3) ನೆಗಪುತ್ತುಂ ಬೆಮರಂ ವಿಯೋಗಿ ಜನದೊಳ್
(4) ಸೇವ್ಯಂ ಸತ್ಕಾವ್ಯಮವನಿಯೊಳ್ ಬುಧಜನದಿಂ

ಈ ಉದಾಹರಣೆಗಳಿಂದ ಪೂರ್ವಕವಿಗಳು 'ಜನ' ಶಬ್ದವನ್ನು ನಪುಂಸಕ ಲಿಂಗದ ಏಕವಚನವಾಗಿಯೇ ಪರಿಗಣಿಸಿರುವುದು ವಿದಿತವಾಗುತ್ತದೆ. ಆಧುನಿಕರಲ್ಲಿಯೂ ಅನೇಕರು ಹೀಗೆಯೇ ಗಣಿಸಿದವರಿದ್ದಾರೆ—ಉಗ್ರಾಣ ಮಂಗೇಶರಾಯರು ಬರೆದಿರುವ 'ನಿಟ್ಟುಸಿರು' ಎಂಬ ಕವನವಿದು—

(5) ಚಿಂತೆಯು ಮುಡಿದಿಹ ವಿಧವಿಧ ಸುಮಗಳ
ಸಂತೆಯೊಳೆಲ್ಲಿಯು ಸುಳಿಸುಳಿದು
ಎಂತಹುದೋ ಹೊಸ ಕಂಪನು ಪಸರುತೆ
ಬಂತೈ ಗಾಳಿಯು ತೆರೆಯೊಂದು ;
ಅದಕೆಂದಿತು ಜನ 'ನಿಟ್ಟುಸಿರು'
ಶಾಂತಿಯು ಮೋಳೆಗಾಯ್ದುದು ಕಸರು

ಕಾದಂಬರಿಕಾರ ತ.ರಾ.ಸು. ಅವರ ಪ್ರಯೋಗ—

(6) 'ಕಿರಿಯುಪನಾದ ನನ್ನ ಕೃತಿಗಳಲ್ಲಿ ಕನ್ನಡ ಜನ ಬಹು ಅಭಿಮಾನವನ್ನು ತೋರಿದೆ.

---

1 ಕವಿರಾಜಮಾರ್ಗ : ೧–೮
2 ಪಂಪರಾಮಾಯಣ : ೬–೧೫೫.
3 ಲೀಲಾವತೀ ಪ್ರಬಂಧಂ : ೨–೧೪.
4 ರಾಜಶೇಖರ ವಿಳಾಸಂ : ೧–೩೪.
5 ನೂತನ ಬಾಲವ್ಯಾಕರಣ, 1949, ಪುಟ ೬೬.
6 ಸಿಡಿಲ ಮೊಗ್ಗು, 1985, 4ನೇ ಮುದ್ರಣ ಇದರ ಮುನ್ನುಡಿ.

ಪ್ರೊ॥ ದೇ. ಜವರೇಗೌಡರು ಎರಡೂ ಬಗೆಯಲ್ಲಿ ಪ್ರಯೋಗಿಸಿದ್ದಾರೆ—

(7) "ಮಲೆನಾಡಿನಲ್ಲಿ ಮೊದಲ ಮಳೆ ಸುರಿದಾಗ ಜೇನಿನ ಹುತ್ತವನ್ನು ಮುತ್ತುವ ಕಟ್ಟಿರುವೆಯ ಹಿಂಡಿನಂತೆ ನಾನಾ ದೇಶಗಳ ಜನ ಆ ಕ್ರತುಭೂಮಿಯಲ್ಲಿ ನೆರೆಯಿತು."

ಇದು ಶುದ್ಧ ಪ್ರಯೋಗವಾಗಿದೆ. ಅವರೆ ಇದರ ಮುಂದಿನ ವಾಕ್ಯ ಅಶುದ್ಧವಾಗಿ ಹೋಗಿದೆ—

"ತೃಪ್ತಿಯೆ ತಣಿದು ತೇಗಿತೊ, ದಾರಿದ್ರ್ಯವೆ ಶ್ರೀಯಾಯಿತೊ ಎನ್ನುವಂತೆ ಮಾಡಿದಷ್ಟಗೆ ಭೋಜನಗಳಿಂದ ಜನ ತೃಪ್ತಿಗೊಂಡರು."

ಈ ಶಬ್ದವಿಚಾರದಲ್ಲಿ ವೈಯಾಕರಣರ ನಿರೂಪಣೆ ನೋಡೋಣ—

(8) ಜನಶಬ್ದಮದು ನಪುಂಸಕ
ಮೆನಿಕುಂ ದುಸ್ಸತ್ ಸುಕಾರಮುಂ ಪೆಱಗಿರೆ ನೆ
ಟ್ಟನೆ ಪುಲ್ಲಿಂಗಂ ಮತ್ತಾ
ಜನಂ ಮಹಚ್ಛಬ್ದಮಿರೆ ನಪುಂಸಕಮಕ್ಕುಂ

ಈ ಸೂತ್ರದಂತೆ, ಮತ್ತು ಇದಕ್ಕೆ ಕೊಟ್ಟಿರುವ ಪ್ರಯೋಗಗಳಂತೆ, ಜನ, ಮಹಾಜನ— ಎಂಬವು ನಪುಂಸಕಲಿಂಗ ಶಬ್ದಗಳು. (ಬುಧಜನ, ಸಭಾಜನ–ಎಂಬವೂ ನಪುಂಸಕ ಲಿಂಗಗಳೇ ಆಗುತ್ತವೆ) ದುರ್ಜನ, ಸಜ್ಜನ, ಸುಜನ,–ಎಂಬವು ಪುಲ್ಲಿಂಗವಾಗುತ್ತವೆ. ಕೇಶಿರಾಜನ ನಿರೂಪಣೆಯನ್ನೆ ಭಟ್ಟಾಕಲಂಕನು 'ಶಬ್ದಾನುಶಾಸನ' ಗ್ರಂಥವಲ್ಲಿ (ಸೂತ್ರ 106, 107) ಸೂತ್ರೋದಾಹರಣಗಳಿಂದ ಸಮರ್ಥಿಸಿದ್ದಾನೆ. ಅವನು ಕೊಟ್ಟಿರುವ ಉದಾಹರಣಗಳಿವು—ಜನಂ ಪೇೞ್ದುದು, ಸ್ತ್ರೀಜನಂ ಇರ್ದುದು, ಮಹಾಜನಂ ಮೆಚ್ಚಿದುದು, ಬಹುಜನಂ ಅಂಗೀಕರಿಸಿತ್ತು. ಬಹುವಚನದಲ್ಲಿ :— ಜನಂಗಳ್ ಪೇೞ್ದರ್, ಮಹಾಜನಂಗಳುಪದೇಶಿಸಿದರ್. 'ಕುಲಸ್ತ್ರೀ' ಎಂಬರ್ಥದಲ್ಲಿ ಬರುವ 'ಸಜ್ಜನ' ಎಂಬ ಶಬ್ದ ನಪುಂಸಕವೆಂದು ಕೇಶಿರಾಜ ಭಟ್ಟಾಕಳಂಕರು ದೃಢಪಡಿಸಿದ್ದಾರೆ. ಇದಕ್ಕೆ ಪೂರ್ವಕವಿಗಳ ಉದಾಹರಣೆಗಳಿವೆ—

(9) ದಿನನಾಥಂಗಲ್ಲದೆ ಪದ್ಮಿನಿಗಳ್ ಮೊಗದೋರವಂತೆ ನಿನಗಲ್ಲದೆ ಸ
ಜ್ಜನವಾಗೆಂದು ರಘುನಂದನ ಕಾವ್ಯಪ್ರತದೊಳೆನ್ನ ತನುವೆಯುರ್ವರ್

'ಆನು ಸಜ್ಜನವಾಗಿ ಮಜ್ಜನಕ್ಕೆರೆವೆ' ಎಂದು ಅಕ್ಕಮಹಾದೇವಿಯ ವಚನದಲ್ಲಿದೆ. ಹೀಗೆ 'ಸಜ್ಜನ' ಎಂಬುದು ಕುಲವಧುವಾಗಿರುವಂತೆ 'ದುರ್ಜನ' ಎಂಬುದು ಕುಲಗೆಟ್ಟ ಹೆಣ್ಣೆಂಬ ಅರ್ಥದಲ್ಲಿಯೂ ಪ್ರಯೋಗವಿದೆ—

---

7 ಶ್ರೀ ರಾಮಾಯಣ ದರ್ಶನ ವಚನ ಚಂದ್ರಿಕೆ, 1969, ಪುಟ ೯೬.

8 ಶಬ್ದಮಣಿದರ್ಪಣಂ: ಸೂತ್ರ ೯೨.

9 ಪಂಪರಾಮಾಯಣಂ: ೧೦–೩೮.

(01) ಪೇಸದೆ ದುರ್ಜನದೊಳಾದ ಪರಿಚಯಂ
ಮಾಸಿಸಿ ಕಿಡಿಸುಪವೊಲೊಪ್ಪುವ ಕುಲವಧುಪಂ

ಯಾವುದಾದರೂ ವಾಕ್ಪ್ರಯೋಗವನ್ನು ಸರಿಯೆಂದು ಅಥವಾ ತಪ್ಪೆಂದು ನಿರ್ಧಾರ ಮಾಡಲು ಪ್ರಯೋಗವನ್ನೇ ಆಧಾರವೆಂದೆಣಿಸುವುದುಂಟು. ಈ ಕಾಲದಲ್ಲಿ ಬಹುಜನರು ಜನ ಶಬ್ದವನ್ನು ಬಹುವಚನವಾಗಿ ಬಳಸುವುದನ್ನು ಸಾಧುವೆಂದು ಏಕೆ ಮಾನ್ಯ ಮಾಡಬಾರದು–ಎನ್ನುವವರಿದ್ದಾರೆ. ಹಾಗಿದ್ದರೆ ಬಹುಜನರ ಪ್ರಯೋಗದಿಂದಲೂ ವ್ಯಾಕರಣನಿರ್ಣಯದಿಂದಲೂ ಪೂರ್ವಕವಿಪ್ರಯೋಗದಿಂದಲೂ ಸಿದ್ಧವಾದ ರೂಪವನ್ನು ನಾವಿಂದು ತಪ್ಪೆನ್ನಬೇಕೆ? 'ಜನ' ಶಬ್ದಕ್ಕೆ ಬಹುವಚನರೂಪವಾಗಿ ಜನಂಗಳ್, ಜನರ್ – ಎಂಬೆರಡು ರೂಪಗಳೇ ಇರುವಾಗ 'ಜನ' ಶಬ್ದವನ್ನೆ ಬಹುವಚನವೆನ್ನುವುದು ಸಾಧುವಾದೀತೆ? ಇಂದು ಕೂಡ ಜನರ ಪ್ರಯೋಗವನ್ನೆ ಸಾಧುವೆನ್ನುವುದಾದರೆ, ಜನ ಶಬ್ದವನ್ನು ನಪುಂಸಕಲಿಂಗದ ಏಕವಚನವಾಗಿ ಮಾಡುವ ಬಳಕೆ ಕರ್ನಾಟಕದಲ್ಲಿಯೇ ಹಲವೆಡೆ ಇರುವಾಗ ಇದೇ ಬಹುಜನರ ಪ್ರಯೋಗವೆನಿಸುವುದಿಲ್ಲವೆ? 'ಒಂದು ಜನ ಅಲ್ಲಿಗೆ ಬಂತು', 'ಇಂದಿನ ಜನ ಹೀಗೆನ್ನುತ್ತಿದೆ' – ಎಂಬ ಇಂತಹ ಪ್ರಯೋಗ ಪ್ರಚಲಿತವಾಗಿಯೇ ಇದೆ. ಹವ್ಯಕ ಉಪಭಾಷೆಯಲ್ಲಿ 'ಜನ' ಶಬ್ದ ನಪುಂಸಕ ಏಕವಚನ. ಕನ್ನಡಕ್ಕೆ ಸಮೀಪದ ಇನ್ನೊಂದು ಭಾಷೆಯಾಗಿರುವ ತುಳುವಿನಲ್ಲಿ 'ಜನ' ಶಬ್ದ ನಪುಂಸಕಲಿಂಗದ ಏಕವಚನವಾಗಿಯೇ ಪ್ರಯುಕ್ತವಾಗುತ್ತಿವೆ – ಎಂಬ ಸಂಗತಿಯೂ ಗಣನೀಯ. ಕರ್ತೃ ಏಕವಚನವಾಗಿದ್ದರೆ, ಕ್ರಿಯೆಯೂ ಏಕವಚನವಿರಬೇಕೆಂಬುದು ಅನುಲ್ಲಂಘನೀಯ ವ್ಯಾಕರಣಮರ್ಯಾದೆಯೆಂಬುದನ್ನೇಕೆ ಪರಿಭಾವಿಸಬಾರದು? ಈ ವಿಷಯದಲ್ಲಿ ವಿದ್ವಾಂಸರು, ವೈಯಾಕರಣರು ಸಹಮತರಾಗುವರೆ?

---

10 ಕವಿರಾಜಮಾರ್ಗಂ—೧-೧೧೨.

ಡಿ.ವಿ.ಜಿ.ಯವರ ಸೌಂದರ್ಯಮೀಮಾಂಸೆ

—ಎಂ. ಎಚ್. ಕೃಷ್ಣಯ್ಯ

ಡಿ.ವಿ.ಜಿ. ಅವರು ಸೌಂದರ್ಯವನ್ನು ಕುರಿತು ಮಾಡಿರುವ ಚಿಂತನೆ ಹಾಗೂ ತಳೆದಿರುವ ನಿಲುವುಗಳು ಒಂದು ಗ್ರಂಥರೂಪದಲ್ಲಿ ಒಂದೆಡೆ ನಿರೂಪಿತವಾಗಿಲ್ಲ. ಅವರ ಹಲವಾರು ಗ್ರಂಥಗಳಲ್ಲಿ ಅಲ್ಲಲ್ಲಿ ಸಂದರ್ಭೋಚಿತವಾಗಿ ಸಣ್ಣಪುಟ್ಟ ಶೀರ್ಷಿಕೆಯಡಿಯಲ್ಲಿ ಚರ್ಚಿತವಾಗಿವೆ. ಇವುಗಳಲ್ಲಿ ಹಲವು ಉಪನ್ಯಾಸವಾಗಿ ಮೂಡಿಬಂದುವಾಗಿವೆ. ಆ ಕಾರಣ ಒಂದು ಗ್ರಂಥರಚನೆಯಲ್ಲಿ ಕಾಣಬರುವ ಅನುಕ್ರಮ ಬೆಳವಣಿಗೆಯಾಗಲಿ ವಿಷಯಪ್ರತಿಪಾದನೆಯಲ್ಲಿ ಒಂದು ಸಮಗ್ರತೆಯಾಗಲಿ ಅದುವರೆಗಿನ ಪೂರ್ವಾಪರ ಪರಿಕಲ್ಪನೆ, ಸಿದ್ಧಾಂತಗಳ ಚರ್ಚೆಯಾಗಲಿ ಕಂಡುಬರುವುದಿಲ್ಲ. ಸಾಹಿತ್ಯ, ಸಂಗೀತ, ನೃತ್ಯ, ಕಲೆ, ಶೃಂಗಾರ—ಮುಂತಾದ ವಿಷಯಗಳ ಪರಿಶೀಲನೆಯ ಸಂದರ್ಭಗಳಲ್ಲಿ ಹೇಳಿರುವ ಅಭಿಪ್ರಾಯಗಳನ್ನು ಸಂಗ್ರಹಿಸಿ ಅವರ ಒಟ್ಟು ದೃಷ್ಟಿಯನ್ನು, ನಿಲುವನ್ನು ತಿಳಿಯಬೇಕಾಗುತ್ತದೆ.

ಅಲ್ಲದೆ, ಕನ್ನಡದಲ್ಲಿ ನವೋದಯ ಸಾಹಿತ್ಯ ಆಗ ತಾನೇ ಕಾಣಿಸಿಕೊಂಡಿತ್ತು. ಕಾವ್ಯ ನಾಟಕಾದಿ ಸೃಜನಸಾಹಿತ್ಯ ತನ್ನ ಸಾಧ್ಯತೆಗಳನ್ನು ಪೂರ್ಣವಾಗಿ ಕಂಡುಕೊಂಡಿರಲಿಲ್ಲ. ಈ ಶತಮಾನದ ಎರಡು ಮೂರನೆಯ ದಶಕಗಳಲ್ಲಿ ಅಲಂಕಾರಶಾಸ್ತ್ರ, ಕಾವ್ಯಮೀಮಾಂಸೆ, ಸಾಹಿತ್ಯವಿಮರ್ಶೆಯ ಗ್ರಂಥಗಳು ಇನ್ನೂ ಕಾಣಿಸಿಕೊಂಡಿರಲಿಲ್ಲ. ಇಂತಹ ಸಂದರ್ಭದಲ್ಲಿ ಡಿ.ವಿ.ಜಿ.ಯವರು ಸಂಸ್ಕೃತ ಆಲಂಕಾರಿಕರು, ಪಾಶ್ಚಿಮಾತ್ಯ ತತ್ತ್ವಜ್ಞಾನಿಗಳು, ವಿಮರ್ಶಕರು ಸೌಂದರ್ಯವನ್ನು ಹೇಗೆ ವಿಚಾರಮಾಡಿದ್ದಾರೆ ಎಂಬುದನ್ನು ಸ್ಥೂಲವಾಗಿಯಾದರೂ ವಿದ್ಯಾರ್ಥಿಗಳಿಗೂ, ಸಾಹಿತ್ಯ ಕಲೆಗಳ ಬಗ್ಗೆ ಆಸಕ್ತಿಯುಳ್ಳವರಿಗೂ, ವಿದ್ವಾಂಸರಿಗೂ ಉಪನ್ಯಾಸಗಳ ಮೂಲಕ ಹೇಳಿದ್ದು ಗಮನಾರ್ಹವಾದುದೇ. ಆಚಾರ್ಯ ತೀ.ನಂ.ಶ್ರೀ. ಅವರ 'ಭಾರತೀಯ ಕಾವ್ಯಮೀಮಾಂಸೆ' ಪ್ರಕಟವಾಗುವವರೆಗೂ, ಕನ್ನಡ ಕೃತಿಯನ್ನು ಬಿಟ್ಟರೆ, ಡಿ.ವಿ.ಜಿ.ಯವರ ಉಪನ್ಯಾಸ ಸಂಗ್ರಹಗಳೇ ಆಧಾರವಾಗಿದ್ದುವು. ಆದ್ದರಿಂದ ಅವರ 'ಸೌಂದರ್ಯ ಮೀಮಾಂಸೆ'ಯಲ್ಲಿ ಸ್ಥೂಲ ಕಲ್ಪನೆ, ಬೀಸು ಕಂಡುಬರುತ್ತದೆಯೇ ಹೊರತು ಸಮಗ್ರ ವಿಚಾರಮಂಥನ, ತೌಲನಿಕವಾದ ಚರ್ಚೆ ಕಾಣಬರುವುದಿಲ್ಲ. ಆದರೂ ಅವರದೇ ಎನ್ನಬಹುದಾದ ಖಚಿತ ನಿಲುವುಗಳನ್ನು ಗುರುತಿಸಬಹುದಾಗಿದೆ.

ಮೂರನೆಯದಾಗಿ, ಡಿ.ವಿ.ಜಿ.ಯವರು ಕ್ಲಾಸಿಕ್ ಮತ್ತು ರೊಮಾಂಟಿಕ್ ಕವಿಗಳಿಂದ ಪ್ರಭಾವಿತರಾಗಿದ್ದವರು, ಹಾಗೇ ಭಾರತೀಯ ವೈದಿಕ ಪರಂಪರೆಯ ತತ್ತ್ವಜ್ಞಾನದಲ್ಲಿ ಚಿಂತನೆಯಲ್ಲಿ ನಂಬಿಕೆ ಇದ್ದವರು. ಎರಡು ಪಕ್ಷದ ವಿಚಾರಗಳಲ್ಲಿ

ತಮಗೆ ಇಷ್ಟವಾದ ಪ್ರಿಯವಾದುವನ್ನು ಸಮನ್ವಯಗೊಳಿಸಿ ಹೇಳುವ ಪ್ರಯತ್ನ ಮಾಡಿದ್ದಾರೆ. ಹೀಗಾಗಿ ಕೆಲವೊಂದು ವಿವರಗಳಲ್ಲಿ ವಿರೋಧ ಅಭಿಪ್ರಾಯಗಳು ಇಣಿಕಿದ್ದರೂ ಅವೇ ಮುಖ್ಯ ಎನ್ನುವಂತಿಲ್ಲ. ಒಟ್ಟು ನಿಲುವನ್ನು ಗಮನಿಸಿ ಅವರ ವಿಚಾರಗಳನ್ನು ಗ್ರಹಿಸಬೇಕಾಗುತ್ತದೆ.

೨

ಸೌಂದರ್ಯ ಮೀಮಾಂಸೆಯು ಪಾಶ್ಚಿಮಾತ್ಯರಲ್ಲಿ ತತ್ತ್ವಶಾಸ್ತ್ರದ ಒಂದು ಭಾಗವಾಗಿ, ಅಂಗವಾಗಿ ಬೆಳೆಯಿತು. ಸೌಂದರ್ಯದ ಬಗ್ಗೆ ಚರ್ಚಿಸಿರುವವರೆಲ್ಲ ತತ್ತ್ವಜ್ಞಾನಿಗಳೇ ಆಗಿದ್ದಾರೆ. ಪ್ರಾಸಂಗಿಕವಾಗಿ ಸೌಂದರ್ಯವಿಷಯ ಚರ್ಚಿಸಿದರೂ ಸ್ಪಷ್ಟ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಕಳೆದ ಶತಮಾನದ ವೇಳೆಗೆ ವಿಶಿಷ್ಟ ಶಾಖೆಯಾಗಿ ಬೆಳೆದ ಸೌಂದರ್ಯ ಮೀಮಾಂಸೆಯನ್ನು ಇತ್ತೀಚೆಗೆ ಭೌತವಿಜ್ಞಾನ. ಮನೋವಿಜ್ಞಾನಗಳ ಭಾಗವಾಗಿಸಿ, ಅದನ್ನೂ ಒಂದು ವಿಜ್ಞಾನದಂತೆ ವ್ಯವಸ್ಥಿತವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಪಾಶ್ಚಿಮಾತ್ಯರಲ್ಲಿ ಅವರ ತತ್ತ್ವಶಾಸ್ತ್ರದ ನಿಲುವು, ಸಿದ್ಧಾಂತಗಳಿಗೆ ಅನುಗುಣವಾಗಿ ಸೌಂದರ್ಯ ಪರಿಕಲ್ಪನೆಯೂ ಬದಲಾಗುವುದನ್ನು ಗುರುತಿಸಬಹುದು. ಅಲ್ಲದೆ, ಅವರ ದೃಷ್ಟಿ ಕಾವ್ಯ ನಾಟಕಾದಿಗಳನ್ನು ಆಧರಿಸಿದೆಯೋ ಚಿತ್ರ, ಶಿಲ್ಪ, ಸಂಗೀತ ಕಲೆಗಳನ್ನು ಆಧರಿಸಿದೆಯೊ ಎಂಬುದರ ಮೇಲೆಯೂ ಒಲವು, ಒತ್ತುಗಳು ಪ್ರಭಾವ ಬೀರಿರುವುದನ್ನು ಕಾಣಬಹುದು. ಅದಕ್ಕನುಗುಣವಾಗಿ ಸೌಂದರ್ಯ ಪರಿಕಲ್ಪನೆ ರೂಪುಗೊಳ್ಳುವುದನ್ನೂ ಗುರುತಿಸಬಹುದು.

ಗ್ರೀಕ್ ಮತ್ತು ರಿನೇಸಾನ್ಸ್ ಕಾಲಗಳಲ್ಲಿ ಮಾನವ ದೇಹದ ಆದರ್ಶ ಕಲ್ಪನೆ ಪ್ರಾಮುಖ್ಯ ಪಡೆದು, ವಾಸ್ತವತೆಯತ್ತ ಒಲವು ತಿರುಗತೊಡಗಿತು. ಆಗಿನ ಆದರ್ಶ ಸೌಂದರ್ಯವೇ ಬೇರೆ. ಪೌರ್ವಾತ್ಯ ದೇಶಗಳ ಸಂಪರ್ಕ ಹೆಚ್ಚಿದಂತೆ, ಪೌರ್ವಾತ್ಯ ಕಲೆಗಳ, ಆಫ್ರಿಕಾ ಮತ್ತು ಪ್ರಾದಿಮ ಜನಾಂಗಗಳ ಕಲೆಗಳ ಅರಿವು ಮೂಡತೊಡಗಿದ ಮೇಲೆ 'ಸೌಂದರ್ಯ'ದ ಬಗೆಗಿನ ಕಲ್ಪನೆ ಬೇರೆಯೇ ತಿರುವು ಪಡೆಯಬೇಕಾಯಿತು. ಕಳೆದ ಶತಮಾನದಲ್ಲಿ, ಹ್ಯಾವೆಲ್, ಪರ್ಸಿ ಬ್ರೌನ್, ಕ್ರಾಮರಿಷ್, ಆನಂದ ಕುಮಾರ ಸ್ವಾಮಿ ಮುಂತಾದ ಕಲಾ ವಿಮರ್ಶಕರು ವಿದ್ವಾಂಸರು ಭಾರತದ ಚಿತ್ರ, ಶಿಲ್ಪಗಳ ಪರಿಚಯ ಮಾಡಿಕೊಡುತ್ತ, ಭಾರತೀಯ ಜೀವನ ತತ್ತ್ವಗಳ ಹಿನ್ನೆಲೆಯಲ್ಲಿ ಸೌಂದರ್ಯ ಹಾಗೂ ಕಲೆಗಳ ವೈಶಿಷ್ಟ್ಯವನ್ನು ನಿರೂಪಿಸಿದಾಗ ; ಭಾರತೀಯ ಅಲಂಕಾರ ಶಾಸ್ತ್ರ, ಕಾವ್ಯಮೀಮಾಂಸೆಯ ಹಿನ್ನೆಲೆಯನ್ನೂ ಸೌಂದರ್ಯಕಲ್ಪನೆಯನ್ನೂ, ರಸಾನುಭವ ಮುಂತಾದ ರಸಸಿದ್ಧಾಂತದ ಮಹತ್ತ್ವ ಮತ್ತು ವೈಶಿಷ್ಟ್ಯವನ್ನು ವಿವರಿಸಿ ಪರಿಚಯ ಮಾಡಿದಾಗ ಪಾಶ್ಚಿಮಾತ್ಯರಲ್ಲಿಯೂ ಸೌಂದರ್ಯ, ಕುರೂಪ, ವಿರೂಪಗಳ ದೃಷ್ಟಿಯಲ್ಲಿ ವಿಸ್ತಾರವಾದ ಅರ್ಥ ಕಾಣಬರತೊಡಗಿತು.

ಡಿ.ವಿ.ಜಿ.ಯವರಿಗೆ ಭಾರತೀಯ ತತ್ತ್ವಶಾಸ್ತ್ರ, ಅಲಂಕಾರಶಾಸ್ತ್ರಗಳ, ಕಾವ್ಯ ನಾಟಕ ಸಂಗೀತ ನಾಟ್ಯಗಳ ಅರಿವು ಗಾಢವಾಗಿ ಇದ್ದುದರಿಂದ ಒಂದು ಸಮನ್ವಯ ದೃಷ್ಟಿ ರೂಪುಗೊಳ್ಳಲು ಅನುಕೂಲವಾಯಿತು. ಆದರೂ, ಈ ಶತಮಾನದ ಮೊದಲ ದಶಕಗಳ ವರೆಗಿನ ಬೆಳವಣಿಗೆಯೇ ಅವರಲ್ಲಿ ಪ್ರಾಧಾನ್ಯ. ಅವರಲ್ಲಿ, ಅವರ ಸೌಂದರ್ಯ ದೃಷ್ಟಿಯಲ್ಲಿ ಈ ಕ್ಲಾಸಿಕ್ ಮತ್ತು ರೊಮಾಂಟಿಕ್ ದೃಷ್ಟಿಯನ್ನೇ ಬಹುವಾಗಿ ಕಾಣುತ್ತೇವೆ. ಆಧುನಿಕ ಕಲೆಯ, ಕಲಾವಿಮರ್ಶಕರ ಚೇತನೆಗಳ ಬಗ್ಗೆ ಅಂತಹ ಒಲವು ಇಲ್ಲ ಎಂದೇ ಹೇಳಬೇಕಾಗುತ್ತದೆ.

೩

ಗಯಟೆ ಹೇಳುತ್ತಾನೆ: "ಸೌಂದರ್ಯ ಎನ್ನುವುದು ಅನಿರ್ವಚನೀಯವಾದ ಥಳಥಳಿಸಿ ಸುಳಿದಾಡುವ ಒಂದು ನೆರಳು. ಅಂತಹ ಅಸ್ಪಷ್ಟ ನೆರಳಿನ ಮೇರೆಯನ್ನು ನಿಶ್ಚಯಿಸಲು ಯಾವ ನಿರೂಪಣೆಯಿಂದಲೂ ಸಾಧ್ಯವಿಲ್ಲ." ಈ ಮಾತು ಇಂದಿಗೂ ಅರ್ಥಪೂರ್ಣವಾಗಿಯೇ ಉಳಿದಿದೆ.

ಸೌಂದರ್ಯ ಎಂಬುದನ್ನು ಸೂತ್ರರೂಪದಲ್ಲಿ ವಿವರಿಸಲು ಹೊರಟ ಪ್ರತಿಯೊಬ್ಬರೂ ಪಾರ್ಶ್ವನೋಟವನ್ನು ಹೇಳಿದ್ದಾರೆಯೇ ಹೊರತು ಸರ್ವಸಮ್ಮತ ಸೂತ್ರ ಇಂದಿಗೂ ಬಂದಿಲ್ಲ. ಕೆಲವು ಸೂತ್ರಗಳನ್ನು ಗಮನಿಸಿ: ಒಂದು ವಸ್ತು— 1. ಮೋಹಕವಾಗಿ ಕಂಡುಬಂದರೆ, 2. ನಿಶ್ಚಿತ ಆಕಾರವನ್ನು ಹೊಂದಿದ್ದರೆ, 3. ಪ್ರಕೃತಿಯ ಅನುಕರಣೆಯಾಗಿದ್ದರೆ, 4. ಒಂದು ಮಾಧ್ಯಮದ ಬಳಸುವಿಕೆಯಿಂದ ನಿರ್ಮಾಣವಾಗಿದ್ದರೆ, 5. ಪ್ರತಿಭಾವಂತನ ಕ್ರಿಯೆಯಾಗಿದ್ದರೆ, 6. ಸತ್ಯವನ್ನೂ, ಪ್ರಕೃತಿಯ ಆತ್ಮವನ್ನೂ, ಆದರ್ಶವನ್ನೂ, ಸಾರ್ವತ್ರಿಕತೆಯನ್ನೂ ಸೂಚಿಸುವುದಾಗಿದ್ದರೆ, 7. ಉತ್ತಮ ಸಾಮಾಜಿಕ ಫಲವನ್ನು ಕೊಡುವುದಾಗಿದ್ದರೆ, 8. ಒಂದು ಭಾವನೆಯನ್ನು ವ್ಯಕ್ತಗೊಳಿಸುವ ಹಾಗಿದ್ದರೆ, 9. ಆನಂದದಾಯಕವಾಗಿದ್ದರೆ, 10. ಅಪೂರ್ವ ವ್ಯಕ್ತಿತ್ವದ ಸಾಯೋಗವನ್ನುಂಟುಮಾಡುವ ಹಾಗಿದ್ದರೆ — ಅದು **'ಸುಂದರ'** ಎನಿಸುತ್ತದೆ. ಈ ಸೂತ್ರಗಳಲ್ಲಿ ಕೆಲವು ಕಾವ್ಯ, ಶಿಲ್ಪ, ಸಂಗೀತ ಇತ್ಯಾದಿ ಕಲೆಗಳ ದೃಷ್ಟಿಯಿಂದ ಹೇಳಿದಂತಹವು, ಕೆಲವು ನಿರ್ದಿಷ್ಟ ತತ್ತ್ವದೃಷ್ಟಿಯಿಂದ ರೂಪಿತವಾದುವು. ಸಮಾಜವಾದೀ ದೃಷ್ಟಿಯ ಸೂತ್ರವೂ ಅಲ್ಲಿ ಸೇರಿದೆ.

ವಿಜ್ಞಾನ ಶಾಸ್ತ್ರ ಕಲೆಗಳನ್ನೆಲ್ಲ ಗಮನಿಸಿ ಮುಖ್ಯ ವ್ಯತ್ಯಾಸವನ್ನು ಮೊದಲು ಸೂಚಿಸಬೇಕಾಗುತ್ತದೆ. R. M. Ogden ಎಂಬಾತ ಹೇಳುವಂತೆ: "Aesthetic means perception. It means perception that rests heavily on feeling of distinct from knowing". ಜ್ಞಾನ ಬೇರೆ, ಅನುಭವ ಬೇರೆ. ಸೌಂದರ್ಯ ಸಂವೇದನೆಗೆ ಸಂಬಂಧಪಟ್ಟದ್ದು ಬುದ್ಧಿ, ತರ್ಕ, ಜ್ಞಾನಕ್ಕೆ ಅಲ್ಲ ಎಂಬುದು ಖಚಿತ.

ಡಿ. ವಿ. ಜಿ. ಒಂದು ಕಡೆ 'ಸೌಂದರ್ಯ' ಶಬ್ದದ ನಿಷ್ಪತ್ತಿ ಹೇಳಿದ್ದಾರೆ: "'ಸುಂದರ' ಎಂಬ ಪದವು 'ಉಂದ' ಎಂಬ ಧಾತುವಿನಿಂದ ಬಂದದ್ದು. (ಸು + ಉನ್ದೀ = ಕ್ಲೇದನೇ + ಅರಃ). ಉನ್ದ ಎಂದರೆ ಆರ್ದ್ರ ಮಾಡುವುದು, ಒದ್ದೆಮಾಡುವುದು, ತೋಯಿಸುವುದು." ಈ ಅರ್ಥ ಭಾರತೀಯ ರಸಸಿದ್ಧಾಂತಕ್ಕೆ ಅನುಗುಣವಾದದ್ದು. ಮುಂದುವರಿದು "ಯಾವುದು ಮನಸ್ಸನ್ನು ಚೆನ್ನಾಗಿ ತೋಯಿಸಬಲ್ಲುದೋ, 'ಸರಸ' ಮಾಡಬಲ್ಲುದೋ ಅದು ಸುಂದರ." ಎನ್ನುತ್ತಾರೆ. ಕಾವ್ಯಮೀಮಾಂಸೆಯಲ್ಲಿ ಬರುವ ಈ ವಿವರಣೆಯಿಂದ ಕಲೆಗಳ ಕಡೆ ಹೊರಳುತ್ತಾರೆ:

"ಸೌಂದರ್ಯವೆಂಬುದೇನು ? ಅದು ಮನಸ್ಸನ್ನಾಕರ್ಷಿಸಿ, ಮೋಹಗೊಳಿಸುವ ಶಕ್ತಿ. ಈ ಶಕ್ತಿಯು ಇಂದ್ರಿಯಗೋಚರವಾದ ವಸ್ತುಗಳಲ್ಲಿ ಆಯಾ ವಸ್ತುವಿನ ನಾನಾ ಅಂಶಗಳ ಒಂದು ತೆರದ ಜೋಡಣೆಯಿಂದ, ಒಂದು ಪರಿಯ ಏರ್ಪಾಟಿನಿಂದ, ಹುಟ್ಟುತ್ತದೆ." ಈ ಹೇಳಿಕೆ ವಿಖ್ಯಾತ ಕಲಾವಿಮರ್ಶಕ Herbert Read ಕಲೆಯ ಬಗ್ಗೆ ಹೇಳಿದ ಮಾತುಗಳನ್ನು ನೆನಪಿಗೆ ತರುತ್ತವೆ. "Beauty is a unity of formal relations among our sense perceptions." ಇದು ಲಲಿತ ಕಲೆಗಳಲ್ಲಿ ಕಂಡುಬರುವ ರೂಪಸಾಂಗತ್ಯಕ್ಕೆ (formal harmony) ಸಂಬಂಧಿಸಿದೆ. ಕಾವ್ಯಕ್ಕೂ ಅನ್ವಯಿಸಬಹುದು ರಸೌಚಿತ್ಯ ದೃಷ್ಟಿಯಿಂದ.

ಸೌಂದರ್ಯಕ್ಕೆ ಮುದ್ದಾದ ಚೆಲುವಾದ ಎಂಬ ಸಣ್ಣ ಅರ್ಥಗಳೂ ಇವೆ ಎಂದು, "ರಮಣೀಯ, ಹೃದ್ಯ, ಮನೋಹರ ಎಂಬ ಪದಗಳೂ ಸೌಂದರ್ಯದ ಕಾರ್ಯಗುಣವನ್ನು ಸೂಚಿಸುತ್ತವೆ. ಸೌಂದರ್ಯವು ಮನಸ್ಸನ್ನು ಹಿಡಿದು ನಿಲ್ಲಿಸಿ, ಕರಗಿಸಿ, ತಿರುಗಿಸುವ ಶಕ್ತಿ." ಎನ್ನುತ್ತಾರೆ. ಸೌಂದರ್ಯ ನಿಸರ್ಗ, ಕಲೆಗಳಲ್ಲಿ ಮಾತ್ರ ಗೋಚರವಾಗುವುದಲ್ಲ, ಈ ಮಿತಿಯನ್ನು ಮೀರಿ ಜೀವನದಲ್ಲೂ ಸೌಂದರ್ಯವನ್ನು ಕಾಣುತ್ತಾರೆ. "ಈ ಶಕ್ತಿ ಇರುವುದು ಬಹಿರಿಂದ್ರಿಯಗಳಿಗೆ ಗೋಚರಿಸುವ ರೂಪ ಶಬ್ದಗಳಲ್ಲಿ ಮಾತ್ರವೇ ಅಲ್ಲ. ನಮ್ಮ ಅಂತರಂಗಕ್ಕೆ ತಿಳಿದುಬರುವ ಜೀವ ವರ್ತನೆ, ವಿಲಾಸಗಳಲ್ಲಿಯೂ ಆ ಶಕ್ತಿಯಿರುತ್ತದೆ" ಎಂದು ಅರ್ಥಕ್ಕೆ ಹೆಚ್ಚು ವ್ಯಾಪ್ತಿ ಒದಗಿಸುತ್ತಾರೆ.

ಡಿ.ವಿ.ಜಿ.ಯವರ ಮೇಲಿನ ವಿವರಣೆಗಳಲ್ಲಿ ಇನ್ನೊಂದು ಅಂಶವೂ, ಸಾವಿರಾರು ವರ್ಷಗಳಿಂದ ಚರ್ಚಿತವಾಗಿರುವ ಸಮಸ್ಯೆಯೂ ಸ್ಪಷ್ಟವಾಗುತ್ತದೆ. ತತ್ತ್ವಜ್ಞರು ಸೌಂದರ್ಯ ವಸ್ತುವಿನಲ್ಲಿದೆಯೋ ಗ್ರಹಣೇಂದ್ರಿಯಗಳಿಂದ ಅನುಭವಿಸುವ ಮನಸ್ಸಿನಲ್ಲಿದೆಯೋ ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಉಭಯಪಕ್ಷ ವಾದಗಳೂ ಚರ್ಚೆಗೆ ಒಳಗಾಗಿವೆ.

ಮಾನವನ ಅರಿವಿಗೆ ಬಾರದಿದ್ದರೂ ಪ್ರತಿಯೊಂದು ವಸ್ತುವಿಗೂ ತನ್ನ ಅಸ್ತಿತ್ವದ ಸಂಕೇತವಾದ ಒಂದು ಮೌಲ್ಯವಿರುತ್ತದೆ. ವಸ್ತುವೆಂದರೆ ಅರಿಯುವ ಮನಸ್ಸಿನ ಸಂಪರ್ಕವಿಲ್ಲದ ಇರುವಿಕೆ, existence. ಅದರದು ವಸ್ತುಮೌಲ್ಯ.

ಆದರೆ ಇಂತಹ ಒಂದು ಅಸ್ತಿತ್ವ ಪ್ರೇಮ, ಆನಂದ, ದುಃಖ, ಭಯ ಮುಂತಾದ ವಿಷಯಗಳಲ್ಲಿರುವುದಿಲ್ಲ. ಇವುಗಳು ಮಾನವನ ಮನಸ್ಸಿನಿಂದ ನಿರ್ಮಿತವಾದವುಗಳು. ವಸ್ತುಸಂಬಂಧವಾದ ಅಸ್ತಿತ್ವ ಇಲ್ಲದ ಭಾವನೆಗಳಿಗೆ ಸ್ವತಂತ್ರವಾದ ನಿಲುವೇ ಇಲ್ಲ. ಇಂತಹ ಮನಸ್ಸಿನಿಂದಲೇ ಉದ್ಭವಿಸುವ ಮೌಲ್ಯಗಳಿಗೆ **ಮಾನಸಿಕ ಮೌಲ್ಯ** ಗಳೆನ್ನುತ್ತಾರೆ. ಈ ಮೌಲ್ಯಕ್ಕೆ 'ತನ್ನತನ' ಎಂಬುದಿದೆಯೇ ? ಸಂಶಯ ಉಳಿಯುತ್ತದೆ. ಮನಸ್ಸಿನಲ್ಲಿ ಒಂದು ಭಾವನೆ ಮೂಡಬೇಕಾದರೆ ಅದಕ್ಕೆ ಕಾರಣವಾಗಿ ಒಂದು ವಸ್ತುವಿನ ಪ್ರಚೋದನೆ ಇರಬೇಕು. ಆದ್ದರಿಂದ ಮೌಲ್ಯವು ವಸ್ತುವಿನಲ್ಲಿ ಮಾತ್ರವೇ ಇಲ್ಲ, ಅಥವಾ ಮನಸ್ಸಿನಲ್ಲಿಯೇ ಇಲ್ಲ. ಇವೆರಡರ ಸಮನ್ವಯದಲ್ಲಿದೆ. ಹೀಗಾಗಿ ಇಂತಹ ಮೌಲ್ಯವು ಮಾನಸಿಕವೂ ಅಲ್ಲ, ವಾಸ್ತವಿಕವೂ ಅಲ್ಲ. ಎರಡರ ಸಮನ್ವಯ ಎನ್ನಬೇಕಾಗುತ್ತದೆ. ಇವು ಪರಸ್ಪರ ಪೂರಕವಾದಾಗಲೇ ಸಂಪೂರ್ಣ.

ಡಿ.ವಿ.ಜಿ.ಯವರು ಸೌಂದರ್ಯವನ್ನು ವಿವರಿಸುವಲ್ಲಿ ವಸ್ತು ಮತ್ತು ಮನಸ್ಸು ಎರಡನ್ನೂ ಸಮನ್ವಯಗೊಳಿಸಿ ಹೇಳಿದ್ದಾರೆ.

ತಮ್ಮ 'ಶೃಂಗಾರಮಂಗಳಂ' ಕೃತಿಯಲ್ಲಿ ಕೀಟ್ಸ್ ಕವಿಯ Ode on a Grecian Urn ಕವನದ ಸಾಲುಗಳನ್ನು ಉದ್ಧರಿಸಿ ಸೌಂದರ್ಯ ಮೀಮಾಂಸೆಯನ್ನು ಆಧ್ಯಾತ್ಮಿಕ ನೆಲೆಗಟ್ಟಿಗೂ ಒಯ್ಯುತ್ತಾರೆ. ಕೀಟ್ಸ್ ಕವಿಯ ಪ್ರಸಿದ್ಧ ಸಾಲುಗಳನ್ನು—

Beauty is truth : truth beauty – that is all
Ye know on earth, and all ye need to know.

ಸೌಂದರ್ಯ ತಾಂ ಸತ್ಯ : ಸತ್ಯ ತಾಂ ಸೌಂದರ್ಯ-।
ಮಿನಿತೆ ನೀವಿಳೆಯೊಳರಿತಿರ್ಪುದೆಲ್ಲಂ : ಮತ್ತ-।
ಮಿನಿತೆ ನೀಮರಿಯಲ್ಕವಶ್ಯಮಾದೆಲ್ಲಂ ॥

ಎಂದು ಅನುವಾದಿಸಿದ್ದಾರೆ. ಕೀಟ್ಸ್‌ನ ಸೌಂದರ್ಯದೃಷ್ಟಿಯನ್ನು ಒಪ್ಪಿ ವಿವರಿಸುತ್ತಾ ವೇದಾಂತ ದೃಷ್ಟಿಯೊಂದಿಗೆ ಸಮನ್ವಯಗೊಳಿಸುತ್ತಾರೆ.

"**ಸೌಂದರ್ಯ** (Beauty) : ಒಂದು ವಸ್ತುವಿನ ಅಥವಾ ಸಂಗತಿಯ ಯಾವ ಗುಣವಿಶೇಷವು ನಮ್ಮ ಮನಸ್ಸನ್ನು ಆ ವಸ್ತುವಿನೊಳಕ್ಕೆ ಸೆಳೆದು ಅಲ್ಲಿ ನೆಲೆಗೊಳಿಸಿ, ಅದರ ಅನುಭವದಲ್ಲಿ ನಾವು ಮೈಮರೆಯುವಂತೆ ಮಾಡುತ್ತದೆಯೋ ಆ ಗುಣಶಕ್ತಿಯು ಸೌಂದರ್ಯ. ಅದೇ ಸ್ವಾರಸ್ಯ. ಸೌಂದರ್ಯದ ಪರಿಪೂರ್ಣಾನುಭವವೇ ಆನಂದ. ಅನುಭವಿಸುವವನೂ ಅನುಭವಿಸಲ್ಪಟ್ಟದ್ದೂ ಬೇರೆ ಬೇರೆ ವಸ್ತುಗಳೆನಿಸುವುದು ಹೋಗಿ, ಅದೂ ತಾನೂ ಒಂದೇ ಎನಿಸುವಂತೆ ಕೂಡಿಕೊಂಡು, ಇನ್ನಾವುದರ ಬಯಕೆಯೂ ಇನ್ನಾವುದರ ನೆನಪೂ ಉಳಿಯದೇ ಹೋದಾಗ, ಅಪರೂಪ ಸ್ಥಿತಿ

ಆನಂದದ್ದು." ಇದು ಭಾರತೀಯ ಕಾವ್ಯಮೀಮಾಂಸೆಯಲ್ಲಿ ರಸಾನುಭವವನ್ನು ಹೇಳುವಲ್ಲಿ ಬರುವ 'ಸದ್ಯಃ ಪರನಿರ್ವೃತಯೇ' ಸ್ಥಿತಿ.

ಸತ್ಯಕ್ಕೂ ಸೌಂದರ್ಯಕ್ಕೂ ಇರುವ ಸಂಬಂಧವನ್ನು ವಿವೇಚಿಸುತ್ತಾ "ವೇದಾಂತಮತದಲ್ಲಿ ಸತ್ಯವೂ ಸೌಂದರ್ಯವೂ ಪ್ರತ್ಯೇಕ ಪ್ರತ್ಯೇಕಗಳಲ್ಲ. ಎರಡೂ ಒಟ್ಟಿಗೆ ಆತ್ಮ ಚೈತನ್ಯದಲ್ಲಿ ಅಂತರ್ಗತಗಳಾಗುತ್ತವೆ. ಆತ್ಮದ ಒಂದು ನೈಜಲಕ್ಷಣ ಸತ್; ಇನ್ನೊಂದು ಚಿತ್ ಎಂಬ ಜ್ಞಾನಶಕ್ತಿ. ಆದ್ದರಿಂದಲೇ ಪರಮಾತ್ಮ ವಸ್ತುವನ್ನು 'ಸಚ್ಚಿದಾನಂದ'ವೆಂದು ಹೇಳಿರುವುದು. ಚಿಚ್ಛಕ್ತಿಯು ತನ್ನ ಆನಂದತ್ವವನ್ನು ತನ್ನ ಅಸ್ತಿತ್ವವನ್ನು (ಸತ್ = ಇರುವಿಕೆ) ಕಂಡದ್ದು ಸತ್ಯ. ಅದೇ ಚಿಚ್ಛಕ್ತಿಯು ತನ್ನ ಆನಂದತ್ವವನ್ನು ಕೂಡಿದಾಗ ಆದದ್ದು ಸೌಂದರ್ಯ. ಎಲ್ಲಿ ಸತ್ ಉಂಟೋ ಅಲ್ಲಿ ಮೃತ್ಯುಸ್ಮೃತಿಗೆಡೆಯಿಲ್ಲ. ಹೀಗೆ ಕೀಟ್ಸ್ ಕವಿಯು ಚಿತ್ರಿತಭಸ್ಮಕುಂಭದ ಮೇಲೆ ಕಂಡ ಶೃಂಗಾರಚಿತ್ರಗಳ ತತ್ತ್ವಸಿದ್ಧಾಂತವು ವೇದಾಂತ ಮತಕ್ಕೆ ಸಮ್ಮತವಾಗಿದೆ. ಸತ್ಯದ ಸತ್ಯವು ಪರಮಾತ್ಮ. ವಿಶ್ವಕರ್ತನ ಒಳಮೈ ಸತ್ಯ; ಹೊರಮೈ ಸೌಂದರ್ಯ. ಇದು ಜೀವನ ಧರ್ಮಕ್ಕೆ ಮೂಲಾಧಾರ. ಸತ್ಯವನ್ನು ಮರೆಯದೆ ಸೌಂದರ್ಯವನ್ನು ಭಜಿಸುವಾತನು ಸುಕೃತಜೀವಿ."

ಅಂದರೆ ಸೌಂದರ್ಯ ಮೀಮಾಂಸಕರ ಮಾತುಗಳಲ್ಲಿ ಹೇಳುವುದಾದರೆ ಸತ್‌ನ ವಿವರಣೆ ಸತ್ಯ, ಸತ್‌ನ ಅನುಭವ ಸೌಂದರ್ಯ. ಸತ್ ಅನ್ನು Ideal, Nature, Cosmos ಎಂದೆಲ್ಲ ಕರೆಯಿರಿ, ತಿರುಳು ಒಂದೆ. ಬುದ್ಧಿಯಿಂದ ಜ್ಞಾನ, ಸಂವೇದನೆಯಿಂದ ಸೌಂದರ್ಯಾನುಭವ. ಇವು ಸತ್‌ನ ಎರಡು ಮುಖಗಳು.

೪

ಸೌಂದರ್ಯವನ್ನು ಡಿ.ವಿ.ಜಿ.ಯವರು ಮೂರು ಮಜಲುಗಳಲ್ಲಿ ಕಾಣುತ್ತಾರೆ. ಅದಕ್ಕೆ ಸೌಂದರ್ಯ ತ್ರಿಕೂಟ ಎಂದು ಹೆಸರಿಸಿದ್ದಾರೆ. ಸೌಂದರ್ಯಾನುಭವ ಹಾಗೂ ಕಲೆಯನ್ನು ಕುರಿತ ಡಿ.ವಿ.ಜಿ. ಅಭಿಪ್ರಾಯಗಳು ಕುತೂಹಲಕಾರಿಯಾಗಿವೆ. ಮೊದಲು ಇದನ್ನು ಗಮನಿಸಬಹುದು.

"ಸೌಂದರ್ಯವೆನ್ನುವುದು ಒಬ್ಬೊಬ್ಬ ಮನುಷ್ಯನಿಗೆ ಒಂದೊಂದು ತೆರನಾಗಿರುತ್ತದೆ." ಎನ್ನುತ್ತಾರೆ. ಆ ಕಾರಣವೆ ಎಲ್ಲ ಕಲೆಯನ್ನು ಎಲ್ಲರೂ ಮೆಚ್ಚಲು ಸಾಧ್ಯವಾಗುವುದಿಲ್ಲ. ಇದಕ್ಕೆ ಡಿ. ವಿ. ಜಿ. ನೀಡುವ ವಿವರಣೆ ಹೀಗಿದೆ: "ವ್ಯಕ್ತಿಯ ಅಭಿರುಚಿಗಳು ಪೂರ್ವಜನ್ಮ ಸಂಚಿತಗಳಾದ 'ವಾಸನಾ ವಿಶೇಷ'ಗಳೆಂದು ನಮ್ಮ ಪೂರ್ವಿಕರು ಹೇಳಿದ್ದಾರೆ." ಆದ್ದರಿಂದ "ಸೌಂದರ್ಯಾನುಭವಕ್ಕೆ ಎಂದರೆ ಅದರ ಸತ್ಯಾಂಶ ಗ್ರಹಣಕ್ಕೆ ಸಾಧಾರಣವಾಗಿ ಅನುಭವಿಯ ಪೂರ್ವಜ್ಞಾನ ಜ್ಞಾಪಕಗಳೇ ಮೂಲಾಧಾರ." ಅವರ ದೃಷ್ಟಿಯಲ್ಲಿ "ಸಂಸ್ಕಾರದಂತೆ ಕಲಾನುಭವ".

ಇಲ್ಲಿ ಆಧುನಿಕ ಕಲಾ ವಿಮರ್ಶಕರ, ಸೌಂದರ್ಯಮೀಮಾಂಸಕರ ವಿಚಾರಗಳನ್ನು ಗಮನಿಸಬೇಕು. ಸಂಸ್ಕಾರ ಪೂರ್ವಜನ್ಮದಿಂದ ಎಂಬುದು ಭಾರತೀಯ ದೃಷ್ಟಿ. ಅದು ಹುಟ್ಟಿನಿಂದಲೇ ಬರಬೇಕಿಲ್ಲ. ರೂಢಿಯಿಂದ ಅಭ್ಯಾಸದಿಂದ ಸಂಸ್ಕಾರ ಪಡೆಯಬಹುದು. ಪಾಶ್ಚಿಮಾತ್ಯರು ಭಾರತದ ನಟರಾಜ, ದುರ್ಗಿ ಮುಂತಾದ ಶಿಲ್ಪಗಳನ್ನು ವಿಕಾರ ಎಂದು ಭಾವಿಸುತ್ತಿದ್ದರು. ಯೂರೋಪಿನ ಶಿಲ್ಪಿಗಳು ದೇಹಸೌಂದರ್ಯವನ್ನು ಮಾತ್ರ ನಿರೂಪಿಸುತ್ತವೆ ಎನ್ನಿಸಬಹುದು. ಕರ್ನಾಟಕ ಸಂಗೀತ ಆಲಿಸಿ ರೂಢಿಯಾಗಿರುವ ಕಿವಿಗಳಿಗೆ ಪಾಶ್ಚಿಮಾತ್ಯ ಕ್ಲಾಸಿಕಲ್ ಸಂಗೀತ, ಆಪೆರಾ ಸಂಗೀತ ಹಿಡಿಸಲಾರವು. ಸ್ವತಃ ಡಿ.ವಿ.ಜಿ.ಯವರೇ ಇಂದಿನ ಪಾಪ್ ಸಂಗೀತವನ್ನು ಗದ್ದಲ ಸಂಗೀತ, ನನಗೆ ಹಿಡಿಸುವುದಿಲ್ಲ ಎಂದಿದ್ದಾರೆ. ಭಾರತೀಯ ಮಾಧುರ್ಯಪ್ರಧಾನ ಸಂಗೀತಕ್ಕೆ ಹೆಚ್ಚು ಸಮೀಪವಾದ ಜಾಜ್ ಸಂಗೀತವನ್ನು ದಬಾದಬಿ, ರಬಾರಬಿ ಎನ್ನುತ್ತಾರೆ. ಕಲಾನುಭವಕ್ಕೆ ಪೂರ್ವಭಾವನೆಗಳಿರಬಾರದು. ಲೋಕಾನುಭವ ಜೀವನಾನುಭವಗಳಿಂದಲೂ ಸಂಸ್ಕಾರ ಒದಗಬಹುದು. ಅದು ಅಂದರೆ ಈ ರೂಢಿ, ಅಭ್ಯಾಸ ಅಗತ್ಯ.

ಏಕೆಂದರೆ, ಸೌಂದರ್ಯ ಮತ್ತು ಕಲೆ ಎನ್ನುವುದನ್ನು ಒಂದೇ ಎಂದು ಭಾವಿಸುವುದು ತಪ್ಪಾಗುತ್ತದೆ. ಸುಂದರವಾದುದೆಲ್ಲ ಕಲೆಯಲ್ಲ. ಯಾವುದು ಕಲೆಯೋ ಅದೆಲ್ಲವೂ ಸುಂದರವಾಗಿಲ್ಲ. ಹರ್ಬರ್ಟ್ ರೀಡ್ ಹೇಳುವಂತೆ "ಕಲೆಯ ಇತಿಹಾಸವನ್ನು ಪರಿಶೀಲಿಸಿದಲ್ಲಿ ಕಲೆಯು ಅನೇಕ ವೇಳೆ ಸುಂದರವಾಗಿರುವುದು ಕಂಡುಬರುವುದಿಲ್ಲ" ಎನ್ನಬಹುದು. ಇದಕ್ಕೆ ಸ್ಪಷ್ಟನೆ ಅಗತ್ಯ. ಡಿ.ವಿ.ಜಿ. ರಸಾನುಭವವನ್ನು ಹೇಳಿದರೂ ಈ ದೃಷ್ಟಿಯಿಂದ ವಿವರಿಸಿಲ್ಲ.

ಸೌಂದರ್ಯಾನುಭವ, ಕಲಾನುಭವ, ರಸಾನುಭವ ಸಂವಾದಿ ಶಬ್ದಗಳು. ಈ ಅನುಭವಕ್ಕೆ ಎರಡು ವಿಷಯಗಳ ಅಗತ್ಯವಿದೆ. ಒಂದು ಹಿಂದೆ ತಿಳಿಸಿದ ರೂಢಿ, ಸಂಸ್ಕಾರವಾದರೆ, ಇನ್ನೊಂದು ಅನುಭವಿಸುವಾಗ ಇರಬೇಕಾದ ಮನಸ್ಸಿನ ನಿರ್ಲಿಪ್ತ ಸ್ಥಿತಿ. ಸಾಧಾರಣೀಕರಣದಲ್ಲಿ ಕಾವ್ಯಮೀಮಾಂಸೆ ಸ್ಪಷ್ಟಪಡಿಸಿದೆ. ಇತ್ತೀಚೆಗೆ ಪಾಶ್ಚಿಮಾತ್ಯರು ಇದನ್ನು ನಿಸ್ಸಂಗ ದೂರತ್ವ, ಮಾನಸಿಕ ದೂರ (Psyclical distance) ಎಂದು ಕರೆದಿದ್ದಾರೆ. ಕಲಾನುಭವವನ್ನು ದಿನನಿತ್ಯದ ಅನುಭವದಿಂದ ಬೇರ್ಪಡಿಸುವುದು ಇದು. ಬೀದಿಯ ಜಗಳಕ್ಕೆ, ಪಾರ್ಕಿನಲ್ಲಿ ಪ್ರೇಮಿಗಳ ಸಲ್ಲಾಪಕ್ಕೆ ತೋರುವ ಪ್ರತಿಕ್ರಿಯೆ ಬೇರೆ, ನಾಟಕ, ಕಲೆಗಳಲ್ಲಿ ತೋರುವ ಪ್ರತಿಕ್ರಿಯೆ ಬೇರೆ. ನಿಸರ್ಗದಲ್ಲೂ ಸುಂದರ ದೃಶ್ಯವನ್ನು ಆಸ್ವಾದಿಸುವಾಗ ಈ ಮನೋಭೂಮಿಕೆ ಬೇಕಾಗುತ್ತದೆ. ಇದನ್ನು ಡಿ.ವಿ,ಜಿ. 'ಹ್ರೀ' ನಾಚಿಕೆ, ಸಂಕೋಚ, ಎನ್ನುತ್ತಾರೆ.

ಆ ಕಾರಣವೇ ಕಲೆಯಲ್ಲಿ ನಮಗೆ ಒಗ್ಗದ, ಹಿಡಿಸದ ವಿಷಯಗಳೂ ಅನುಭವಗಳೂ ಇರುತ್ತವೆ. ಅಂಥವನ್ನು 'ಸೌಂದರ್ಯದೃಷ್ಟಿಯಿಂದ ಅತೃಪ್ತಿಕರ'

ಎನ್ನುತ್ತೇವೆ. ಸಂಸ್ಕಾರವಿದ್ದೂ, ಒಂದು ರಚನೆ ಓಡಿಸದಿದ್ದರೆ, ಆಗ ಆ ಕೃತಿಯು ಅಭಿವ್ಯಕ್ತಿಯಲ್ಲಿ ಸಾಂಗತ್ಯ, ಸಮಂಜಸತೆ, ಇಲ್ಲ ಎನ್ನಬೇಕಾಗುತ್ತದೆ.

ಸಂಸ್ಕಾರದಿಂದ ಡಿ.ವಿ.ಜಿ. 'ಆನಂದ'ಕ್ಕೆ ಬರುತ್ತಾರೆ. "ಆನಂದ ಎಂಬುದೇನು? ಅದು ಮನಸ್ಸಿನ ಒಂದು ಸರ್ವೋತ್ಕೃಷ್ಟ ಸ್ಥಿತಿ...ಈ ಸ್ಥಿತಿಯನ್ನೇ 'ಸಮಾಧಿ' ಎಂದೂ, 'ತಾದಾತ್ಮ್ಯ'ವೆಂದೂ, 'ಪರವಶತೆ' ಎಂದೂ ನಾವು ಕರೆಯುವುದು." ಮುಂದುವರಿದು "ಸೌಂದರ್ಯವು ಪರವಸ್ತುವಿನ ಒಂದು ವಿಭೂತಿಯೆಂದೂ ಅದ ರಿಂದಾಗುವ ಆನಂದವು ಬ್ರಹ್ಮಾನಂದದ ಒಂದು ಕಣವೆಂದೂ ವೇದಾಂತಿಗಳು ಹೇಳುವ ರೆಂದು ತೋರುತ್ತದೆ." ಎನ್ನುತ್ತಾರೆ. "ರಸೋ ವೈ ಸಃ । ರಸಗ್ಂ ಹ್ಯೇವಾಯಂ ಲಬ್ಧ್ವಾऽऽನಂದೀ ಭವತಿ" ಎಂಬ ತೈತ್ತಿರೀಯ ಉಪನಿಷತ್ತಿನ ಉಕ್ತಿಯಲ್ಲೂ, "ಯೋ ವೈ ಭೂಮಾ ತತ್ಸುಖಂ" ಎಂಬಲ್ಲೂ ಈ ದೃಷ್ಟಿಯೇ ವ್ಯಕ್ತವಾಗಿದೆ.

ಕಲಾನುಭವವನ್ನು ಡಿ. ವಿ. ಜಿ. ಮೂರು ಘಟ್ಟಗಳಾಗಿ ವಿಂಗಡಿಸುತ್ತಾರೆ. (1) **ಮನಃ ಪ್ರಸಾದ** (2) **ಭಾವಾವೇಶ** (3) **ತಾತ್ಪರ್ಯ ಚಿಂತನೆ** ಎಂದು ಆ ಘಟ್ಟ ಗಳನ್ನು ಹೆಸರಿಸಿದ್ದಾರೆ. ಇವುಗಳ ವಿವರಣೆಗೆ ಚಿತ್ರಶಿಲ್ಪಕಲೆ, ಸಂಗೀತ ಹಾಗೂ ಕಾವ್ಯಗಳನ್ನು ದೃಷ್ಟಾಂತವಾಗಿ ಹೇಳಿ ಮೂರು ವಿಭಿನ್ನ ಮಾಧ್ಯಮಗಳಲ್ಲಿ ಆ ಘಟ್ಟ ಗಳನ್ನು ಗುರುತಿಸುತ್ತಾರೆ. ದೇವಾಲಯದ ಗೋಡೆಗಳ ಅಲಂಕಾರಗಳನ್ನು ಆನೆ, ಕುದುರೆ, ಹಂಸ, ಪದ್ಮ ಇತ್ಯಾದಿಗಳನ್ನು ಮನಃ ಪ್ರಸಾದಗೊಳಿಸುವ ಘಟ್ಟ ಎನ್ನು ತ್ತಾರೆ. ನೋಟಕನ ಮನಸ್ಸನ್ನು ತಿಳಿಗೊಳಿಸಿ, ಲವಲವಿಕೆ ತುಂಬಿಸುವ ಪೂರ್ವ ಸಿದ್ಧತೆ. ಸಂಗೀತದಲ್ಲಾದರೆ ಸ್ತುತಿ, ವರ್ಣ, ಭಜನೆಗಳು ಈ ಕಾರ್ಯ ಸಾಧಿಸುತ್ತವೆ. ಕಾವ್ಯದಲ್ಲಿ ಪ್ರಕೃತಿ ಇತ್ಯಾದಿ ವರ್ಣನೆಗಳು. ಲಲಿತಕಲೆಗಳಲ್ಲಿ ಇವುಗಳನ್ನು motif–ರೂಪಿಕೆ–ಎನ್ನುತ್ತಾರೆ. ಪುನರಾವರ್ತನೆಗೊಳ್ಳುವ ವಿನ್ಯಾಸಗಳು. ಇದು ಮೊದಲ ಘಟ್ಟ.

ಎರಡನೆಯದು ಭಾವಾವೇಶ. ಮಧ್ಯರಂಗದ ವಿಗ್ರಹಗಳು. ವಿಗ್ರಹಗಳ ಹಿನ್ನೆಲೆಯ ಕಥೆಯನ್ನು ಊಹಿಸಿಕೊಂಡು ಭಾವಾವಿಷ್ಟರಾಗುತ್ತೇವೆ ಎನ್ನುತ್ತಾರೆ. ಸಂಗೀತದಲ್ಲಿ ರಾಗವಿಸ್ತಾರ, ಪಲ್ಲವಿಯ ವಿವಿಧ ವೈಖರಿ. ಇದು ರಾಗದ ಕಟ್ಟಡ. ನಾದಲಹರಿಯಲ್ಲಿ ಶ್ರೋತೃ ಮಗ್ನ. ಇದು ರಸಾನುಭವದ ಪರಿಪೂರ್ಣತೆ, ಗೋಪುರದ ಕಲಶ ಎನ್ನುತ್ತಾರೆ. ಕಾವ್ಯದಲ್ಲಿ ಕಥಾಭಾಗ. ಡಿ.ವಿ.ಜಿ. ನೀಡಿರುವ ಉದಾಹರಣೆಗಳೆಲ್ಲವೂ ಕಥನ, ಕ್ರಿಯೆ, 'ಕಾಲ'ದ ಗತಿ ಉಳ್ಳವು. ರಸಸ್ಥಿತಿಗೆ ಏರಲು 'ಕಾಲ' 'ಕ್ರಿಯೆ' ಪೋಷಕವಾಗುತ್ತದೆ. ಕಥಾವಸ್ತು ಇಲ್ಲದ ಒಂದು ಚಿತ್ರ, ಒಂದು ನವ್ಯ ಶಿಲ್ಪದಲ್ಲಿ ರಸಾನುಭವ, ಕಲಾನುಭವ ಹೇಗೆ? ಇದು ಆಧುನಿಕ ಕಲಾ ವಿಮರ್ಶಕರಿಗೂ ಒಗಟಾಗಿದೆ.

ಮೂರನೆಯ ಘಟ್ಟ ತಾತ್ಪರ್ಯಚಿಂತನೆ. ದೇವಾಲಯ ನೋಡಿ ಹೋದ ಮೇಲೆ, ಸಂಗೀತ ಕೇಳಿ ಮನೆಗೆ ಹೋದಾಗ, ಕಾವ್ಯ ಓದಿ ಮುಗಿಸಿದಾಗ ನೋಡಿದ,

ಕೇಳಿದ, ಓದಿದ ವಿಷಯಗಳು ನೋಟಗಳು ಸ್ವರವಿನ್ಯಾಸಗಳು "ಅಂತರಂಗದಲ್ಲಿದ್ದು ಕೊಂಡು ಭಾವಗಳನ್ನು ಕೆಣಕಿ ಕೆಣಕಿ ಎಬ್ಬಿಸುತ್ತವೆ. ಈ ಧ್ಯಾನಸಂತತದ ಪರಿಣಾಮವೇ ರಸಪರಿಪುಷ್ಟಿ. ರಸಾಸ್ವಾದನೆ ಪರಿಪೂರ್ಣವಾದಾಗ ನಾವು ಕಲಾಕೃತಿಯೊಡನೆ ಒಂದುಗೂಡುತ್ತೇವೆ. ಇದು ಕಲಾನುಭವ ಗೋಪುರದ ಕಲಶ" ಎನ್ನುತ್ತಾರೆ. "ಇವು ಮನಸ್ಸಿನಲ್ಲಿ ನಿಂತು ಸಂಸ್ಕಾರ ಒದಗಿಸುತ್ತವೆ." ಎನ್ನುತ್ತಾರೆ.

ಇಲ್ಲಿ ಡಿ.ವಿ.ಜಿ.ಯವರ ಎರಡನೆಯ ಮೂರನೆಯ ಘಟ್ಟಗಳಲ್ಲಿ ಗೊಂದಲವಿದೆ. ಒಂದು ರಸಾನುಭವವಾದರೆ ಇನ್ನೊಂದು ಅದರ ಪುನರನುಭವ. ಹಿಂದಿನ ರಸಸ್ಥಿತಿಯೇ, ತಾದಾತ್ಮ್ಯವೇ, ಮನನಕಾಲದಲ್ಲೂ ಇರುತ್ತದೆಯೇ ಎಂಬುದು ಸಂದೇಹ. ಸಾತ್ವಿಕ ಸಂಸ್ಕಾರ ಮೂರನೆಯ ಘಟ್ಟದಿಂದ ಎಂದರೆ ಒಪ್ಪಬಹುದು.

ಹೀಗೆ ಡಿ.ವಿ.ಜಿ. ಕಲಾನುಭವವನ್ನು ವಿವರಿಸುತ್ತಲೇ ಕಲೆಯ ಉದ್ದೇಶವನ್ನು ಸೂಚಿಸುತ್ತಾರೆ: "ಕಲಾಕರ್ತನ ಉದ್ದೇಶವು ಧರ್ಮಬೋಧನೆಯೆ, ಆನಂದ ಪ್ರದಾನವೆ–ಎಂಬ ವಿಚಾರದಲ್ಲಿಯೂ ಚರ್ಚೆ ನಡೆದಿದೆ. ಸೂಕ್ಷ್ಮವಿಚಾರಿಗೆ ಧರ್ಮವೂ ಆನಂದವೂ ಬೇರೆ ಬೇರೆಯಲ್ಲ, ಶಾಸ್ತ್ರ ಬೋಧಕನ ದೃಷ್ಟಿಗೆ ಧರ್ಮದಿಂದ ಆನಂದ; ಕಲೋಪಾಸಕನ ದೃಷ್ಟಿಗೆ ಆನಂದದಿಂದ ಧರ್ಮ, ಅಥವಾ ಆನಂದವೇ ಧರ್ಮ."

೫

ಕೊನೆಯದಾಗಿ, ಡಿ.ವಿ.ಜಿ.ಯವರು ವಿವರಿಸುವ '**ಸೌಂದರ್ಯ ತ್ರಿಕೂಟ**'. ಕಾವ್ಯಸ್ವಾರಸ್ಯ ಕೃತಿಯಲ್ಲಿ ಒಂದು ಟಿಪ್ಪಣಿಯಂತೆ ಇದೆ ಈ ಪುಟ್ಟ ಪ್ರಬಂಧ. ಡಿ.ವಿ.ಜಿ. ಸೌಂದರ್ಯವನ್ನು ಮೂರು ಬಗೆಯಾಗಿ ವಿಂಗಡಿಸುತ್ತಾರೆ. ವಾಸ್ತವವಾಗಿ ಇದು ಎರಡೇ ಬಗೆ, ಮೂರನೆಯದು ಮೊದಲೆರಡರ ಸಮಾವೇಶದಿಂದಾಗುವುದು. ಈ ವಿವರಣೆಗೆ ನಿಸರ್ಗದ ಮಡಿಲಿನಲ್ಲಿರುವ ದೇವಾಲಯವನ್ನು ದೃಷ್ಟಾಂತವಾಗಿ ನೀಡುತ್ತಾರೆ, ತಿರುಪತಿ, ಹಂಪೆ, ಕನ್ಯಾಕುಮಾರಿಗಳಲ್ಲಿನ ದೇವಾಲಯಗಳನ್ನು ಹೇಳುತ್ತಾರೆ.

ಮೂರು ಬಗೆಯ ಸೌಂದರ್ಯವೆಂದರೆ:

1. ಸೃಷ್ಟಿ ಸೌಂದರ್ಯ
2. ಕಲಾಕಲ್ಪಿತ ಸೌಂದರ್ಯ
3. ಜೀವಸಂಸ್ಕಾರ ಸೌಂದರ್ಯ.

ಒಂದನೆಯದು ಗುಡಿಯ ಹೊರಗಿನ, ಗುಡಿಗೆ ಹಿನ್ನೆಲೆಯಾಗಿರುವ ಪ್ರಕೃತಿ ವೈಭವ. ಬೆಟ್ಟ ಕಣಿವೆ ಕಾಡು ಹೊಳೆ ದಿಗಂತ, ಹಸಿರು ನೀಲ ವರ್ಣವೈವಿಧ್ಯ, ಭೂಮಿಯ ಏರಿಳಿತ, ಜಲವಿನ್ಯಾಸ ಇತ್ಯಾದಿ. ಇವನ್ನು ಡಿ.ವಿ.ಜಿ.ಯವರು

"ಸ್ಥೂಲ ಜಗತ್ತಿನ ಚೈತನ್ಯ ಸಮುದಾಯದ ಚಿತ್ರ" ಎಂದು ಕರೆದಿದ್ದಾರೆ. ಇದು ಅದ್ಭುತರಸದ ಆಕರ ಸ್ಥಾನ. ಅದೊಂದು ಮಹಾಸೌಂದರ್ಯ, ಅಮಾನುಷ ಸೌಂದರ್ಯ ಎನ್ನುತ್ತಾರೆ.

ಎರಡನೆಯದು "ಗುಡಿಯ ಒಳಗಿನ ಮನುಷ್ಯ ಕಲಾಪ್ರಭಾವ. ಗೋಪುರದ ಸಮುದಾಯ ಶಿಲ್ಪ, ವಿಗ್ರಹಗಳ ಪೃಥಗಂಶ ಶಿಲ್ಪ." ಇವು "ಪ್ರೇಕ್ಷಕನ ಮನಸ್ಸನ್ನು ಅನುನಯಗೊಳಿಸುವ ಕಲಾಮಹಿಮೆಗಳು; ಮನುಷ್ಯನು ತನ್ನ ಭಾವ ಸಮುನ್ನತಿಗಾಗಿ ಒಂದು ವಾತಾವರಣವನ್ನು ತಾನಾಗಿ ಕಲ್ಪಿಸಿಕೊಳ್ಳುವ ಪ್ರಕಾರಗಳು...ಇದಕ್ಕೆ ಮೂಲ ಅಂತರಂಗ ಪ್ರತಿಭೆ." ಇದು ಮನುಷ್ಯನ ಸೌಂದರ್ಯಕಲ್ಪನೆ, ಸೃಷ್ಟಿ.

ಮೂರನೆಯದು, ಈ ತೆರದ ಪರಿಸರ ಮಹಿಮೆಯಿಂದ ಹುಟ್ಟತಕ್ಕದ್ದು ಎನ್ನುತ್ತಾರೆ. "ಅದು ಜೀವ-ದೈವ ಸಮಾಗಮರೂಪವಾದದ್ದು. ತನಗಿಂತ ಮೇಲಿನದೊಂದುಂಟು; ತಾನು ಬಲ್ಲ ಪ್ರಪಂಚಕ್ಕಿಂತ ದೊಡ್ಡದೊಂದುಂಟು ಎಂಬುದನ್ನು ಮನುಷ್ಯ ಗ್ರಹಿಸಿ, ಆಶೆಯಿಂದ ಆ ದೊಡ್ಡದರ ಕಡೆಗೆ ಕೈಚಾಚುತ್ತಾನೆ." ಶ್ರದ್ಧೆಯಿಂದ ಪ್ರೇರಿತವಾದ ಜೀವ ಪ್ರಯತ್ನವೇ ಪೌರುಷದ ಪರಮೋನ್ನತಿ. ಅದೇ ಸೌಂದರ್ಯದ ಪರಿಪೂರ್ಣಾನುಭವ." ಎನ್ನುತ್ತಾರೆ.

ಹೀಗೆ ಜೀವನ ಯಾತ್ರೆಯೂ, ತೀರ್ಥಸ್ಥಳಯಾತ್ರೆಯಂತೆ, ತೆರೆದ ಕಣ್ಣುಳ್ಳಾತನಿಗೆ ಸೌಂದರ್ಯೋಪಾಸನೆಯಾಗುತ್ತದೆ. ಈ ಸೌಂದರ್ಯತ್ರಿಕೂಟ ಹಿಂದೆ ವಿವರಿಸಿದ ಸೌಂದರ್ಯಸಂಹಿತೆಯ ವಿಂಗಡನೆಯೇ ಆಗಿದೆ. ಪಾಶ್ಚಿಮಾತ್ಯ ಭಾರತೀಯ ದೃಷ್ಟಿಗಳ ಸಮನ್ವಯ ಇಲ್ಲಿದೆ. ಶಿಷ್ಟಕಲೆ, ಪ್ರಾದಿಮ ಕಲೆ, ಜಾನಪದ ಕಲೆಗಳ ಪರಿಶೀಲನೆಯಿಂದ ಮೂಡಬಹುದಾಗಿದ್ದ ಸಮಗ್ರ ವಿವೇಚನೆ ಇಲ್ಲಿಲ್ಲ. ಆದರೂ ಅವೂ ಈ ಸ್ಥೂಲ ಪರಿಕಲ್ಪನೆ ಹಾಗೂ ವಿವರಣೆಯಲ್ಲಿ ಅಂತರ್ಗತವಾಗಬಹುದು.

ಕನ್ನಡ ಸುಲಭ ಸಂಕ್ಷೇಪ ರಾಮಾಯಣ

ಭಾರತೀಯರ ಹೃದಯದಲ್ಲಿ ಸ್ಥಿರವಾಗಿ ನೆಲಸಿರುವ ಸಾಹಿತ್ಯ ಪ್ರಕಾರಗಳು ಎರಡು. ಒಂದನೆಯದು ರಾಮಾಯಣ, ಎರಡನೆಯದು ಮಹಾಭಾರತ. ಇವುಗಳಲ್ಲಿ ರಾಮಾಯಣದ ಪ್ರಭಾವ ಅಸದೃಶವಾದುದು. ಅನಕ್ಷರಸ್ಥರಾದ ಗ್ರಾಮೀಣ ಜನತೆಗೂ ಸಹ ರಾಮಚರಿತೆ ಗೊತ್ತಿರುತ್ತದೆ. ಶ್ರೀರಾಮ, ಸೀತಾ, ಲಕ್ಷ್ಮಣ, ಹನುಮಂತ, ಭರತ – ಇವರ ಗುಣಸ್ವಭಾವಗಳನ್ನರಿಯದ ಜನರಿಲ್ಲ. ವಾಲ್ಮೀಕಿ ಮುನಿಗಳ ಶ್ರೀಮದ್ರಾಮಾಯಣವೇ ಮೂಲವಾಗಿದ್ದು ದೇಶಭಾಷೆಗಳಲ್ಲಿ ಇದು ನಾನಾರೂಪಗಳನ್ನು ತಳೆದು ಪ್ರಚುರವಾಗಿದೆ. ಕನ್ನಡದಲ್ಲಿಯೂ ಪಂಪರಾಮಾಯಣ, ತೊರವೆ ರಾಮಾಯಣಗಳು ಸುಪ್ರಸಿದ್ಧವಾಗಿವೆ. ಯಕ್ಷಗಾನಗಳೂ ನಾಟಕಗಳೂ ಹರಿಕಥೆಗಳೂ ರಾಮಾಯಣದ ಕಥೆಯನ್ನು ಎಲ್ಲೆಡೆಯಲ್ಲಿಯೂ ಬಿತ್ತರಿಸಿವೆ. ಇಂದಿಗೂ ರಾಮಾಯಣವನ್ನವಲಂಬಿಸಿದ ಸಾಹಿತ್ಯ ಬೆಳೆಯುತ್ತಲೇ ಇದೆ. ಕುವೆಂಪು ಅವರ ರಾಮಾಯಣ ದರ್ಶನ, ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದಗಳು – ಜನಪ್ರಿಯವಾಗಿ ಪ್ರಾಚುರ್ಯವನ್ನು ಗಳಿಸಿಕೊಳ್ಳುತ್ತಲೇ ಇವೆ.

ನರಹರಿಕವಿಯ ತೊರವೆ ರಾಮಾಯಣವು ಭಾಮಿನೀ ಷಟ್ಪದಿಯಲ್ಲಿದ್ದು ಸಾಹಿತ್ಯಪ್ರಿಯರಿಗೆ ಸುಪರಿಚಿತವಾದದ್ದು. ಇದು ವಿಸ್ತಾರವಾಗಿದೆಯಲ್ಲದೆ ಕೆಲವೆಡೆ ಅರ್ಥಕ್ಲೇಶವೂ ಉಂಟು. ಅದರಲ್ಲಿ ಐದುಸಾವಿರಕ್ಕಿಂತ ಅಧಿಕ ಪದ್ಯಗಳಿವೆ. ಈ ಕಾಲದಲ್ಲಿ ಅಷ್ಟು ದೊಡ್ಡ ಗ್ರಂಥವನ್ನು ಕ್ರಮವರಿತು ಓದುವಷ್ಟು ಅವಕಾಶ ದುರ್ಲಭ. ನವರಾತ್ರಿ ದಿವಸಗಳಲ್ಲಿ ತೊರವೆ ರಾಮಾಯಣವನ್ನು ಪಾರಾಯಣ ಮಾಡಿ ಮುಗಿಸುವುದು ಬಹು ಕಷ್ಟಸಾಧ್ಯವಾದ ಕೆಲಸವಾದ್ದರಿಂದ ಪಾರಾಯಣ ಸೌಕರ್ಯಕ್ಕಾಗಿ ಈ ಗ್ರಂಥವನ್ನು ಸುಲಭಶೈಲಿಯಲ್ಲಿ ಸಂಕ್ಷೇಪವಾಗಿ ರಚಿಸಿದ್ದೇನೆಂದು ಕವಿಗಳಾದ ಮನ್ನಾರು ಕೃಷ್ಣಯ್ಯನವರು (ಕೃಷ್ಣದಾಸ) ಈ ಕಾವ್ಯದ ನಿವೇದನದಲ್ಲಿ ಹೇಳಿಕೊಂಡಿದ್ದಾರೆ.

ಈ ಗ್ರಂಥದಲ್ಲಿ ೧೫೩೬ ಭಾಮಿನೀಷಟ್ಪದಿಗಳು ಸುಲಭಶೈಲಿಯಲ್ಲಿವೆ. ಪಟ್ಟಾಭಿಷೇಕಪರ್ಯಂತವಾಗಿ ಆರು ಕಾಂಡಗಳ ಕಥೆ ನಿರೂಪಿತವಾಗಿದೆ. ಕವಿಗಳಾದ ಮನ್ನಾರು ಕೃಷ್ಣಯ್ಯನವರು ಕೀರ್ತನಕಾರರು. ರಾಮಾಯಣದ ಕೀರ್ತನಗಳನ್ನು ನಡೆಸುತ್ತ ಹೋದಂತೆ ಅದರಲ್ಲಿ ವಿಶೇಷ ಆಸಕ್ತಿಯುಂಟಾಗಿ ಕೀರ್ತನದ ಆಧಾರದ ಮೇಲೆ ಅವರ ಗ್ರಾಮಾಧಿದೇವತೆಯಾದ ಶ್ರೀ ವರದರಾಜಸ್ವಾಮಿಯ ಅಂಕಿತದಲ್ಲಿ

ಕವಿ: ಮನ್ನಾರು ಕೃಷ್ಣಯ್ಯ (ಕೃಷ್ಣದಾಸ); ಪ್ರಕಾಶನ: ಶ್ರೀ ವರದರಾಜ ಪ್ರಕಾಶನ ಸಮಿತಿ, ಹುಲ್ಲಹಳ್ಳಿ, ನಂಜನಗೂಡು ತಾಲೂಕು; ಬೆಲೆ: ರೂ. 18-00.

ಈ 'ಕನ್ನಡ ಸುಲಭ ಸಂಕ್ಷೇಪ ರಾಮಾಯಣ'ವನ್ನು ರಚಿಸಿದರು. ಬಳಸಿದ ಶಬ್ದಗಳಿಗೆ ಕಡೆಯಲ್ಲೊಂದು ಅರ್ಥಕೋಶವನ್ನು ಕೊಟ್ಟಿರುವುದು ಉಪಯುಕ್ತವಾಗಿದೆ.

ವಾಲ್ಮೀಕಿ ರಾಮಾಯಣದಲ್ಲಿಲ್ಲದ, ಆದರೆ ಅನ್ಯತ್ರ ಪ್ರಸಿದ್ಧವಾಗಿರುವ ಕೆಲವು ಪ್ರಸಂಗಗಳು ಇದರಲ್ಲಿ ಬಂದಿವೆ. ಸಮುದ್ರದಲ್ಲಿ ಶ್ರೀರಾಮನು ಸೇತುಬಂಧನಕ್ಕೆ ಮೊದಲು ವಿಘ್ನೇಶ್ವರನ ಪೂಜೆ ಮಾಡಿದ್ದು, ರಾಮೇಶ್ವರದಲ್ಲಿ ಶಿವಲಿಂಗಪ್ರತಿಷ್ಠೆ—ಮುಂತಾದ ಸಂನಿವೇಶಗಳು ಅಂತಹವು. ಇವು ರಾಮಕಥೆಗೆ ಪೋಷಕವಾಗಿದ್ದು ರಸವತ್ತಾದ ಚಿತ್ರಣದಿಂದ ಕಾವ್ಯಕ್ಕೆ ಶೋಭಾಕರಗಳೇ ಆಗಿವೆ.

ಸಂಸ್ಕೃತಕಾವ್ಯಗಳ ವರ್ಣನಾಚ್ಛಾಯೆಯೂ ಉಕ್ತಿಚಮತ್ಕಾರಗಳೂ ನೀತಿ-ಬೋಧಕ ಶ್ಲೋಕಗಳ ಅನುವಾದವೂ ಅಲ್ಲಲ್ಲಿ ಕಾಣಿಸುತ್ತವೆ. ರಸಿಕತೆಯೂ ಕಲ್ಪನಾ ಶಕ್ತಿಯೂ ಈ ಕಾವ್ಯದಲ್ಲಿ ಮಿನುಗುತ್ತವೆ. ಗ್ರಂಥವು ಓದುಗರ ಆಸಕ್ತಿಯನ್ನು ಚೋದಿಸಿ ಬುಡದಿಂದ ತುದಿಯ ವರೆಗೂ ಬೇಸರವನ್ನು ತಾರದಂತೆ ಓದಿಸಿಕೊಂಡು ಹೋಗುತ್ತದೆ.

ಬಳಸಿದ ಭಾಷೆ ಲಲಿತವಾಗಿದ್ದರೂ ಅಲ್ಲಲ್ಲಿ ಗ್ರಾಮ್ಯಶಬ್ದಗಳು ನುಸುಳಿವೆ. ವೈನಿ = ಅತ್ತಿಗೆ, ಹಿಂಸ್ರಿಣಿ = ಹಿಂಸೆ ಕೊಡುವ ಪ್ರಾಣಿ, ಭಿಡಯ್ಡು = ಸಂಕೋಚ, ದೊಡದು = ದೊಡ್ಡದು ಮುಂತಾದ ಶಬ್ದಗಳು ಈ ಬಗೆಯ ಅಭಿಜಾತ ಕಾವ್ಯಗಳಲ್ಲಿ ಬರಬಾರದೆಂದು ನಮ್ಮ ಅಭಿಪ್ರಾಯ. ಆದವತಿ, ಅವಗಯಿಸು, ಖಡ್ಡ, ಕುಬುಬಿರಿ, ಇಚ್ಚಟ—ಮೊದಲಾದ ಶಬ್ದಗಳನ್ನು ಬಳಸದಿರುವುದೇ ಲೇಸೆನಿಸುತ್ತದೆ. ಧನುಭಂಜಕ ಪಿತೃವಚಚರಿತ–ಮುಂತಾದ ಶಬ್ದಗಳು ಕಿವಿಗೆ ಹಿತಕರವಲ್ಲ, 'ಧರೆಯಧಿಪರಾವಲ್ಲಲೀ, ರೂಪವಿರದಜ್ಞಾನಿಯೇ' ಎಂದು ಮುದ್ರಿತವಾದ್ದರಲ್ಲಿ ಏನೋ ತಪ್ಪಿದೆ (ಪುಟ 32, ಪದ್ಯ ೬೭) ಒಪ್ಪೋಲೆಯಲ್ಲಿಯೂ ಏನೆಂದು ತಿಳಿಸಿಲ್ಲ. ಪರಮಪ್ರಿಯರೆನಲು, ಬಹುಪ್ರತಾಪರ (ಪು. 22), ಸುಜನರ ವ್ರತವ ಕೆಡಿಸುವರು (ಪು. 24)–ಮುಂತಾದ ಸ್ಥಳಗಳಲ್ಲಿ ಸಂಯುಕ್ತಪರವಾದರೂ ಹ್ರಸ್ವವನ್ನು ಲಘುವೆಂದು ಗಣಿಸಲಾಗಿದೆ. ಇದು ಶಿಥಿಲದ್ವಿತ್ವವೆಂದು ಈ ಕವಿಗಳು ಎಣಿಸಿದ್ದಾರೆಂದು ಹೇಳಬೇಕಾಗಿದೆ.

ಹೀಗೆ ಕೆಲವು ನ್ಯೂನತೆಗಳಿದ್ದರೂ ಭಾವಪೋಷಣೆ ಚೆನ್ನಾಗಿರುವುದರಿಂದ ಓದುವುದಕ್ಕೂ ಕೇಳುವುದಕ್ಕೂ ಹಿತಕರವಾಗಿದೆ. ಈ ಕಾವ್ಯವು ಜನಪ್ರಿಯವಾಗುವುದರಲ್ಲಿ ಸಂದೇಹವಿರದು.

ಎನ್. ರಂಗನಾಥ ಶರ್ಮಾ

ತುರಂಗಭಾರತ—ಸಂಪಾದನವನ್ನು ಕುರಿತು

ಪರಮದೇವ ಕವಿಯು (ಕ್ರಿ.ಶ. 1643–1808) **ತುರಂಗಭಾರತ** ಇದೀಗ ದ್ವಿತೀಯ ಆವೃತ್ತಿಯು ಮುದ್ರಣ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟನೆಯಾಗಿ 1986 ರಲ್ಲಿ ಅಚ್ಚಾಗಿ, 1988 ರಲ್ಲಿ ಹೊರಬಂದಿದೆ. ಕಿರೀಟ ಚತುರ್ದಳಾಕೃತಿಯ 944 ಪುಟಗಳ ಈ ಕಾವ್ಯ ಐದು ರೂಪಾಯಿ ಬೆಲೆಯಲ್ಲಿ ದೊರಕುವಂತಾದುದು ಓದುಗರ ಭಾಗ್ಯ : ಕನ್ನಡಿಗರಿಗೊಂದು ಅಭಿಮಾನ. ಇದಕ್ಕೆ ಕಾರಣರಾದ ಗ್ರಂಥ-ಸಂಪಾದಕರು, ಸಾಹಿತ್ಯ ಪರಿಷತ್ತು ಮತ್ತು ಪ್ರಕಟನೆಗೆ ಧನಸಹಾಯ ನೀಡಿದ ನಮ್ಮ ರಾಜ್ಯ ಸರಕಾರದವರು, ವಂದನಾರ್ಹರು. ವ್ಯಾಸಭಾರತದ 18 ಪರ್ವಗಳ ಕಥಾ-ವಸ್ತುವನ್ನು ಒಳಗೊಂಡು ವಾರ್ಧಕಷಟ್ಪದಿಯಲ್ಲಿ–ತುರಂಗಗತಿಯುಳ್ಳುದೆನಿಸುವಂತೆ, ರಚಿತವಾದ ಏಕಮೇವ ಮಹಾಭಾರತ ಕಾವ್ಯ ಎಂಬ ದೃಷ್ಟಿಯಿಂದ ಈ ಗ್ರಂಥ ವೈಶಿಷ್ಟ್ಯವನ್ನು ತಾಳಿದೆ. ಅಂತಹ ವೈಶಿಷ್ಟ್ಯಪೂರ್ಣ ಕಾವ್ಯದ ಸಂಪಾದನದಲ್ಲಿ ಗುಣದೋಷಗಳೆರಡೂ ಇವೆ, ಆದರೆ ದೋಷಗಳು ಗುಣಕ್ಕಿಂತ ಹೆಚ್ಚಾಗಿ ಎದ್ದು ಕಾಣಿಸುತ್ತ ಓದುಗರಿಗೆ ತೊಡಕನ್ನುಂಟುಮಾಡುತ್ತವೆ.

ಕನ್ನಡಿಗರ ಒಲವು ಮೆಚ್ಚಿಕೆಗಳನ್ನು ಗಳಿಸಿರುವ ಈ ತುರಂಗಭಾರತ ಕ್ರಿ.ಶ. 1889 ರಲ್ಲಿ ಕೆ. ವೆಂಕಟರಮಣ ಶಾಸ್ತ್ರೀ ಸೂರಿ ಅವರಿಂದ ಸಂಪಾದಿತವಾಗಿ ಮೊತ್ತ-ಮೊದಲ ಆವೃತ್ತಿಯಾಗಿ ಬೊಂಬಾಯಿಯಲ್ಲಿ ಪ್ರಕಟವಾಗಿದೆ. ಅನಂತರ ಈಗ ಶ್ರೀ ಕೆ. ಜಗನ್ನಾಥ ಶಾಸ್ತ್ರಿಯವರ ಪುನಸ್ಸಂಪಾದನದಿಂದ ಹೊರಬಂದು, ಬೇಕೆಂಬವರಿಗೆಲ್ಲ ಇದರ ಪ್ರತಿ ಲಭಿಸುವಂತಾಗಿದೆ. ಇದರ ಸಂಪಾದನವನ್ನು ಕುರಿತು ಲಕ್ಷ್ಯಾರ್ಹವಾದು ವನ್ನು ನಿರೂಪಿಸುವುದೇ ಪ್ರಕೃತ ಈ ಬರೆಹದ ಉದ್ದೇಶ.

ಗ್ರಂಥಸಂಪಾದನವೆಂಬುದು ಕನ್ನಡದಲ್ಲಿ ಸಾಕಷ್ಟು ಪ್ರಬುದ್ಧಾವಸ್ಥೆಯನ್ನು ತಾಳಿದ್ದರೂ ಹಲವರು—ಗ್ರಂಥಸಂಪಾದನ ಮಾಡಿದವರು, ಸಂಪಾದನಶಾಸ್ತ್ರವನ್ನು ಲಕ್ಷಿಸದಿರುವುದರಿಂದ ಪ್ರಕಟಗೊಂಡ ಹಲವಾರು ಕಾವ್ಯಗಳು ದೋಷಮಯವಾಗಿರುವುದು ವಿದಿತ. ಮೂಲ ಪ್ರತಿಗಳು ಸಾಕಷ್ಟು ಸಿಕ್ಕಿದ್ದರೂ ಪಾಠಾಂತರವನ್ನು ತೋರಿಸಿಕೊಡದೆ ಸರಿಯಾಗಿ ಗ್ರಂಥಸಂಪಾದನೆ ಮಾಡಿದೆವೆಂದುಕೊಂಡವರಿದ್ದಾರೆ. ಸಮೃದ್ಧವಾಗಿ ಪಾಠಾಂತರ ಟಿಪ್ಪಣಿಗಳನ್ನು ಅಲ್ಲಲ್ಲೇ ಕೊಟ್ಟಿದ್ದರೂ ಸ್ವೀಕೃತ ಪಾಠಶುದ್ಧಿಯಿಲ್ಲದ ಸಂಪಾದನಗಳೂ ಇವೆ. ಇಂಥವುಗಳಲ್ಲಿ ಪ್ರಸ್ತಾವನೆ, ತದಂಗವಾಗಿ ಕವಿ ಕಾವ್ಯ ವಿಚಾರ ವಿಮರ್ಶೆಗಳು ವಿಸ್ತೃತವಾಗಿಯೇ ಇರುತ್ತಿವೆ. ಸೂಕ್ತ ಅನುಬಂಧಗಳೂ ಇರುತ್ತವೆ. ಇಷ್ಟು ಮಾತ್ರದಿಂದ ಅದನ್ನು ಸಮರ್ಥ ಸಂಪಾದನೆ ಎಂಬಂತಿಲ್ಲ.

ತುರಂಗಭಾರತ—ಸಂ. : ಕೆ. ಜಗನ್ನಾಥ ಶಾಸ್ತ್ರೀ ; ಪ್ರ. : ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18 ; ಬೆಲೆ : ರೂ. 5 = 00 (198೬)

ಗ್ರಂಥಸಂಪಾದನದಲ್ಲಿ ಅತಿಮುಖ್ಯವಾದುದೆಂದರೆ—ಶುದ್ಧ ಪಾಠ ನಿರ್ಣಯ. ಪಾಠ-ಶುದ್ಧಿಯುಳ್ಳ ಪದ್ಯಭಾಗವೇ ಮುಖ್ಯವಾಗಿ ವೀಕ್ಷಕರ ಲಕ್ಷ್ಯಕ್ಕೆ ಬರುವ ಅಂಶ. ಈ ವಿಷಯದಲ್ಲಿ ತುರಂಗಭಾರತದ ಸಂಪಾದನ ಕಾರ್ಯ ತೀರಾ ಸೊರಗಿದೆ.

ಈ ಉದ್ಗ್ರಂಥಕ್ಕೆ ರಚಿಸಲಾದ ಪ್ರಸ್ತಾವನೆಯ ಭಾಗಗಳಲ್ಲಿ (ಇದು 62 ಪುಟಗಳಷ್ಟಿದೆ) ಒಂದೆರಡು ಅಂಶಗಳನ್ನು ಬಿಟ್ಟರೆ, ಇನ್ನಿತರವು ಸಂಪಾದಕರ ಆಳವಾದ ಅಧ್ಯಯನದ ಫಲವಾಗಿ ಸಮರ್ಥವಾಗಿಯೇ ಬಂದಿವೆ. ಅವು ಮೆಚ್ಚತಕ್ಕವೇ ಆಗಿವೆ. ಗ್ರಂಥಕ್ಕೆ ತುರಂಗಭಾರತ ಎಂಬ ಹೆಸರಾಗಲು ಕಾರಣ, ತುರಂಗಲಯ ಎಂಬುದೇನು ಎಂಬ ವಿಚಾರ ಇವಿನ್ನೂ ಪ್ರಶ್ನಾರ್ಹವಾಗಿಯೇ ಉಳಿಯುತ್ತವೆ—ಎಂಬುದನ್ನು ಸೂಚಿಸಲು ಬಯಸುತ್ತೇನೆ.

ತುರಂಗ ಲಯ : ಈ ಕಾವ್ಯಕ್ಕೆ **ತುರಂಗಭಾರತ** ಎಂಬ ಹೆಸರೇಕೆ ಎಂಬುದಕ್ಕೆ ಹಿಂದಿನ ಆವೃತ್ತಿಯ ಸಂಪಾದಕರಾದ ವೆಂಕಟರಮಣ ಶಾಸ್ತ್ರಿಗಳು ಹೇಳಿರುವುದು ಹೀಗೆ :—"ಇದು ಜೈಮಿನಿಭಾರತದಂತೆ, ವಾರ್ಧಿಕಷಟ್ಪದಿಯಿಂದ ರಚಿಸಲ್ಪಟ್ಟ ಕಾರಣ, ಇದನ್ನು ಒಂದು ತರದ ಗತ್ತಿನಿಂದ ಓದಬೇಕಾಗುತ್ತದೆ. ಆ ಗತ್ತಿನ ಸ್ವರೂಪವು ಸಾಧಾರಣ ಕುದುರೆಯ ಗುಪ್ಪಿನಂತೆ ಇರುವದಾದ್ದರಿಂದಲೂ, ಪೂರ್ವದಲ್ಲಿ ಈ ಮಾದರಿಯ ಒಂದು ಗ್ರಂಥವನ್ನು ಪಂಡಿತರಾಜ ಜಗನ್ನಾಥನೆಂಬ ಕವಿಯು ರಚಿಸಿ, ಅದಕ್ಕೆ 'ಅಶ್ವಧಾಟಿ ಪ್ರಬೋಧಿಕಾ' ಎಂದು ಹೆಸರನ್ನಿಟ್ಟಿರುವುದರಿಂದಲೂ, ಈ ಮೊದಲು ಇನ್ನೊಂದು ತರದಿಂದ ಈ ಗ್ರಂಥವು ಕನ್ನಡದಲ್ಲಿ ಭಾಮಿನಿಷಟ್ಪದಿಯಲ್ಲಿ-ತ್ತಾದ್ದರಿಂದಲೂ, ಈ ಗ್ರಂಥಕ್ಕೆ ಜನರು 'ತುರಂಗಭಾರತ'ವೆಂದು ರೂಢಿಯಾಗಿ ಅಂದುಕೊಂಡರು. ಆದರೆ ಈ ಹೆಸರು ಜನರಿಂದಲೇ ಕಲ್ಪಿತವಾದದ್ದಲ್ಲದೆ ಈ ಗ್ರಂಥ ಕರ್ತನಿಂದ ಇಡಲ್ಪಟ್ಟಿತೆಂತ ಎಲ್ಲಿಯೂ, ವ್ಯಕ್ತವಾಗುವುದಿಲ್ಲ. ಗ್ರಂಥಕರ್ತನು ಇದಕ್ಕೆ 'ಸಂಕ್ಷೇಪ ಭಾರತ'ವೆಂದು ಆದಿಯಲ್ಲಿ ಬರೆದಿರುತ್ತಾನೆ."

ಇವರ ಅಭಿಪ್ರಾಯದಂತೆ, ವಾರ್ಧಕಷಟ್ಪದಿಯಲ್ಲಿರುವ ಜೈಮಿನಿಭಾರತದ ಲಯಕ್ಕೂ ಅದೇ ಛಂದಸ್ಸಿನ ತುರುಂಗಭಾರತದ ಲಯಕ್ಕೂ ವ್ಯತ್ಯಾಸವಿಲ್ಲ. ಅದರಂತೆ ನನ್ನ ಪರಿಶೀಲನೆಯಲ್ಲಿ ತ್ವರಿತದ ಜಂಪೆತಾಳಕ್ಕೆ ಅಳವಡುವ ಪಂಚಮಾತ್ರಾ ಗಣಘಟಿತವಾದ ವಾರ್ಧಕಷಟ್ಪದಿಯ ಲಯವನ್ನೆ 'ತುರುಂಗಲಯ' ಎಂದು ಕರೆದಿರುವುದು ಕಂಡುಬರುತ್ತದೆ.

ಶ್ರೀ ಕೆ. ಜಗನ್ನಾಥ ಶಾಸ್ತ್ರಿಯವರು, ಜೈಮಿನಿಭಾರತ, ತುರಂಗಭಾರತ ಎಂಬ ಇವೆರಡೂ ವಾರ್ಧಕಷಟ್ಪದಿಯವೇ ಆಗಿದ್ದರೂ ಜೈಮಿನಿ ಭಾರತ ವಾಚನದ ಲಯವೇ ಬೇರೆ, ತುರಂಗಭಾರತದ ವಾಚನದ ಲಯವೇ ಬೇರೆ ಎಂದಿದ್ದಾರೆ. ಇದನ್ನು ಸಾಧಿಸಲು ಅವರು ಮಾಡಿದ ಪ್ರಯತ್ನಕ್ಕೆ ಗಟ್ಟಿನೆಲವಿಲ್ಲ. ಜೈಮಿನಿಭಾರತ ವಾಚನ ಕ್ರಮದಲ್ಲಿ ಅನ್ವಯಕ್ರಮಕ್ಕಾಗಿ ಪದಗಳನ್ನು ಹೇಗೆ ವಿನ್ಯಾಸಗೊಳಿಸಬೇಕಾಗುತ್ತದೆ

ಎಂಬುದಕ್ಕೆ ಅವರು ಒಂದು ಉದಾಹರಣೆ ಕೊಟ್ಟು, ತುರಂಗವಾಚನಕ್ರಮದಲ್ಲಿ ಪದ್ಯ ಪ್ರಾರಂಭಿಸಿದ ಮೇಲೆ ಪದ್ಯಪೂರ್ವಾರ್ಧದ ಕೊನೆಯ ವರೆಗೆ ಎಲ್ಲಿಯೂ ನಿಲ್ಲುವಂತಿಲ್ಲ ಎಂದಿರುತ್ತಾರೆ. ಈ ಮಾತು ದುರ್ಬಲ. ಒಂದು ಉದಾಹರಣೆಗಾಗಿ, ತುರಂಗ ಭಾರತದ ಪೌಲೋಮ ಪರ್ವದ 5ನೆಯ ಪದ್ಯ ನೋಡಿ :—'ಪೇಳಿ ಸರಿದನು ಮುನಿಪ ವನಿತೆಗಂ ಸ್ನಾನಕಂ' ಇದನ್ನು ಗಮಕದಲ್ಲಿ ವಾಚನ ಮಾಡುವಾಗ ಮೊದಲು ಹೀಗೆಯೇ ವಾಚನಮಾಡಿ, ಮತ್ತೆ ಪದಗಳನ್ನು ಅತ್ತಿತ್ತ ಪೂಡಲೇಬೇಕಾಗುವುದಿಲ್ಲವೆ ? 'ಮುನಿಪ ವನಿತೆಗಂ ಪೇಳಿ ಸ್ನಾನಕಂ ಸರಿದನು' ಎಂದು ಅನ್ವಯ ಮಾಡಲೇಬೇಕಾಗುತ್ತದೆ. ಇಂತಹ ಉದಾಹರಣಗಳು ತುರಂಗಭಾರತದಲ್ಲಿ ಒಂದಲ್ಲ, ಎಷ್ಟೋ ಇವೆ. ಹೀಗಿರುವಾಗ ತುರಂಗಭಾರತವಾಚನದ ಲಯವೇ ಬೇರೆ ಎನ್ನುವುದು ಹೇಗೆ ? ಇದಲ್ಲದೆ ಮಾನ್ಯ ಸಂಪಾದಕರ ಇನ್ನೊಂದು ಹೇಳಿಕೆ ಹೀಗಿದೆ :—ವಾರ್ಧಕಪಟ್ಪದಿಯನ್ನು ಜೈಮಿನಿಲಯದಲ್ಲಿ ವಾಚನಮಾಡುವಾಗ 1, 2, 4, 5ನೆಯ ಪಾದಗಳಲ್ಲಿ ಐದು ಮಾತ್ರೆಯ ನಾಲ್ಕು ಗಣಗಳಿಗೆ ಲಯ ಬರುವಂತೆ ವಾಚನ ಮಾಡಬೇಕು (ಪುಟ 61). ಇದು ಹೇಗೆ ಸರಿ ? ಜೈಮಿನಿಭಾರತದ ಮೊದಲ ಪದ್ಯದ ಎರಡು ಪಾದಗಳನ್ನೆ ನೋಡೋಣ :

> " ಶ್ರೀವಧುವಿನಂಬಕ ಚಕೋರಕಂ ಪೊರೆಯೆ ಭ-
> ಕ್ತಾವಳಿಯ ಹೃತ್ಕುಮುದಕೋರಕಂ ಬಿರಿಯೆ ಜಗ-
> ತೀವಲಯದ...."

ಸಂಪಾದಕರೆನ್ನುವಂತೆ ಇಲ್ಲಿ 1ನೆ ಮತ್ತು 2ನೆ ಪಾದಗಳ ಕೊನೆಗೆ ಲಯವಿರುವುದೆ ? ಅಲ್ಲಿ ಲಯ ಬರುವಂತೆ ವಾಚನ ಮಾಡಿದರೆ ಸುಶ್ರಾವ್ಯವಾಗುವುದೆ ? ಗಮಕ ಕಲೆಗೆ ಇದು ವಿರುದ್ಧದ ಮಾತಲ್ಲವೆ ? ಗಮಕವೆಂಬುದಾಗಲಿ, ತಾಳ-ಲಯ-ಮಾತ್ರೆ-ಛಂದೋವಿಚಾರವಾಗಲಿ, ಅರ್ಥಾನುಗುಣವಾಗಿ ಪದ್ಯವನ್ನು ಅನ್ವಯ ತಪ್ಪದಂತೆ ಓದಬೇಕೆಂಬುದಾಗಲಿ ತಿಳಿಯದವರು ಒಪ್ಪುವರೋ ಏನೋ !

ಈ ಪ್ರತಿಪಾದನೆಗಳಿಂದ ಅನಿಸುವುದು ಇಷ್ಟು : ಪಂಚಮಾತ್ರಾಗಣಗಳಿಂದಾಗುವ ರಚನೆಯನ್ನು ಅಂದರೆ, ಯಕ್ಷಗಾನದಲ್ಲಿ ತ್ವರಿತ ಝಂಪೆ ತಾಳದ ಪದಪದ್ಯಗಳನ್ನು ತುರಂಗ ಲಯದವು ಎನ್ನಲು ಅಡ್ಡಿಯಿಲ್ಲ. ಆಗ ಶ್ರೀ ಶಂಕರಾಚಾರ್ಯರ ಅಂಬಾಷ್ಟಕ, ವಾರ್ಧಕಷಟ್ಪದಿ ಕುಸುಮಷಟ್ಪದಿ ಪದ್ಯಗಳು, ಇದೇ ತಾಳಗತಿಯ ದಾಸರ ಪದಗಳು ಮತ್ತು ಯಕ್ಷಗಾನ ಪದಗಳು ತುರಂಗ ಲಯದ ರಚನೆಗಳೆನ್ನಬಹುದು. ಕುದುರೆಯ ಓಟದ ಒಂದೊಂದು ನೆಗೆತವೂ ಈ ಪಂಚಮಾತ್ರಾಗಣದ ಲಯಕ್ಕೆ ಹೊಂದಿಕೊಳ್ಳಬಹುದು. ಶ್ರೀ ಜಗನ್ನಾಥ ಶಾಸ್ತ್ರಿಗಳೆನ್ನುವಂತೆ, ಜೈಮಿನಿ ಲಯ, ತುರಂಗ ಲಯ ಇವೆರಡೂ ಒಂದೇ ಅಲ್ಲ ಎಂಬುದನ್ನು ಒಪ್ಪಲಾಗುವುದಿಲ್ಲ.

ಸಂಪಾದನ ವಿಧಾನ :

ಪರಮದೇವ ಕವಿ ವಿನಯಿಯೂ ಹೌದು, ಸತ್ಯವನ್ನು ಮರೆಮಾಡದವನೂ ಹೌದು. ಅವನ ಸ್ವಗತವಿದು :

ತಿಳಿದ ಕವಿಯಲ್ಲವರ ಕಾವ್ಯಂಗಳಂ ಮುನ್ನ
ಪೊಲಬನರಿಯೆನು ಸಂಸ್ಕೃತಂಗಳಂ ಕನ್ನಡದ
ನೆಲೆಯನರಿಯೆನು ಗ್ರಂಥದರ್ಥಂಗಳಂ ಶಾಸ್ತ್ರಮನ್ನರಿಯೆ ಮಜಡ ನಾನು.
(ಪೀಠಿಕೆ : ಪದ್ಯ 3)

ಇಲ್ಲಿ 3ನೆಯ ಪಾದದ ಕೊನೆಗಿರುವ 'ಶಾಸ್ತ್ರಮನ್ನರಿಯೆ ಮಜಡ ನಾನು' ಎಂಬ ಪಾಠವು ಬೊಂಬಾಯಿ ಪ್ರತಿಯದು ; ಶುದ್ಧಪಾಠವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಸಂಪಾದಕರು ಅದನ್ನು ಸ್ವೀಕರಿಸಿಲ್ಲ. ಅದನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದ್ದಾರೆ. ಅದು ಇರಬೇಕಾಗಿದ್ದ ಸ್ಥಳದಲ್ಲಿ 'ಶಾಸ್ತ್ರಗಳನರಿಯದಾ ಜಡನೂ' ಎಂಬ ಛಂದೋ-ಭಂಗವುಳ್ಳ ಪಾಠವನ್ನು ಪರಿಷ್ಕೃತ ಪಾಠವೆಂಬಂತೆ ಕಾಣಿಸಿದ್ದಾರೆ. ಇದರಿಂದ ಆ ಪದ್ಯ ತುರಂಗದ ಒಂದು ಕಾಲು ಕುಂಟಾಗಿದೆ !

ಕವಿಯೇ ಒಪ್ಪಿಕೊಂಡಿರುವಂತೆ, ಕವಿ ತಿಳಿಯದೆಯೆ ಮಾಡಿರುವ ತಪ್ಪುಗಳೂ ಇದರಲ್ಲಿವೆ—

(1) (ಸಂ. 34–3) ವಿವಿಧಟವಿ. ಇಲ್ಲಿ 'ವಿವಿಧಾಟವಿ' ಎಂದಿರಬೇಕಿತ್ತು. ತಿದ್ದಿದರೆ ಛಂದೋದೋಷ. ಆದುದರಿಂದ ತಿದ್ದುವಂತಿಲ್ಲ. ಇಂತಹ ಸಂಧಿದೋಷದ ಉದಾಹರಣಗಳು ಬೇರೆಯೂ ಇವೆ.

(2) ಪದ್ಯದ ನಡುವೆ ಬರುವ ಪೂರ್ವಪದಾಂತ್ಯ ಹ್ರಸ್ವವಾಗಿ, ಪರಪದ ಪೂರ್ವವು ದ್ವಿತ್ವವಾಗಿರುವುದು. ಮತ್ತು ಇದನ್ನು ಶಿಥಿಲವಾಗಿ ಪರಿಗಣಿಸಬೇಕಾಗುವುದು :—ಸದ್ಗತಿಯ ವ್ಯರ್ಥದಿಂ (ಸಂಧಿ : 1, ಪದ್ಯ : 16) ಇರುವ ಸ್ಥಿತಿಯಂ (ಸಂ. 34, ಪದ್ಯ : 2) ಇಂಥವಕ್ಕೆ ಈ ಕಾವ್ಯದಲ್ಲಿ ಲೆಕ್ಕವೇ ಇಲ್ಲ.

(3) ಪೂರ್ವಪದಾಂತ್ಯದ ಬಿಂದುವಿಗೆ ಪರಪದಪೂರ್ವದಲ್ಲಿ ಸ್ವರ ಬಂದಾಗ ಪೂರ್ವಪದಾಂತ್ಯದ ಬಿಂದುವನ್ನುಳಿಸಿಕೊಂಡು ಮುಂದಿನ ಸ್ವರಕ್ಕೆ ಅನುನಾಸಿಕವನ್ನು ಹಚ್ಚಿಕೊಳ್ಳುವುದು : ಉತ್ತಮತರಂ ಮಾದುದೊಂದು (ಸಂ. 2, ಪದ್ಯ: 2), ಕಾರಣಂ ಮುಚ್ಚರಿಸೆ (ಸಂ. 2, ಪದ್ಯ: 10) ಇಂತಹ ಉದಾಹರಣೆಗಳು ಕಾವ್ಯದ ಉದ್ದಕ್ಕೂ ಇವೆ. ಇಂತಹ ಕಡೆಗಳಲ್ಲಿ ಸಂಪಾದಕರು–'ಉತ್ತಮತರಂ ಆದುದೊಂದು' ಎಂದು, 'ಕಾರಣಂ' ಉಚ್ಚರಿಸೆ ಎಂದು ತಿದ್ದಿಕೊಂಡಿದ್ದಾರೆ. ಇಂತಹ ತಿದ್ದುಪಡಿಯಿಂದ ಕಾವ್ಯದ ಉದ್ದಕ್ಕೂ ವಿಸಂಧಿದೋಷ ತುಂಬಿಹೋಗಿದೆ. ಕವಿಕೃತವಾದ ಒಂದು

ದೋಷವನ್ನು ಪರಿಹರಿಸುವಲ್ಲಿ ಸಂಪಾದಕರಿಂದ ಮತ್ತೊಂದು ದೋಷ ಸೃಷ್ಟಿಯಾಗುವುದಾದಲ್ಲಿ ಕವಿಕೃತವಾದ ದೋಷವನ್ನು ಹಾಗೇ ಇಟ್ಟುಕೊಂಡು ಆ ವಿಷಯವನ್ನು ಪ್ರಸ್ತಾವನೆಯಲ್ಲಿ ಹೇಳಿ ಬಿಟ್ಟಿರುವುದೇ ಲೇಸು.

ಹಿಂದೆ ಹೇಳಿರುವಂತೆ, ಗ್ರಂಥಸಂಪಾದನೆಯಲ್ಲಿ ಅತಿಮುಖ್ಯವಾದುದು ಕವಿಯೇ ರಚಿಸಿರಬಹುದಾದ ಪಾಠದ ನಿರ್ಣಯ. ಪರಮದೇವ ಕವಿಗೆ ವಾರ್ಧಕಷಟ್ಪದಿಯ ರಚನೆ ಸಿದ್ಧಿಸಿದೆ. ಆದುದರಿಂದ ಅವನ ರಚನೆಯಲ್ಲಿ ಛಂದೋದೋಷವಿರಲು ಸಾಧ್ಯವಿಲ್ಲ. ಛಂದೋದೋಷವೇನಾದರೂ ಆಗಿದ್ದರೆ ಅದು ಲಿಪಿಕಾರರಿಂದಾದುದು, ಇಲ್ಲವೆ ಗ್ರಂಥಪ್ರತಿಯನ್ನು ತಿದ್ದಿರಬಹುದಾದ ಅಪರಿಣತರ ಕೈಯಿಂದಾದುದು. ಅಂತಹ ಛಂದೋದೋಷವನ್ನು ನೀಗಿ ಮಾಡುವ ಗ್ರಂಥಪರಿಷ್ಕರಣೆ ಗ್ರಂಥಸಂಪಾದನ ನೈಪುಣ್ಯದ ಅಂಶ. ತುರಂಗಭಾರತದ ಮೊದಲ ಆವೃತ್ತಿಯಲ್ಲಿ ವಿಸಂಧಿದೋಷ ಛಂದೋದೋಷಗಳು ಇದ್ದರೂ ಈ ಎರಡನೆ ಆವೃತ್ತಿಯಲ್ಲಿ ಇದ್ದಷ್ಟಿಲ್ಲ. ಇದರಲ್ಲಿ ಸುಮಾರು 50 ಪ್ರತಿಶತ ಪದ್ಯಗಳೂ ಛಂದಸ್ಸಿನಲ್ಲಿ ಮುಗ್ಗರಿಸಿವೆ. ಹಲವಾರು ಕಡೆ ಅಸಾಧುಪಾಠ ಸ್ವೀಕಾರ ಮತ್ತು ಛಂದೋಭಂಗಗಳು ಈ ಆವೃತ್ತಿಯನ್ನು ಕಳೆಗೆಡಿಸಿವೆ ಅಥವಾ ಕೊಲೆಮಾಡಿವೆ. ಇನ್ನೂ ಒಂದೆರಡು ಎದ್ದುಕಾಣುವ ಸಂಪಾದನದೋಷವನ್ನು ಮುಚ್ಚಿಡುವುದು ಅಪಚಾರವಾಗುತ್ತದೆ. ಅವನ್ನಿಲ್ಲಿ ತೋರಿಸುತ್ತಿದ್ದೇನೆ :—

(1) ಕನ್ನಡದಲ್ಲಿ ಸಪ್ತಮೀವಿಭಕ್ತಿ ಪ್ರತ್ಯಯಗಳಲ್ಲಿ 'ಒಳ್' ಎಂಬುದಿದೆ. 'ಓಳ್' ಎಂಬುದು ಅಸಾಧು. ಈ ತುರಂಗಭಾರತದ ಉದ್ದಕ್ಕೂ 'ಓಳ್' ಎಂಬ ದೀರ್ಘರೂಪವನ್ನೆ ಇಟ್ಟುಕೊಳ್ಳಲಾಗಿದೆ—ಇದರಿಂದಾಗಿ ಅಕಾರದೋಳ್, ಮನೆಯೋಳ್, ತವಕದೋಳ್, ಎಂಬ ಅಸಾಧುರೂಪಗಳನ್ನು ನಾವು ಕಾಣುತ್ತಿದ್ದೇವೆ.

(2) ಅಕರವನ್ನು ತಪ್ಪಾಗಿ ಕೊಟ್ಟಿರುವುದೂ ಉಂಟು. ಉದಾ : ಸಂಧಿ : 2, ಪದ್ಯ: 3—ಇಲ್ಲಿ 'ಖುಚಿಚಯಂ' ಎಂಬ ಅಶುದ್ಧಪಾಠವನ್ನು ಸ್ವೀಕರಿಸಲಾಗಿದೆ. ಅಡಿಟಿಪ್ಪಣಿಯಲ್ಲಿ ಕಾಣಿಸಿರುವಂತೆ, ಬೊಂಬಾಯಿ ಪ್ರತಿಯಲ್ಲಿ 'ರಾಯ' ಎಂಬುದು ಇದಕ್ಕೆ ಪಾಠಾಂತರ. ಹೀಗೆ ಇಲ್ಲಿ ಸ್ವೀಕೃತ ಪಾಠ ತಪ್ಪು. ಅಡಿಟಿಪ್ಪಣಿಯಲ್ಲಿ ಕೊಟ್ಟಿರುವುದೂ ತಪ್ಪು. ತುರಂಗಭಾರತದ ಬೊಂಬಾಯಿಯ ಪ್ರತಿ ನನ್ನಲ್ಲಿದೆ. ಅದರಲ್ಲಿ 'ರಾಯ' ಎಂಬ ಪಾಠಾಂತರವಿಲ್ಲ. ಶುದ್ಧಪಾಠವಾಗಿರುವ 'ಖುಚಿಚಯಂ' ಎಂಬುದಿದೆ. ಇದನ್ನೆ ಪದ್ಯದಲ್ಲಿಡಬೇಕಾಗಿತ್ತು. ಬೇರೆ ಕಡೆ ಬೇರೆ ರೀತಿಯ ಇಂತಹ ತಪ್ಪುಗಳಿಗೆ ಉದಾಹರಣಗಳಿವೆ. ದಿಗ್ದರ್ಶನಕ್ಕೆ ಇಷ್ಟೇ ಸಾಕು.

(3) ಹೀಗೆ ಅಸಮರ್ಪಕ ಸಂಪಾದನದಿಂದಾದ ತಪ್ಪುಗಳಿಗೆ ಹೆಚ್ಚಳವನ್ನು ಉಂಟುಮಾಡಿರುವ ಅಚ್ಚಿನ ತಪ್ಪುಗಳ ಹಾವಳಿ ಈ ಕಾವ್ಯದಲ್ಲಂತೂ ಮಿತಿಮೀರಿದೆ!

' ಏಕೋ ಹಿ ದೋಷೋ ಗುಣಸನ್ನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ' ಎಂಬುದು ಕಾಳಿದಾಸನ ಕುಮಾರಸಂಭವ ಕಾವ್ಯದಲ್ಲಿ ಬಂದ ಮಾತು,

ಆದರಂತೆ, ಎಲ್ಲೋ ಒಂದು ತಪ್ಪಿದ್ದರೆ ಅದನ್ನೆ ದೊಡ್ಡದು ಮಾಡತಕ್ಕದ್ದಲ್ಲ. ಚಂದ್ರನ ಕಳಂಕ ಆತನ ಕಿರಣ ಸಮೂಹದಲ್ಲಿ ಮರೆಯಾಗುವಂತೆ ಆ ತಪ್ಪು ಗುಣಸಮುಚ್ಚಯ ದಲ್ಲಿ ಮುಳುಗಿಹೋಗುವುದು. ಆದರೆ, ಒಂದು ಕೃತಿಯಲ್ಲಿ ದೋಷಗಳೇ ಹೆಚ್ಚಾಗಿದ್ದರೆ, ಇರುವ ಗುಣವು ಕೂಡ ಕಾಣಿಸದಂತಾಗುವುದಲ್ಲವೆ? ಈ ಮಾತು ಈ ಗ್ರಂಥಕ್ಕೆ ಅನ್ವಯಿಸುವಂತಿದೆ.

ಆದುದರಿಂದ ತುರಂಗಭಾರತದ ಈಗಣ ಮುದ್ರಿತ ಪ್ರತಿಗಳು ಬೇಗನೆ ಮುಗಿದುಹೋಗಲಿ. ಮೂರನೆ ಮುದ್ರಣ ದೋಷರಹಿತವಾಗಿ ಹೊರಬಂದು ಕಾವ್ಯರಸಿಕರು ಓದಿ, ಗಮಕಿಗಳಿಂದ ವಾಚನಮಾಡಿಸಿ, ನಲಿವಂತಾಗಲಿ! ಎಂಬುದೇ ಈ ಸಮೀಕ್ಷೆಯ ಸಹೃದಯತೆಯ ಆಕಾಂಕ್ಷೆ.

ಟಿ. ಕೇಶವ ಭಟ್ಟ

ವಸ್ತುಸಂಗ್ರಹ

ಜನ್ಮಶತಮಾನೋತ್ಸವ ಸ್ಮರಣೆ

ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ್ ಮಂಜಪ್ಪ

ಕೀರ್ತಿಶೇಷ ಹರ್ಡೇಕರ್ ಮಂಜಪ್ಪನವರು ಜನಿಸಿದ್ದು 18–2–1886 ರಲ್ಲಿ. ಕನ್ನಡದ ಆದಿ ಮಹಾಕವಿ ಪಂಪನು ಹೆಮ್ಮೆಯಿಂದ ಬಣ್ಣಿಸಿರುವ ಬನವಾಸಿ ಅವರ ಜನ್ಮಸ್ಥಳ. ಬಡಕುಟುಂಬದಲ್ಲಿ ಜನನ. ಪ್ರಾಥಮಿಕ ಏಳನೆ ಇಯತ್ತಿನಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ. ಅನಂತರ ಸಿರ್ಸಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ವೃತ್ತಿ. ಮಂಜಪ್ಪನವರು ಶಿಕ್ಷಕರಾಗಿದ್ದ ಅವಧಿ ಅಲ್ಪವಾಗಿದ್ದರೂ ಪಡೆದ ಕೀರ್ತಿ ಮಹತ್ತರ.

ಮಂಜಪ್ಪನವರು ಶಿಕ್ಷಕರಾಗಿಯೇ ಉಳಿದಿದ್ದರೆ ಈ ವೇಳೆಗೆ ಅವರು ಜನಮನದಿಂದ ದೂರವಾಗುತ್ತಿದ್ದರು. ಆದರೆ ಅವರದು ಸೀಮಿತ ವ್ಯಕ್ತಿತ್ವವಾಗಿರಲಿಲ್ಲ. ಅಂದು ದೇಶದಾದ್ಯಂತ ವ್ಯಾಪಿಸಿದ್ದ 'ಸ್ವದೇಶಿ ಚಳುವಳಿ' ಕರೆಗೆ ಓಗೊಟ್ಟು ಹರ್ಡೇಕರರು ಪ್ರಾಥಮಿಕ ಶಿಕ್ಷಕ ಸ್ಥಾನಕ್ಕೆ ತಿಲಾಂಜಲಿ ನೀಡಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧಾವಿಸಿದರು. ತಿಲಕರ ಕೇಸರಿ, ಜ್ಞಾನಪ್ರಕಾಶ ಮತ್ತು ಕಾಲ (ಎಲ್ಲಾ ಮರಾಠಿ ಪತ್ರಿಕೆಗಳು) ಹರ್ಡೇಕರರ ಮೇಲೆ ಪ್ರಭಾವ ಬೀರಿದವು. 1906 ರಲ್ಲಿ ಮಂಜಪ್ಪನವರು ದಾವಣಗೆರೆಯಲ್ಲಿ 'ಧನುರ್ಧಾರಿ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯ ಮೂಲಕ ಹರ್ಡೇಕರರು ನಾಡಿನ ಜನತೆಯಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚಿದರು. ಇದರಿಂದ ಎಚ್ಚೆತ್ತ ಕನ್ನಡ ಜನ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧಾವಿಸಿದರು. ಆರ್ಥಿಕ ಅಡಚಣೆಯಿಂದ ಈ ಪತ್ರಿಕೆ ಬಹುಕಾಲ ನಡೆಯಲಿಲ್ಲ.

ಪತ್ರಿಕೆಯಿಂದ ಸಾಧಿಸಬೇಕಾಗಿದ್ದ ಕಾರ್ಯವನ್ನು ಪುಸ್ತಕ ಪ್ರಕಟಣೆಯಿಂದ ಸಾಧಿಸಲು ಹೊರಟರು. ಹರಿಹರದ ತುಂಗಾನದೀ ತೀರದ ಬಳಿ 'ಸತ್ಯಾಗ್ರಹ ಆಶ್ರಮ'ವನ್ನು ಸ್ಥಾಪಿಸಿದರು. ಗಾಂಧೀಜಿಯವರ ಸತ್ಯಾಗ್ರಹ ತತ್ವವನ್ನು ಇಲ್ಲಿ ಕಿಂಚಿತ್ ಲೋಪವೂ ಇಲ್ಲದೆ ಪಾಲಿಸಬೇಕೆಂಬ ನಿರ್ಧಾರ ತೊಟ್ಟರು. ಕಾರಣಾಂತರದಿಂದ ಇಲ್ಲಿ ಅವರು ಹೆಚ್ಚು ಕಾಲ ನಿಲ್ಲಲಾಗಲಿಲ್ಲ, ವಿಜಾಪುರ ಜಿಲ್ಲೆಯ ಆಲಮಟ್ಟಿ ಕ್ಷೇತ್ರವನ್ನು ತಮ್ಮ ಮುಂದಿನ ಕಾರ್ಯಸಾಧನೆಗಾಗಿ ಆರಿಸಿಕೊಂಡರು.

1915 ರಲ್ಲಿ 'ಸ್ವಕರ್ತವ್ಯ ಸಿದ್ಧಾಂತ' ಎಂಬ ಪುಸ್ತಕವನ್ನು ಪ್ರಕಟಿಸಿದರು. 'ತಿಲಕರ ಗೀತಾರಹಸ್ಯ'ವನ್ನು ಕನ್ನಡಕ್ಕೆ ತರಲು ಪ್ರಯತ್ನಿಸಿದರು. ಗಾಂಧೀಜಿಯವರ ಆತ್ಮಚರಿತ್ರೆಯನ್ನು ಕನ್ನಡಕ್ಕೆ ತಂದವರಲ್ಲಿ ಹರ್ಡೇಕರರು ಮೊದಲಿಗರು. ಕನ್ನಡ ನಾಡಿನಲ್ಲಿ ರಾಷ್ಟ್ರೀಯ ಸಾಹಿತ್ಯದ ಕೊರತೆಯಿದ್ದ ಕಾಲದಲ್ಲಿ ಮಂಜಪ್ಪನವರು ಗದ್ಯ ಸಾಹಿತ್ಯ ನಿರ್ಮಾಣಕ್ಕೆ ಕೈಹಾಕಿದರು. ಸ್ತ್ರೀ ನೀತಿ ಸಂಗ್ರಹ, ಆರೋಗ್ಯ ಜೀವನ, ಬುದ್ಧಿಯ ಮಾತು, ಬ್ರಹ್ಮಚರ್ಯ–ಜೀವನ, ಮುಂತಾದ ನೈತಿಕ ಪುಸ್ತಕಗಳನ್ನು ರಚಿಸಿದರು. ಅಲ್ಲದೆ ಭಾರತೀಯರಲ್ಲಿ ದೇಶಭಕ್ತಿ, ಸತ್ಯಾಗ್ರಹ, ಖಾದಿ, ಹರಿಜನ

ಸುಧಾರಣೆ ಮುಂತಾದ ರಾಷ್ಟ್ರೀಯ ಸಾಹಿತ್ಯದ ಕೃತಿಗಳನ್ನೂ ಬರೆದರು. ಅವರ ಅಪ್ರಕಟಿತ ಕೃತಿಗಳಲ್ಲಿ 'ಋಗ್ವೇದ ಸಾರ' ಮುಖ್ಯವಾದುದು.

1934ರಲ್ಲಿ ಗಾಂಧೀಜಿಯವರು ಕರ್ನಾಟಕಕ್ಕೆ ಭೇಟಿ ಕೊಟ್ಟಾಗ ಹರ್ಡೇಕರರೂ ಅವರೊಂದಿಗೆ ಪ್ರವಾಸದಲ್ಲಿ ಪಾಲ್ಗೊಂಡಿದ್ದರು. ಕಾಂಗ್ರೆಸ್ ಪಕ್ಷವನ್ನು ಅವರು ಸೇರಿರಲಿಲ್ಲ. ಅವರೂ ಗಾಂಧೀಜಿಯವರಿಗೆ ಅತ್ಯಂತ ಆಪ್ತರಾಗಿದ್ದರು. ಮಹಾತ್ಮರ ಬೆಂಬಲಿಗರಲ್ಲಿ ಅವರು ಪ್ರಮುಖರಾಗಿದ್ದರೂ ಅವರ ಎಲ್ಲಾ ಘೋಷಣೆಗಳನ್ನೂ ಹರ್ಡೇಕರರು ಒಪ್ಪಿರಲಿಲ್ಲ. ವಿದೇಶಿ ವಸ್ತ್ರದಹನಕ್ಕೆ ಮಂಜಪ್ಪನವರ ಅಸಮ್ಮತಿ ಪ್ರಬಲವಾಗಿತ್ತು. ಬಟ್ಟೆಗಳನ್ನು ಸುಡುವ ಬದಲು ಅವನ್ನು ಬಡಬಗ್ಗರಿಗೆ ಹಂಚ ಬೇಕೆನ್ನುವುದು ಅವರ ಅಪೇಕ್ಷೆಯಾಗಿತ್ತು. ಕಾಂಗ್ರೆಸ್ ಕಾರ್ಯಕರ್ತರು ಹಿಂಸಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅವರಿಗೆ ಒಗ್ಗದ ಕಾರ್ಯವಾಗಿತ್ತು. ದಲಿತ ವರ್ಗವನ್ನು ಗಾಂಧೀಜಿ ಹರಿಜನರೆಂದು ಕರೆದಿದ್ದೂ ಹರ್ಡೇಕರರಿಗೆ ಒಪ್ಪಿಗೆಯಾಗಿರ ಲಿಲ್ಲ. 'ಹರಿಜನ' ಎನ್ನುವ ಬದಲು 'ಆದಿಜನ' ಎಂದು ಕರೆಯಬೇಕೆಂಬುದು ಅವರ ಅಪೇಕ್ಷೆಯಾಗಿತ್ತು. ಹೀಗಾಗಿ ಅವರು ಕರ್ನಾಟಕದ ಅನೇಕ ಕಾಂಗ್ರೆಸ್ಸಿಗರಿಗೆ 'ಬೇಡದ' ವ್ಯಕ್ತಿಯಾದರು. ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಕರ್ನಾಟಕ ದಲ್ಲಿ ನಡೆದ ಬ್ರಾಹ್ಮಣವಿರುದ್ಧ ಚಳುವಳಿಯಲ್ಲಿ ವೀರಶೈವರು ಭಾಗವಹಿಸಬಾರದೆಂದು ಕರೆಕೊಟ್ಟಿದ್ದರು. ಇದರಿಂದಾಗಿಯೂ ಅವರು ಅನೇಕ ಸ್ವಜನರಿಗೂ 'ಆಗದ' ವ್ಯಕ್ತಿ ಯಾದರು.

ಬಸವ ಸಂದೇಶವನ್ನು ಜನರಿಗೆ ಮುಟ್ಟಿಸುವಲ್ಲಿ ಹರ್ಡೇಕರರು ಪ್ರಮುಖ ಪಾತ್ರ ವಹಿಸಿದರು. 1913 ರ ಮುಂಚೆ ಬಸವಜಯಂತಿಯ ಆಚರಣೆ ಇರಲಿಲ್ಲ. ಹರ್ಡೇಕರರು ಕರ್ನಾಟಕದಲ್ಲಿ ಬಸವ ಜಯಂತಿಯ ನಾಂದಿ ಹಾಡಿದರು. ಗಾಂಧೀಜಿ ಯವರಿಗೆ ಬಸವ ತತ್ವದ ಹಿರಿಮೆಯನ್ನು ವಿಶದಗೊಳಿಸಿದರು. ಬಸವ ತತ್ವದ ಸಾರ ವನ್ನು ಗ್ರಹಿಸಿದ ಗಾಂಧೀಜಿಯವರು ತಾವು ಈಗ ಹಿಂದೂ ಸಮಾಜ ಸುಧಾರಣೆಗಾಗಿ ಕೈಗೊಳ್ಳಬೇಕೆಂದಿರುವ ಕಾರ್ಯಗಳನ್ನು ಬಸವಣ್ಣನವರು 800 ವರ್ಷಗಳ ಹಿಂದೆಯೇ ಕೈಗೊಂಡಿದ್ದರಲ್ಲಾ ಎಂದು ಉದ್ಗರಿಸಿದರಂತೆ !

ಉತ್ತರ ಕರ್ನಾಟಕದಲ್ಲಿ ಹರ್ಡೇಕರರು ಅಣ್ಣ (ಬಸವಣ್ಣ) ಎಂದೇ ಪ್ರಸಿದ್ಧ ರಾಗಿದ್ದರು. ಆಗಾಗ್ಗೆ ಪ್ರವಾಸವನ್ನು ಕೈಗೊಂಡು ಜನರಲ್ಲಿ ದುಶ್ಚಟಗಳ ಬಗ್ಗೆ ಎಚ್ಚರಿರುವಂತೆ ಬೋಧಿಸುತ್ತಿದ್ದರು. ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡವನ್ನು ಪ್ರತಿಷ್ಠಿತವಾಗಿ ಬೆಳಸಿದ ಕೀರ್ತಿ ಅವರದು.

ಸುಮಾರು 50 ಕೃತಿಗಳನ್ನೂ ನಾಲ್ಕು ಪತ್ರಿಕೆಗಳನ್ನೂ (ಧನುರ್ಧಾರಿ, ಖಾದಿ ವಿಜಯ, ಉದ್ಯೋಗ ಮತ್ತು ಶರಣ ಸಂದೇಶ) ಹುಟ್ಟುಹಾಕಿದ ಹರ್ಡೇಕರರು ಸ್ವತಂತ್ರಪ್ರೇಮಿಯಾಗಿ, ಶಿಕ್ಷಕರಾಗಿ, ಪತ್ರಕರ್ತರಾಗಿ, ಲೇಖಕರಾಗಿ, ಸಮಾಜ

ಸುಧಾರಕರಾಗಿ ಕರ್ನಾಟಕ ರಾಜ್ಯ ಮತ್ತು ಭಾರತ ದೇಶಕ್ಕೆ ನೀಡಿರುವ ಕಾಣಿಕೆ ಅತ್ಯಮೂಲ್ಯ. ಸ್ವಾರ್ಥವನ್ನು ಮರೆತು ಕೀರ್ತಿಯನ್ನು ಬಯಸದೆ ನಾಡ ನುಡಿಗಳ ಸೇವೆಗಾಗಿ ದೇಹವನ್ನು ಚಂದನದ ಕೊರಡಂತೆ ತೇದು ಅಮರರಾಗಿರುವ ಹರ್ಡೇಕರ ರನ್ನು 'ಕರ್ನಾಟಕದ ಗಾಂಧಿ', 'ಹರ್ಬರ್ಟ್ ಸ್ಪೆನ್ಸರ್', 'ಮಹಾವಿಭೂತಿ ಪುರುಷ' 'ಮಹಾ ತಪಸ್ವಿ' ಮುಂತಾಗಿ ಕರೆದುದರಲ್ಲಿ ಉತ್ಪ್ರೇಕ್ಷೆಯಿಲ್ಲ.

3-1-1947 ರಂದು ಈ ಮಹಾಚೇತನ ಕಣ್ಮರೆಯಾಗುವ ಮುನ್ನ ನೀಡಿದ ಈ ಕೆಳಕಂಡ ಸಂದೇಶ ಸಾರ್ವಕಾಲಿಕ, ಮನನೀಯ :

ವೀರರಾಗಿರಿ, ಧೀರರಾಗಿರಿ,
ಪವಿತ್ರರಾಗಿರಿ, ಸ್ವತಂತ್ರರಾಷ್ಟ್ರದ ವೀರರಾಗಿರಿ.

ಂ ಂ ಂ

ಎತರ್ೂರು ಶಾಂತಿರಾಜ ಶಾಸ್ತ್ರಿ

ಶಾಂತಿರಾಜ ಶಾಸ್ತ್ರಿಗಳ ಹುಟ್ಟೂರು ದ.ಕ. ಜಿಲ್ಲೆಯ ಕಾರ್ಕಳದ ಬಳಿಯಲ್ಲಿರುವ ಎತರ್ೂರು. ಇವರ ಜನನ 1890ನೇ ಇಸವಿಯಲ್ಲಿ. ಶಾಂತಿರಾಜ ಎಂಟು ವರ್ಷಕ್ಕೇ ತಂದೆತಾಯಿಗಳನ್ನು ಕಳೆದುಕೊಂಡು ತಬ್ಬಲಿಯಾದ. ಚೂಟಿಯಾದ ಹುಡುಗ ಆದಿಸಾಗರ ನೇಮಿಸಾಗರರಂಥ ಮಠಾಧಿಪತಿಗಳ ಕೃಪಾಶ್ರಯಗಳಿಂದ ವಿದ್ಯಾಭ್ಯಾಸಂಗ ವನ್ನು ಪ್ರಾರಂಭಿಸಿದ. ಶ್ರವಣಬೆಳಗೊಳದಲ್ಲಿ ಕಲಿಯುವಷ್ಟನ್ನು ಕಲಿತು ಉನ್ನತ ವ್ಯಾಸಂಗಕ್ಕಾಗಿ ರಾಜಸ್ಥಾನದ ಗ್ವಾಲಿಯರ್ ಪ್ರಾಂತದಲ್ಲಿರುವ ಜೈನ ಶಿಕ್ಷಣ ಕೇಂದ್ರ ಪಾವ ಮೊರೇನಾಕ್ಕೆ ಪ್ರಯಾಣ ಬೆಳಸಿದ. ಅಲ್ಲಿ 'ನ್ಯಾಯತೀರ್ಥ' ಪದವಿ ಪಡೆದು ಕರ್ನಾಟಕಕ್ಕೆ ಮರಳಿದ.

ಶಾಂತಿರಾಜ ಶಾಸ್ತ್ರಿಗಳು ಮೈಸೂರಿನ ಮೋತಿಖಾನೆ ಲಕ್ಷ್ಮೀಪತಯ್ಯನವರ ಜೈನ ವಿದ್ಯಾರ್ಥಿ ನಿಲಯದಲ್ಲಿ ಧರ್ಮೋಪದೇಶಕರಾಗಿ ವೃತ್ತಿ ಪ್ರಾರಂಭಿಸಿದರು. ಶಾಸ್ತ್ರಿಗಳ ಅಧ್ಯಯನ, ಬೋಧನೆ, ಉಪದೇಶಗಳು ಎಲ್ಲರನ್ನೂ ಮೆಚ್ಚಿಸಿದವು. ಅಂದಿನ ರಾಜರ್ಷಿ ಶ್ರೀಮನ್ನಾಲ್ವಡಿ ಕೃಷ್ಣರಾಜ ಮಹಾಪ್ರಭುಗಳ ಗಮನಕ್ಕೂ ಶಾಸ್ತ್ರಿಗಳ ವಿದ್ವತ್ತೂ, ವರ್ಚಸ್ಸೂ ಗಮನಕ್ಕೆ ಬಂದವು. ಫಲವಾಗಿ ಮಹಾಪ್ರಭು ಗಳು 11-6-1925 ರಲ್ಲಿ ಶಾಂತಿರಾಜ ಶಾಸ್ತ್ರಿಗಳನ್ನು ಆಸ್ಥಾನ ವಿದ್ವಾನರನ್ನಾಗಿ ತೆಗೆದುಕೊಂಡರು. ಶಾಂತಿರಾಜ ಶಾಸ್ತ್ರಿಗಳಿಗೆ ದೊರೆತ ಅರಮನೆಯ ಅನುಗ್ರಹದಿಂದ ಅವರು ಜೈನ ಸಮಾಜದವರೆಲ್ಲರ ಗೌರವಕ್ಕೂ ಪಾತ್ರರಾದರು.

ನಿತ್ಯ ಸ್ವಾಧ್ಯಯನಕ್ಕೆ ಜೈನಧರ್ಮ ಆಚಾರ ಗ್ರಂಥಗಳೇ ಇರದಿದ್ದ ಕಾಲ ಅದು. ಇಂಥ ಕಾಲದಲ್ಲಿ ಸಂಸ್ಕೃತ ಸಾಹಿತ್ಯದ ಮೇರುಕೃತಿಯಾದ ಜಿನಸೇನಾಚಾರ್ಯ

ಗುಣಭದ್ರಾಚಾರ್ಯರ ಮಹಾಪುರಾಣವನ್ನು ಹೊಸಗನ್ನಡ ಗದ್ಯಾನುವಾದದೊಂದಿಗೆ ಪ್ರಕಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಶಾಸ್ತ್ರಿಗಳು ಓದಿದ್ದು ಸಂಸ್ಕೃತ, ಪ್ರಾಕೃತ. ಕಲಿತದ್ದು ಜೈನ ಸಿದ್ಧಾಂತವನ್ನು. ಕೆಲಸ ಮಾಡಿದ್ದು ಕನ್ನಡದಲ್ಲಿ. ಅಂದಿನ ಪ್ರಾಚ್ಯ ಪುಸ್ತಕ ಭಂಡಾರದಲ್ಲಿ ಜೈನಧರ್ಮ, ಸಾಹಿತ್ಯ ಗ್ರಂಥಗಳ ರಕ್ಷಣೆ, ಸಂಶೋಧನೆ, ಸಂಪಾದನೆ, ಪ್ರಕಟನೆಗಳ ಕಾರ್ಯಕ್ಕಾಗಿ 1941 ರಲ್ಲಿ ಶಾಸ್ತ್ರಿಗಳು ಸಹಾಯಕ ವಿದ್ವಾಂಸರಾಗಿ ಸೇರಿದರು. ಈ ಅವಧಿಯಲ್ಲಿ ವಿದ್ಯಾನುಶಾಸನ, ಪದಾರ್ಥಸಾರ, ತತ್ತ್ವಾನು-ಸೂತ್ರ, ಪ್ರಮೇಯರತ್ನಾಕರ, ತತ್ತ್ವರತ್ನ ಪ್ರದೀಪಿಕೆ–ಈ ಕೃತಿಗಳನ್ನ ಸಂಶೋಧಿಸಿ, ಸಂಪಾದಿಸಿ ಪ್ರಕಟನೆಗೆ ಸಿದ್ಧಪಡಿಸಿದರು. ಅವರು ತಮ್ಮ ಕೃತಿಗಳನ್ನೆಲ್ಲ—ಎರಡನ್ನುಳಿದು—ಅವು ಸಂಸ್ಕೃತವೇ ಆಗಿದ್ದರೂ ಕೊಟ್ಟುದು ಕನ್ನಡದಲ್ಲಿ. ರತ್ನಾಕರ ಶತಕ, ಅಪರಾಜಿತೇಶ್ವರ ಶತಕಗಳಿಗೆ ಒಳ್ಳೆಯ ಭಾವಾರ್ಥವನ್ನು ಬರೆದರು. ಎಲ್ಲಕ್ಕೂ ಮೇರುಪ್ರಾಯವಾದ ಕನ್ನಡ ಜೈನ ಪುರಾಣಗಳ ಆಕರ ಗ್ರಂಥವಾದ ಆಚಾರ್ಯ ಜಿನಸೇನ ಗುಣಭದ್ರರ 'ಮಹಾಪುರಾಣವನ್ನು ಕರ್ಣಾಟಕ ಭಾವ ದೀಪಿಕಾ ವ್ಯಾಖ್ಯೆಯೊಂದಿಗೆ ಕೊಟ್ಟುದು ಕನ್ನಡ ಸಾಹಿತ್ಯಾಭ್ಯಾಸಿಗಳ ಪುಣ್ಯ. 1949 ರಲ್ಲಿ ಅವರು ಪ್ರಾಚ್ಯ ಪುಸ್ತಕ ಭಂಡಾರದಿಂದ ನಿವೃತ್ತಿಗೊಂಡರು.

ಜೈನಧರ್ಮವನ್ನು ಜನಸಾಮಾನ್ಯರಿಗೆ ತಿಳಿಸುವ ಸಲುವಾಗಿ 'ವಿಶ್ವಬಂಧು' ಮತ್ತು 'ವಿವೇಕಾಭ್ಯುದಯ' ಎಂಬ ಪತ್ರಿಕೆಗಳನ್ನೂ ಅವರು ಪ್ರಾರಂಭಿಸಿದ್ದರು.

ಶ್ರವಣಬೆಳಗೊಳ, ಹೊಂಬುಜ, ಧರ್ಮಸ್ಥಳ ಮುಂತಾದ ಕ್ಷೇತ್ರಗಳಲ್ಲಿ ಜೈನ-ಧರ್ಮದ ಬಗ್ಗೆ ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿ ಜನಾನುರಾಗಿಗಳಾಗಿದ್ದರು. 1946ರಲ್ಲಿ 'ಆಸ್ಥಾನ ಮಹಾವಿದ್ವಾನ್' ಎಂಬ ಬಿರುದೂ, 1946 ರಲ್ಲಿ 'ಪಂಡಿತರತ್ನ' ಎಂಬ ಪ್ರಶಸ್ತಿಯೂ ಶ್ರೀ ಜಯಚಾಮರಾಜ ಒಡೆಯರ್ ಅವರಿಂದ ಶಾಸ್ತ್ರಿಗಳವರಿಗೆ ಲಭಿಸಿದವು.

ಶಾಂತಿರಾಜ ಶಾಸ್ತ್ರಿಗಳು ಸಂಶೋಧಿಸಿ, ಸಂಪಾದಿಸಿ ಪ್ರಕಟಿಸಿರುವ ಕೃತಿಗಳು ಇಷ್ಟೇ ಎಂದು ನಿಖರವಾಗಿ ತಿಳಿಸಲು ಕಷ್ಟಸಾಧ್ಯ. ಸದ್ಯಕ್ಕೆ 'ಅನ್ಯಯೋಗ ವ್ಯವ-ಚ್ಛೇದಿಕಾ', 'ಗೊಮ್ಮಟೇಶ್ವರ ಚರಿತ್ರ', 'ಜಿನಭಜನಸಾರ', 'ತತ್ತ್ವರತ್ನಪ್ರದೀಪಿಕೆ', 'ದೇಶಭಕ್ತಿ', 'ದಶಲಕ್ಷಣಧರ್ಮ', 'ನೇಮಿಜಿನೇಶ ಸಂಗತಿ' ಇತ್ಯಾದಿ 30 ಗ್ರಂಥಗಳು ಪ್ರಕಟವಾಗಿವೆ. 'ದಶಲಕ್ಷಣ ಪೂಜಾಪಾಠ', 'ಅಕಲಂಕ ಸ್ತೋತ್ರ', 'ಸುಕುಮಾರ ಚರಿತ್ರಾದಿ ಸಂಗ್ರಹ', 'ಧರ್ಮಪರೀಕ್ಷೆ', 'ನಾರೀತರ ದರ್ಪಣ' ಮುಂತಾದ 18 ಪುಸ್ತಕಗಳ ಕರ್ತೃ ಶಾಸ್ತ್ರಿಗಳೇ ಎಂದು ತಿಳಿದುಬರುತ್ತದೆ. ಗಮನಕ್ಕೆ ಬಾರದವು ಅದೆಷ್ಟೋ!

ಹೀಗೆ ಭಾರತದಜೈನ ಸಮಾಜದಲ್ಲಿ ಮಹಾವಿದ್ವಾಂಸರಾಗಿ ಗೌರವಾನ್ವಿತ ಸ್ಥಾನ ಪಡೆದಿದ್ದ ಈ ಜೈನ ಸಮಾಜದ ಭಾಗ್ಯಜ್ಯೋತಿಯು ನಂದಿದ್ದು 31–5–1952 ರಲ್ಲಿ.

ವಿ. ವೆಂಕಟರಾವ್

ಗಮಕ ಸಮ್ಮೇಳನ

ಕರ್ನಾಟಕ ಗಮಕ ಕಲಾ ಪರಿಷತ್ತು ಇದೇ ಜೂನ್ ತಿಂಗಳ 3, 4 ಮತ್ತು 6 ರಂದು ಅಖಿಲ ಕರ್ನಾಟಕ ದ್ವಿತೀಯ ಗಮಕ ಕಲಾ ಸಮ್ಮೇಳನವನ್ನು ಅರ್ಥಪೂರ್ಣವಾಗಿ ನಡೆಸಿತು. ನಾಡಿನ ಎಲ್ಲ ಗಮಕಿಗಳೂ ಭಾಗವಹಿಸಿದ್ದ ಈ ಸಮ್ಮೇಳನದಲ್ಲಿ ಗಮಕ ಕಲೆಗೆ ಸಂಬಂಧಿಸಿದಂತೆ ವಿಚಾರಗೋಷ್ಠಿ, ಕಾವ್ಯವಾಚನ—ವ್ಯಾಖ್ಯಾನ ಮುಂತಾದ ಉತ್ತಮ ಮಟ್ಟದ ಕಾರ್ಯಕ್ರಮಗಳು ವ್ಯವಸ್ಥೆಗೊಂಡಿದ್ದವು. ಸಮ್ಮೇಳನಾಧ್ಯಕ್ಷರಾದ ಶ್ರೀಯುತ ಬಿ. ಎಸ್. ಎಸ್. ಕೌಶಿಕ್ ಅವರಿಗೆ ಈ ಶುಭಸಂದರ್ಭದಲ್ಲಿ 'ಗಮಕರತ್ನಾಕರ' ಎಂಬ ಬಿರುದನ್ನು ಗಮಕ ಕಲಾ ಪರಿಷತ್ತು ನೀಡಿ ಗೌರವಿಸಿದ್ದು ಗಮಕ ಕಲಾಭಿಮಾನಿಗಳೆಲ್ಲರೂ ಸಂತಸಪಡಬೇಕಾದ ಸಂಗತಿ.

ಗಮಕ ಕಲೆಗೆ ಸಂಬಂಧಪಟ್ಟಂತೆ ಅನೇಕ ಮೌಲಿಕ ಲೇಖನಗಳುಳ್ಳ 'ಗಮಕವಾಹಿನಿ' ಎಂಬ ಸ್ಮರಣ ಸಂಚಿಕೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಐ. ಎಂ. ವಿಟ್ಠಲಮೂರ್ತಿ ಅವರು ಬಿಡುಗಡೆ ಮಾಡಿದರು. ಶ್ರೀ ಟಿ. ಕೇಶವ ಭಟ್ಟರು ಸಂಚಿಕೆಯ ಸಂಪಾದಕರು.

ಸಮ್ಮೇಳನವನ್ನು ಉದ್ಘಾಟಿಸಿದ ಪ್ರೊ॥ ಎ. ಎನ್. ಮೂರ್ತಿರಾಯರು, ಕಾವ್ಯವಾಚನದಲ್ಲಿ ಗೇಯಾಂಶಕ್ಕಿಂತ ಸಾಹಿತ್ಯಾಂಶವು ಪ್ರಧಾನವಾಗಿರಬೇಕೆಂದು ಹೇಳಿದ ಮಾತು ಈ ಕಲೆಗೆ ಸಂಬಂಧಪಟ್ಟಂತೆ ಎಲ್ಲ ಕಾಲಕ್ಕೂ ಅನ್ವಯಿಸುವಂಥದು. ಗಮಕ ಕಲೆ ಕಾವ್ಯಾವಲಂಬಿ ಆದದ್ದರಿಂದ 'ಕಾವ್ಯ–ಸಾಹಿತ್ಯಗೋಷ್ಠಿ'ಯಲ್ಲಿ ಚಾರಿತ್ರಿಕ ದೃಷ್ಟಿಯಿಂದ ಕಾವ್ಯಪರಂಪರೆಯನ್ನು ಪರಿಚಯ ಮಾಡಿಕೊಡುವ ಕಾರ್ಯಕ್ರಮ ಅನಿವಾರ್ಯವಾಗಿ ಸ್ಥೂಲಸ್ವರೂಪದ್ದಾಗಿತ್ತು. ಗಮಕಕ್ಕೂ–ಸಾಹಿತ್ಯಕ್ಕೂ ಇರುವ ಸಂಬಂಧದ ವಿವರಣೆ ನೀಡಿದ ಪ್ರಬಂಧ ಸಾಧಾರಣಮಟ್ಟದ್ದು; ಗಮಕಕ್ಕೂ–ಸಂಗೀತಕ್ಕೂ ಹೇಗೆ ಹೊಂದಾಣಿಕೆಯಿರಬೇಕೆಂಬ ಪ್ರಬಂಧ ಬಹಳ ಮೇಲ್ಮಟ್ಟದ್ದಾಗಿದ್ದು, ಪಾಂಡಿತ್ಯಪೂರ್ಣವಾಗಿತ್ತು. ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಎಂ.ವಿ.ಸೀ. ಅವರು ಹೆಚ್ಚುಕಡಮೆ ಮೂರ್ತಿರಾಯರ ಅಭಿಪ್ರಾಯವನ್ನೇ ಸಮರ್ಥಿಸಿ, ಪ್ರಾಚೀನ ಉಲ್ಲೇಖಗಳಲ್ಲಿ ಕಾವ್ಯವಾಚನ ಮಾಡುವವರು 'ಓದುವವರು' ಎಂದೇ ಪ್ರಸಿದ್ಧರಾಗಿದ್ದರು ಎಂದು ಹೇಳಿ, ದಿವಂಗತ ಬಿಂದೂರಾಯರು ತಮ್ಮನ್ನು Bharata Reader ಎಂದೇ ಕರೆದುಕೊಳ್ಳುತ್ತಿದ್ದರು ಎಂಬ ಅಂಶವನ್ನು ಶ್ರೋತೃಗಳ ನೆನಪಿಗೆ ತಂದರು. ರಾಯರ ಓದಾಣಿಕೆಯಲ್ಲಿ ಗೇಯಕ್ಕಿಂತ ವಾಚನವೇ ಪ್ರಧಾನವಾಗಿದ್ದು, ಗಮಕಕಲೆಗೆ ಮಾದರಿಯಾಗಿತ್ತು ಎಂದರು. 'ಕಾವ್ಯಪ್ರಯೋಗ ಪರಿಣತಮತಿಗಳ್' ಎಂಬ ಕವಿರಾಜಮಾರ್ಗದ ಉಕ್ತಿಯನ್ನು ನೆನಪಿಸಿ, 'ಕಾವ್ಯಪ್ರಯೋಗ' ಎಂದರೆ ಗಮಕವಾಚನ ಇದ್ದರೂ ಇರಬಹುದು ಎಂದರು. ಕನ್ನಡ ಪಾಠ ಹೇಳುವವರಿಗೆ ಗಮಕ ತರಬೇತಿ ಅಗತ್ಯ ಎಂದು ಸೂಚಿಸಿದರು,

ಸಮ್ಮೇಳನದ ಇನ್ನೊಂದು ಮುಖ್ಯಗೋಷ್ಠಿ ವ್ಯಾಖ್ಯಾನ ಸಮೇತವಾದ ಕಾವ್ಯ ವಾಚನದ್ದು. ಇದರ ಅಧ್ಯಕ್ಷರಾಗಿದ್ದ ಶ್ರೀ ಕೆ. ಟಿ. ಪಾಂಡುರಂಗಿಯವರು ಕಾವ್ಯ ವಾಚನದಲ್ಲಿ ವ್ಯಾಖ್ಯಾನದ ಪಾತ್ರವನ್ನು ವಿವರಿಸಿ, ಅದು ಹಿತಮಿತವಾಗಿದ್ದರೆ ಒಳ್ಳೆಯದು ಎಂದು ಸೂಚಿಸಿದರು. ಮತ್ತು, 'ದಾನಾತ್ ಶ್ರೇಯಃ ಅನುಪಾಲನಂ' ಎಂಬ ಪ್ರಾಚೀನ ಸೂಕ್ತಿಯನ್ನು ಸ್ಮರಿಸಿ, ಶ್ರವ್ಯಕಾವ್ಯ ಸಂರಕ್ಷಣೆಯ ವಿಧಾನಗಳಲ್ಲಿ ಗಮಕ ಉತ್ತಮವಾದದ್ದು ಎಂದು ತಿಳಿಸಿಕೊಟ್ಟರು.

ಆಧುನಿಕ ಕಾವ್ಯಗಳ ವಾಚನ ಗೋಷ್ಠಿಗೆ ಕಥನಕಾವ್ಯಗಳನ್ನು ಮಾತ್ರ ಆರಿಸಿ ಕೊಳ್ಳಲಾಗಿದ್ದು ಭಾವಗೀತಗಳನ್ನು ಕೈಬಿಟ್ಟದ್ದು ಉಚಿತ ಎಂದು ತೋರುವಹಾಗಿತ್ತು. ಆದರೆ, ಭಾವಗೀತಗಳನ್ನು ಗೇಯವಿಲ್ಲದೆ ಪರಿಣಾಮಕಾರಿಯಾಗಿ ವಾಚನ ಮಾಡು ವುದೂ ಗಮಕವಾಗುವುದಿಲ್ಲವೇ ಎಂಬುದು ವಿಚಾರಾರ್ಹ. ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಡಾ॥ ಜಿ. ಎಸ್. ಶಿವರುದ್ರಪ್ಪನವರು ಕನ್ನಡ ಕಾವ್ಯಪರಂಪರೆ ಯನ್ನು ಕಾಯ್ದುಕೊಳ್ಳುವಲ್ಲಿ ಕಾವ್ಯವಾಚನದ ಮಹತ್ವದ ಪಾತ್ರವನ್ನು ಒತ್ತಿಹೇಳಿ ದರು. ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಜಿ. ನಾರಾಯಣ ಅವರು ಸಮ್ಮೇಳನ ಕಾರ್ಯಕಲಾಪಗಳ ಸಮೀಕ್ಷೆ ಮಾಡಿ ಪರಿಷತ್ತಿಗೆ ಸರ್ಕಾರದ, ಮಹಾ ಜನರ ಪ್ರೋತ್ಸಾಹವನ್ನು ಕೋರಿದರು.

ಕನ್ನಡ ಓದು ಬರಹ ಬಲ್ಲ ಬುದ್ಧಿಜೀವಿಗಳಲ್ಲಿ, ಶಾಲಾ ಕಾಲೇಜುಗಳ ವಿದ್ಯಾರ್ಥಿ ಗಳಲ್ಲಿ, ಹಲಕೆಲವು ಕನ್ನಡ ಅಧ್ಯಾಪಕರಲ್ಲಿ ಕೂಡ, ಪ್ರಾಚೀನ ಕಾವ್ಯದ ಬಗ್ಗೆ ಅಸಡ್ಡೆ ಬೆಳೆಯುತ್ತಿದೆ; ಇದರಿಂದಾಗಿ ಪಾಂಡಿತ್ಯದೃಷ್ಟಿ ಮಸುಕಾಗುತ್ತಿದೆ. ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಇದು ಅನಾರೋಗ್ಯದ ಲಕ್ಷಣ. ಕನ್ನಡ ಸಾಹಿತ್ಯದ ಒಂದು ಮುಖ್ಯಭಾಗವಾದ ಪ್ರಾಚೀನ ಕಾವ್ಯದ ಪರಂಪರೆಯನ್ನು ಸಂರಕ್ಷಿಸುವಲ್ಲಿ ಕಾವ್ಯವಾಚನದ ಪಾತ್ರ ಹಿರಿದು. ಪ್ರತಿಶತ 60ಕ್ಕೂ ಹೆಚ್ಚು ಅನಕ್ಷರಸ್ಥರಿರುವ ನಮ್ಮ ನಾಡಿನಲ್ಲಿ—ಅದರಲ್ಲಿ ವಿಶೇಷವಾಗಿ ಹಳ್ಳಿಗಾಡಿನ ಸಾಮಾನ್ಯ ಜನರಲ್ಲಿ—ಧಾರ್ಮಿಕ ಆಧ್ಯಾತ್ಮಿಕ ನೈತಿಕ ಮೌಲ್ಯಗಳು ಕುಸಿಯುತ್ತಿರುವ ಈ ದಿನಗಳಲ್ಲಿ—ಆ ಮೌಲ್ಯಗಳನ್ನು ಎತ್ತಿಹಿಡಿಯುವ ಉತ್ತಮ ಪ್ರಾಚೀನ ಕಾವ್ಯಗಳನ್ನು ಜನತೆಗೆ ಮುಟ್ಟಿಸುವ ಪರಿಣಾಮಕಾರಿ ಸಾಧನ ಗಮಕ ಕಲೆ. ಕವಿ–ಸಹೃದಯರ ನಡುವಣ ಸೇತುವೆ ಗಮಕ ಕಲೆ. ನಗರದಲ್ಲಿ ಮೂರು ದಿನಗಳ ಗಮಕ ಸಮ್ಮೇಳನದ ಭಾಷಣ ಗಳಲ್ಲಿ ಈ ಪ್ರಮುಖ ಅಂಶಗಳು ಸುವೇದ್ಯವಾಗುವಂತೆ ಪ್ರಕಟವಾದುವು. ಪ್ರತಿಷ್ಠಾನದ ಧ್ಯೇಯಗಳಲ್ಲಿ ಒಂದಾದ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಪ್ರಕಟನೆ ಕಾವ್ಯಸಂರಕ್ಷಣೆಯ ಒಂದು ಮುಖವಾದರೆ, ಗಮಕಕಲಾ ಪರಿಷತ್ತು ನಡಸುತ್ತಿರುವ ಕಾವ್ಯವಾಚನದ ವಿವಿಧ ಕಾರ್ಯಕ್ರಮಗಳು ಅದರ ಇನ್ನೊಂದು ಮುಖ. ಈ ಎರಡು ಸಂಸ್ಥೆಗಳು ನಮ್ಮ ಸರ್ಕಾರದ ಹಾಗೂ ಮಹಾಜನರ ಎಲ್ಲ ಬಗೆಯ ಪ್ರೋತ್ಸಾಹಕ್ಕೆ ಸರ್ವಥಾ ಅರ್ಹವಾಗಿವೆ.

ಸನ್ಮಾನ

ಗಮಕ ಸಮ್ಮೇಳನದಲ್ಲಿ ಏಳು ಮಂದಿ ಖ್ಯಾತನಾಮರಾದ ಗಮಕ ವಿದ್ವಾಂಸರಿಗೆ ಹಾಗೂ ಗಮಕ ವಿದುಷಿಯರಿಗೆ ಸನ್ಮಾನ ಮಾಡಲಾಯಿತು. ಅವರುಗಳು ಯಾರೆಂದರೆ : ಸಮ್ಮೇಳನಾಧ್ಯಕ್ಷ ಶ್ರೀ ಬಿ. ಎಸ್. ಎಸ್. ಕೌಶಿಕ್, ಶ್ರೀ ಮತ್ತೂರು ಲಕ್ಷ್ಮೀಕೇಶವ ಶಾಸ್ತ್ರೀ, ಶ್ರೀ ಕೆ. ವೆಂಕಟಸುಬ್ಬಯ್ಯ, ಶ್ರೀ ಎಲ್. ಸಿದ್ಧಗಂಗದೇವರು, ಶ್ರೀ ಆರ್. ಶಂಕರನಾರಾಯಣ್, ಶ್ರೀಮತಿ ಅನ್ನಪೂರ್ಣಮ್ಮ ರಘುಪತಿಶಾಸ್ತ್ರೀ, ಶ್ರೀಮತಿ ಜಯಲಕ್ಷ್ಮೀ ಇನಾಂದಾರ್. ಇವರೆಲ್ಲರಿಗೂ ನಮ್ಮ ಶುಭಾಶಯಪೂರ್ವಕ ಅಭಿನಂದನೆಗಳು.

ಅಭಿನಂದನೆ

ಕರ್ನಾಟಕದ ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸರೂ, ಕರ್ನಾಟಕ ವಿಶ್ವವಿದ್ಯಾ-ಲಯದ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರೂ, ಬಲುಮಟ್ಟಿಗೆ ಎಲ್ಲ ಸಂಸ್ಕೃತ ಅಲಂಕಾರ ಶಾಸ್ತ್ರ ಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಕನ್ನಡ ವಿದ್ವಜ್ಜನರ ಹಾಗೂ ಸಹೃದಯರ ಕೃತಜ್ಞತೆಗೆ ಪಾತ್ರರಾದವರೂ, ಸಂಸ್ಕೃತ ವಿದ್ವಾಂಸರಾದರೂ ಕನ್ನಡದ ಬಗೆಗೆ ಸಂಸ್ಕೃತದ ಬಗೆಗೆ ತಳೆದಿರುವಷ್ಟೆ ಅಭಿಮಾನವುಳ್ಳವರೂ ಆದ ಡಾ॥ ಕೆ. ಕೃಷ್ಣಮೂರ್ತಿ ಅವರಿಗೆ ಉತ್ತರ ಪ್ರದೇಶದ ಸಂಸ್ಕೃತ ಅಕಾಡೆಮಿ ವಿಶೇಷ ಪುರಸ್ಕಾರ ನೀಡಿ ಗೌರವಿಸಿದೆ. ವಿದ್ವತ್ಪಕ್ಷಪಾತಿಗಳೆಲ್ಲರೂ ಸಂತೋಷಪಡಬೇಕಾದ ಸಂಗತಿ. ಈ ವಿದ್ವದ್ವರೇಣ್ಯರು ಪ್ರತಿಷ್ಠಾನದ ಮಾನ್ಯ ಸದಸ್ಯರೂ ಆಗಿರುವುದು ನಮ್ಮ ಹೆಚ್ಚಿನ ಸಂತೋಷಕ್ಕೆ ಕಾರಣವಾಗಿದೆ. ಶ್ರೀಯುತರಿಗೆ ನಮ್ಮ ಅಭಿನಂದನೆಗಳನ್ನು ತಿಳಿಸುತ್ತ, ಅವರ ಉಭಯಭಾಷಾ ಸೇವೆ ಇತೋಪ್ಯತಿಶಯವಾಗಿ ನಡೆಯಲಿ ಎಂದು ಹಾರೈಸುತ್ತೇವೆ.

'ಹವ್ಯಕರ ಶೋಭಾನೆಗಳು' ಗ್ರಂಥಕ್ಕೆ ಬಹುಮಾನ

ವಿದ್ವಾನ್ ಟಿ. ಕೇಶವ ಭಟ್ಟರು ರಚಿಸಿರುವ ಮೇಲ್ಕಂಡ ಗ್ರಂಥಕ್ಕೆ 1986ರಲ್ಲಿ ಪ್ರಕಟವಾದ ಜಾನಪದ ಪದ್ಯಪ್ರಕಾರದ ಉತ್ತಮ ಕೃತಿ ಎಂದು ಪರಿಗಣಿಸಿ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬಹುಮಾನ ನೀಡಿದೆ. ಅಲ್ಲದೆ 1987ನೇ ವರ್ಷಕ್ಕೆ 23 ಮಂದಿ ಜಾನಪದ ವಿದ್ವಾಂಸರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರಲ್ಲಿ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಕಳೆದ ನಾಲ್ಕೈದು ದಶಕಗಳಿಂದಲೂ ಸೇವೆ ಸಲ್ಲಿಸುತ್ತಿರುವ ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರೂ ಸೇರಿದ್ದಾರೆ. ಈ ಇಬ್ಬರಿಗೂ ಪ್ರತಿಷ್ಠಾನದ ಪರವಾಗಿ ಅಭಿನಂದನೆಗಳು.

ಆದಿಶಂಕರ—ಕಾಲಗಣನ ಶಾಸ್ತ್ರವು ಬಗೆಹರಿಸಲಾಗದ ಸಮಸ್ಯೆ

ಭಾರತ ಸರ್ಕಾರವು ಈ ವರ್ಷದ ಶಂಕರ ಜಯಂತಿಯನ್ನು ರಾಷ್ಟ್ರೀಯ ಶಂಕರ ಜಯಂತಿ ಮಹೋತ್ಸವವನ್ನಾಗಿ ಆಚರಿಸಲು ಆಯ್ದುಕೊಂಡಿರುವುದು ಸಂತೋಷದಾಯಕ ಹಾಗೂ ಸ್ತುತ್ಯರ್ಹವಾದ ಸಂಗತಿ. ಕಳೆದ ತಿಂಗಳು ಆಚಾರ್ಯರ ಜನ್ಮದಿನವನ್ನು ಆಚರಿಸಿದ ಬಹುತೇಕ ಸ್ಥಳಗಳಲ್ಲಿ ಈ ಸಂದರ್ಭ (ಘಟನೆ) ಬಹುಶಃ ಕ್ರಿ.ಶ. 788ನೆಯ ಇಸವಿಯನ್ನು ಶ್ರೀಮದಾಚಾರ್ಯರು ಅವತರಿಸಿದ ವರ್ಷವೆಂದು ಪರಿಗಣಿಸಿ ಹನ್ನೆರಡನೆಯ ಶತಮಾನೋತ್ಸವವೆಂದೇ ಹೆಸರಿಸಲಾಗಿತ್ತು.

ಶಂಕರ ಭಗವತ್ಪಾದರ ಅವತರಣದ ಕಾಲವು ಭಾರತೀಯ ಕಾಲಗಣನ ಶಾಸ್ತ್ರದಲ್ಲಿ ಇಂದಿಗೂ ಒಂದು ಬಗೆಹರಿಯದ ಸಮಸ್ಯೆಯಾಗಿಯೇ ಉಳಿದಿದೆ. ಶಂಕರರು ಅವತರಿಸಿದ ದಿನವನ್ನು ಕುರಿತು ವಿದ್ವಾಂಸರು ಅನೇಕ ಅಭಿಪ್ರಾಯಗಳನ್ನು ಮಂಡಿಸಿರುತ್ತಾರೆ. ಈ ವಿವಿಧ ದಿನಾಂಕಗಳು ಕ್ರಿ.ಪೂ. ಏಳನೆಯ ಶತಮಾನದ ಉತ್ತರಾರ್ಧದಿಂದ ಹಿಡಿದು ಕ್ರಿ.ಶ. 14ನೆಯ ಶತಮಾನದ ಮಧ್ಯಕಾಲದವರೆಗೆ ವ್ಯಾಪಿಸಿರುತ್ತದೆ.

ಕ್ರಿ.ಶಕದ ಶತಮಾನಗಳ ಕಾಲಕ್ಕೆ ಶಂಕರರ ಜನ್ಮದಿನವನ್ನು ನಿರ್ಧರಿಸಿರುವ ಇತಿಹಾಸಕಾರರು ಹಾಗೂ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲದಿರುವುದು ಗಮನಾರ್ಹ ಸಂಗತಿ. ಮ್ಯಾಕ್ಸ್ ಮುಲ್ಲರ್, ಕೀತ್, ಬಾರ್ತ್, ತೆಯೀಲ್, ನೀಲಕಂಠಶಾಸ್ತ್ರಿ ಮತ್ತು ಎಸ್. ಕೆ. ಅಯ್ಯಂಗಾರ್ ಇವರುಗಳು ಶಂಕರಾಚಾರ್ಯರು ಕ್ರಿ.ಶ. 788ರಲ್ಲಿ ಜನ್ಮತಾಳಿದರೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಕೆ. ಟಿ. ತೆಲಾಂಗ್ ಮತ್ತು ಡಾ॥ ಭಂಡಾರ್ಕರ್ ಅವರು ಈ ಘಟನೆಯ ಕಾಲವನ್ನು ಕ್ರಿ.ಶ. 6ನೆಯ ಶತಮಾನದ ಕಡೆಯ ದಶಕದಲ್ಲಿ ನಿರ್ದೇಶಿಸಿರುತ್ತಾರೆ. ಆದರೆ ತಾರಾನಾಥ, ಫೌಲರ್, ಬರ್ನೆಲ್, ವಿಲಿಯಮ್ಸ್, ರೈಸ್ ಮುಂತಾದ ವಿದ್ವಾಂಸರು ಈ ಘಟನೆ ನಡೆದದ್ದು ಕ್ರಿ.ಶ. 7ನೆಯ ಶತಮಾನದ ಉತ್ತರಾರ್ಧದಲ್ಲಿ ಎಂದು ಕಾಲ ನಿರ್ದೇಶ ಮಾಡುವ ಕಡೆಗೆ ಒಲವನ್ನು ಹೊಂದಿರುತ್ತಾರೆ.

ಆರ್ಥರ್ ಅವಲಾನ್ ಎಂಬವರು ತಮ್ಮ "*Shankara's Anandalahari*" ಎಂಬ ಗ್ರಂಥದ ಪ್ರಸ್ತಾವನೆಯಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದಾರೆ: "ಇನ್ನೂ ನಿರ್ಧರಿಸಬೇಕಾಗಿರುವ ಅನೇಕ ಅಂಶಗಳಲ್ಲಿ ಆದಿಶಂಕರರ ಕಾಲದ ನಿರ್ಧಾರವೂ ಒಂದಾಗಿದೆ."

ಈ ಸನ್ನಿವೇಶದಲ್ಲಿ ಸಾಂಪ್ರದಾಯಿಕ, ಸಾಹಿತ್ಯಿಕ ಹಾಗೂ ಪುರಾತತ್ತ್ವ ಶೋಧಕ ವಿಷಯಗಳ ಕೆಲವು ಸಂಗತಿಗಳನ್ನೂ ಸೂಕ್ತವಾಗಿ ಪರಿಗಣಿಸಬೇಕು.

ಶಂಕರಾಚಾರ್ಯರು ಭರತಖಂಡದ ಪ್ರಮುಖ ಸ್ಥಳಗಳಲ್ಲಿ ಧಾರ್ಮಿಕ ಪೀಠಗಳನ್ನು ಸ್ಥಾಪಿಸಿದರೆಂಬುದನ್ನು ಎಲ್ಲರೂ ಒಪ್ಪಿಕೊಂಡಿರುತ್ತಾರೆ. 1872ರಲ್ಲಿ

ಆಗಿನ ದ್ವಾರಕಾ ಮಠದ ಮುಖ್ಯಸ್ಥರು ಶಂಕರಾಚಾರ್ಯರ ಜನ್ಮದಿನವನ್ನು ಕುರಿತು ಪುರಿ (ಜಗನ್ನಾಥ) ಯ ಗೋವರ್ಧನ ಮಠದ ಪೀಠಾಧೀಶರಲ್ಲೊಬ್ಬರಾದ ಯೋಗೇಶ್ವರಾನಂದ ತೀರ್ಥರು 1986ರಲ್ಲಿ ಬರೆದು ಪ್ರಕಟಿಸಿದ ಗೋವರ್ಧನ ಮಠ ಗ್ರಂಥಮಾಲೆಯ 4ನೆಯ ಪ್ರಕಟನೆಯಾದ "ಯತಿ ದಂಡೈಶ್ವರ್ಯ ವಿಧಾನಂ" ಎಂಬ ಗ್ರಂಥವನ್ನು ಕುರಿತ 'ವಿಮರ್ಶಾ' ಎಂಬ ಪ್ರಬಂಧ ಹಾಗೂ, ಜ್ಯೋತಿರ್ಮಠ ಧರ್ಮ ವಿಭಾಗದ ಪ್ರಕಟನೆಯಾಗಿ 1946ರಲ್ಲಿ ಪ್ರಕಟನೆಗೊಂಡ "ಮ ಠಾ ನು ಶಾ ಸ ನ" ಇವೆರಡೂ ಏಕಕಂಠದಿಂದ ಶಂಕರಾಚಾರ್ಯರ ಅವತಾರವು ಕ್ರಿ. ಪೂ. 509ರಲ್ಲಿ ಆಯಿತೆಂಬುದಾಗಿ ನಿರ್ದೇಶಿಸುತ್ತವೆ.

ಶಂಕರಾಚಾರ್ಯರ ಜನ್ಮಸ್ಥಳವಾದ ಕಾಲಟಿಯಲ್ಲಿರುವ ಶ್ರೀ ಶಂಕರಾಚಾರ್ಯರ ದೇವಾಲಯಕ್ಕೆ ಸೇರಿದಂತೆ ಸ್ಥಾಪಿತವಾಗಿರುವ ಶಾರದಾಂಬಾ ದೇವಾಲಯದ ಗೋಡೆಯೊಂದರ ಮೇಲೆ ಒಂದು ಶಿಲಾಫಲಕದ ಮೇಲೆ ಶೃಂಗೇರೀ ಮಠಾಧೀಶರಾದ ಶ್ರೀ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳವರು ಕ್ರಿ. ಶ. 1910ರಲ್ಲಿ ಲೇಪಿಸಿರುವ ಹದಿನೆಂಟು ಸಂಸ್ಕೃತ ಶ್ಲೋಕಗಳು ಇವೆ. ಈಗ ಈ ಶಾಸನವು ಆ ದೇವಾಲಯದಿಂದ ಕಾಣೆಯಾಗಿದ್ದರೂ, ಈ ಶಾಸನದ ಪಾಠವು, 1966ರಲ್ಲಿ ಶಂಕರ ಸೇವಾ ಸಮಿತಿಯು ಕೇರಳ ಶಾಖೆಗಳ ಪರವಾಗಿ, ದಿವಂಗತ ಪ್ರಾಧ್ಯಾಪಕ ಕೆ. ಆರ್. ವೆಂಕಟರಾಮನ್ ರವರು ಸಂಪಾದಿಸಿ ಪ್ರಕಟಿಸಿದ "ಕಾಲಟಿ" ಎಂಬ ಹೆಸರಿನ ಗ್ರಂಥದಲ್ಲಿ (ಆ ಗ್ರಂಥದ ಸಂಸ್ಕೃತ ವಿಭಾಗದ ಮೊದಲ ಎರಡು ಪುಟಗಳಲ್ಲಿ) ಅಚ್ಚಾಗಿರುತ್ತದೆ. ಆ ಗ್ರಂಥಾವತಾರದ ಮೊದಲ ಪುಟಗಳಲ್ಲಿ ಈಗಿನ ಹಿರಿಯ ಶೃಂಗೇರೀ ಮಠಾಧೀಶರು ಅನುಗ್ರಹಿಸಿರುವ ಆಶೀರ್ವಚನ ಸಂದೇಶವನ್ನೂ ಕಾಣಬಹುದು. ಆ ಶಾಸನದ ಮೊದಲ ಎರಡು ಶ್ಲೋಕಗಳು, ಪರಮಾತ್ಮನಾದ ಸದಾಶಿವನು ಕೇರಳದ ಕಾಲಟಿ ಕ್ಷೇತ್ರದಲ್ಲಿ ಸುಮಾರು ಕ್ರಿ.ಶ. 1910ಕ್ಕೆ 12000 ವರ್ಷಗಳ ಹಿಂದೆ ಎಂದರೆ ಕ್ರಿ.ಪೂ. ಒಂದನೇ ಶತಮಾನದಲ್ಲಿ ಶಂಕರಾಚಾರ್ಯ ಎಂಬ ಅಭಿದಾನದಿಂದ ಅವತರಿಸಿದನೆಂಬ ಸಂಗತಿಯನ್ನು ತಿಳಿಸುತ್ತವೆ. ಇದು ಶೃಂಗೇರೀ ಮಠದ ಪೀಠಾಧಿಪತಿಗಳು ಇತ್ತೀಚಿನವರೆಗೆ ಶಂಕರರು ಕ್ರಿ.ಪೂ. ಒಂದನೆಯ ಶತಮಾನದಲ್ಲಿ ಜನ್ಮವೆತ್ತಿದರೆಂದು ಖಚಿತವಾಗಿ ನಂಬಿದ್ದರೆಂಬ ಅಂಶವನ್ನು ನಿಸ್ಸಂದೇಹವಾಗಿ ವ್ಯಕ್ತಪಡಿಸುತ್ತದೆ.

'ಕಾಶ್ಮೀರದಲ್ಲಿ ತೀರ್ಥಯಾತ್ರೆಗಳು' *(Pilgrimages in Kashmir)*–(17–7–1949ರ 'ದಿ ಹಿಂದೂ' ಪತ್ರಿಕೆ) ಎಂಬ ಲೇಖನವು ಈ ಮುಂದೆ ವಿವರಿಸಿರುವ ವಿಷಯಗಳನ್ನು ಒಳಗೊಂಡಿದೆ :

ಶಂಕರಾಚಾರ್ಯ : "ಈ ಪವಿತ್ರ ದೇವಾಲಯವು ಶ್ರೀನಗರ ಪಟ್ಟಣದಲ್ಲಿ ಸ್ಥಾಪಿತವಾಗಿದೆ. ಶಂಕರಾಚಾರ್ಯ ಎಂಬುದು ಕಣಿವೆಯ ಮೇಲೆ 1000 ಅಡಿಗಳ ಎತ್ತರದಲ್ಲಿ ತಖ್ತ್ ಸುಲೇಮಾನ್ ಬೆಟ್ಟದ ತುದಿಯಲ್ಲಿ ಅದಕ್ಕೆ ಕಿರೀಟವಿಟ್ಟಂತೆ

ಸ್ಥಾಪಿಸಲ್ಪಟ್ಟಿರುವ ಒಂದು ಪ್ರಾಚೀನ ದೇವಾಲಯ. ಈ ದೇವಾಲಯ ಮತ್ತು ಬೆಟ್ಟಕ್ಕೆ ಆ ಹೆಸರುಗಳು ತಿರುಪಾಂಕೂರಿನಿಂದ ಕಾಶ್ಮೀರಕ್ಕೆ ಆಗಮಿಸಿದ-ಏಕತತ್ತ್ವವಾದ (Monism) ವನ್ನು ಪ್ರತಿಷ್ಠಾಪಿಸಿದ ದಕ್ಷಿಣ ಭಾರತದ ಮಹಾಗುರು ಶಂಕರಾಚಾರ್ಯರಿಂದ ಪ್ರಾಪ್ತವಾಗಿರುತ್ತವೆ. ಈ ದೇವಾಲಯವನ್ನು ಕ್ರಿ.ಪೂ. 368 ರಿಂದ 308ರ ವರೆಗೆ ಕಾಶ್ಮೀರದಲ್ಲಿ ರಾಜ್ಯಭಾರ ಮಾಡಿದ ಗೋಪಾದಿತ್ಯನು ನಿರ್ಮಿಸಿದನು. ಮುಂದೆ ಆ ದೇವಾಲಯವು ಉದಾರಹೃದಯಿಯಾದ ಮುಸ್ಲಿಂ ರಾಜ ಜೈನ್-ಉಲ್-ಅಬ್ದಿನ್ ಎಂಬವನಿಂದ ಜೀರ್ಣೋದ್ಧಾರವಾಯಿತು.

ಪಿ. ಗ್ವಾಷಾಲಾಲ್ ಎಂಬವರಿಂದ ರಚಿತವಾದ 'ಎ ಷಾರ್ಟ್ ಹಿಸ್ಟರಿ ಆಫ್ ಕಾಶ್ಮೀರ್' ಎಂಬ ಇತಿಹಾಸ ಗ್ರಂಥದಲ್ಲಿ "ಗೋಪಾದಿತ್ಯನು (ಕಾಶ್ಮೀರದ 70ನೆಯ ರಾಜ) ಶಂಕರಾಚಾರ್ಯ ಎಂಬುದಾಗಿ ಕರೆಯಲ್ಪಡುತ್ತಿರುವ ಶಂಕರರ ದೇವಾಲಯವನ್ನು ಕ್ರಿ.ಪೂ. 367-366ರಲ್ಲಿ ತಖ್ತಿ ಸುಲೇಮಾನ್ (ಬೆಟ್ಟ) ದ ಮೇಲೆ ನಿರ್ಮಿಸಿದನು" ಎಂಬುದಾಗಿ ಹೇಳಿದೆ.

ಜನರಲ್ ಕನ್ನಿಂಗ್ ಹ್ಯಾಂ ಎಂಬವನು ತನ್ನ ಪ್ರಾಚ್ಯವಸ್ತು ಸಮೀಕ್ಷೆಯಲ್ಲಿ ಗಮನಿಸಿರುವ ಪ್ರಕಾರ "ಕಾಶ್ಮೀರದ ಶಂಕರಾಚಾರ್ಯ ಬೆಟ್ಟದ ಮೇಲಿರುವ ಶಂಕರಾ-ಚಾರ್ಯ ದೇವಾಲಯವು ಅಶೋಕನ ಮಗನಾದ ರಾಜಾ ಜಾಲುಕನಿಂದ ನಿರ್ಮಿತವಾಯಿತು."

ಹೀಗೆ ಸ್ಪಷ್ಟವಾಗುವ ಸಂಗತಿಯೇನೆಂದರೆ—ತಖ್ತಿ ಸುಲೇಮಾನ್ ಬೆಟ್ಟದ ಮೇಲೆ, ಕ್ರಿ. ಪೂರ್ವಕಾಲದಲ್ಲಿ, ಶಂಕರಾಚಾರ್ಯರು ಕಾಶ್ಮೀರಕ್ಕೆ ಭೇಟಿಯಿತ್ತುದರ ಗೌರವಾರ್ಥವಾಗಿ, ಕಾಶ್ಮೀರದ ರಾಜನೊಬ್ಬನಿಂದ ಒಂದು ದೇವಾಲಯವು ನಿರ್ಮಿತವಾಯಿತು.

ಡಾ॥ ತ್ರಿವೇದಿಯವರು (ಬೊಂಬಾಯಿಯ) ಭಾರತೀಯ ವಿದ್ಯಾಭವನದ ಪ್ರಕಟನೆಯಾದ "ಇಂಡಿಯನ್ ಕ್ರನಾಲಜಿ" ಎಂಬ ತಮ್ಮ ಗ್ರಂಥದಲ್ಲಿ, ವಿದ್ಯಾಭಾಸ್ಕರ ಉದಯವೀರ ಶಾಸ್ತ್ರಿಗಳು (ಪಂಜಾಬು), 1981ರಲ್ಲಿ ಪ್ರಕಟಗೊಂಡ "ಏಜ್ ಆಫ್ ಶಂಕರ" ಎಂಬ ತಮ್ಮ ಗ್ರಂಥದಲ್ಲಿ, ಮದರಾಸಿನ ವೆಂಕಟರಮಣ ಆಯುರ್ವೇದಿಕ್ ಕಾಲೇಜಿನ ಪ್ರೊಫೆಸರ್ ಕೆ. ಜಿ. ನಟೇಶ ಶಾಸ್ತ್ರಿಗಳು ತಮ್ಮಿಂದ ರಚಿತವಾದ 'ಜಿಜ್ಞಾಸ' ಎಂಬ ಗ್ರಂಥದಲ್ಲಿ, ಮುಂದೆ ಅದ್ವೈತ ಮತಪ್ರೊಂದರ ಪ್ರಮುಖರೆನ್ನಿಸಿಕೊಂಡ (ಬೆಜವಾಡ)ದ ಕೋಟಾ ವೆಂಕಟಾಚಲಂ ಎಂಬವರು ತಮ್ಮ "ನೇಪಾಳ ರಾಜವಂಶಾವಳಿ"ಯಲ್ಲಿ, ಕಲ್ಯಾಣಾನಂದ ಭಾರತೀ (ಗುಂಟೂರು) ಅವರು ತಾವು ರಚಿಸಿರುವ "ಇಪೋಕ್ಸ್ ಆಫ್ ಭಾರತವರ್ಷ" ಎಂಬ ಗ್ರಂಥದಲ್ಲಿ (ಕೆಲವು ಗ್ರಂಥಗಳನ್ನು ಹೆಸರಿಸುವುದಾದಲ್ಲಿ), ದೀರ್ಘಕಾಲದ ಸಂಶೋಧನೆಗಳನ್ನು ನಡಸಿದುದರ ಫಲವಾಗಿ, ಶಂಕರರು ಕ್ರಿ.ಪೂ. 6ನೇ ಶತಮಾನದ ಕಡೆಯ ದಶಕ (508-509) ದಲ್ಲಿ ಅವತಾರ ಮಾಡಿದರು ಎಂಬ ನಿರ್ಧಾರಕ್ಕೆ ಬಂದಿರುತ್ತಾರೆ.

ಬಹುಮಂದಿ ಇತಿಹಾಸಕಾರರು ಶಂಕರಾಚಾರ್ಯರು ಒಂದು ಪಿಥದಲ್ಲಿ ಇಂಡಿಯಾ ದೇಶದಲ್ಲಿ ಬೌದ್ಧಮತವು ಕ್ಷೀಣಿಸಲು ಹೊಣೆಗಾರರು ಎಂಬುದಾಗಿ ಹೇಳುತ್ತಾರೆ. ಹಾಗಾಗಿರುವುದಾದರೆ, ಸಾಮಾನ್ಯ ಪರಿಜ್ಞಾನದ ದೃಷ್ಟಿಯಿಂದ ಹೇಳುವುದಾದರೆ, ಶಂಕರಾಚಾರ್ಯರು, ಇತಿಹಾಸಕಾರರೆಲ್ಲರಿಂದ "ಹಿಂದೂ ಧರ್ಮದ ಸುವರ್ಣ ಯುಗ" ವೆಂದು ಕೀರ್ತಿಸಿಕೊಳ್ಳುವ (ಕ್ರಿ. ಶ. 380–414ರಲ್ಲಿ ಆಳಿದ) ಗುಪ್ತಸಂತತಿಯ ಚಂದ್ರಗುಪ್ತ (ವಿಕ್ರಮಾದಿತ್ಯ) ನ ಕಾಲಕ್ಕೆ ಹಿಂದೆ ಜೀವಿಸಿರಲಾರರು ಎಂಬುದು ನಿರ್ವಿವಾದವಾಗಿ ಖಚಿತ.

ಕ್ರಿ.ಶ. 405 ರಿಂದ 411ರ ವರೆಗೆ ಇಂಡಿಯಾ ದೇಶದಲ್ಲಿದ್ದ ಫಾಹಿಯಾನನು ಗಮನಿಸಿರುವ ಅಂಶವು ಯಾವುದೆಂದರೆ, ಆ ಕಾಲಕ್ಕೆ "ಭೌದ್ಧಧರ್ಮವು ಜನಾನುರಾಗ ವನ್ನು ಹೊಂದಿದ್ದರೂ, ಹಿಂದೂ ಧರ್ಮವು ಪುನಃ ಪ್ರಾಬಲ್ಯವನ್ನು ಪಡೆದುಕೊಂಡಿ ದ್ದಿತು." ಕ್ರಿ.ಶ. 644ರ ವೇಳೆಗೆ ಇಂಡಿಯಾ ದೇಶದ ಅನೇಕ ಭಾಗಗಳಲ್ಲಿ ಸಂಚರಿಸಿದ್ದ ಹುಯೆನ್‌ತ್ಸಾಂಗನು ತನ್ನ ದಿನಚರಿಯಲ್ಲಿ ಹೀಗೆಂದು ಬರೆದಿದ್ದಾನೆ. "ಹರ್ಷ ಚಕ್ರವರ್ತಿ ಪ್ರೋತ್ಸಾಹವು ದೊರೆತಿದ್ದರೂ ಸಂಪ್ರದಾಯ (ಆಚಾರ) ಬದ್ಧ ಹಿಂದೂ ಧರ್ಮವು ತನ್ನ ಪ್ರತಿಸ್ಪರ್ಧಿಯಾದ ಬೌದ್ಧಧರ್ಮವನ್ನು ತನ್ನಲ್ಲಿಯೇ ಲೀನಗೊಳಿಸಿ ಕೊಂಡಿದ್ದಿತು.

ಇಂಡಿಯಾ ದೇಶದಲ್ಲಿ ಭೌದ್ಧ ಧರ್ಮದ ಕ್ಷೀಣದಶೆಯ ವಿಚಾರದಲ್ಲಿ ಶಂಕರಾ ಚಾರ್ಯರ ಪಾತ್ರವೇನಾದರೂ ಇದ್ದ ಪಕ್ಷದಲ್ಲಿ, ಅವರು (ಶಂಕರರು) ಕ್ರಿ.ಶ. 788 ರಲ್ಲಿ, ಹರ್ಷಚಕ್ರವರ್ತಿಯು ಕ್ರಿ.ಶ. 646ರಲ್ಲಿ ಮರಣ ಹೊಂದಿದ ನಂತರ ಎಂದರೆ, ಭಾರತದಲ್ಲಿ ಬೌದ್ಧಧರ್ಮವು ಸಂಪೂರ್ಣವಾಗಿ ನಶಿಸಿಹೋದ ನಂತರ ಸರಿಸುಮಾರು 140 ವರ್ಷಗಳು ಕಳೆದ ನಂತರ ಖಂಡಿತವಾಗಿಯೂ ಜನ್ಮತಾಳಿರಲಾರರು.

[ಆಧಾರ 14–6–1988ರ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿರುವ ಶ್ರೀಗಳಾದ ಕೆ. ಆರ್. ವಿಶ್ವನಾಥನ್ ಮತ್ತು ಕೆ. ವೇದಮೂರ್ತಿ ಎಂಬವರ Adi Shankara—a Chronological Puzzle ಎಂಬ ಲೇಖನ. ಅನುವಾದಕರು : ಶ್ರೀ ಎನ್. ಎಸ್. ರಾಮಸ್ವಾಮಿ ಅಯ್ಯರ್.]

ಪರಿಶಿಷ್ಟ

[೧. ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳು ಶ್ರೀ ಶಂಕರರ "ನಿಜವಾದ ಗ್ರಂಥಗಳ ಅಂತಃಪ್ರಮಾಣಗಳಿಂದ ನಿರ್ಣಯಿಸುವುದು ಸೂಕ್ತವಾಗಿದೆ" ಎಂದು ಅಭಿಪ್ರಾಯ ಪಟ್ಟು ಅದೇ ರೀತಿ ಆಧಾರ ಸಹಿತ "ಶ್ರೀ ಶಂಕರರು ಮತ್ತು ಸುರೇಶ್ವರರು ಕ್ರಿ.ಶ. 650ರ ಒಳಗೆ ಇರಬೇಕೆಂದು ಖಚಿತವಾಗಿದೆ" ಎಂದು ನಿರ್ಣಯಿಸಿದ್ದಾರೆ.

ನೋಡಿ : ಡಾ॥ ಎಸ್. ಶ್ರೀಕಂಠಶಾಸ್ತ್ರೀ. 'ಸಂಶೋಧನ ಲೇಖನಗಳು'. ಮೈಸೂರು ವಿಶ್ವವಿದ್ಯಾನಿಲಯ, 1975 : ಪು. 79–83.) ಮತ್ತು, ಅವರು,— "ತಾರಾನಾಥನು ನಾಲಂದಾ ವಿಶ್ವವಿದ್ಯಾಲಯದಲ್ಲಿಯೂ ಕಾಶಿಯಲ್ಲಿಯೂ ಶಂಕರಾಚಾರ್ಯರಿಗೂ ಧರ್ಮಕೀರ್ತಿಗೂ ವಿವಾದ ನಡೆಯಿತೆಂದು ಹೇಳುವನು. ಈ ಕಾರಣಗಳಿಂದ ಶಂಕರಾಚಾರ್ಯರು ಕ್ರಿ.ಶ. 6ನೆಯ ಶತಾಬ್ದದ ಅಂತ್ಯದಲ್ಲಿಯೂ 7ನೆಯ ಶತಾಬ್ದದ ಪೂರ್ವಭಾಗದಲ್ಲಿಯೂ (ಕ್ರಿ.ಶ. 580–620) ಇದ್ದಂತೆ ನಿರ್ಧರಿಸಬಹುದು". ಎಂದಿದ್ದಾರೆ. ('ಭಾರತೀಯ ಸಂಸ್ಕೃತಿ'. ಮೈ.ವಿ.ವಿ. ನಿಲಯ, 1954, ಪು. 124)

೨. "ಶೃಂಗೇರಿಯ ಪಟ್ಟಾವಳಿ ಪ್ರಕಾರ ಶ್ರೀ ಶಂಕರರು ಕ್ರಿ.ಶ. 100 ರಿಂದ 123ರ ವರೆಗೆ ಶಾಲಿವಾಹನ ಶಕ 22 ರಿಂದ 45ರ ವರೆಗೆ ಇದ್ದರು"—ಅದೇ ಗ್ರಂಥ.

೩. ಸ್ವಾಮಿ ಅಪೂರ್ವಾನಂದರು Acharya Shankara ಎಂಬ ತಮ್ಮ ಗ್ರಂಥದಲ್ಲಿ ಪ್ರಚಲಿತವಾಗಿರುವ ಕ್ರಿ.ಶ. 788ನ್ನು ಶಂಕರ ಜನ್ಮವರ್ಷ ಎಂಬ ಸಂಗತಿಯನ್ನು ಉಲ್ಲೇಖಿಸಿ, ಕ್ರಿ.ಶ. 686 ಎಂಬ ಕೆಲವು ವಿದ್ವಾಂಸರ ನಿರ್ಣಯವನ್ನು ಸ್ವೀಕರಿಸಿದ್ದಾರೆ. (ಮೈ.ವಿ.ವಿ. ನಿಲಯದ ಪ್ರಕಟನೆ, 1983 : ಪು. 6)

ಜನನ ವರ್ಷ ಯಾವುದೇ ಆದರೂ, ಅವರು ಹುಟ್ಟಿದ್ದು ವೈಶಾಖ ಶುದ್ಧ ಪಂಚಮಿ ಎಂಬ ಬಗೆಗೆ ಏಕಾಭಿಪ್ರಾಯವಿರುವಂತೆ ಕಾಣುತ್ತದೆ. —ಎಂ.ವಿ.ಸೀ.]

‘ಛಂದೋಗತಿ’ಯ ವಿಮರ್ಶೆ—ಪ್ರತಿಕ್ರಿಯೆ

—ಸೇಡಿಯಾಪು ಕೃಷ್ಣಭಟ್ಟ

1985ನೆಯ ಇಸವಿಯಲ್ಲಿ ಪ್ರಕಟವಾದ ‘ಛಂದೋಗತಿ’ ಎಂಬ ನನ್ನ ಪುಸ್ತಕಕ್ಕೆ ‘ಲೋಚನ’ದ ಕಳೆದ ವರ್ಷದ ಸಂಚಿಕೆಯೊಂದರಲ್ಲಿ 21 ಪುಟಗಳಷ್ಟು ವಿಸ್ತಾರವುಳ್ಳ ಸುದೀರ್ಘವಾದ ವಿಮರ್ಶ ಲೇಖನವನ್ನು ಬರೆದು ಪ್ರಕಟಿಸಿ ಉಪಕರಿಸಿದ ಮಾನ್ಯ ಮಿತ್ರ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ನನ್ನ ಕೃತಜ್ಞತೆಗೆ ಅರ್ಹರಾಗಿರುತ್ತಾರೆ. ಆದುದರಿಂದ ಅವರಿಗೆ ನನ್ನ ವಂದನೆಗಳನ್ನು ಮೊದಲಾಗಿ ಸಮರ್ಪಿಸಿ, ನನ್ನ ದೃಷ್ಟಿಯಂತೆ, ಅಸಂಗತವಾಗಿ ಕಂಡುಬರುವ ಅವರ ಕೆಲವು ಅಭಿಪ್ರಾಯಗಳ ಕಡೆಗೆ ವಿದ್ವಾಂಸರ ಲಕ್ಷ್ಯವನ್ನು ಎಳೆಯಬಯಸುತ್ತೇನೆ.

ಆಂಗ್ಲಭಾಷೆಯ ‘Rhythm’ ಎಂಬ ಪದಕ್ಕೆ ನಮ್ಮ ದೇಶದ ಶಾಸ್ತ್ರಗ್ರಂಥಗಳಲ್ಲಿ ಪ್ರಯುಕ್ತವಾಗಿರುವ ‘ಲಯ’ ಎಂಬ ಪದವು ಸಮಾನಾರ್ಥಕವೆಂಬ ಭಾವನೆ ಕನ್ನಡದ ಆಧುನಿಕ ವಿದ್ವಾಂಸರಲ್ಲಿ ರೂಢವಾಗುತ್ತಿರುವುದು ಸಮಂಜಸವಲ್ಲವೆಂಬುದೇ ನನ್ನ ಪುಸ್ತಕದ ಮುಖ್ಯಪ್ರತಿಪಾದನೆಗಳಲ್ಲಿ ಮೊತ್ತಮೊದಲನೆಯದಾಗಿದೆ. ನನ್ನ ಪುಸ್ತಕದ ಒಂಬತ್ತು ಪರಿಚ್ಛೇದಗಳೊಳಗೆ ಮೊದಲನೆಯ ಮೂರು ಪರಿಚ್ಛೇದಗಳಲ್ಲಿ ನಮ್ಮ ದೇಶದ ಶಾಸ್ತ್ರಗ್ರಂಥಗಳಲ್ಲಿಯೂ ಶಾಸ್ತ್ರೇತರ ವಾಙ್ಮಯದಲ್ಲಿಯೂ ಲಯವೆಂಬ ಸಂಜ್ಞೆಯನ್ನು ಯಾವ ಯಾವ ಅರ್ಥಗಳಲ್ಲಿ ಬಳಸಲಾಗಿದೆ; ಮತ್ತು Encyclopaedia Britannica, Oxford Dictionary ಇತ್ಯಾದಿ ಪ್ರಮಾಣಭೂತವಾದ ಆಂಗ್ಲ ಗ್ರಂಥಗಳಲ್ಲಿ Rhythm ಎಂಬುದರ ಅರ್ಥವು ಏನೆಂದು ವಿವೃತವಾಗಿದೆ ಎಂಬುದನ್ನು ಆಯಾ ಗ್ರಂಥಭಾಗಗಳ ಉದ್ಧರಣದೊಂದಿಗೆ ನಿರೂಪಿಸಿ Rhythm ಮತ್ತು ಲಯ ಎಂಬಿವು ಸಮಾನಾರ್ಥಕಗಳಲ್ಲ ಎಂಬುದನ್ನು ತೋರಿಸಿರುತ್ತೇನೆ. ಈ ವಿಷಯದಲ್ಲಿ ಪ್ರಸ್ತುತವಿಮರ್ಶಕರು ಯಾವ ಅಭಿಪ್ರಾಯಭೇದವನ್ನೂ ಸೂಚಿಸದಿರುವುದರಿಂದ ಆ ನನ್ನ ಪ್ರತಿಪಾದನೆ ಅವರಿಗೂ ಸಮ್ಮತವೆಂದೇ ತಿಳಿಯಬೇಕಾಗುತ್ತದೆ. ಹೀಗಿದ್ದರೂ ಅವರು ‘ಲಯವೆಂದರೆ Rhythm’ ಎಂದು ಹೇಳಿರುವ ಡಾ॥ ತೀ.ನಂ.ಶ್ರೀ.ಯವರ ಅಭಿಪ್ರಾಯವನ್ನೂ ನಾನು ಪ್ರತಿಪಾದಿಸಿದ ಅಭಿಪ್ರಾಯವನ್ನೂ ಸಮಾನವೆಂದು ಹೇಳಿರುವುದು ಆಶ್ಚರ್ಯಕರವಲ್ಲವೆ? ಆ ಸಂದರ್ಭದ ವಿಮರ್ಶಕರ ಮಾತುಗಳು ಹೀಗಿವೆ:—“ಈ ಎರಡೂ ವಾಕ್ಯಗಳಲ್ಲಿ ಮಾತುಗಳು ಬೇರೆಯಾಗಿದ್ದರೂ ಆಶಯ ಒಂದೇ ಆಗಿದೆ.” ಅನಂತರದ ವಾಕ್ಯದಲ್ಲಿಯೇ “ತೀ.ನಂ.ಶ್ರೀ. ಲಯ = Rhythm ಎಂದೇ ಬಗೆದಿರುವುದು ಸ್ಪಷ್ಟ. ಆದರೆ ಸೇಡಿಯಾಪು ಅವರು ಈ ಸಮೀಕರಣವನ್ನು ಒಪ್ಪುವುದಿಲ್ಲ” ಎಂದು

ಹೇಳುತ್ತಾರೆ! ವಿಮರ್ಶಕರ ಈ ಎರಡು ಅಭಿಪ್ರಾಯಗಳೊಳಗೆ ಪರಸ್ಪರ ಸಾಂಗತ್ಯವಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲವಷ್ಟೆ. ಈ ಅಸಂಗತತ್ವವನ್ನು ಗಮನಿಸುವಾಗ ಪ್ರಸ್ತುತ ವಿಮರ್ಶಕರಿಗೆ ಲಯವೆಂದರೇನೆಂಬ ವಿಷಯದಲ್ಲಿ ಖಚಿತವಾದ ಒಂದು ಅಭಿಪ್ರಾಯವಿಲ್ಲವೋ ಎಂದೆಂಬ ಸಂದೇಹವು ನನ್ನನ್ನು ಕಾಡುತ್ತಿದೆ.

ನನ್ನ ಪುಸ್ತಕದ ಮೂರನೆಯ ಪರಿಚ್ಛೇದದಲ್ಲಿ Encyclopaedia Britannica ದಿಂದ ನಾನು ಉದ್ಧರಿಸಿಕೊಟ್ಟಿರುವ ವಾಕ್ಯಗಳೊಳಗೆ ಈ ಮುಂದಿನ ಅಭಿಪ್ರಾಯವನ್ನು ವಾಚಕರು ಪರಾಮರ್ಶಿಸಬೇಕು—"A certain swing or balance in bodily movement, music, verse or prose... The early critic of prosody, Aristoxenus (C. 320 B.C.) distinguished three elements in rhythm—the speech (lexis), the melody (melos), and the bodily motion (kinesis somalike); but the later tendency had been to seperate these elements, and emphasize more and more the distinction between them. **Precision, however, has hardly yet been reached**; and there are a few subjects on which opinions, even among experts, differ more widely..." ಮತ್ತು ಅದೇ ಪರಿಚ್ಛೇದದ ಆರಂಭದಲ್ಲಿ, ಲಯವೆಂಬುದರ ಕುರಿತು ನಮ್ಮ ಬೇರೆ ಬೇರೆ ಶಾಸ್ತ್ರಗ್ರಂಥಗಳಲ್ಲಿ ಪ್ರೋಕ್ತವಾದ ಲಕ್ಷಣವನ್ನು ಸಂಗ್ರಹಿಸಿ ಬರೆದಿರುವ ಈ ಕೆಳಗಿನ ವಾಕ್ಯಗಳ ಅಭಿಪ್ರಾಯವನ್ನು ಸಹ ಪರಾಮರ್ಶಿಸಬೇಕಾಗಿ ವಿಜ್ಞಾಪಿಸುತ್ತೇನೆ:—'ಲಯವೆಂದರೆ ಸಮಾನ ಕಾಲದ ಕರಾಸ್ಫಾಲನಗಳಿಗೆ ಅಳವಡುವಿಕೆ' ಎಂದು ಅಮರಕೋಶವು ಹೇಳುತ್ತದೆ. ಲಯವೆಂದರೆ 'ಛಂದೋಬಂಧದ ಅಕ್ಷರಪುಂಜಗಳ ಮಾತ್ರಾಕಾಲಾವಕಾಶದ ಸಮತ್ವ' ಎಂದು ನಾಟ್ಯಶಾಸ್ತ್ರವು ತಿಳಿಸುತ್ತದೆ. ಲಯವೆಂದರೆ 'ಪದ್ಯದ ಪಾದಾವಯವಗಳ ಮಾತ್ರಾ ಸಮತ್ವ'ವೆಂದು ಛಂದೋಗ್ರಂಥಗಳಿಂದ ವ್ಯಕ್ತವಾಗುತ್ತದೆ. ಹೀಗೆ ಛಂದೋವಿಷಯಕವಾದ ಲಯಕ್ಕೆ **ಖಚಿತವೂ ಏಕರೂಪವೂ ಆದ ಒಂದು ಅರ್ಥ**ವನ್ನು ನಮ್ಮ ಶಾಸ್ತ್ರಗ್ರಂಥಗಳು ಹೇಳುತ್ತಿರುವಾಗ...' ಇತ್ಯಾದಿ ಈ ಮೇಲಿನ ಎರಡು ಉದ್ಧರಣಗಳ ಅಭಿಪ್ರಾಯಗಳನ್ನು ಯಥಾರ್ಥವಾಗಿ ಗ್ರಹಿಸಿದ ಪಕ್ಷದಲ್ಲಿ Rhythm ಮತ್ತು ಲಯ ಎಂಬ ಎರಡು ಸಂಜ್ಞೆಗಳ ಅರ್ಥವೂ ಒಂದೇ ಎಂದು ಹೇಳುವುದು ಅಸಾಧ್ಯವೆಂಬುದರಲ್ಲಿ ಸಂದೇಹ ಇರಲಾರದು.

ಪ್ರಸ್ತುತ ವಿಮರ್ಶಕರು ಸೂಚಿಸಿರುವಂತೆ "ನಿಯತವಾದ ಕಾಲದ ಅಂತರದಲ್ಲಿ ತಾಳಗಳು ಆವರ್ತನೆಯಾಗುವುದಕ್ಕೆ ಲಯ ಎಂದು ಹೆಸರು" ಎಂದು ತೀ.ನಂ.ಶ್ರೀ. ಯವರು ಹೇಳಿರುತ್ತಾರೆಯಷ್ಟೆ. ನಿಯತವಾದ ಕಾಲದ ಅಂತರದಲ್ಲಿ ತಾಳಗಳು

ಆವರ್ತನೆಯಾಗುವುವೆಂದರೂ ಸಮಾನ ಮಾತ್ರಾಕಾಲದ ಆವರ್ತಗಳಿರುವುದೆಂದರೂ ಅರ್ಥ ಒಂದೇ ಆಗಿದೆ. ಆದುದರಿಂದ ಆವರ್ತಗಳ ಮಾತ್ರಾಸಂಖ್ಯೆಯಲ್ಲಿ ವ್ಯತ್ಯಾಸ ವಿದ್ದರೆ ಮಾತ್ರ ಲಯ ಹಾನಿಯಾಗುತ್ತದೆಂದು ಅವರೂ ಹೇಳಿದಂತಾಯಿತು. ಅವರೂ ಲಯ ಹಾನಿಯಾದ ಸಂದರ್ಭಗಳಿಗೆ 'ಸಮಾಲೋಕನ'ದಲ್ಲಿ ತೀ.ನ.ಶ್ರೀ. ಯವರು ಕೊಟ್ಟಿರುವ ಒಂದೆರಡು ಉದಾಹರಣಗಳನ್ನು ಪರಾಮರ್ಶಿಸುವುದು ಅವಶ್ಯ ವೆಂದು ಕಾಣುತ್ತದೆ. ಉದಾ :—

ಧ್ವನಿಸಿ ಬರ ಲಾಗುತಿಪ ಸುರಗಾನದಂತೆ
ಕನಸಿನಲಿ ಗೈದಿರುವ।ಮೃತಪಾನ।ದಂತೆ

ಇಲ್ಲಿಯದು ಐದು ಮಾತ್ರೆಯ ಗಣದ ನಡೆ. ಮೊದಲನೆಯ ಚರಣ ಸರಾಗ ವಾಗಿ ಓಡುತ್ತದೆ. ಎರಡನೆಯದರಲ್ಲಿ ತಾಳ "ಮೃ" ಎಂಬ ಅಕ್ಷರದ ಮೇಲೆ ಬೀಳ ಬೇಕಷ್ಟೆ. ಅದಕ್ಕೆ ತಕ್ಕಂತೆ "ಮೃ" ಎಂಬುದನ್ನು ಒತ್ತಿ ಉಚ್ಚರಿಸಿದರೆ ಇಲ್ಲಿಯ ಪದಚ್ಛೇದವು "ಗೈದಿರುವ+ಮೃತಪಾನ" ಎಂದಾಗಿ ಕವಿಯ ಆಶಯವೇ ಕೆಡುತ್ತದೆ. "ಅಮೃತಪಾನ" ಎಂಬ ಪದಸ್ವರೂಪ ಹೊಳೆಯಬೇಕಾದರೆ "ವ" ಎಂಬ ಅಕ್ಷರವನ್ನು ಒತ್ತಬೇಕು ; ಆಗ ಲಯ ಕೆಡುತ್ತದೆ. (ಸಮಾಲೋಕನ–ಪು. 188.)

ಈ ಉದಾಹರಣದಲ್ಲಿ ಆವರ್ತಗಳ ಮಾತ್ರಾಸಂಖ್ಯೆಯಲ್ಲಿ ವ್ಯತ್ಯಾಸವೆಲ್ಲಿದೆ ? ಹಾಗಿದ್ದರೂ ಇಲ್ಲಿ "ಲಯ ಕೆಡುತ್ತದೆ"ಯೆಂದು ಅವರು ಹೇಳುತ್ತಾರೆ ! ವಾಸ್ತವಿಕ ವಾಗಿ ಹೇಳುವುದಾದರೆ ಇಲ್ಲಿ ಕೆಟ್ಟುಹೋಗಿರುವುದು ಯತಿ ; ಲಯವಲ್ಲ.

ಲಯ ಹಾನಿಗೆ ಅವರು ಕೊಟ್ಟಿರುವ ಇನ್ನು ಕೆಲವು ಉದಾಹರಣಗಳು ಹೀಗಿವೆ :—

(೧) ವಿಪ್ಲವ ಮೂರ್ತಿಯ ಸಖನಾಗಿಹನೈ
ಕವಿಗರ।ಸುಗಿರಸು।ಗಳ ಋಣವಿಲ್ಲ

(೨) ಅಂಧನೃಪ ನೀಮರು।ಳಿಸಗಿ ನಮ್ಮ । ಬರಿಸಿದೈ
ಅಂದು ತೋರಿದೆ ಪಾರಣಾವತವನು

(೩) ಮೂಡಲು ಬಿಳುಪೇರಲು ಬೆಚ್ಚಿದರು
ಓಡಿದರಡವಿಯೆ।ದೆಯ ಸೇ।ರಿದರು

ಈ ಮೂರು ಸಂದರ್ಭಗಳಲ್ಲಿಯೂ ಅದುದು ಯತಿಭಂಗವೇ ಹೊರತು ಲಯ ಹಾನಿಯಲ್ಲ. ತದನಂತರ ಅವರು ಲಯ ಹಾನಿಗೆ ಕೊಟ್ಟಿರುವ ಸ್ವಂತ ರಚನೆಯ ದೊಂದು ಉದಾಹರಣವು ಹೀಗಿದೆ :—

ನನ್ನಳವು ತಿಳಿದರೂ
ನಿನ್ನ ಮುನಿಸಿರಿದರೂ
ಮೊಂಡಾಟವು ಬಿಡದಲ್ಲ

ಇದಕ್ಕೆ ವಿವರಣೆಯಾಗಿ ಅವರು ಹೇಳುವ ಮಾತುಗಳು ಇವು :—"ಕೊನೆಯ ಚರಣವನ್ನು ಏನು ಮಾಡಿದರೂ ೫ ಮಾತ್ರೆಯ ಗಣದ ಲಯಕ್ಕೆ ಹೊಂದಿಸಲು ಆಗಲಿಲ್ಲ...'ಮೊಂಡಾಟವಣಗದಲ್ಲ' ಎಂದು ಚರಣವನ್ನು ತಿದ್ದಿದ ಮೇಲೆ ಲಯವೂ ಅರ್ಥವೂ ಹೊಂದಿಕೆಯಾದುವು," ಈ ಸಂದರ್ಭದಲ್ಲಿಯೂ ಮೊದಲು ಆದದ್ದು ಯತಿಭಂಗವೇ ಹೊರತು ಲಯಹಾನಿಯಲ್ಲ. ತಿದ್ದಿದ ಮೇಲೆ 'ಮೊಂಡಾಟವಣಗದಲ್ಲ' ಎಂಬ ರೂಪವು ಸಾಧುವಾಗಿ ಪರಿಣಮಿಸಿದುದಕ್ಕೆ "ಸ್ವರಸಂಧ್ಯಾಪ್ತ ಸೌಂದರ್ಯಾತ್ ತದ್ಭೇದೇಪೀಷ್ಯತೇ ಕ್ವಚಿತ್" ಎಂದು ಪ್ರೋಕ್ತವಾಗಿರುವ ಯತಿಲಕ್ಷಣಾನುಗುಣವಾಗಿ ಇಲ್ಲಿ ಯತಿಶುದ್ಧಿ ಬಂದೊದಗಿದುದೇ ಕಾರಣ ಹೊರತು ಲಯವು ತಿದ್ದುವುದಕ್ಕಿಂತ ಮೊದಲಾಗಲಿ ಮತ್ತಾಗಲಿ ಕೆಟ್ಟುಹೋದದ್ದೇ ಇಲ್ಲ. 189ನೆಯ ಪುಟದಲ್ಲಿ "ಮೊಂಡಾಟವಣಗದಲ್ಲ" ಎಂದು ಚರಣವನ್ನು ತಿದ್ದಿದ ಮೇಲೆ "**ಲಯವೂ** ಅರ್ಥವೂ ಹೊಂದಿಕೆಯಾದುವು" ಎಂದು ಹೇಳಿರುವ ಅವರು ಮುಂದೆ 192ನೆಯ ಪುಟದಲ್ಲಿ "ಮೊಂಡಾಟವು ಬಿಡದಲ್ಲ" ಎಂಬಲ್ಲಿ ಕೆಟ್ಟುಹೋದ **ಯತಿ** "ಮೊಂಡಾಟವಣಗದಲ್ಲ" ಎಂಬುದರಲ್ಲಿ "ಹೇಗೆ ಸರಿಹೋಯಿತು ?" ಎಂದೂ ಹೇಳುತ್ತಾರೆ. ಹೀಗೆ ಒಮ್ಮೆ ಲಯವೆಂದುದನ್ನೇ ಇನ್ನೊಮ್ಮೆ ಯತಿಯೆಂದು ಹೇಳಿರುವುದನ್ನು ಪರಿಭಾವಿಸಿದರೆ ಲಯ ಮತ್ತು ಯತಿ ಇವುಗಳೊಳಗಿನ ವ್ಯತ್ಯಾಸ ವಿಷಯದಲ್ಲಿ ಅವರಿಗೆ ಗೊಂದಲ ವಿದ್ದಂತೆ ತೋರುತ್ತದೆ. ಇಲ್ಲಿ ತೀ.ನಂ.ಶ್ರೀ.ಯವರು ಎಡವಿರುವುದಕ್ಕೆ, ಲಯ ವೆಂದರೆ Rhythm ಎಂಬ ಭಾವನೆಗೆ ಅವರು ಬದ್ಧರಾಗಿದ್ದುದೇ ಕಾರಣವಾಗಿದೆ. Rhythm ಎಂಬುದರಲ್ಲಿ ನಮ್ಮ ಶಾಸ್ತ್ರಗಳಲ್ಲಿ ಹೇಳಿರುವ ಲಯವೂ ಯತಿಯೂ ಎರಡೂ ಅಂತರ್ಗತವೇ ಆಗಿವೆ. ಅಲ್ಲಿ ಅವರು ಲಯವೆಂಬ ಸಂಜ್ಞೆಯ ಬದಲಾಗಿ **ಗತಿ** ಎಂಬ ಸಂಜ್ಞೆಯನ್ನು ಪ್ರಯೋಗಿಸುತ್ತಿದ್ದರೆ ಈ ಭಾಗದ ಅವರ ಪ್ರತಿಪಾದನೆ ನಿರ್ದುಷ್ಟವಾಗುತ್ತಿತ್ತು. Rhythm ಎಂಬುದರಲ್ಲಿ ಹೇಗೋ ಹಾಗೆ **ಗತಿ** ಎಂಬುದ-ರಲ್ಲಿ ಲಯವೂ ಯತಿಯೂ ಅಡಕವಾಗುವಂಥವುಗಳಾಗಿವೆ. ಲಯ ಹಾನಿಯಾದರೆ ಛಂದೋಗತಿ ಕೆಡುತ್ತದೆ; ಯತಿಭಂಗವಾದರೆ ಪದಗತಿ ಕೆಡುತ್ತದೆ. 'ಪದ್ಯಗತಿ' ಎಂಬುದರಲ್ಲಿ ಛಂದೋಗತಿ ಮತ್ತು ಪದಗತಿ ಎಂಬ ಎರಡು ಗತಿಗಳೂ ಸಮಾವಿಷ್ಟ ವಾಗಿರುತ್ತವೆ. ಗತಿಯೆಂಬ ಪದವನ್ನು ಕೇವಲವಾಗಿ ಪ್ರಯೋಗಿಸಿದಾಗ ವಿವಕ್ಷಾನು-ಸಾರವಾಗಿ ಆ ಎರಡು ಗತಿಗಳ ಸಮಾವೇಶವೂ ಗಮ್ಯವಾಗಬಹುದು ; ಅವೆರಡ ರೊಳಗೆ ಒಂದೇ ಗತಿಯೂ ಗಮ್ಯವಾಗಬಹುದು. ತಾತ್ಪರ್ಯವೇನೆಂದರೆ, ನಮ್ಮ ಶಾಸ್ತ್ರಗಳಲ್ಲಿ ಪ್ರೋಕ್ತವಾಗಿರುವ **ಗತಿಯೆಂಬ ಸಂಜ್ಞೆ**ಯು Rhythm ಎಂಬುದರ ಸಂಪೂರ್ಣವಾದ ಅರ್ಥವನ್ನು ಕೊಡಬಲ್ಲುದಾಗಿದೆ. ಈ ತಥ್ಯವನ್ನು ನನ್ನ ಪುಸ್ತಕದಲ್ಲಿ ವಿವರವಾಗಿಯೂ ಸ್ಪಷ್ಟವಾಗಿಯೂ ನಿರೂಪಿಸಿರುತ್ತೇನೆ.

ಪ್ರಸ್ತುತ ವಿಮರ್ಶ ಲೇಖನದ 117-118ನೆಯ ಪುಟಗಳಲ್ಲಿ ವಿಮರ್ಶಕರು ಮಾಡಿರುವ ವಿವಿಧ ಟೀಕೆಗಳನ್ನು ಪರಾಮರ್ಶಿಸುವಾಗ 'ಲಯ' ಮತ್ತು 'ಗತಿ'

ಎಂಬ ಸಂಜ್ಞೆಗಳ ಅರ್ಥದ ವಿಷಯದಲ್ಲಿ ಅವರಿಗೆ ಸ್ಪಷ್ಟವಾದ ಕಲ್ಪನೆಯಿದ್ದಂತೆ ಕಂಡು ಬರುವುದಿಲ್ಲ. ಅಲ್ಲಿ ಅವರು ಪ್ರಕಟಿಸಿದ ಅಭಿಪ್ರಾಯಗಳನ್ನು ಬಿಡಿಬಿಡಿಯಾಗಿ ಪರೀಕ್ಷಿಸದೆ ಅವರ ವಿಚಾರಸರಣಿಯಿಂದ ವ್ಯಕ್ತವಾಗುವ ಒಂದು ಮೂಲಭೂತ ದೋಷದ ಕಡೆಗೆ ವಾಚಕರ ಲಕ್ಷ್ಯವನ್ನೆಳೆದರೆ ಸಾಕಾಗುತ್ತದೆಂದು ಭಾವಿಸುತ್ತೇನೆ. ಅದೇನೆಂದರೆ—ಛಂದಸ್ ಮತ್ತು ಪದ್ಯ ಇವೆರಡೂ ಅಭಿನ್ನವೆಂಬ ಭಾವನೆ ಅವರಲ್ಲಿರುವುದು ಕಂಡುಬರುತ್ತದೆ. 'ಛಂದಃ ಪದ್ಯೇ ಚ ವೇದೇ ಚ' ಎಂಬ ಅಮರಕೋಶದ ವಾಕ್ಯದಲ್ಲಿ ಪದ್ಯಕ್ಕೆ ಛಂದಸ್ ಎಂಬ ಹೆಸರು ಸಲ್ಲುತ್ತದೆಯೆಂದು ಹೇಳಿರುವುದಾದರೂ ವೇದಕ್ಕೆ ಛಂದಸ್ ಎಂಬ ಹೆಸರು ಹೇಗೆ ಔಪಚಾರಿಕವೋ (secondary) ಹಾಗೆಯೇ ಪದ್ಯಕ್ಕೂ ಛಂದಸ್ ಎಂಬ ಹೆಸರು ಔಪಚಾರಿಕವಾಗಿ ಬಂದುದಾಗಿದೆ ಹೊರತು ಛಂದಃ ಶಬ್ದದ ಮೂಲಾರ್ಥವು (primary meaning) ವೇದವೆಂದೂ ಅಲ್ಲ; ಪದ್ಯವೆಂದೂ ಅಲ್ಲ. ನನ್ನ ಈ ಮಾತಿಗೆ ಆಧಾರವನ್ನು ವೇದೋಕ್ತಿಗಳಲ್ಲಿಯೇ ಕಾಣಬಹುದು. ಉದಾ:—

ತಸ್ಮಾದ್ಯಜ್ಞಾತ್ಸರ್ವ ಹುತಃ ಋಚಃ ಸಾಮಾನಿ ಜಜ್ಞಿರೇ।
ಛಂದಾಂಸಿ ಜಜ್ಞಿರೇ ತಸ್ಮಾತ್ ಯಜುಸ್ತಸ್ಮಾದಜಾಯತ। (ಪುರುಷಸೂಕ್ತ)

ಇಲ್ಲಿ ಪ್ರಯುಕ್ತವಾದ 'ಛಂದಾಂಸಿ' ಎಂಬುದು ವೇದಗಳು ಎಂಬರ್ಥವನ್ನು ಹೇಳುವುದಾಗಿರದೆ ಋಕ್ ರೂಪವಾದ ವೈದಿಕ ಪದ್ಯಗಳ ಪರಿಮಾಣಗಳನ್ನು ಹೇಳುವ ಸಂಜ್ಞೆಯಾಗಿದೆ. ಮತ್ತು ನಮ್ಮ ಪುರಾತನ ಛಂದೋಮೀಮಾಂಸಕರು 'ಛಂದಸ್' ಎಂಬುದಕ್ಕೆ ಹೇಳಿರುವ ಲಕ್ಷಣೋಕ್ತಿಯಾದರೂ "ಯದಕ್ಷರ ಪರಿಮಾಣಂ ತಚ್ಛಂದಃ" ಎಂದಾಗಿದೆ. ಹೀಗಿರುವಾಗ 'ಛಂದಸ್' ಮತ್ತು 'ಪದ್ಯ' ಎಂಬಿವು ಸಂಪೂರ್ಣವಾಗಿ ಅಭಿನ್ನ ಎಂದು ಭಾವಿಸುವುದು ಸರ್ವಥಾ ಸರಿಯಲ್ಲ. ಪದ್ಯವೆಂಬುದರಲ್ಲಿ ಛಂದಸ್ ಮತ್ತು ಪದಸಮುದಾಯ ಇವೆರಡೂ ಅಡಗಿರುತ್ತವೆ. ಆದರೆ ಛಂದಸ್ ಎಂಬುದರಲ್ಲಿ 'ಪದ'ಗಳು ಅಡಕವಾಗಿರಬೇಕಾಗಿಲ್ಲ. (ಪದವೆಂಬುದು ಸಾರ್ಥಕ ಶಬ್ದಗಳಿಗೆ ಮಾತ್ರ ಅನ್ವಯಿಸುವ ಸಂಜ್ಞೆ; ನಿರರ್ಥಕ ಶಬ್ದಗಳಿಗೆ ಆ ಸಂಜ್ಞೆ ಅನ್ವಯಿಸಲಾರದು. ಛಂದಸ್ ಎಂಬುದು ಶಬ್ದವಿಹೀನವಾಗಿ ಎಂದೂ ಇರಲಾರದಾದರೂ ಸಾರ್ಥಕ ಶಬ್ದಗಳಿಂದ ಅದು ಹೇಗೆ ಪ್ರಕಟವಾಗುತ್ತದೆಯೋ ಹಾಗೆಯೇ ನಿರರ್ಥಕ ಶಬ್ದಗಳಿಂದಲೂ ಅದು ಪ್ರಕಟವಾಗಬಲ್ಲುದು. ಈ ತಥ್ಯವನ್ನು ನನ್ನ ಪುಸ್ತಕದ ಎಂಟನೇ ಪರಿಚ್ಛೇದದಲ್ಲಿ ಕೂಲಂಕಷವಾಗಿ ಪರಾಮರ್ಶಿಸಿ ಸೋದಾಹರಣವಾಗಿ ನಿರೂಪಿಸಿರುತ್ತೇನೆ). ವಸ್ತುಸ್ಥಿತಿ ಹೀಗಿರುವಾಗ "ಅರ್ಥಾನುಸಾರಿಯಾಗಿ ಉಚ್ಚಾರವಾಗುವ ಮಾತ್ರಾಕಾಲ ಖಂಡವೆ 'ಛಂದೋಲಯ' ಎನ್ನಿಸುತ್ತದೆ" ಎಂಬೀ ವಿಮರ್ಶಕರ ಮಾತಿನಲ್ಲಿ ತಥ್ಯವೆಲ್ಲಿದೆ?

ಪದ್ಯದೊಳಗಿನ ಪದಸಮುದಾಯವನ್ನೇ ಅವರು ಛಂದಸ್ಸೆಂದು ಭಾವಿಸಿಕೊಂಡುದು, ಈ ಮೇಲಿನ ಅವರ ಹೇಳಿಕೆಗೆ ಹೇತು. ಮತ್ತು ಮಾತ್ರಾಸಂಖ್ಯೆ

ಸಮಾನವಾಗಿ ಇಲ್ಲದಿರುವ ಬೇರೆಬೇರೆ ಪದಗಳ ಗುಂಫವು ಮಾತ್ರಾಸಮತೆಯೇ ಸ್ವಲಕ್ಷಣವಾಗಿರುವ ಲಯದಿಂದ ಕೂಡಿದುದೆಂದು ಹೇಳುವ ಮೂಲಕ ಲಯಶಬ್ದಾರ್ಥವನ್ನು ವಿಕೃತಿಗೊಳಿಸಿದುದಕ್ಕೂ ಅದುವೇ ಹೇತುವಾಗಿದೆ. ಮತ್ತು ಲಯಬದ್ಧವಾಗಿರುವ ಭಾಮಿನಿ ವಾರ್ಧಕಗಳು ಸಮಗತಿ ಬಂಧಕಗಳೆಂಬುದನ್ನು ತಾವು ಒಪ್ಪುವುದಿಲ್ಲವೆಂದು ಹೇಳುವುದಕ್ಕೂ ಅವರ ಈ ಭಾವನೆಯೇ ಕಾರಣವಾಗಿದೆ. ಸಮಗತಿ ವಿಷಮಗತಿ ಎಂಬಿವು ಛಂದೋಗತಿಗೆ ಅನ್ವಯಿಸುವ ವಿಷಯಗಳಾಗಿವೆ ಹೊರತು ಪದಪರಿಮಾಣಸಮತೆ ಹಾಗೂ ವಿಷಮತೆಗಳಿಗೆ ಸರ್ವಥಾ ಅನ್ವಯಿಸುವಂತಹವುಗಳಲ್ಲ. (ಸಾಮಾನ್ಯವಾಗಿ ಹೇಳುವುದಾದರೆ ಸರ್ವತ್ರ ಪದಪರಿಮಾಣಸಮತೆ ಎಂಬುದು ನಮ್ಮ ದೇಶದ ಭಾಷೆಗಳಲ್ಲಿ ದುರ್ಲಭ. ಉದ್ದೇಶಪೂರ್ವಕವಾಗಿ ಮಾತ್ರಾಸಮತೆಯುಳ್ಳ ಪದಗಳನ್ನೇ ಆರಿಸಿ ಹಾಗೆ ಪದ್ಯರಚನೆ ಮಾಡತೊಡಗಿದರೂ ಅಂತಹ ನಾಲ್ಕಾರು ಪದ್ಯಗಳನ್ನು ನಿರ್ಮಿಸಬಹುದೇ ಹೊರತು ನಿರರ್ಗಳವಾದ ರಚನೆಯನ್ನು ಮಾಡುವುದು ಅಸಾಧ್ಯ. ಈ ವಿಷಯದಲ್ಲಿ "...ಅಂಥ ಪದವಿನ್ಯಾಸಕ್ಕೀತ ಬೇಸರಪಡಿಸುವುದು ಬೇರೊಂದಿಲ್ಲ" (ಸಮಾಲೋಕನ ಪು. 190) ಎಂಬ ತೀ.ನಂ.ಶ್ರೀ.ಯವರ ನ್ಯಾಯವೇ ಆದ ಅಭಿಪ್ರಾಯವನ್ನು ವಿಮರ್ಶಕರು ಗಣನೆಗೆ ತೆಗೆದುಕೊಂಡಂತೆ ತೋರುವುದಿಲ್ಲ.)

ಇನ್ನು ಪದ್ಯದ ಪದಾಂತಗಳಲ್ಲಿ (ಅಥವಾ ವಾಕ್ಯಾಂತಗಳಲ್ಲಿ) ವಿಚ್ಛೇದವಿರುವುದಾದರೆ ಅದು ಅರ್ಥಯತಿ ಎಂಬೊಂದು ಯತಿವಿಶೇಷವೆನಿಸುತ್ತದೆಂದು ಅವರ ಹೇಳಿಕೆ. ವಸ್ತುತಃ ಯತಿಯೆಂಬ ಸಂಜ್ಞೆ ಅನ್ವಯಿಸುವುದು ಪದಗಳಿಗೆ ಹೊರತು ಕೇವಲ ಅರ್ಥಕ್ಕಲ್ಲ. ಪದವೆಂಬುದರಲ್ಲಿ ಅರ್ಥವೂ ಅಡಕವಾಗಿಯೇ ಇರುತ್ತದೆ; ನಿರರ್ಥಕವಾದ ಅಕ್ಷರ ಸಮುದಾಯಕ್ಕೆ ಪದವೆಂಬ ಹೆಸರು ಸಲ್ಲುವುದಿಲ್ಲ.) ಆದುದರಿಂದ ಅರ್ಥಯತಿಯೆಂಬ ಹೆಸರೇ ಅನುಪಯುಕ್ತವಾಗಿದೆ. ಪ್ರಸ್ತುತ ವಿಮರ್ಶಕರು ಯಾವುದನ್ನು ಅರ್ಥಯತಿಯೆಂದು ಕರೆದಿರುವರೋ ಆ ಲಕ್ಷಣವಿಶೇಷಕ್ಕೆ ಪದಯತಿ ಎಂಬ ಹೆಸರು (ವಾಕ್ಯಾಂತಗಳಲ್ಲಿ ವಿಚ್ಛೇದವಿರುವುದಾದರೆ ವಾಕ್ಯಯತಿ ಎಂಬ ಹೆಸರು) ಸಮುಚಿತವಾಗಿದೆ; ಮತ್ತು ನನ್ನ ಪುಸ್ತಕದಲ್ಲಿ ಹಾಗೆಯೇ ನಿರ್ದೇಶಿಸಿರುತ್ತೇನೆ. ವಿಮರ್ಶಕರ ಲಕ್ಷ್ಯವು ಆ ಕಡೆಗೆ ಬೀಳದಿದ್ದುದು ಖೇದಾಸ್ಪದ. ಸಾರಾಂಶವೇನೆಂದರೆ, ಛಂದೋಲಯ ಹಾಗೂ ಅರ್ಥಯತಿ ಎಂಬೆರಡು ನವೀನ ಪರಿಭಾಷೆಗಳೂ ನಿರರ್ಥಕಗಳೆಂಬುದರಲ್ಲಿ ಸಂದೇಹವಿಲ್ಲ. ಅಷ್ಟುಮಾತ್ರವಲ್ಲ, ಈ ಎರಡು ಪಾರಿಭಾಷಿಕ ಸಂಜ್ಞೆಗಳೂ ಲಯ ಮತ್ತು ಯತಿ ಎಂಬ ಸಂಜ್ಞೆಗಳಿಗೆ ಪರಂಪರಾಗತವಾಗಿ ಬಂದಿರುವ ಅರ್ಥವನ್ನು ಕೆಡಿಸುವಂತಹವುಗಳಾಗಿವೆ. ಆದುದರಿಂದ ಅವು ತ್ಯಾಜ್ಯವೇ ಸರಿ. ಒಂದು ಹೊಸ ಪಾರಿಭಾಷಿಕ ಪದವನ್ನು ನಿರ್ಮಿಸುವಾಗ, ಅದು ಆ ಶಾಸ್ತ್ರದಲ್ಲಿ ರೂಢವಾಗಿರುವ ಯಾವುದೊಂದು ಪಾರಿಭಾಷಿಕ ಶಬ್ದದ ಅರ್ಥವನ್ನೂ ಕೆಡಿಸುವಂತಿರಬಾರದೆಂಬುದನ್ನು ನಾವು ಸರ್ವಥಾ ಮರೆಯಬಾರದು.

ಕನ್ನಡ ಪದಗಳಲ್ಲಿ ಆದ್ಯಕ್ಷರಗಳ ಸ್ಫುಟೀಕರಣವಿರುವುದರಿಂದ ಆಂಗ್ಲಭಾಷೆಯಲ್ಲಿ ಹೇಗೋ ಹಾಗೆ ಕನ್ನಡದಲ್ಲಿಯೂ accent ಎಂಬುದು ಉಂಟೆಂದು ತೀ.ನಂ.ಶ್ರೀ. ಮೊದಲಾದ ಕೆಲವರು ಮಹನೀಯರು ಹೇಳಿರುತ್ತಾರೆ. [ತೀ.ನಂ.ಶ್ರೀ.ಯವರ ಈ ಅಭಿಪ್ರಾಯವನ್ನು ಅವಲಂಬಿಸಿದ ಪ್ರಸ್ತುತ ವಿಮರ್ಶಕರು, ತಮ್ಮ ಈ ವಿಚಾರವು ಅಪರಿಪೂರ್ಣವೆಂದು ತೀ.ನಂ.ಶ್ರೀ.ಯವರೇ ಹೇಳಿದುದನ್ನು (ಸಮಾಲೋಕನ–ಪು. 190.) ತಮ್ಮ ವಿಮರ್ಶೆಯಲ್ಲಿ ಉದ್ಧರಿಸುತ್ತಿದ್ದರೆ ಚೆನ್ನಾಗುತ್ತಿತ್ತು.] ಆಂಗ್ಲಭಾಷೆಯ ಆ ಲಕ್ಷಣವಿಶೇಷದಿಂದ ಅದನ್ನು ಪಡೆದ ಅಕ್ಷರವು (syllable) ಗುರುವೆನಿಸಿಕೊಳ್ಳುವಂತೆ ಕನ್ನಡ ಪದಾದಿಗಳಲ್ಲಿ ತಲೆದೋರುವ ಸ್ಫುಟೀಕರಣವು ಆ ಅಕ್ಷರಕ್ಕೆ ಗುರುತ್ವವನ್ನು ತರುವುದಿಲ್ಲವಾದುದರಿಂದ ಅವೆರಡೂ ಸಮಾನವಲ್ಲವೆಂಬ ತಥ್ಯವನ್ನು ನನ್ನ ಪುಸ್ತಕದ 65ನೆಯ ಟಿಪ್ಪಣಿಯಲ್ಲಿ ಸೋದಾಹರಣವಾಗಿ ನಿರೂಪಿಸಿರುತ್ತೇನೆ. ಆ ಕಡೆಗೆ ಪ್ರಸ್ತುತ ವಿಮರ್ಶಕರ ಲಕ್ಷ್ಯವು ಹೋದಂತೆ ಕಾಣುವುದಿಲ್ಲ.

ಸಂಸ್ಕೃತ ಛಂದಃ ಶಾಸ್ತ್ರ ವಿಷಯದಲ್ಲಿ ಅಗಾಧ ಪರಿಶ್ರಮವನ್ನು ಮಾಡಿ ಅಸ್ತ-ಪ್ರಾಯವಾಗಿದ್ದ ಛಂದೋಗ್ರಂಥಗಳನ್ನು ಬೆಳಕಿಗೆ ತಂದು ಪರಮೋಪಕಾರವನ್ನೇ ಮಾಡಿರುವ ಶ್ರೀ ಎಚ್. ಡಿ. ವೇಲಣಕರರು ಪಿಂಗಳನಿಂದ ನಿರ್ಮಿತವಾದ ತ್ರಿಕವಿಧಾನದ ಔಚಿತ್ಯವನ್ನು ಪ್ರತಿಪಾದಿಸುವ ಸಂದರ್ಭದಲ್ಲಿ—"ಮೂರು ಎಂಬ ಸಂಜ್ಞೆಗೆ ಭಾರತೀಯ ತತ್ತ್ವಜ್ಞಾನಾದಿಗಳಲ್ಲಿ (ಉದಾ—ತ್ರಿಗುಣ, ತ್ರಿಮೂರ್ತಿ, ತ್ರಿಕಾಲ, ತ್ರಿಲೋಕ, ತ್ರಿದೋಷ, ತ್ರಿಸಂಧ್ಯಾ, ಇತ್ಯಾದಿ) ಇರುವ ಅಸಾಧಾರಣವಾದ ಸ್ಥಾನವೂ ಪಿಂಗಳನ ತ್ರಿಕವ್ಯವಸ್ಥೆಗೆ ಹೇತುವಾಗಿದ್ದಿತೆನ್ನುತ್ತಾರೆ. ಆದರೆ ಅವರ ಈ ಪ್ರತಿಪಾದನೆಯಿಂದ ತ್ರಿಕವ್ಯವಸ್ಥೆಯನ್ನು ಸಮರ್ಥಿಸುವ ಛಂದಸ್ತತ್ತ್ವವಾವುದೂ ಪ್ರಕಾಶಿತವಾಗಿಲ್ಲ"—ಎಂದು ನಾನು ಹೇಳಿದ ಮಾತಿಗೆ—ವಿಮರ್ಶಕರು "ವೇಲಣಕರರ ಪ್ರತಿಪಾದನೆಯಲ್ಲಿ ಛಂದಸ್ತತ್ತ್ವ ಯಾವುದೂ ಪ್ರಕಾಶಿತವಾಗಿಲ್ಲ" ಎಂದು ನಾನು ಹೇಳಿರುವೆನೆಂಬ ನಿರಾಧಾರವಾದ ಆಕ್ಷೇಪವೆತ್ತಿರುವುದಕ್ಕೆ, ಈ ಮೇಲೆ ಉದ್ಧರಿಸಿದ ನನ್ನ ವಾಕ್ಯಗಳಲ್ಲಿರುವ ಪದಗಳೊಳಗೆ ಅಡಿಗೆರೆ ಹಾಕಿ ನಿರ್ದೇಶಿಸಿರುವ ಮಾತುಗಳ ಕಡೆಗೆ ಸಾಕಷ್ಟು ಲಕ್ಷ್ಯವನ್ನು ಅವರು ಕೊಡದಿದ್ದುದೇ ಕಾರಣವಾಗಿರುತ್ತದೆ. ಆದುದರಿಂದ ಮಾನ್ಯ ವಿಮರ್ಶಕರು ನನ್ನ ಪುಸ್ತಕದ 72ನೆಯ ಟಿಪ್ಪಣಿಯನ್ನು ಇನ್ನೊಮ್ಮೆ ಪರಾಮರ್ಶಿಸಿ ನೋಡಿ ಆಕ್ಷೇಪಾರ್ಹವಾದ ಮಾತು ಯಾವುದೂ ಅಲ್ಲಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾಗಿ ವಿಜ್ಞಾಪಿಸುತ್ತೇನೆ.

ಆದಿಕಾಲದಿಂದಲೂ ಕನ್ನಡ ಪದ್ಯಗಳ ಅನುಲ್ಲಂಘನೀಯವೆನ್ನಬಹುದಾದ ಲಕ್ಷಣವಾಗಿದ್ದ ಪಾದದ್ವಿತೀಯಾಕ್ಷರ ಪ್ರಾಸವೇ ಖಂಡಪ್ರಾಸವೆನಿಸಿಕೊಳ್ಳುತ್ತದೆ ಎಂಬ ನಂಬಿಕೆ ಸಾಮಾನ್ಯವಾಗಿ ರೂಢವಾಗಿದೆ. ಆದರೆ ಪಾದದ್ವಿತೀಯಾಕ್ಷರ ಪ್ರಾಸವೆಂದರೂ ಖಂಡಪ್ರಾಸವೆಂದರೂ ಅರ್ಥವೊಂದೇ ಎಂಬ ಭಾವನೆ ಸರಿಯಲ್ಲವೆಂಬ ಮತ್ತು ಪೂರ್ವಪಾದಾಂತ ಯತಿಭಂಗವಿರುವಲ್ಲಿ ಮಾತ್ರ ಉತ್ತರ ಪಾದಾದಿಯ ದ್ವಿತೀಯಾಕ್ಷರ

ಪ್ರಾಸವು ಖಂಡಪ್ರಾಸವೆಂಬ ಹೆಸರಿಗೆ ಅರ್ಹವಾಗಿದೆಯೆಂಬ ನನ್ನ ಪ್ರತಿಪಾದನೆಯನ್ನು ಮಾನ್ಯ ವಿಮರ್ಶಕರು ಪ್ರಶ್ನಿಸಿ ಹೀಗೆ ಹೇಳುತ್ತಾರೆ—"ಉತ್ತರಪಾದದ ದ್ವಿತೀಯಾಕ್ಷರ ಪ್ರಾಸವನ್ನು ನಿರ್ಧರಿಸಿರುವುದು ಪೂರ್ವಪಾದದ ದ್ವಿತೀಯಾಕ್ಷರ ತಾನೆ? ಎರಡೂ ಪಾದಗಳ ದ್ವಿತೀಯಾಕ್ಷರಗಳು ಸಮಾನಾಕ್ಷರಗಳಾಗಿರದಿದ್ದರೆ 'ಪ್ರಾಸ' ವಾದರೂ ಹೇಗೆ ಘಟಿಸುತ್ತದೆ? ಖಂಡಪ್ರಾಸಕ್ಕೆ ಪೂರ್ವೋತ್ತರ ಪಾದಗಳೆರಡೂ ಅಗತ್ಯವಾದ್ದರಿಂದ 'ಖಂಡಪ್ರಾಸ'ವನ್ನು 'ದ್ವಿತೀಯಾಕ್ಷರಪ್ರಾಸ' ಇಲ್ಲವೆ 'ಆದಿಪ್ರಾಸ' ಎನ್ನಲು ಪ್ರತ್ಯವಾಯ ಯಾವುದೂ ಇಲ್ಲ ಎಂದು ನನಗೆ ತೋರುತ್ತದೆ." ಪದವನ್ನು ಮಧ್ಯವಲ್ಲಿ ಖಂಡಿಸುವ ಕಾರಣದಿಂದಲೇ ಖಂಡಪ್ರಾಸವೆಂಬ ಹೆಸರು ಹುಟ್ಟಿತೆಂಬ ವಿಷಯುವಲ್ಲಿ ನನಗೂ ಮಾನ್ಯ ವಿಮರ್ಶಕರಿಗೂ ಅಭಿಪ್ರಾಯಭೇದವಿರುವಂತಿಲ್ಲ. (ನೋಡಿ—ಕ ವಿ ರಾ ಜ ಮಾ ರ್ಗ – ಸಂ.: ಎಂ. ವಿ. ಸೀತಾರಾಮಯ್ಯ. ಟಿಪ್ಪಣಿ. ಪು. 151). ಆದಕಾರಣ ಯಾವ ಪ್ರಾಸವು ಪದಖಂಡನಪೂರ್ವಕವಾಗಿ ಉದ್ಭವಿಸುತ್ತದೋ ಅದು ಮಾತ್ರ ಖಂಡಪ್ರಾಸವೆಂಬ ಹೆಸರಿಗೆ ಯೋಗ್ಯವೆಂದಾಗುತ್ತದೆ. ಪೂರ್ವಪಾದಾದಿಯ ದ್ವಿತೀಯಾಕ್ಷರವು ಉತ್ತರಪಾದಾದಿಯ ದ್ವಿತೀಯಾಕ್ಷರದ ಧ್ವನಿಗೆ ಮಾತ್ರ ಕಾರಣವಾಗುತ್ತದೆ ಹೊರತು ಪೂರ್ವಪಾದಾಂತ ಯತಿಭಂಗಕ್ಕೆ ಕಾರಣವಾಗುವುದಿಲ್ಲವಷ್ಟೆ. ಆದುದರಿಂದ, **ಪದವಿಭಾಜಕವಾದ ಖಂಡಪ್ರಾಸತ್ವಕ್ಕೆ** ಪೂರ್ವಪದಾದಿಯ ಪ್ರಾಸವು ಹೇಗೆ ಕಾರಣವಾಗುವುದೋ ನನಗರಿಯದು.

ಪಾದದ್ವಿತೀಯಾಕ್ಷರಪ್ರಾಸಗಳೆಲ್ಲವನ್ನೂ ಖಂಡಪ್ರಾಸಗಳೆಂದು ಹೇಳತೊಡಗಿದರೆ, ಪದ್ಯದ ನಾಲ್ಕು ಪಾದಗಳೊಳಗೆ ಯಾವುದೊಂದರಲ್ಲಿಯೂ ಪದಖಂಡನಪೂರ್ವಕವಾದ ಪ್ರಾಸವಿಲ್ಲದಿರುವ ಸಂದರ್ಭದಲ್ಲಿ ಆ ಪದ್ಯದ ಪ್ರಾಸಗಳನ್ನೂ ಖಂಡಪ್ರಾಸಗಳೆಂದು ಹೇಳುವ ಅನರ್ಥಕ ಪ್ರಸಂಗವೊದಗುತ್ತದೆ. ಉದಾ:—

ಕೆಲವಂ ಬಲ್ಲವರಿಂದೆ ಕಲ್ತು ಕೆಲವಂ ಗ್ರಂಥಗಳಿಂದೋದುತಂ
ಕೆಲವಂ ಮಾಳ್ಪವರಿಂದೆ ಕಂಡು ಕೆಲವಂ ಸ್ವಜ್ಞಾನದಿಂ ನೋಡುತಂ
ಕೆಲವಂ ಸಜ್ಜನಸಂಗದಿಂದರಿಯುತಂ ಸರ್ವಜ್ಞನಪ್ಪಂ ನರಂ
ಪಲವುಂ ಪಳ್ಳ ಸಮುದ್ರಮೈ ಹರಹರಾ ಶ್ರೀಚೆನ್ನಸೋಮೇಶ್ವರಾ

ಇಂತಹ ಪದ್ಯಗಳಲ್ಲಿ ಕಾಣಿಸಿಕೊಳ್ಳುವ ಪಾದದ್ವಿತೀಯಾಕ್ಷರ ಪ್ರಾಸಗಳನ್ನು ಖಂಡಪ್ರಾಸಗಳನ್ನು ಹೇಳುವುದರಲ್ಲಿ ಔಚಿತ್ಯಲೇಶವಾದರೂ ಇದೆಯೆ? ಹಾಗೆ ಹೇಳಿದರೆ ಖಂಡಪ್ರಾಸವೆಂಬ ಶಬ್ದಕ್ಕೆ ಅರ್ಥವೇ ಇಲ್ಲವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ.

ವಸ್ತುಸ್ಥಿತಿಯೇನೆಂದರೆ, ಕವಿರಾಜಮಾರ್ಗದಲ್ಲಿ ಖಂಡಪ್ರಾಸವೆಂಬ ಸಂಜ್ಞೆ ಬಂದಿರುವುದು ಪ್ರಾಸವಿಚಾರ ಪ್ರಕರಣದಲ್ಲಲ್ಲವೆಂಬುದನ್ನಾಗಲಿ, ಅದು ಯತಿವಿಚಾರ ಪ್ರಕರಣಮಧ್ಯದಲ್ಲಿ ಬಂದುದೆಂಬುದನ್ನಾಗಲಿ, ಕೇವಲ ದ್ವಿತೀಯಾಕ್ಷರ ಪ್ರಾಸವನ್ನು ಹೆಸರಿಸುವ ಸಂದರ್ಭಗಳಲ್ಲೆಲ್ಲ ಮಾರ್ಗಕಾರನು 'ಖಂಡ' ಎಂಬ ಪೂರ್ವಪದವಿಲ್ಲದೆ

'ಪ್ರಾಸ' ಎಂದಿಷ್ಟೇ ಹೇಳಿರುವನೆಂಬುದನ್ನಾಗಲಿ (ಉದಾ :—"ನುತಶಬ್ದಾಳಂಕಾರ-ದೊಳತಿಶಯಮದು ಕನ್ನಡಕ್ಕೆ ಸತತಂ ಪ್ರಾಸಂ", ಪ್ರಾಸಾನುಪ್ರಾಸಾಂತ್ಯಪ್ರಾಸಂ-ಗಳ್ ಮೂರುಮತಿಶಯಂಗಳ್") ಗಣನೆಗೆ ತೆಗೆದುಕೊಳ್ಳದೆ ಈ ಶತಮಾನದ ಪೂರ್ವ ಭಾಗದಲ್ಲಿ ವಿದ್ವಾಂಸರನೇಕರು ಖಂಡಪ್ರಾಸವೆಂಬ ಮಾತು ಬಂದಿರುವ ಪದ್ಯದ "ನಿಜಾಸಿ ಖಂಡಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್"—ಎಂಬಿಷ್ಟೇ ಮಾತನ್ನು ಪ್ರತ್ಯೇಕಿಸಿಕೊಂಡು ತಾತ್ಪರ್ಯವನ್ನು ಗ್ರಹಿಸುವ ಪ್ರಯತ್ನವನ್ನು ಮಾಡಿದ ಫಲವಾಗಿ ಪಾದದ್ವಿತೀಯಾಕ್ಷರ ಪ್ರಾಸರಚನೆಯು ಸುಕರವಾಗುವ ಉದ್ದೇಶ ದಿಂದ ಪೂರ್ವಕವಿಗಳು ಪಾದಾಂತಗಳಲ್ಲಿ ಯತಿಭಂಗವನ್ನು ಮಾಡುವ ರೂಢಿಯನ್ನು ಮಾಡಿಕೊಂಡರು ಎಂಬ ಅಭಿಪ್ರಾಯವು ಹಬ್ಬಿದುದರಿಂದ ಖಂಡಪ್ರಾಸವೆಂದರೆ ಪಾದ ದ್ವಿತೀಯಾಕ್ಷರ ಪ್ರಾಸ ಎಂಬ ಭಾವನೆ ಎಲ್ಲರಲ್ಲಿಯೂ ನೆಲೆಗೊಳ್ಳುವಂತಾಯಿತು. ಆ ಭಾವನೆ ಎಷ್ಟರಮಟ್ಟಿಗೆ ರೂಢಮೂಲವಾಗಿದೆಯೆಂದರೆ—ಖಂಡಪ್ರಾಸವೆಂಬ ಪದ ಪ್ರಯುಕ್ತವಾಗಿರುವ ಕವಿರಾಜಮಾರ್ಗದ ಆ ಪದ್ಯವನ್ನು ನಾನು "ಅತ್ಯಂತ ಸಮರ್ಥ ವಾಗಿ" ವ್ಯಾಖ್ಯಾನಿಸಿರುವೆನೆಂದು ಮಾನ್ಯ ವಿಮರ್ಶಕರು ಒಪ್ಪಿಕೊಂಡಿರುವರಾದರೂ ಅವರ ಭಾವನೆಯಿಂದಲೂ ಸಂಪೂರ್ಣವಾಗಿ ತೊಲಗಿರುವುದಿಲ್ಲವೆಂಬುದಕ್ಕೆ ಅವರು ಮಾಡಿರುವ ಈ ಮೇಲಿನ ಪ್ರತಿಪಾದನೆಯು ಸಾಕ್ಷ್ಯವಾಗಿದೆ.

ಪ್ರಾಸವೆಂಬುದು ಶಬ್ದಾಲಂಕಾರವೇನೋ ನಿಜ. ಆದರೆ ಕನ್ನಡದಲ್ಲಿ ರೂಢ ವಾಗಿದ್ದ ಪಾದದ್ವಿತೀಯಾಕ್ಷರ ಪ್ರಾಸವು ಕೇವಲ ಶಬ್ದಾಲಂಕಾರವಾಗಿ ಉಳಿಯದೆ ಛಂದಸ್ಸಿನ ಕ್ಷೇತ್ರವನ್ನು ಈಷತ್ ಪ್ರವೇಶಿಸಿ ಪಾದಾದಿಗಳ ಛಂದೋರೂಪವನ್ನು ಒಂದಿಷ್ಟು ನಿಯಂತ್ರಿಸುವಂತಹದಾಗಿದೆ—ಎಂದು ನಾನು ಮಾಡಿದ ಪ್ರತಿಪಾದನೆ ಯನ್ನು ಮಾನ್ಯ ವಿಮರ್ಶಕರು ಆಕ್ಷೇಪಿಸಿ ಪಾದಾದಿಯ ಛಂದೋರೂಪವೇ ಪ್ರಾಸ ವನ್ನು ನಿಯಂತ್ರಿಸುವುದೆಂದು ಹೇಳುತ್ತಾರೆ; ಮತ್ತು "ಕನ್ನಡ ಕಾವ್ಯಗಳಲ್ಲಿ ಬಳಕೆ ಯಾಗಿರುವ ಯಾವುದೇ ಛಂದೋಬಂಧದ ಪಾದಾದಿಯ ಗಣದ ಛಂದೋವಿನ್ಯಾಸ (ಗುರುಲಘುಸ್ಥಾನಗಳು) ಪೂರ್ವನಿಶ್ಚಿತ" ಎಂದೂ ಹೇಳುತ್ತಾರೆ. ಅವರ ಈ ಮಾತು ಗಳು ಗುರುಲಘುಸ್ಥಿರವಾದ ವೃತ್ತಗಳಿಗೆ ಮಾತ್ರ ಅನ್ವಯಿಸಬಲ್ಲವು; ಮಾತ್ರಾಬಂಧ ಗಳಿಗೆ ಅನ್ವಯಿಸಲಾರವು. ಆದಿಪ್ರಾಸರಹಿತವಾಗಿ ರಚಿತವಾದ ಪದ್ಯರಾಶಿಯಲ್ಲಿ ನನ್ನ ಮಾತಿಗೆ ಉದಾಹರಣಗಳು ಧಾರಾಳವಾಗಿ ದೊರೆಯುತ್ತವೆ. ಈ ಶತಮಾನದ ಕನ್ನಡ ಪದ್ಯಗಳಲ್ಲಿ ಮಾತ್ರವಲ್ಲ, ಪುರಾತನ ಪದ್ಯಗಳಲ್ಲಿಯೂ ಇದಕ್ಕೆ ಉದಾಹರಣಗಳು ದೊರೆಯುತ್ತದೆ. ಉದಾ :—

– ∪ ∪
ಎಯ್ದುವುದುಂ ತತ್ಪುರದುಪವನಂಗ
∪∪∪∪
ಳವಿರಳ ಮಲಯಾನಿಲ ಕಂಪಿತಂಗ....

(ಪಂಪಭಾರತ)

ಕವಿಗೆ ಇಲ್ಲಿ ಆದಿಪ್ರಾಸವನ್ನಿಡುವ ಬಯಕೆಯಿರುತ್ತಿದ್ದರೆ ಇಲ್ಲಿ ಉದಾಹರಿಸಿರುವ ಪೂರ್ವೋತ್ತರ ಪಾದಗಳ ಆದಿಯ ಛಂದೋವಿನ್ಯಾಸವು ಬೇರೆ ಬೇರಾಗುತ್ತಿತ್ತೆ? ಮಾನ್ಯ ವಿಮರ್ಶಕರು ಪರಿಭಾವಿಸಲಿ. ಆದುದರಿಂದ ಪ್ರಾಸವೇ ಪಾದಾದಿಯ ಛಂದೋವಿನ್ಯಾಸವನ್ನು ನಿಯಂತ್ರಿಸುವಂತಹದಾಗಿದೆ ಎಂಬ ನನ್ನ ಮಾತಿಗೆ ಚ್ಯುತಿಯೆಲ್ಲಿ? ಆದಿಪ್ರಾಸವನ್ನು ದೂರೀಕರಿಸಿದ ಈ ಶತಮಾನದ ರಚನೆಗಳಲ್ಲಿಂತೂ ಪೂರ್ವೋತ್ತರ ಪಾದಗಳ ಆದಿಯ ಛಂದೋವಿನ್ಯಾಸಗಳ ವ್ಯತ್ಯಾಸವು ಬೇಕುಬೇಕಾದಲ್ಲಿ ದೃಷ್ಟಿಗೋಚರವಾಗುವಂತಹದಾಗಿದೆ. ಪ್ರಖ್ಯಾತರೇ ಆದ ಕವಿಗಳ ರಚನೆಗಳಿಂದ ಒಂದೆರಡು ಉದಾಹರಣಗಳನ್ನು ಇಲ್ಲಿ ಕೊಡುತ್ತೇನೆ.

– ∪
(೧) ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ
∪∪∪
ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ

(ಗೋವಿಂದ ಪೈ)

– – ∪
(೨) ಶೃಂಗಾರವಲ್ಲರಿಯೆ ಲತೆಯೊಡನೆ ಬಳುಕಿ ನೀಂ
ನೃತ್ಯಲಾಸ್ಯದಿನಾರನೊಲಿಸುತಿರುವೆ

– – ∪
ಮಾಧುರ್ಯಮಂಜೂಷೆ ಮಧುರತರ ಮೌನದಿಂ
ದಾರ ಚರಿತೆಗಳ ಶ್ರುತಿಗೊರೆಯುತಿರುವೆ

– ∪ –
ಮುಗ್ಧಮೋಹನವದನೆ ಮುಕುರದೊಳ್ ನೋಡಿ ನೀ–
ನಾರ ನೆನೆದಿಂತು ನಸುನಗುತಲಿರುವೆ

∪ ∪ – ∪
ಪ್ರಣಯ ಪ್ರರೋಹೆ ನೀಂ ಪ್ರಿಯತರಾಕೃತಿಯಿಂದೆ
ರುಷೆಯನಿಂತಾರೊಳಭಿನಯಿಸುತಿರುವೆ

(ಡಿ.ವಿ.ಜಿ.)

ಇಲ್ಲಿ ಉದಾಹರಿಸಿದ ಸಂದರ್ಭಗಳಲ್ಲಿ ಪ್ರಾಸಾಪೇಕ್ಷೆಯಿಲ್ಲದಿರುವುದರಿಂದಲೇ ಪಾದಾದಿಯ ಛಂದೋವಿನ್ಯಾಸಗಳು ಭಿನ್ನರೂಪಗಳನ್ನು ತಳೆದುವೆಂಬುದರಲ್ಲಿ ಸಂದೇಹವುಂಟೆ ?

ಮಾನ್ಯ ವಿಮರ್ಶಕರು ಎತ್ತಿರುವ ಆಕ್ಷೇಪಗಳಲ್ಲಿ ಕೆಲವಕ್ಕೆ ಸಮಾಧಾನಕೊಡುವ ಪ್ರಯತ್ನವನ್ನು ಇಷ್ಟರವರೆಗೆ ಮಾಡಿದ್ದಾಯಿತು. ಅವರು ಎತ್ತಿದ ಆಕ್ಷೇಪಗಳು ಇವಿಷ್ಟೇ ಅಲ್ಲ; ಇನ್ನೂ ಕೆಲವು ಇವೆ. ಅವುಗಳನ್ನು ನಿರಾಕರಿಸುವ ಪ್ರಯತ್ನವನ್ನು ನಾನಿಲ್ಲಿ ಮಾಡದಿರುವ ಕಾರಣ ಆ ಆಕ್ಷೇಪಗಳನ್ನು ನಾನು ಒಪ್ಪಿಕೊಂಡಿರುವೆನೆಂದು

ಯಾರೂ ಭಾವಿಸಬಾರದು. ಅವರು ಎತ್ತಿರುವ ಆಕ್ಷೇಪಗಳಲ್ಲಿ ಮುಖ್ಯವಾದುವುಗಳನ್ನು ಮಾತ್ರ ಇಲ್ಲಿ ಆರಿಸಿಕೊಂಡು ಉಳಿದವುಗಳು ಅಮುಖ್ಯವೆಂದು ಭಾವಿಸಿ ಅವುಗಳನ್ನು ಕಡೆಗಣಿಸಿದ್ದೇನೆ.*

---

* ಶ್ರೀಮಾನ್ ಸೀತಾರಾಮಯ್ಯನವರು ಅತ್ಯಂತ ಗೌರವಾನ್ವಿತರೂ ಸಾತ್ವಿಕರೂ ಆದ ನನ್ನ ವಿದ್ವನ್ಮಿತ್ರರು. ನನ್ನ ಪುಸ್ತಕವನ್ನು ಆದರಪೂರ್ವಕವಾಗಿ ವಿಮರ್ಶಿಸಿ ಉಪಕರಿಸಿದ ಅವರ ಅಭಿಪ್ರಾಯಗಳಿಗೆ ಸಮಾಧಾನ ಹೇಳುವ ಪ್ರಸಂಗವು ನನಗೆ ಬಂದೊದಗಿರುವುದು ಒಂದು ಸಂತೋಷದ ವಿಷಯವೇನೂ ಅಲ್ಲ; ಆದರೆ ಶಾಸ್ತ್ರ ತತ್ವವಿಚಾರಗಳಲ್ಲಿ ಮಿತ್ರತ್ವ ವ್ಯಕ್ತಿಮಹತ್ವಾದಿಗಳ ಮೋಹಗಳು ಗಣನೀಯವಲ್ಲವೆಂಬ ಅಭಿಪ್ರಾಯವುಳ್ಳವನು ನಾನಾಗಿರುವುದರಿಂದ ಅವಾವುಗಳನ್ನೂ ಲೆಕ್ಕಿಸದೆ ನಿರ್ವಿಕಾರಬುದ್ಧಿಯಿಂದ ನನ್ನ ಮಿತ್ರರ ಆಕ್ಷೇಪಗಳಿಗೆ ಸಮಾಧಾನಗಳನ್ನು ಹೇಳುವ ಪ್ರಯತ್ನ ಮಾಡಿದ್ದೇನೆ. ಮಾನ್ಯ ವಿಮರ್ಶಕರು ಮತ್ತು 'ಕರ್ನಾಟಕ ಲೋಚನ'ದ ವಾಚಕರು ಸಹ ಈ ಬಗೆಯಾಗಿಯೇ ನನ್ನ ಮಾತುಗಳನ್ನು ಅವಲೋಕಿಸಬೇಕೆಂದು ಪ್ರಾರ್ಥಿಸುತ್ತೇನೆ.

[ದೃಷ್ಟಿಹೀನನಾಗಿ ಪರಿಣಮಿಸಿರುವ ನನ್ನೀ ಮೇಲಿನ ಮಾತುಗಳನ್ನು ಲಿಖಿತರೂಪಕ್ಕೆ ತಂದವರು—ಮಂಗಳೂರು ಸರಕಾರಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರೂ, ಉಡುಪಿಯಲ್ಲಿ ನಿರ್ಮಿತವಾಗುತ್ತಿರುವ ತುಳು ನಿಘಂಟುವಿನ ಸಹಾಯಕ ಸಂಪಾದಕರೂ ಆಗಿರುವ ನನ್ನ ಪ್ರಿಯ ಮಿತ್ರ ಶ್ರೀ ಪಾದೇಕಲ್ಲು ವಿಷ್ಣುಭಟ್ಟರು. ಇವರು ಆಗಾಗ ನನಗೆ ಹೀಗೆ ಮಾಡುತ್ತಿರುವ ಪರೋಪಕಾರಕ್ಕೆ ನಾನೆಷ್ಟು ಕೃತಜ್ಞನಾಗಿದ್ದರೂ ಕಡಮೆ. ಇವರ ಮೇಲೆ ಭಗವದನುಗ್ರಹ ಸದಾ ಇರಲಿ ಎಂಬುದು ನನ್ನ ಹೃದಯದ ಹರಕೆ. —ಲೇಖಕ]

ಪ್ರತಿಷ್ಠಾನ ವಾರ್ತೆ

‘ವಿಜಯನಗರ ಸಾಮ್ರಾಜ್ಯ ಪೂರ್ವೇತಿಹಾಸ’ ಮತ್ತು ‘ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ’ ಗ್ರಂಥಗಳ ಬಿಡುಗಡೆ

ಏಪ್ರಿಲ್ 7, 1988 ಗುರುವಾರ ಸಂಜೆ ಬೆಂಗಳೂರು ಸೆಂಟ್ರಲ್ ಕಾಲೇಜು ಕಟ್ಟಡದ ಸೆನೆಟ್ ಸಭಾಂಗಣದಲ್ಲಿ ಗ್ರಂಥಗಳ ಬಿಡುಗಡೆ ಕಾರ್ಯಕ್ರಮ ನಡೆಯಿತು. ಮೊದಲ ಗ್ರಂಥ, 1986ರಲ್ಲಿ ಐತಿಹಾಸಿಕರತ್ನ ಎಸ್. ಶ್ರೀಕಂಠಯ್ಯ ಜನ್ಮಶತಮಾನೋತ್ಸವದ ಅಂಗವಾಗಿ ಪ್ರತಿಷ್ಠಾನ ನಡೆಸಿದ ವಿಚಾರಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧಗಳ ಸಂಪುಟ. ಎರಡನೆಯದು, ಪ್ರತಿಷ್ಠಾನದ ಹಸ್ತಪ್ರತಿ ಸಂಗ್ರಹದಲ್ಲಿರುವ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ. ‘ವಿಜಯನಗರ ಸಾಮ್ರಾಜ್ಯ’ ಗ್ರಂಥದ ಸಂಪಾದಕರು ಡಾ॥ ಜಿ. ಎಸ್. ದೀಕ್ಷಿತ್ ಅವರು; ಹಸ್ತಪ್ರತಿಗಳ ಸೂಚಿಯನ್ನು ಶ್ರೀ ಕೆಳದಿ ಗುಂಡಾ ಜೋಯಿಸರೂ ಶ್ರೀ ನಾ. ಗೀತಾಚಾರ್ಯರೂ ಜೊತೆಗೂಡಿ ಸಂಪಾದಿಸಿ ಕೊಟ್ಟಿರುತ್ತಾರೆ.

ಅಂದು, ಕರ್ನಾಟಕ ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾದ ಡಾ॥ ಎಂ. ಎಸ್. ನಾಗರಾಜ ರಾವ್ ಅವರು ಎರಡು ಗ್ರಂಥಗಳನ್ನೂ ಬಿಡುಗಡೆ ಮಾಡಿದರು. ಅದಕ್ಕೆ ಮುಂಚೆ, ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಸರ್ವರಿಗೂ ಸ್ವಾಗತವನ್ನು ಬಯಸುತ್ತಾ, ವಿಜಯನಗರ ಸಾಮ್ರಾಜ್ಯ ಪುಸ್ತಕದ ಲೇಖನಗಳು ಇಂಗ್ಲಿಷ್ ಭಾಷೆಯಲ್ಲಿರುವುದಕ್ಕೆ ಕಾರಣಗಳೇನೆಂಬುದನ್ನು ವಿವರಿಸಿದರು: ಮೊದಲನೆಯದಾಗಿ, ಗೋಷ್ಠಿಯಲ್ಲಿ ಪ್ರಬಂಧಗಳನ್ನು ಮಂಡಿಸಿದ ಕೆಲವರು ಕನ್ನಡ ಬಾರದ ಹೊರನಾಡಿನವರಾಗಿದ್ದರು; ಎರಡನೆಯದಾಗಿ, ಪ್ರಬಂಧಗಳನ್ನು ಕನ್ನಡಕ್ಕೆ ಭಾಷಾಂತರಿಸದೆ, ಇರುವಹಾಗೆಯೇ ಪ್ರಕಟಿಸಿದರೆ ಜಗದ್ವಿಖ್ಯಾತವಾಗಿರುವ ವಿಜಯನಗರ ಸಾಮ್ರಾಜ್ಯ ಕುರಿತಾದ ಈ ಗ್ರಂಥ ದೇಶ ವಿದೇಶಗಳವರ ಗಮನಕ್ಕೂ ಬರುತ್ತದೆ; ಮೂರನೆಯದಾಗಿ, ಕರ್ನಾಟಕದ ಭಾಷೆ ಸಾಹಿತ್ಯ ಸಂಸ್ಕೃತಿಗಳ ಬಗೆಗಿನ ಸಂಶೋಧನೆಗಳು ವಿಶಾಲ ಪ್ರಪಂಚಕ್ಕೆ ತಿಳಿಯಬೇಕಾದರೆ ಇಂಗ್ಲಿಷಿಗಿಂತ ಉಪಯುಕ್ತ ಭಾಷೆ ಬೇರೆ ಯಾವುದೂ ಇಲ್ಲ; ನಾಲ್ಕನೆಯದಾಗಿ, ಯಾವುದೇ ಭಾಷಾಪ್ರಾಂತದ ಸಂಶೋಧನ ಸಂಸ್ಥೆ ಭಾಷೆಯ ವಿಷಯದಲ್ಲಿ ಮಡಿವಂತಿಕೆ ಇಟ್ಟುಕೊಳ್ಳುವುದು ಸರಿಯಲ್ಲ. ಸಂಶೋಧಕನು ಅನೇಕ ಭಾಷೆಗಳನ್ನು ಕಲಿತವನಾಗಿದ್ದು, ಅನೇಕ ಭಾಷೆಗಳನ್ನು ಬಳಸಬೇಕಾಗುತ್ತದೆ.

ಇಷ್ಟು ಹೇಳಿ, ಈಗ ಬಿಡುಗಡೆಯಾಗಿರುವ ಇಂಗ್ಲಿಷ್ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರ ಮಾಡಿಸುವ ಉದ್ದೇಶವೂ ಇದೆಯೆಂದೂ ಇಂಗ್ಲಿಷ್ ಪ್ರಕಟನೆಗೆ

ಧನಸಹಾಯ ಮಾಡಿದಂತೆಯೇ ಅದರ ಅನುವಾದ ಕಾರ್ಯಕ್ಕೂ ಪ್ರಾಚ್ಯವಸ್ತು ಇಲಾಖೆ ಸಹಾಯ ಮಾಡಬೇಕೆಂದೂ ವಿಜ್ಞಾಪನೆ ಮಾಡಿಕೊಂಡರು.

ಅನಂತರ ಪ್ರತಿಷ್ಠಾನದ ಮುಖ್ಯ ಕಾರ್ಯಗಳಲ್ಲಿ ಒಂದಾದ ಹಸ್ತಪ್ರತಿಗಳ ಸಂಗ್ರಹಣೆ ಮತ್ತು ಗ್ರಂಥ ಸಂಪಾದನೆ ಬಗ್ಗೆ ಪ್ರಸ್ತಾವಿಸಿ, ಪ್ರತಿಷ್ಠಾನದಂತಹ ಸಂಶೋಧನ ಸಂಸ್ಥೆಗಳು ಅಭಿವೃದ್ಧಿಗೊಳ್ಳಲು ಹಣದ ಅಭಾವದ ಜೊತೆಗೆ ವಿದ್ವಾಂಸರ ಅಭಾವವೂ ಅಡಚಣೆಯಾಗಿದೆಯೆಂದು ತಿಳಿಸಿ, ಕಲ್ಕತ್ತದ ಏಷ್ಯಾಟಿಕ್ ಸೊಸೈಟಿ ಎದುರಿಸುತ್ತಿರುವ ತೊಂದರೆಯನ್ನು ಉದಾಹರಿಸಿದರು. ಕೇಂದ್ರ ಸರ್ಕಾರ ಲಕ್ಷಾಂತರ ರೂಪಾಯಿಗಳನ್ನು ಸಂಸ್ಥೆಗೆ ಸಹಾಯಧನವಾಗಿ ನೀಡಿದ್ದರೂ ವಿದ್ವಾಂಸರ ಅಭಾವ ಹಾಗೂ ಪದಾಧಿಕಾರಿಗಳ ಅನಾಸ್ಥೆ ಇವುಗಳಿಂದಾಗಿ ಸಂಸ್ಥೆ ನಿಷ್ಕ್ರಿಯವಾಗಿರುವುದನ್ನು ಗಮನಿಸಿ, ನಾವು ಪಾಠಕಲಿಯಬೇಕೆಂದರು. ಪ್ರತಿಷ್ಠಾನದಂತಹ ವಿದ್ವತ್‌ಸಂಸ್ಥೆಯನ್ನು ಬೆಳಸುವುದು ವಿದ್ವಾಂಸರ ಕರ್ತವ್ಯ, ಭಾಷೆ ಸಾಹಿತ್ಯಗಳ ಬೆಳವಣಿಗೆಯಲ್ಲಿ ವಿದ್ವತ್ತಿನ ಪಾತ್ರ ಮಹತ್ವದ್ದು ಎಂದು ಹೇಳಿದರು. ('ವಿದ್ವಾಂಸರ ಅಭಾವ' ಎಂದರೆ ಅವರುಗಳ ಸಂಖ್ಯೆಯ ಅಭಾವವಲ್ಲ. ವಿದ್ವಾಂಸರು ಉತ್ಸಾಹದಿಂದ ಮುಂದೆ ಬಂದು ವಿದ್ವತ್‌ಸಂಸ್ಥೆಗಳ ಕಾರ್ಯದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಬೇಕು ಎಂದು. ವಿದ್ವಾಂಸರ ಸಂಖ್ಯೆಯೂ ಕ್ಷೀಣಿಸುತ್ತಿರುವುದು ಗಮನಾರ್ಹ.)

ಡಾ॥ ಜಿ. ಎಸ್. ದೀಕ್ಷಿತ್ ಅವರು 'ವಿಜಯನಗರ ಸಾಮ್ರಾಜ್ಯ' ಗ್ರಂಥವನ್ನೂ ಡಾ॥ ಎಂ. ಚಿದಾನಂದಮೂರ್ತಿ ಅವರು 'ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ' ಯನ್ನೂ ಪರಿಚಯ ಮಾಡಿಕೊಟ್ಟರು. ಸೂಚಿಯಲ್ಲಿ ದಾಖಲಾಗಿರುವ ಯಾವುದೇ ಗ್ರಂಥ ಸಾಹಿತ್ಯ ಮೌಲ್ಯ ಹೊಂದಿರದಿದ್ದರೂ ಅದರಲ್ಲಿಯ ಮಾಹಿತಿ ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವದ್ದಾಗಿರಬಹುದು ಎನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ಪುಸ್ತಕದಿಂದಲೇ ಎತ್ತಿ ಹೇಳಿದರು.

ಗ್ರಂಥಗಳನ್ನು ಬಿಡುಗಡೆ ಮಾಡಿದ ಡಾ॥ ಎಂ. ಎಸ್. ನಾಗರಾಜ ರಾಯರು ಗ್ರಂಥದ ಮೌಲಿಕತೆಯ ಬಗ್ಗೆ ಪ್ರಸ್ತಾವಿಸಿ, ಅದರ ಕನ್ನಡ ಭಾಷಾಂತರಕ್ಕೆ ಇಲಾಖೆಯ ಮೂಲಕ ಸಹಾಯ ಧನ ದೊರಕಿಸಿಕೊಡುವ ಭರವಸೆಯನ್ನು ನೀಡಿದರು. World Heritage Committee ಹಂಪೆಯನ್ನೂ ಪಟ್ಟದಕಲ್ಲನ್ನೂ 'ಪ್ರಪಂಚದ (ಸಾಂಸ್ಕೃತಿಕ) ಸ್ವತ್ತು' ಎಂದು ಪರಿಗಣಿಸಿರುವುದನ್ನು ಶ್ರೋತೃಗಳ ಗಮನಕ್ಕೆ ತಂದು, ಈ ಅವಶೇಷಗಳ ಬಗೆಗೆ ವಿದೇಶೀಯರು ಆಸಕ್ತಿ ತೋರುತ್ತಿದ್ದಾರೆ ಎಂದರು. ಪ್ರಾಚ್ಯವಸ್ತು ಶೋಧನೆಯಲ್ಲಿ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಕ್ಕೆ ಮಾತ್ರ ಪ್ರಾಶಸ್ತ್ಯ ಸಲ್ಲುತಿದ್ದು, ನಾಣ್ಯಶಾಸ್ತ್ರಕ್ಕೆ ಸಲ್ಲಬೇಕಾದಷ್ಟು ಪ್ರಾಶಸ್ತ್ಯ ಸಲ್ಲುತ್ತಿಲ್ಲ ಎಂಬ ಅಂಶದ ಕಡೆಗೆ ಗಮನ ಸೆಳೆದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ॥ ಜಿ. ಎಸ್. ಶಿವರುದ್ರಪ್ಪನವರು ನಮ್ಮ ಜನಕ್ಕೆ ಚಾರಿತ್ರಿಕ ಪ್ರಜ್ಞೆ ಕಡಮೆ ಎಂದು ವಿಷಾದಿಸಿ, 'ವಿಜಯ ನಗರ

ಸಾಮ್ರಾಜ್ಯ' ಗ್ರಂಥದಂತಹ ಪ್ರಕಟನೆಗಳಿಂದ ಚಾರಿತ್ರಿಕ ಪ್ರಜ್ಞೆ ಬೆಳೆಯಲು ಸಹಕಾರಿಯಾಗುತ್ತದೆ ಎಂದು ಹೇಳಿ, 'ವರ್ತಮಾನ'ಕ್ಕೆ ಚಾರಿತ್ರಿಕ ಪ್ರಜ್ಞೆಯ ಅಗತ್ಯವನ್ನು ಕುರಿತು ಒತ್ತಿ ಹೇಳಿದರು. ಹಂಪೆಯಲ್ಲಿ ವಿಜಯನಗರ ವಸ್ತುಪ್ರದರ್ಶನಾಲಯ ಸ್ಥಾಪನೆ ಆಗಬೇಕು ಎಂದು ಸೂಚಿಸಿದರು.

[Vijayanagara Empire: Studies in Early History and Culture. ಬೆಲೆ: ರೂ. ೬೦. ಪ್ರತಿಷ್ಠಾನದ ಸದಸ್ಯರಿಗೆ ರಿಯಾಯಿತಿ ದರ ರೂ. ೩೦/-: ಅಂಚೆ ವೆಚ್ಚ ಪ್ರತ್ಯೇಕ – ರೂ. ೩–೭೫. ಸದಸ್ಯರು ಈ ಅಮೂಲ್ಯ ಗ್ರಂಥವನ್ನು ಕೊಳ್ಳಬೇಕಾಗಿ ವಿನಂತಿ.]

ಗ್ರಂಥದಾನ :

ಡಾ॥ ವಿ. ಸೀ. ಅವರ ಪುತ್ರರು ತಮ್ಮ ತೀರ್ಥರೂಪರ ಅಮೂಲ್ಯ ಗ್ರಂಥ ಭಂಡಾರದ ಸುಮಾರು ಎರಡು ಸಾವಿರ ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳನ್ನು ಪ್ರತಿಷ್ಠಾನಕ್ಕೆ ದಾನ ಮಾಡಿರುತ್ತಾರೆ. ಇವುಗಳ ಪೈಕಿ, ಡಾ॥ ಸೂಕ್ತಂಕರ್ ಅವರು ಪ್ರಕ್ಷಿಪ್ತ ಭಾಗಗಳನ್ನು ಗುರುತಿಸಿ, ಸಂಪಾದನ ವಿಧಾನದ ಬಗೆಗೆ ವಿಸ್ತಾರವಾದ ಪೀಠಿಕೆಯನ್ನು ಬರೆದು, ಪರಿಷ್ಕರಣ ಮಾಡಿರುವ ವ್ಯಾಸಭಾರತದ ಸಂಪುಟಗಳು ಅತ್ಯಮೂಲ್ಯವಾದವು. ಇವನ್ನು ಬಿ.ಎಂ.ಶ್ರೀ. ಅವರು ಕೊಂಡರೆಂದೂ ವಿ.ಸೀ. ಅವರಿಗೆ ಕೊಡಮಾಡಿದ್ದರೆಂದೂ ತಿಳಿದುಬಂದಿದೆ. ಸಂಪುಟಗಳಲ್ಲಿಯ 'ಶ್ರೀ' ಅವರ ಹಸ್ತಾಕ್ಷರ ಈ ಬಗೆಗೆ ಸಾಕ್ಷ್ಯ ಒದಗಿಸುತ್ತದೆ. ಬಿ.ಎಂ.ಶ್ರೀ. ಅವರ ಗ್ರಂಥಗಳು ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೇ ಬಂದು ಸೇರಿರುವುದು ಒಂದು ಅನಿರೀಕ್ಷಿತ ಯೋಗವೇ ಸರಿ.

ಈಗಾಗಲೇ ಕುಮಾರವ್ಯಾಸ ಭಾರತದ ಪೇಟೆ ಮುದ್ರಣದ ಪ್ರತಿ, ಶ್ರೀಕೃಷ್ಣರಾಜ ವಾಣೀವಿಲಾಸ ಭಾಗವತ ಮಹಾಪುರಾಣ ಮತ್ತು ಮಹಾಭಾರತದ ಕೆಲವು ಸಂಪುಟಗಳು, ಮುಂತಾದ ಹಲವಾರು ಗ್ರಂಥಗಳನ್ನು ದಾನಮಾಡಿರುವ ಮೈಸೂರಿನ ಶ್ರೀ ಬಿ. ಎಸ್. ಕಮಲೀಪತಯ್ಯನವರು ಈಚೆಗೆ ಸುಮಾರು 50 ಗ್ರಂಥಗಳನ್ನು ದಾನ ಮಾಡಿರುತ್ತಾರೆ. ಇವುಗಳ ಪೈಕಿ ಕುಂಪರಾಮಾಯಣದ ಮೊದಲ ಮುದ್ರಣದ ಪ್ರತಿ. ಸಂಸ್ಕೃತ-ಕನ್ನಡ ನಿಘಂಟು, ಒಂದು ತಾಡವೋಲೆ ಹಸ್ತಪ್ರತಿ (ಈಶೋಪನಿಷತ್ತು), ಕರ್ನಾಟಕ ಶೈಲಿಯ ಅಪೂರ್ವ ದೇವತಾ ರೇಖಾಚಿತ್ರಗಳನ್ನುಳ್ಳ ಸ್ತೋತ್ರಗಳ ಕಲ್ಲಚ್ಚಿನ ಪ್ರತಿ—ಇವು ಗಮನಾರ್ಹವಾದವು.

ಈ ಇಬ್ಬರು ಮಹನೀಯರಿಗೂ ಪ್ರತಿಷ್ಠಾನ ಕೃತಜ್ಞವಾಗಿದೆ.

ಅಲಮಾರುಗಳ ಅಗತ್ಯ : ಹೀಗೆ ಸಂಗ್ರಹವಾಗುತ್ತಿರುವ ಗ್ರಂಥಗಳನ್ನು ಜೋಡಿಸಿಡಲು ಅಲಮಾರುಗಳ ಹಾಗೂ ಉಕ್ಕಿನ ಬೀರುಗಳ ಅಗತ್ಯ ಬಹಳವಾಗಿದೆ. ಸದಸ್ಯರು ತಮ್ಮಲ್ಲಿರಬಹುದಾದ ಇವುಗಳನ್ನು ದಾನಮಾಡಿದರೆ ಬಹಳ ಉಪಕಾರವಾಗುವುದು.

ಅದ್ವೈತ ವಿಚಾರ ಗೋಷ್ಠಿ

"ಕನ್ನಡ ಸಾಹಿತ್ಯದಲ್ಲಿ ಅದ್ವೈತ ವಿಚಾರ" ಎಂಬ ವಿಷಯವಾಗಿ ಒಂದು ವಿಚಾರಗೋಷ್ಠಿಯನ್ನು ನಡಸತಕ್ಕದ್ದೆಂದೂ ಅದ್ವೈತನಿಷ್ಠ ಕೃತಿರಚನಕಾರರೂ ಆದ ಡಾ|| ಡಿ.ವಿ.ಜಿ. ಅವರ ಜನ್ಮಶತಮಾನೋತ್ಸವ ವರ್ಷದಲ್ಲಿಯೇ ಅದನ್ನು ನಡಸುವುದು ಉಚಿತವಾಗಿರುವುದೆಂದೂ 1987ರ ಮಾರ್ಚಿ ತಿಂಗಳಿನಲ್ಲಿಯೇ ಕಾರ್ಯಸಮಿತಿ ತೀರ್ಮಾನಿಸಿತು. ಈ ಕಾರ್ಯದ ನಿರ್ವಹಣೆಗಾಗಿ ಒಂದು ಉಪಸಮಿತಿಯನ್ನೂ ನಿಯೋಜಿಸಲಾಯಿತು. ಆ ಉಪಸಮಿತಿ ಇದೀಗ ಗೋಷ್ಠಿಯ ವಿವರಗಳ ಕರಡನ್ನು ಸಿದ್ಧಪಡಿಸಿದೆ. ಅದ್ವೈತ ಪ್ರವರ್ತಕರಾದ ಶ್ರೀ ಆದಿಶಂಕರರ ಜನ್ಮಶತಮಾನೋತ್ಸವವನ್ನು ರಾಷ್ಟ್ರಮಟ್ಟದಲ್ಲಿ ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿ, ಕಾರ್ಯಾರಂಭ ಮಾಡಿದೆ. ಅದಕ್ಕಾಗಿ ಒಂದು ಉತ್ಸವ ಸಮಿತಿಯನ್ನೂ ನಿಯೋಜಿಸಿದೆ. ಡಿ.ವಿ.ಜಿ. ಜನ್ಮಶತಮಾನೋತ್ಸವ ವರ್ಷ ಕೊನೆಗೊಂಡಿದ್ದರೂ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಉತ್ಸವಕಾರ್ಯಗಳನ್ನು ಮುಂದುವರಿಸಿಕೊಂಡು ಬರುತ್ತಿದೆ. ಆದ್ದರಿಂದ, ಈ ಎರಡೂ ಶತಮಾನೋತ್ಸವಗಳ ನೆನಪಿಗಾಗಿ ಪ್ರತಿಷ್ಠಾನ ಈ ವರ್ಷ ಆದಷ್ಟು ಬೇಗ ಈ ಗೋಷ್ಠಿಯನ್ನು ಶೃಂಗೇರಿಯಲ್ಲಾಗಲಿ ಬೆಂಗಳೂರಿನಲ್ಲಾಗಲಿ ನಡಸತಕ್ಕದ್ದೆಂದು ತೀರ್ಮಾನಿಸಿದೆ.

ಶಾಶ್ವತ ನಿಧಿಗೆ ಕಾಣಿಕೆ : ಶಾಶ್ವತ ನಿಧಿಗೆ ಸದಸ್ಯರು ಕಾಣಿಕೆ ನೀಡಬೇಕೆಂದು ಹೋದ ಸಲದ 'ಲೋಚನ' ಸಂಚಿಕೆಯಲ್ಲಿ ವಿನಂತಿಸಿಕೊಳ್ಳಲಾಗಿತ್ತು. ಪ್ರತಿಷ್ಠಾನದ ಸದಸ್ಯರು ಸದಸ್ಯರಾಗಿ ಮುಂದುವರಿಯುತ್ತಿರುವುದೇ ಒಂದು ದೊಡ್ಡ ಉಪಕಾರ ಎಂದು ಭಾವಿಸಿದ್ದೇವೆ. ಸಂಸ್ಥೆಯನ್ನು ಸ್ವಾವಲಂಬಿಯಾಗಿ ಮಾಡಬೇಕೆಂಬ ನಮ್ಮ ಪ್ರಯತ್ನದಲ್ಲಿ ಸದಸ್ಯರು ತಾವೂ ಯಥಾಶಕ್ತಿ ಶಾಶ್ವತ ನಿಧಿಗೆ ವಂತಿಗೆ ನೀಡುವುದಲ್ಲದೆ ಉದಾರಿಗಳಾದ ಇತರರಿಂದಲೂ ದೊರಕಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ಪ್ರಸಕ್ತ ವರ್ಷದಲ್ಲಿ ಸದಸ್ಯರಿಂದ ಈ ಕೆಳಗಿನಂತೆ ಕಾಣಿಕೆ ಬಂದಿದೆ :

ಪ್ರಸಕ್ತ ವರ್ಷದಲ್ಲಿ ಶಾಶ್ವತ ನಿಧಿಗೆ ದಾನ ಮಾಡಿರುವವರು

	ರೂ.	ಪೈ.
ಶ್ರೀ ಎಂ. ಜಿ. ಪಾರ್ಥಸಾರಥಿ	501	00
ಶ್ರೀಮತಿ ಶಂಕರಮ್ಮ ಮತ್ತು ಶ್ರೀ ವೆಂಕಟರಾಮಯ್ಯ	303	00
ಶ್ರೀ ಹೆಚ್. ಆರ್. ಸುರೇಶ್	251	00
ಶ್ರೀ ಮತ್ತೂರು ಕೃಷ್ಣಮೂರ್ತಿ, ಲಂಡನ್	250	00
ಶ್ರೀ ಬಿ. ಆರ್. ಸತ್ಯಮೂರ್ತಿ	250	00
ಶ್ರೀಮತಿ ಹೆಚ್. ಪ್ರಭ	200	00

ಶ್ರೀ ಜಿ. ಎಸ್. ವೆಂಕಟರಾಜು	200	00
ಶ್ರೀ ಎಸ್. ರಾಮಚಂದ್ರ	124	00
ಶ್ರೀ ಬಿ. ನರಸಿಂಹಯ್ಯ	101	00
ಪ್ರೊ|| ಎಂ. ವಿ. ಸೀತಾರಾಮಯ್ಯ	45	00
ಶ್ರೀ ಶೇಷಮೂರ್ತಿ	25	00
	2,250	00
1987ರಲ್ಲಿ ಶಾಶ್ವತ ನಿಧಿಗೆ ದಾನವಾಗಿ ಬಂದ ಮೊತ್ತ	185	00
ಒಟ್ಟು ಈವರೆಗೆ ಬಂದಿರುವ ಮೊತ್ತ	2,435	00

ಲೋಚನ : ಹೆಸರಿನ ಬಗೆಗೆ

ಜಿಜ್ಞಾಸೆ

'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ನಡೆದ ಪತ್ರವ್ಯವಹಾರವನ್ನು ಈ ಮುಂದೆ ಪ್ರಕಟಿಸಲಾಗಿದೆ :—

'ಲೋಚನ ಏಕೆ'

ಬಿ.ಎಂ.ಶ್ರೀ. ಪ್ರತಿಷ್ಠಾನದ ಮುಖವಾಣಿಯಾದ 'ಲೋಚನ' (ಸಂ. 5, ಡಿಸೆ. 1987. ಸಂಚಿಕೆ 2) ಪತ್ರಿಕೆಯಲ್ಲಿ ಅದರ ಸಂಪಾದಕರೂ ಹಿರಿಯರೂ ಆದ ಎಂ.ವಿ.ಸೀ. ಅವರು ಸಂಸ್ಕೃತ ಆಡುಭಾಷೆಯಾಗಿ ಹಬ್ಬುತ್ತಿರುವ ಬಗೆಗೆ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ ದಿನನಿತ್ಯದ ಕನ್ನಡ ಪದಗಳನ್ನು ಸಂಸ್ಕೃತ ಪದಗಳು ಸ್ಥಾನಪಲ್ಲಟಗೊಳಿಸಿದರೆ ಗತಿಯೇನು ಎಂಬ ಭೀತಿ ಪ್ರಕಟಿಸಿದ್ದಾರೆ. ಆಂಡಯ್ಯನ ಕಾಲದಿಂದ ಆಚಾರ್ಯ ಬಿ.ಎಂ.ಶ್ರೀ. ವರೆಗೆ ಕನ್ನಡದ ಮೇಲಾಗುತ್ತಿದ್ದ ಸಂಸ್ಕೃತದ ಅತಿ ಪ್ರಭಾವವನ್ನು ಹೇಗೆ ವಿರೋಧಿಸುತ್ತಾ ಬರಲಾಗಿದೆಯೆಂಬುದನ್ನು ಹೇಳಿ, ದಿನನಿತ್ಯದ ಬಳಕೆಯಲ್ಲಿ ಎಲ್ಲೆಲ್ಲಿ ಕನ್ನಡ ಪದಗಳಿವೆಯೋ ಅವನ್ನು ಬಳಸಬೇಕೆಂದು ಎಚ್ಚರಿಕೆಯ ಮಾತನ್ನೂ ಹೇಳಿದ್ದಾರೆ.

ಕನ್ನಡಾಭಿಮಾನಪ್ರಿಯ ಯಾರೂ ಈ ಮಾತನ್ನು ಒಪ್ಪಬೇಕಾದ್ದೇ. ಏನೇ ಆದರೂ ಸಂಸ್ಕೃತ ಕನ್ನಡ ಪದಗಳನ್ನು ಆಕ್ರಮಿಸಲು ಬಿಡಬಾರದು.

ಈ ದಿಸೆಯಲ್ಲಿ ನನ್ನದೊಂದು ಬಿನ್ನಹ. Charity begins at home ಅಲ್ಲವೇ? 'ಪ್ರತಿಷ್ಠಾನ'ಕ್ಕಂತೂ ಕನ್ನಡ ಪದ ಇದೆಯೋ ಇಲ್ಲವೋ ತಿಳಿಯದು. 'ಲೋಚನ'ಕ್ಕಂತೂ 'ಕಣ್ಣು' ಇದ್ದೇ ಇದೆಯಲ್ಲಾ! ಕಣ್ಣೇ ಇರುವಾಗ ಲೋಚನ ವೇಕೆ?

ಬೆಂಗಳೂರು. —ಎಸ್. ಆರ್. ಲೀಲಾ

'ಲೋಚನ'ಕ್ಕಿಂತ ಉತ್ತಮ ಬೇರೆ ಇಲ್ಲ

ಸಂಸ್ಕೃತವನ್ನು ವ್ಯಾಪಕವಾಗಿ ಆಡುಭಾಷೆಯಾಗಿ ಚಾಲ್ತಿಗೆ ತರುವ ಪ್ರಯತ್ನಗಳಿಂದ ನಿತ್ಯಬಳಕೆಯ ಕನ್ನಡ ಮಾತುಗಳ ಸ್ಥಾನವನ್ನು ಸಂಸ್ಕೃತ ಆಕ್ರಮಿಸಬಹುದೆಂಬ ನನ್ನ ನಿಲುವನ್ನು ಸಂಸ್ಕೃತ ವಿದುಷಿ ಎಸ್. ಆರ್. ಲೀಲಾ ಅವರು 'ವಾಚಕರ ವಾಣಿ' ಅಂಕಣದಲ್ಲಿ ಬರೆಯುತ್ತ (ಪ್ರಜಾವಾಣಿ 26-4-88) ಅನುಮೋದಿಸಿರುವುದಕ್ಕಾಗಿ ಅವರಿಗೆ ವಂದನೆಗಳು.

ನನ್ನ ನಿಲುವಿಗೆ ಅನುಗುಣವಾಗಿ, 'ಲೋಚನ' ಪತ್ರಿಕೆಗೆ 'ಕಣ್ಣು' ಎಂದು ಹೆಸರಿಡಬಹುದಾಗಿತ್ತಲ್ಲ, 'ಲೋಚನ' ಏಕೆ ಎಂದು ಎಸ್. ಆರ್. ಲೀಲಾ ವ್ಯಂಗ್ಯವಾಗಿ ಪ್ರಶ್ನಿಸಿದ್ದಾರೆ. ಸಂಸ್ಕೃತ ವಿದುಷಿಯಾದ ಅವರಿಗೆ 'ಲೋಚನ' ಎಂದು ಪ್ರತಿಷ್ಠಾನ ಏಕೆ ಹೆಸರಿಟ್ಟಿದೆ ಎನ್ನುವುದು ಹೊಳೆಯದೆ ಇರುವುದು ಸೋಜಿಗವೇ ಸರಿ.

ಬಿ.ಎಂ.ಶ್ರೀ. ಪ್ರತಿಷ್ಠಾನ ಸಂಶೋಧನೆಗೆ, ಪಾಂಡಿತ್ಯ ಸಂವರ್ಧನೆಗೆ ಶ್ರಮಿಸುತ್ತಿರುವ ಸಂಸ್ಥೆ. ಈ ಉದ್ದೇಶವುಳ್ಳ ಸಂಸ್ಥೆಗೆ ಎಲ್ಲ ಭಾಷೆಗಳೂ ಅಗತ್ಯ. ಸಂಸ್ಕೃತ ಜ್ಞಾನವಂತೂ ತೀರ ಅಗತ್ಯ. ಹೀಗಿರುತ್ತ ಪ್ರತಿಷ್ಠಾನ ಸಂಸ್ಕೃತವನ್ನು ದೂರಪಿಡುವ ಪ್ರಶ್ನೆಯೇ ಏಳದು.

ಆನಂದವರ್ಧನನ 'ಧ್ವನ್ಯಾಲೋಕ'ಕ್ಕೆ ಬರೆದ ತನ್ನ ವ್ಯಾಖ್ಯಾನಕ್ಕೆ ಅಭಿನವಗುಪ್ತನು 'ಲೋಚನ' ಎಂಬ ಸಾರ್ಥಕವಾದ ಹೆಸರನ್ನು ಇಟ್ಟಿರುವುದು ವಿದ್ವಲ್ಲೋಕ ಬಲ್ಲನು. ಅಂತರ್ದೃಷ್ಟಿಯುಳ್ಳವನಿಗೆ ಮಾತ್ರ ಸಾಧ್ಯವಾದ ಸಹೃದಯತೆಯ ವ್ಯಾಖ್ಯಾನ ವಿಮರ್ಶೆಗಳಿಗೆ ಸಂಕೇತ 'ಲೋಚನ' ಶಬ್ದ ಎಂದು ಗ್ರಹಿಸಿ ಸಂಪಾದಕ ಮಂಡಳಿ ಪತ್ರಿಕೆಗೆ ಈ ಹೆಸರನ್ನು ಆಯ್ಕೆ ಮಾಡಿದೆ. ಪ್ರತಿಷ್ಠಾನದ ಪಂಡಿತ ಪತ್ರಿಕೆಗೆ 'ಲೋಚನ'ಕ್ಕಿಂತ ಉತ್ತಮವಾದ ಬೇರೆ ಹೆಸರು ಯಾವುದು ಇದ್ದೀತು ?

—ಎಂ. ವಿ. ಸೀತಾರಾಮಯ್ಯ

ಅಧ್ಯಕ್ಷ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

[ಈ ಸಂಬಂಧವಲ್ಲಿ, 'ಲೋಚನ' ಪತ್ರಿಕೆಯನ್ನು ಪತ್ರಿಕಾ ನೋಂದಾವಣೆ ಕಾನೂನಿಗೆ ಅನುಗುಣವಾಗಿ ನೋಂದಾವಣೆ ಮಾಡಿಸುವ ಸಲುವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿತ್ತು. 'ಲೋಚನ'ದ ಹೆಸರನ್ನು ಅಧಿಕಾರಿಗಳು ಅಂಗೀಕರಿಸದೆ, ಬೇರೆಯ ಹೆಸರನ್ನು ಸೂಚಿಸಬೇಕೆಂದು ಸಲಹೆ ಮಾಡಿದರು. ಸಂಪಾದಕ ಮಂಡಲಿ ಈ ವಿಷಯವನ್ನು, ಪರ್ಯಾಲೋಚನೆ ಮಾಡಿ, 'ಶ್ರೀ ಲೋಚನ', 'ಕನ್ನಡ ಲೋಚನ', 'ಕರ್ನಾಟಕ ಲೋಚನ' ಎಂಬ ಹೆಸರುಗಳಲ್ಲಿ ಯಾವುದಾದರೂ ಒಂದನ್ನು ಅಂಗೀಕರಿಸಲು ಪ್ರಾರ್ಥಿಸಿಕೊಳ್ಳಬಹುದೆಂದು ನಿರ್ಣಯ ಮಾಡಿತು. ಪ್ರತಿಷ್ಠಾನದ ಮರುಬೇಡಿಕೆಯಂತೆ, ನೋಂದಾವಣೆ ಅಧಿಕಾರಿಗಳು **ಕರ್ನಾಟಕ ಲೋಚನ** ಎಂಬ ಹೆಸರಿಗೆ ಒಪ್ಪಿಗೆ ನೀಡಿದ್ದಾರೆ ಎಂದು ಪ್ರಕಟಿಸಲು ಸಂತೋಷವಾಗುತ್ತದೆ. ಪ್ರಸಕ್ತ ಸಂಚಿಕೆಯಿಂದಲೇ ಈ ಹೆಸರನ್ನು ಬಳಸತೊಡಗಿದೆ. —ಸಂ.]

1) **ಮಾಸ್ತಿ ಸ್ಮರಣೆ:** ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಜ್ಞಾಪಕಾರ್ಥ ಬೆಂಗಳೂರಿನಲ್ಲಿರುವ ವಿವಿಧ ಕಾಲೇಜುಗಳ ಸಂಯುಕ್ತ ಆಶ್ರಯದಲ್ಲಿ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸಿತು. ಇವರಲ್ಲಿ ಖ್ಯಾತ ವಿದ್ವಾಂಸರು ಭಾಗವಹಿಸಿ, ಡಾ॥ ಮಾಸ್ತಿ ಅವರ ಕೃತಿಗಳ ಬಗ್ಗೆ ವಿಮರ್ಶಾತ್ಮಕ ಉಪನ್ಯಾಸಗಳನ್ನು ಮಾಡಿದರು. ಈ ಉಪನ್ಯಾಸಗಳೆಲ್ಲವನ್ನೂ ಲೇಖನರೂಪದಲ್ಲಿ ಸಂಗ್ರಹಿಸಿ 'ಮಾಸ್ತಿ ಸ್ಮರಣೆ' ಎಂಬ ಕೃತಿಯನ್ನು ಹೊರ-ತರಲಾಯಿತು. ಈ ಗ್ರಂಥವನ್ನು ಕರ್ನಾಟಕ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಮಾನ್ಯ ಶ್ರೀ ಎಂ. ಪಿ. ಪ್ರಕಾಶ್ ಅವರು ಬಿಡುಗಡೆ ಮಾಡಿದರು.

2) **ದತ್ತಿ ಉಪನ್ಯಾಸಗಳು:** ಪ್ರತಿಷ್ಠಾನವು ದಿನಾಂಕ 19–12–87 ರಂದು ಪ್ರೊ॥ ಟಿ. ಎಸ್. ವೆಂಕಣ್ಣಯ್ಯ ದತ್ತಿ ಉಪನ್ಯಾಸವನ್ನು ಜಳ್ಳಕೆರೆಯ ಲಯನ್ಸ್ ಕ್ಲಬ್‌ನ ಸಹಯೋಗದೊಂದಿಗೆ ನಡೆಸಿತು. ಅನಂತರ 25, 26 ಮತ್ತು 27–12–87 ದಿನಾಂಕಗಳಂದು ಗಾಂಧಿ ಸಾಹಿತ್ಯ ಸಂಘದ ಸಹಕಾರದೊಂದಿಗೆ ಬಿ.ಎಂ.ಶ್ರೀ. ಸ್ಮಾರಕ ದತ್ತಿ ಉಪನ್ಯಾಸ, ಚಂದ್ರಶೇಖರ ಶರ್ಮ ದತ್ತಿ ಉಪನ್ಯಾಸ ಮತ್ತು ಡಾ॥ ಜಿ. ಪಿ. ರಾಜರತ್ನಂ ಸ್ಮಾರಕ ದತ್ತಿ ಉಪನ್ಯಾಸಗಳನ್ನು ನಡೆಸಿತು.

ದಿನಾಂಕ 28, 29 ಮತ್ತು 30–12–87 ದಿನಾಂಕಗಳಂದು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು–ಇವರ ಸಂಯುಕ್ತ ಆಶ್ರಯದಲ್ಲಿ ಕ್ರಮವಾಗಿ ವೆಂಕಟರಂಗಪ್ಪ ದತ್ತಿ ಉಪನ್ಯಾಸ, ಎಸ್. ಶ್ರೀಕಂಠಯ್ಯ ಸ್ಮಾರಕ ದತ್ತಿ ಉಪನ್ಯಾಸ ಮತ್ತು ಡಾ॥ ಶಂ. ಬಾ. ಜೋಶಿ ಗೌರವ ದತ್ತಿ ಉಪನ್ಯಾಸಗಳನ್ನು ನಡೆಸಿತು. ಈ ಮೇಲಿನ ಎಲ್ಲ ದತ್ತಿ ಉಪನ್ಯಾಸ ಕಾರ್ಯಕ್ರಮಗಳಲ್ಲಿ ಕರ್ನಾಟಕದ ಖ್ಯಾತ ವಿದ್ವಾಂಸರು ಭಾಗವಹಿಸಿದ್ದು, ಈ ಉಪನ್ಯಾಸಗಳೆಲ್ಲವನ್ನೂ ಸೇರಿಸಿ ಪುಸ್ತಕ-ರೂಪದಲ್ಲಿ ತರುವ ಉದ್ದೇಶವಿದೆ.

ಡಿ.ವಿ.ಜಿ. ಜನ್ಮಶತಾಬ್ದಿ:

1987 ಮಾರ್ಚಿ 13 ರಿಂದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು–ಇವರು ನಡೆಸುತ್ತಿರುವ ಡಿ.ವಿ.ಜಿ. ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಪ್ರತಿಷ್ಠಾನ ಸಕ್ರಿಯವಾಗಿ ಭಾಗವಹಿಸುತ್ತಿದ್ದು, ಅವರ ಕಾರ್ಯಕಲಾಪಗಳೆಲ್ಲವೂ ಪ್ರತಿಷ್ಠಾನದ ಮುಖಾಂತರವೇ ನಡೆಯುತ್ತಿವೆ. ಪ್ರತಿಷ್ಠಾನ ಸ್ಥಾಪನೆಯಾದಂದಿನಿಂದ ಪ್ರತಿಷ್ಠಾನದ ಅನೇಕ ಕಾರ್ಯಕ್ರಮಗಳಿಗೆ ಗೋಖಲೆ ಸಂಸ್ಥೆ ಸಹಕಾರ ನೀಡಿದೆ. ಈ ಎರಡೂ ಸಂಸ್ಥೆಗಳ ಪರಸ್ಪರ ಸಹಕಾರ ಹೀಗೆಯೇ ಮುಂದುವರಿಯಲಿ ಎಂಬುದು ನಮ್ಮ ಹಾರೈಕೆ.

ಶ್ರದ್ಧಾಂಜಲಿ

ಹಳೆಯ ಮೈಸೂರು ರಾಜ್ಯ ಅಕ್ಷರ ಪ್ರಚಾರ ವಿಚಾರದಲ್ಲಿ ಮುಂಚೂಣಿಯಲ್ಲಿತ್ತು. ಭಾರತಕ್ಕೆ ಸ್ವಾತಂತ್ರ್ಯ ಬಂದು, ಕರ್ನಾಟಕ ಪ್ರಾಂತವಾದ ಮೇಲೂ ಆ ಸ್ಥಾನ ಕರ್ನಾಟಕಕ್ಕೆ ಮೀಸಲು. ಮೈಸೂರಿನ ಅಕ್ಷರ ಪ್ರಚಾರ ವಿಶ್ವವಿಖ್ಯಾತವಾಗಿ, The Mysore Experiment ಎಂದೇ ಹೆಸರಾಗಿತ್ತು. ಈ ಖ್ಯಾತಿಗೆ ಮೂಲಭೂತವಾಗಿ ಕಾರಣರಾದವರು ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗ ಕೂಡಿಕೊಂಡು ಕೆಲಸ ಮಾಡುತ್ತಿದ್ದ ಅಕ್ಷರ ಪ್ರಚಾರ ಸಮಿತಿ. ಆಗ ಅದರ ನೇತಾರರು ಬಿ.ಎಂ.ಶ್ರೀ. ಈ ಸಮಿತಿಯಲ್ಲಿ ಎಲೆಮರೆಯ ಕಾಯಂತೆ ದುಡಿದವರು ದಿವಂಗತ ಶ್ರೀ ನ. ಭದ್ರಯ್ಯನವರು. ಈ ಸಮಿತಿ ಕಾಲಕ್ರಮದಲ್ಲಿ ವಯಸ್ಕರ ಶಿಕ್ಷಣ ಸಮಿತಿ ಎಂದಾದಾಗ ಅದರ ಕಾರ್ಯದರ್ಶಿಯಾಗಿ ದುಡಿದ ಭದ್ರಯ್ಯನವರು ಅದರ ಅಧ್ಯಕ್ಷರಾಗಿ (1955–62), ಸಮಿತಿಯ ಚಟುವಟಿಕೆಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದರು. ಸಮಿತಿ ಪ್ರಕಟಿಸುತ್ತಿದ್ದ ಪುಸ್ತಕ ಪ್ರಪಂಚದ ಸಂಪಾದಕರಾಗಿ, 'ನಭ' ಎಂಬ ಹೆಸರಿನಿಂದ ಅದರಲ್ಲಿ ಮೌಲಿಕವಾದ ಲೇಖನಗಳನ್ನು ಬರೆಯುತ್ತಿದ್ದರು. ವಯಸ್ಕರಿಗಾಗಿಯೇ ಪುಸ್ತಕಗಳನ್ನು ಬರಸಿದರು. ಇವರ ಕಾರ್ಯದಕ್ಷತೆ, ಪ್ರಯೋಜಕತೆ. ವಿಶ್ವವಿಖ್ಯಾತವಾಗಿ ಯುನೆಸ್ಕೊ ಅವರು ಇವರನ್ನು ವಯಸ್ಕ ಶಿಕ್ಷಣ ತಜ್ಞರನ್ನಾಗಿ ನೇಮಿಸಿತು. ಈ ಅವಧಿಯಲ್ಲಿ ಇಂಡೋನೇಷ್ಯ, ಇರಾನ್, ಕೀನ್ಯಗಳಲ್ಲಿ ಸೇವೆ ಸಲ್ಲಿಸಿದರು. ಬಿಡುವಿಲ್ಲದ ಕಾರ್ಯಗೌರವದ ನಡುವೆಯೂ ಸುಮಾರು 20ಕ್ಕೂ ಮೀರಿ ಗ್ರಂಥರಚನೆ ಮಾಡಿದರು. 1912ರಲ್ಲಿ ಜನಿಸಿದ ಇವರು 16–5–1988 ರಂದು (ತಮ್ಮ 76ನೇ ವಯಸ್ಸಿನಲ್ಲಿ) ನಿಧನರಾದರು. ಕುಂಠಿತವಾಗಿರುವ ಅಕ್ಷರ ಪ್ರಚಾರ ಕಾರ್ಯಕ್ಕೆ ಜೀವ ತುಂಬಬೇಕೆಂದು ಭಾರತ ಸರ್ಕಾರ ನಿರ್ಧರಿಸಿರುವ ಈ ಸಂದರ್ಭದಲ್ಲಿ ಭದ್ರಯ್ಯನವರ ಅನುಪಮ ತಜ್ಞಸೇವೆ ಚಿರಸ್ಮರಣೀಯ ಮಾತ್ರವಲ್ಲ, ಮಾರ್ಗದರ್ಶಕವೂ ಆಗಬಲ್ಲದು.

ಈ ಸಂಚಿಕೆಯ ಲೇಖಕರು

ಪ್ರೊ॥ ಅ. ರಾ. ಮಿತ್ರ
134, ಶಂಕರನಿಲಯ (ಮಹಡಿ)
1ನೇ 'ಆರ್' ಬ್ಲಾಕ್
ರಾಜಾಜಿನಗರ
ಬೆಂಗಳೂರು–560 010

ಡಾ॥ ವಿ. ಎಸ್. ಸಂಪತ್ಕುಮಾರಾಚಾರ್ಯ
'ಶ್ರೀ ಘನಶ್ಯಾಮ್', 927/1
1ನೇ ಮುಖ್ಯ ರಸ್ತೆ
ಲಕ್ಷ್ಮೀಪುರಂ
ಮೈಸೂರು–570 004

ಡಾ॥ ಪಿ. ವಿ. ನಾರಾಯಣ
30, ಆರ್.ಬಿ.ಐ. ಕಾಲೋನಿ
ಜಯನಗರ 3ನೇ ಬ್ಲಾಕ್ ಪೂರ್ವ
ಬೆಂಗಳೂರು–560 011

ಶ್ರೀ ಎಸ್. ಶಿವಣ್ಣ
ಸಂಪಾದಕ, ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ
ಬೆಂಗಳೂರು–560 056

ಶ್ರೀ ಕೆಳದಿ ಗುಂಡಾ ಜೋಯಿಸ್
ಗೌ॥ ನಿರ್ದೇಶಕರು
ಕೆಳದಿ ಮ್ಯೂಸಿಯಂ
ಕೆಳದಿ ಅಂಚೆ–577 443
ಸಾಗರ ತಾಲ್ಲೂಕು

ವಿದ್ವಾನ್ ಟಿ. ಕೇಶವ ಭಟ್ಟ
754, 15ನೇ ಮುಖ್ಯ ರಸ್ತೆ
2ನೇ ಹಂತ, ಬನಶಂಕರಿ
ಬೆಂಗಳೂರು–560 079

ಶ್ರೀ ಎಂ. ಹೆಚ್. ಕೃಷ್ಣಯ್ಯ
182, 1ನೇ 'ಎನ್' ಬ್ಲಾಕ್
ರಾಜಾಜಿನಗರ
ಬೆಂಗಳೂರು–560 010

ವಿದ್ವಾನ್ ಎನ್. ರಂಗನಾಥ ಶರ್ಮ
'ಶ್ರೀ ಜಾನಕೀ ಕೃಪ', 831
4ನೇ ಮೇನ್, ವಿಜಯನಗರ
ಬೆಂಗಳೂರು–560 040

ಶ್ರೀ ವಿ. ವೆಂಕಟರಾವ್
ನಂ. 2, ಪಂಚವಟಿ, (ಮಹಡಿ)
ಪುರಂದರ ರಸ್ತೆ
ಕದಿರೇನಹಳ್ಳಿ
ಬನಶಂಕರಿ 2ನೇ ಹಂತ
ಬೆಂಗಳೂರು–560 070

ಶ್ರೀ ಸೇಡಿಯಾಪು ಕೃಷ್ಣಭಟ್ಟ
ಎ–6, ಕೈಲಾಸ
ಮಣಿಪಾಲ–576 119

ಶ್ರೀ ಕೆಳದಿ ವೆಂಕಟೇಶ ಜೋಯಿಸ್
C/o ಶ್ರೀ ಕೆಳದಿ ಗುಂಡಾ ಜೋಯಿಸ್
ಕೆಳದಿ ಮ್ಯೂಸಿಯಂ
ಕೆಳದಿ ಅಂಚೆ–577 443
ಸಾಗರ ತಾಲ್ಲೂಕು

ಇತರ ಪ್ರಕಟನೆಗಳು

(ಇವುಗಳ ಮಾರಾಟದಿಂದ ಬಂದ ಹಣ ಪ್ರತಿಷ್ಠಾನದ ನಿಧಿಗೆ ಸೇರುತ್ತದೆ.)

1. ಅಧ್ಯಯನ (ಡಾ॥ ಶಂ. ಬಾ. ಜೋಶಿ ಅಭಿನಂದನ ಗ್ರಂಥ) 50-00
   (ಡಾ॥ ಶಂ. ಬಾ. ಜೋಶಿ ಅಭಿನಂದನ ಸಮಿತಿ ಕೊಡುಗೆ)
2. ಕವಿಜಿಹ್ವಾಬಂಧನ (ಶ್ರೀಮತಿ ಕೆ. ಶಾಂತ ಅವರ ಕೊಡುಗೆ) 2-00
3. ಆಸ್ವಾದ (ಪ್ರೊ॥ ಎಂ.ವಿ.ಸೀ. ಅಭಿನಂದನ ಗ್ರಂಥ) 75-00
4. ಕಾಣಿಕೆ (ಕವನ ಸಂಕಲನ) 5-00
5. ಹಳೆ ಬೇರು ಹೊಸ ಚಿಗುರು (ಕವನ ಸಂಕಲನ) 5-00
6. ಪಟ್ಟಬಂಧ (ನಾಟಕ) ವಿ. ಸೀ. 6-00
7. ಪ್ರೊ॥ ಎಂ.ವಿ.ಸೀ. ಅವರ ಪುಸ್ತಕಗಳು :
   1. ಕವಿಯ ಹೆಂಡತಿ (ನಾಟಕ) 2-00
   2. ಸ್ವಯಂವರ (ನಾಟಕ) 2-08
   3, ಸ್ನೇಹದ ಕಾಣಿಕೆ (ಕಾದಂಬರಿ) 3-00
   4. ಕನ್ನಡಮ್ಮನ ಕೊರಗು 8-00
   5. ಹೊಸಗನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು 5-00
   6. ರಾಘವ ಕವನ ಕೋಶ (7, 8, 9ರ ಕವನಗಳ ಸಂಗ್ರಹ) 20-00
   7. ಗೀತಭಾರತಿ 5-00
   8. ಹಂಸಪಥ 10-00
   9. ಮುಗಿಯದ ಮಾಯೆ 5-00
   10. ನಿಲ್ದಾಣಗಳ ನಡುವೆ (ಕಥಾಸಂಗ್ರಹ) 20-00

   [ಸೆಟ್‌ಗೆ 6 ಅಥವಾ 7, 8, 9ನ್ನು ಕೊಡಲಾಗುತ್ತದೆ]

   ಸೆಟ್‌ಗೆ 35-00
8. ನಾಡೋಜ ಬಿ.ಎಂ.ಶ್ರೀ. 5-00

ಸಿದ್ಧತೆಯಲ್ಲಿ

1. ಶ್ರೀ ಕೃಷ್ಣಬಾಲಲೀಲೆ : ಭಾಗ 2 (ಅಚ್ಚಿನಲ್ಲಿ) 75-00
   (ತಿಮ್ಮಪ್ಪದಾಸರ ಕೀರ್ತನ ರೂಪದ ಭಾಗವತ ಗ್ರಂಥ)
2. ರಸಮಂಜರಿ (ಜಾಯೇಂದ್ರನ ಲಕ್ಷಣ ಗ್ರಂಥ)
3. ಕುಮಾರವ್ಯಾಸ ಭಾರತ ಸಂಗ್ರಹ

Published by M. V. Satyanarayana, Honorary Secretary, on behalf of B.M.Sri. Memorial Foundation, Bangalore-560019; Editor: Vidwan T. Keshava Bhat; Printed at Sri Lakshmi Printers, Near Kattaraguppa, Banashankari Third Stage, Bangalore-560 085.

ಪ್ರತಿಷ್ಠಾನದ ಪ್ರಕಟನೆಗಳು

1.	ಮಣಿಹ (ಫ. ಗು. ಹಳಕಟ್ಟಿ ಸಂಸ್ಮರಣ ಸಂಪುಟ)	50-00
2.	ಬೇಂದ್ರೆ ಸ್ಮೃತಿ (ಸಾಹಿತ್ಯ ಭಂಡಾರದಲ್ಲೂ ದೊರೆಯುತ್ತದೆ)	5-00
3.	ಸರ್ವಜ್ಞ ವಚನಗಳು*	15-00
4.	ಸೂತ ಭಾರತ*	15-00
5.	ಶ್ರೀಕೃಷ್ಣದೇವರಾಯ ದಿನಚರಿ*	10-00
6.	ಹಸ್ತಪ್ರತಿ ಶಾಸ್ತ್ರ*	15-00
7.	ಮಾಸ್ತಿ ಸ್ಮರಣೆ	15-00
8.	ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ—ಭಾಗ-೧*	20-00

ದತ್ತಿ ಉಪನ್ಯಾಸ ಮಾಲೆ

9.	ಮೂರು ದತ್ತಿ ಉಪನ್ಯಾಸಗಳು	10-00
10.	ವೈವಸ್ವತ ಮನು	5-00
11.	ಸ್ವಾಯಂಭುವ ಮನು : ವೈವಸ್ವತ ಮನು-ತೌಲನಿಕ ಅಧ್ಯಯನ	5-00
12.	ಮೂರು ದತ್ತಿ ಉಪನ್ಯಾಸಗಳು—೧೯೮೪	10-00
13.	ದತ್ತಿ ಉಪನ್ಯಾಸಗಳು—೧೯೮೬	10-00

ತಿಮ್ಮಪ್ಪದಾಸ ಪ್ರಕಾಶನ ಮಾಲೆ

14.	ಕೀರ್ತನ ಕುಸುಮಾಂಜಲಿ	10-00
15.	ಧ್ರುವ ಚರಿತ್ರೆ*	15-00
16.	ಶ್ರೀ ಕೃಷ್ಣಬಾಲಲೀಲೆ ಭಾಗ-೧*	75-00
17.	,, ಭಾಗ-೨*	75-00

ಶ್ರೀ ಜನ್ಮಶತಾಬ್ದಿ ಕೃತಿಮಾಲೆ

18.	ಶ್ರೀವಾಣಿ (ಸೂಕ್ತಿ ಸಂಗ್ರಹ)	1-00
19.	ಆಚಾರ್ಯ ಬಿ.ಎಂ.ಶ್ರೀ. (ಜೀವನ ಚಿತ್ರ)	2-00
20.	ಕನ್ನಡ ಕಣ್ವ ಬಿ.ಎಂ.ಶ್ರೀ. (ಮುಕ್ಕಳಿಗೆ)	1-00
21.	ಶ್ರೀಯವರ ಆಯ್ದ ಕವನಗಳು	2-00
22.	ಶ್ರೀನಿಧಿ (ಸಂಸ್ಮರಣ ಸಂಪುಟ)	60-00
23.	B.M.S.: The Man and His Mission	25-00
24.	ಶ್ರೀಗಂಧ (ಸಂಸ್ಮರಣ ಸಂಚಿಕೆ)	10-00
25.	ಇಂಗ್ಲಿಷ್ ಗೀತಗಳು (ಆಂಗ್ಲ ಮೂಲ ಕವನಗಳೊಂದಿಗೆ)	20-00
26.	The Improvement of Kannada—B.M.Sri.	6-00
27.	ಪ್ರೊಫೆಸರ್ ಟಿ. ಎಸ್. ವೆಂಕಣ್ಣಯ್ಯ	4-00
28.	ಭಾರತದ ಶ್ರೀಕೃಷ್ಣ	6-00
29.	ಅಶ್ವತ್ಥಾಮ ('ಶ್ರೀ' ನಾಟಕದ ಸರಳಾನುವಾದ)	6-00
30.	Early Vijayanagara : Studies in History & Culture	60-00

* ಈ ಪುಸ್ತಕಗಳಿಗೆ ಪ್ರತಿಷ್ಠಾನದ ಸದಸ್ಯರಿಗೆ ಶೇ. 50 ರಿಯಾಯಿತಿ.